ಶನಿವಾರ, ಆಗಸ್ಟ್ 7, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಂಗಳೂರು ಉತ್ಸವ
ಕರ್ನಾಟಕ ಚಿತ್ರಕಲಾ ಪರಿಷತ್ತು ಶುಕ್ರವಾರ ಹಮ್ಮಿಕೊಂಡಿದ್ದ 'ಬೆಂಗಳೂರು ಉತ್ಸವ'ದಲ್ಲಿ ಕಲಾವಿದೆ ಭೂಮಿ ಶೆಟ್ಟಿ ಅವರು ಕರಕುಶಲ ವಸ್ತುಗಳನ್ನು ವೀಕ್ಷಿಸಿದರು



ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭೂಮಿಕಾ

ದಂಪತಿಯಲ್ಲಿ ಹೊಂದಾಣಿಕೆ ಬೇಕಾದರೆ ಲೈಂಗಿಕತೆ ಹಾಗೂ ಅನ್ಯೋನ್ಯತೆ ಎಂಬುದು ತುಂಬಾ ಮುಖ್ಯ. ಸಂತಸದ ಬದುಕಿಗೆ ಇದು ಅವಶ್ಯಕ ಕೂಡ.

ಚರ್ಚೆ ಸಂಸತ್ ಅಧಿವೇಶನ ಸುಗಮವಾಗಿ ನಡೆಯದಿರಲು ಕಾರಣ ಸರ್ಕಾರವೇ, ವಿರೋಧ ಪಕ್ಷವೇ? 7

ಅಮೆಜಾನ್ ಪರ 'ಸುಪ್ರೀಂ' ಆದೇಶ 8

ಭಟ್ಕಳ: ವ್ಯಕ್ತಿ ಬಂಧಿಸಿದ ಎನ್.ಐ.ಎ ತಂಡ 9

ಸೆನ್ಸೆಕ್ಸ್	ನಿಫ್ಟಿ	₹/$
54,277 ▼	16,238 ▼	74.15 ▲

ರಾಜ್ಯ ಕೋವಿಡ್ ಅಂಕಿ–ಅಂಶ

29,15,317 ▲	ಒಟ್ಟು ಸೋಂಕಿತರು (29,03,137 ನಿನ್ನೆಯ ವಿವರ)
24,328 ▼	ಸಕ್ರಿಯ ಪ್ರಕರಣಗಳು
28,54,222 ▲	ಗುಣಮುಖರಾದವರು
36,741 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,805	▲
ಗುಣಮುಖ	1,854	▲
ಸಾವು	36	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ ಪ್ರಜಾವಾಣಿ ಗ್ರಾಫಿಕ್ಸ್

ಜಮೀರ್ ವಿಲಾಸಿ ಬಂಗಲೆ: ಇ.ಡಿ ಕೆಂಗಣ್ಣು


ಬೆಂಗಳೂರು: ಕಾಂಗ್ರೆಸ್ ಶಾಸಕ ಜಮೀರ್ ಅಹ್ಮದ್ ಖಾನ್ ಮನೆಯಲ್ಲಿ ಜಾರಿ ನಿರ್ದೇಶನಾಲಯದ(ಇ.ಡಿ) ಶೋಧಕ್ಕೆ ಪ್ರಮುಖ ಕಾರಣವಾಗಿದ್ದು ಅವರು ಕಟ್ಟಿಸಿರುವ ಅರಮನೆಯನ್ನೇ ಹೋಲುವ ಅರೇಬಿಕ್ ಶೈಲಿಯ ವಿಲಾಸಿ ಬಂಗಲೆ! 4

ಭೌತಿಕ ತರಗತಿ ನಡೆಸಲು ಒಪ್ಪಿಗೆ • 1ರಿಂದ 8ನೇ ತರಗತಿ ಮಕ್ಕಳಿಗೆ ಸದ್ಯ ಶಾಲೆ ಇಲ್ಲ

ಪ್ರೌಢ, ಪಿಯು ತರಗತಿ 23ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂಬತ್ತನೇ ತರಗತಿಯಿಂದ ದ್ವಿತೀಯ ಪಿಯುಸಿವರೆಗಿನ ವಿದ್ಯಾರ್ಥಿಗಳಿಗೆ ಇದೇ 23ರಿಂದ ಭೌತಿಕ ತರಗತಿಗಳು ಆರಂಭವಾಗಲಿವೆ.



ಬಸವರಾಜ ಬೊಮ್ಮಾಯಿ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಶುಕ್ರವಾರ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಮುಖ್ಯಮಂತ್ರಿ ಗೃಹ ಕಚೇರಿ ಕೃಷ್ಣಾದಲ್ಲಿ ಸಚಿವರು ಮತ್ತು ಹಿರಿಯ ಅಧಿಕಾರಿಗಳ ಜತೆ ಸಭೆ ನಡೆಸಿದ ಬಳಿಕ ಸುದ್ದಿಗಾರರ ಮಾತನಾಡಿದ ಬೊಮ್ಮಾಯಿ, 'ಶಾಲಾ ತರಗತಿಗಳ ಆರಂಭ ಕುರಿತು ತಜ್ಞರು ಮತ್ತು ಅಧಿಕಾರಿಗಳ ಜತೆ ವಿಸ್ತೃತವಾಗಿ ಚರ್ಚೆ ನಡೆಸಲಾಗಿದೆ. ಒಂಬತ್ತನೇ ತರಗತಿಯಿಂದ ದ್ವಿತೀಯ ಪಿಯುಸಿವರೆಗಿನ ವಿದ್ಯಾರ್ಥಿಗಳಿಗೆ ಆಗಸ್ಟ್ 23ರಿಂದ ತರಗತಿಗಳನ್ನು ಆರಂಭಿಸಲಾಗುವುದು' ಎಂದರು.

'ತರಗತಿಯಲ್ಲಿರುವ ವಿದ್ಯಾರ್ಥಿಗಳನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಲಾಗುವುದು. ಪ್ರತಿ ಗುಂಪಿಗೂ ದಿನ ಬಿಟ್ಟು ದಿನ ತರಗತಿಗಳನ್ನು ನಡೆಸಲಾಗುವುದು. ಪ್ರತಿ ಗುಂಪಿಗೆ ತಲಾ ಮೂರು ದಿನಗಳ ಕಾಲ ತರಗತಿಗಳನ್ನು ನಡೆಸಲು ನಿರ್ಧರಿಸಲಾಗಿದೆ. ಶಾಲಾ, ಕಾಲೇಜುಗಳನ್ನು ಆರಂಭಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಪ್ರತ್ಯೇಕವಾಗಿ ಅಧಿಸೂಚನೆ ಹೊರಡಿಸಲಾಗುವುದು' ಎಂದು ತಿಳಿಸಿದರು.

'ವಿವಿಧ ರಾಜ್ಯಗಳಲ್ಲಿ ಶಾಲಾ, ಕಾಲೇಜುಗಳಲ್ಲಿ ಹೇಗೆ ತರಗತಿ ನಡೆಸಲಾಗುತ್ತಿದೆ ಎಂಬ ಮಾಹಿತಿ ಆಧರಿಸಿ ಸಭೆಯಲ್ಲಿ ಚರ್ಚಿಸಲಾಗಿದೆ. ಶಿಕ್ಷಣ ತಜ್ಞರು ಮತ್ತು ಆರೋಗ್ಯ ತಜ್ಞರ ಸಲಹೆ ಪಡೆದು ಈ ತೀರ್ಮಾನ ಕೈಗೊಳ್ಳಲಾಗಿದೆ' ಎಂದರು.

1ರಿಂದ 8ಕ್ಕೆ ಸದ್ಯಕ್ಕಿಲ್ಲ: 'ಒಂದರಿಂದ ಎಂಟನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ತರಗತಿ ಆರಂಭಿಸುವ ಕುರಿತು ಸದ್ಯ ಯಾವುದೇ ತೀರ್ಮಾನ ಕೈಗೊಂಡಿಲ್ಲ. ತಿಂಗಳ ಅಂತ್ಯದಲ್ಲಿ ಮತ್ತೊಮ್ಮೆ ಸಭೆ ನಡೆಸಲಾಗುವುದು' ಎಂದು ಮುಖ್ಯಮಂತ್ರಿ ಹೇಳಿದರು.

9ನೇ ಪುಟ ನೋಡಿ

ಗಡಿ ಜಿಲ್ಲೆಗಳಲ್ಲಿ ವಾರಾಂತ್ಯದ ಕರ್ಫ್ಯೂ

ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಹೊಂದಿಕೊಂಡಿರುವ ರಾಜ್ಯದ ಗಡಿ ಜಿಲ್ಲೆಗಳಲ್ಲಿ ವಾರಾಂತ್ಯದ ಕರ್ಫ್ಯೂ ಜಾರಿಗೊಳಿಸಲಾಗಿದೆ.

ಅದರ ಜತೆಗೆ, ರಾಜ್ಯದಾದ್ಯಂತ ಜಾರಿ ಇರುವ ಪ್ರತಿದಿನದ ರಾತ್ರಿ ಕರ್ಫ್ಯೂ ಅವಧಿ ರಾತ್ರಿ 10ಗಂಟೆಯ ಬದಲು 9ಗಂಟೆಯಿಂದಲೇ ಆರಂಭವಾಗಲಿದೆ.

ವಾರಾಂತ್ಯದ ಕರ್ಫ್ಯೂ ಮತ್ತು ರಾತ್ರಿ ಕರ್ಫ್ಯೂ ವಿಸ್ತರಿಸಿ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ತುಷಾರ್ ಗಿರಿನಾಥ್ ಶುಕ್ರವಾರ ಆದೇಶ ಹೊರಡಿಸಿದ್ದಾರೆ. ಇದೇ 16ರವರೆಗೂ ಆದೇಶ ಜಾರಿಯಲ್ಲಿರಲಿದೆ.

ಮಹಾರಾಷ್ಟ್ರದ ಗಡಿ ಮತ್ತು ಕೇರಳಕ್ಕೆ ಹೊಂದಿಕೊಂಡಿರುವ ಜಿಲ್ಲೆಗಳಲ್ಲಿ ಶುಕ್ರವಾರ ರಾತ್ರಿ 9 ಗಂಟೆಯಿಂದ ಸೋಮವಾರ ಬೆಳಿಗ್ಗೆ 5 ಗಂಟೆಯವರೆಗೂ ವಾರಾಂತ್ಯದ ಕರ್ಫ್ಯೂ ಜಾರಿಯಲ್ಲಿರುತ್ತದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

9ನೇ ಪುಟ ನೋಡಿ

ಕರ್ಫ್ಯೂ ಎಲ್ಲೆಲ್ಲಿ

ಬೆಳಗಾವಿ, ಬೀದರ್, ವಿಜಯಪುರ, ಕಲಬುರ್ಗಿ, ದಕ್ಷಿಣ ಕನ್ನಡ, ಕೊಡಗು, ಮೈಸೂರು ಮತ್ತು ಚಾಮರಾಜನಗರ

ಸಭೆ, ಸಮಾರಂಭಕ್ಕಿಲ್ಲ ಅವಕಾಶ

ರಾಜ್ಯದಾದ್ಯಂತ ಬೃಹತ್ ಪ್ರಮಾಣದ ಸಾಮಾಜಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳು, ಬೃಹತ್ ಸಭೆ, ಸಮಾರಂಭಗಳಿಗೆ ನಿಷೇಧ ಮುಂದುವರಿಸಲಾಗಿದೆ.

ದೇವಸ್ಥಾನ, ಮಸೀದಿ, ಚರ್ಚ್ ಸೇರಿದಂತೆ ಧಾರ್ಮಿಕ ಕೇಂದ್ರಗಳಲ್ಲಿ ಕೋವಿಡ್ ನಿಯಮ ಪಾಲಿಸಿಕೊಂಡು ದರ್ಶನ, ಪ್ರಾರ್ಥನೆ, ಸೇವೆ ಸಲ್ಲಿಸಲು ಅವಕಾಶ ಇರಲಿದೆ. ಆದರೆ, ಜಾತ್ರೆ, ದೇವಸ್ಥಾನಕ್ಕೆ ಸಂಬಂಧಿಸಿದ ಹಬ್ಬಗಳು, ಮೆರವಣಿಗೆ ಮತ್ತು ಸಮಾವೇಶಗಳಿಗೆ ನಿಷೇಧ ಮುಂದುವರಿಯಲಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಪದಕದತ್ತ ಬೆಂಗಳೂರು ಗಾಲ್ಫರ್



ಚಿನಕುರಳಿ

ಪ್ರಕಾಶ್ ಶೆಟ್ಟಿ



ನ್ಯಾಯಾಧೀಶರಿಗೆ ಬೆದರಿಕೆ ಪ್ರಕರಣ: ಸುಪ್ರೀಂ ಕೋರ್ಟ್ ತೀವ್ರ ಅಸಮಾಧಾನ

'ಸಿಬಿಐ, ಐಬಿ ನ್ಯಾಯಾಂಗದ ನೆರವಿಗೆ ಬರುತ್ತಿಲ್ಲ'

ನವದೆಹಲಿ (ಪಿಟಿಐ): 'ತಮಗೆ ಬೇಕಾದ ರೀತಿಯಲ್ಲಿ ತೀರ್ಪು ಬರದೇ ಇದ್ದಾಗ ನ್ಯಾಯಾಧೀಶರನ್ನು ದೈಹಿಕವಾಗಿ ಮತ್ತು ಮಾನಸಿಕವಾಗಿ ಬೆದರಿಸುವ ಧೋರಣೆ ಹೆಚ್ಚಾಗುತ್ತಿದೆ. ಇದು ಅತ್ಯಂತ ಗಂಭೀರ ವಿಚಾರ. ಬೆದರಿಕೆಗಳ ಬಗ್ಗೆ ದೂರು ನೀಡಿದರೂ ಗುಪ್ತಚರ ಇಲಾಖೆ (ಐಬಿ) ಮತ್ತು ಸಿಬಿಐ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ. ಈ ವರ್ತನೆ ಬದಲಾಗಬೇಕು' ಎಂದು ಸುಪ್ರೀಂ ಕೋರ್ಟ್ ಛೀಮಾರಿ ಹಾಕಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಮತ್ತು ನ್ಯಾಯಮೂರ್ತಿ ಸೂರ್ಯಕಾಂತ್ ಅವರ ಪೀಠವು ಜಾರ್ಖಂಡ್‌ನ ಧನಬಾದ್



ಜಿಲ್ಲಾ ಮ್ಯಾಜಿಸ್ಟ್ರೇಟ್ ಉತ್ತಮ್ ಆನಂದ್ ಅವರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ವಯಂಪ್ರೇರಿತ ಮೊಕದ್ದಮೆ ದಾಖಲಿಸಿಕೊಂಡಿದೆ. ಈ ಪ್ರಕರಣದ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಶುಕ್ರವಾರ ಹೀಗೆ ಹೇಳಿದೆ.

ನ್ಯಾಯಾಧೀಶರಿಗೆ ಬೆದರಿಕೆ ಒಡ್ಡುತ್ತಿರುವ ಸಂಬಂಧ 2019ರಲ್ಲಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆಯನ್ನೂ ಪೀಠವು ಮತ್ತೆ ಕೈಗೆತ್ತಿಕೊಂಡಿದೆ. ಆ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಈವರೆಗೆ ಪ್ರಮಾಣಪತ್ರ ಸಲ್ಲಿಸಿಲ್ಲ ಎಂದು ಪೀಠವು ಅಸಮಾಧಾನ ವ್ಯಕ್ತಪಡಿಸಿದೆ.

ಉತ್ತಮ್ ಆನಂದ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್, ಸಿಬಿಐಗೆ ನೋಟಿಸ್ ನೀಡಿದೆ. ನ್ಯಾಯಾಧೀಶರು ಮತ್ತು ನ್ಯಾಯಮೂರ್ತಿಗಳಿಗೆ ಒದಗಿಸಿರುವ ಭದ್ರತೆ ಕುರಿತು ವರದಿ ನೀಡುವಂತೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ.

9ನೇ ಪುಟ ನೋಡಿ

> **ನ್ಯಾಯಾಧೀಶರಿಗೆ ಬೆದರಿಕೆ ಬರುತ್ತಿರುವುದು ಅತ್ಯಂತ ಗಂಭೀರವಾದ ವಿಚಾರ. ಸರ್ಕಾರವು ಈ ಬಗ್ಗೆಯೂ ಸ್ವಲ್ಪ ಆಸಕ್ತಿ ವಹಿಸಿದರೆ ಒಳ್ಳೆಯದಾಗುತ್ತದೆ**
>
> **ಸುಪ್ರೀಂ ಕೋರ್ಟ್**

> **ಕ್ರಿಮಿನಲ್ ಪ್ರಕರಣಗಳನ್ನು ನಿರ್ವಹಿಸುತ್ತಿರುವ ನ್ಯಾಯಾಧೀಶರು ಬೆದರಿಕೆಗೆ ಗುರಿಯಾಗುತ್ತಿದ್ದಾರೆ. ಅವರಿಗೆ ರಕ್ಷಣೆ ನೀಡಲು ಕ್ರಮ ತೆಗೆದುಕೊಳ್ಳಬೇಕಿದೆ**
>
> **ಕೆ.ಕೆ.ವೇಣುಗೋಪಾಲ್** ಅಟಾರ್ನಿ ಜನರಲ್

ಖೇಲ್ ರತ್ನ ಇನ್ನು ಧ್ಯಾನಚಂದ್ !

ನವದೆಹಲಿ (ಪಿಟಿಐ): ಕ್ರೀಡಾಪಟುಗಳಿಗೆ ನೀಡಲಾಗುವ ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿಗೆ ಮರುನಾಮಕರಣ ಮಾಡಲಾಗಿದೆ. ಹಾಕಿ ಮಾಂತ್ರಿಕ ಮೇಜರ್ ಧ್ಯಾನ ಚಂದ್ ಅವರ ಹೆಸರನ್ನು ಇಡಲಾಗಿದೆ.



ಧ್ಯಾನ್ ಚಂದ್

'ಖೇಲ್ ರತ್ನ ಪ್ರಶಸ್ತಿಗೆ ಮೇಜರ್ ಧ್ಯಾನಚಂದ್ ಅವರ ಹೆಸರಿಡುವಂತೆ ಅನೇಕ ನಾಗರಿಕರಿಂದ ಮನವಿಗಳು ಬಂದಿವೆ. ಅವರೆಲ್ಲರ ಭಾವನೆಗಳನ್ನು ಗೌರವಿಸಿ ಪ್ರಶಸ್ತಿಯ ಹೆಸರನ್ನು ಇನ್ನು ಮುಂದೆ ಮೇಜರ್ ಧ್ಯಾನಚಂದ್ ಖೇಲ್ ರತ್ನ ಎಂದು ಕರೆಯಲಾಗುವುದು' ಎಂದು ಪ್ರಧಾನಿ ನರೇಂದ್ರ ಮೋದಿ ಟ್ವೀಟ್ ಮಾಡಿದ್ದಾರೆ.

ಖೇಲ್ ರತ್ನ ಪ್ರಶಸ್ತಿಯು ₹ 25 ಲಕ್ಷ ನಗದು ಒಳಗೊಂಡಿದೆ. 1928, 1932 ಮತ್ತು 1936ರ ಒಲಿಂಪಿಕ್ಸ್‌ಗಳಲ್ಲಿ ಧ್ಯಾನಚಂದ್ ಅವರಿದ್ದ ಭಾರತ ತಂಡವು ಚಿನ್ನ ಗೆದ್ದುಕೊಂಡಿತ್ತು. 1936ರ ಬರ್ಲಿನ್ ಕೂಟದಲ್ಲಿ ಅವರು ತಂಡದ ನಾಯಕತ್ವ ವಹಿಸಿದ್ದರು.

> ಇದು ಭಾರತದ ಶ್ರೇಷ್ಠ ಕ್ರೀಡಾಪಟುವಿಗೆ ಸಲ್ಲಿಸಿರುವ ನಿಜವಾದ ಗೌರವ. ಈ ಕ್ರಮ ಸ್ವಾಗತಾರ್ಹ.
>
> **ಅಮಿತ್ ಶಾ,** ಕೇಂದ್ರ ಗೃಹಸಚಿವ
>
> ಇದು ಮೋದಿಜಿಯವರ ಹೊಸ ಉಪಕ್ರಮ ಎಂದು ಆಶಿಸುತ್ತೇವೆ. ಮುಂದೆ ಅವರು ಮೊಟೇರಾದ ನರೇಂದ್ರ ಮೋದಿ ಮತ್ತು ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣಗಳ ಹೆಸರುಗಳನ್ನೂ ಬದಲಾಯಿಸಿ ದಿಗ್ಗಜ ಕ್ರೀಡಾಪಟುಗಳಾದ ಮಿಲ್ಖಾ ಸಿಂಗ್, ಸುನಿಲ್ ಗಾವಸ್ಕರ್, ಸಚಿನ್ ತೆಂಡೂಲ್ಕರ್, ಕಪಿಲ್ ದೇವ್, ಲಿಯಾಂಡರ್ ಪೇಸ್, ಪಿ.ಟಿ.ಉಷಾ, ಮೇರಿ ಕೋಮ್, ಅಭಿನವ್ ಬಿಂದ್ರಾ ಮತ್ತಿತರರ ಹೆಸರುಗಳಿಂದ ಕರೆಯಲಿದ್ದಾರೆ.
>
> **ರಣದೀಪ್ ಸುರ್ಜೇವಾಲಾ,** ಎಐಸಿಸಿ ವಕ್ತಾರ

ಇನ್ನೊಂದು ಸುದ್ದಿ 9

ಟೆಂಡರ್ ಪೂರ್ಣವಾದರೂ ಜಲಮಂಡಳಿಯ ಒಳಚರಂಡಿ ಕಾಮಗಾರಿಯಿಂದಾಗಿ ತೊಡಕು

ಸಾರಕ್ಕಿ ಕೆರೆ ಕಾಮಗಾರಿ ಮತ್ತೆ ನನೆಗುದಿಗೆ

• ವಿಜಯಕುಮಾರ್ ಎಸ್.ಕೆ.



ಸಾರಕ್ಕಿ ಕೆರೆಯಲ್ಲಿ ಕಾಮಗಾರಿ ಸ್ಥಗಿತಗೊಂಡಿರುವುದು –ಪ್ರಜಾವಾಣಿ ಚಿತ್ರ/ಅನೂಪ್ ರಾಘ ಟಿ.

ಬೆಂಗಳೂರು: ಸಾರಕ್ಕಿ ಕೆರೆ ಪುನರುಜ್ಜೀವನ ಕಾಮಗಾರಿ ಮತ್ತೊಮ್ಮೆ ನನೆಗುದಿಗೆ ಬಿದ್ದಿದೆ. ₹5 ಕೋಟಿ ಮೊತ್ತದಲ್ಲಿ ನಡಿಗೆ ಪಥ, ಕಲ್ಯಾಣಿಗಳ ಅಭಿವೃದ್ಧಿಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದರೂ, ಜಲ ಮಂಡಳಿಯಿಂದ ಬಾಕಿ ಇರುವ ಒಳ ಚರಂಡಿ ಕಾಮಗಾರಿ ತೊಡಕಾಗಿ ಪರಿಣಮಿಸಿದೆ.

ಸಾರಕ್ಕಿ ಕೆರೆ ಎಂದರೆ ಅತ್ಯಂತ ಸಮೃದ್ಧಿಯಿಂದ ಕೂಡಿದ್ದ ಜಲಕಾಯ. ಒತ್ತುವರಿ ತೆರವುಗೊಳಿಸಿದ ಬಳಿಕ 2017ರಲ್ಲಿ ಕೆರೆಯ ಪುನರುಜ್ಜೀವನಕ್ಕೆ ಬಿಬಿಎಂಪಿ ಚಾಲನೆ ಸಿಕ್ಕಿತು. ನಗರೋತ್ಥಾನ ಯೋಜನೆಯಡಿ ಬಿಬಿಎಂಪಿ ₹6.14 ಕೋಟಿಯನ್ನು ಈ ಕೆರೆ ಅಭಿವೃದ್ಧಿಗೆ ನಿಗದಿ ಮಾಡಿತು.

ಕೆರೆ ಸುತ್ತಲೂ ವಾಯುವಿಹಾರಕ್ಕಾಗಿ 3.2 ಕಿ.ಮೀ. ಉದ್ದದ ಪಥ, ಮಳೆ ನೀರು ಸಂಗ್ರಹಿಸಿ ಸುತ್ತಲಿನ ಪ್ರದೇಶದಲ್ಲಿ ಅಂತರ್ಜಲ ಮಟ್ಟ ಹೆಚ್ಚಿಸುವುದು, ದೋಣಿ ವಿಹಾರಕ್ಕೆ ವ್ಯವಸ್ಥೆ ಕಲ್ಪಿಸಿ ನಗರದ ಪ್ರವಾಸಿ ತಾಣವನ್ನಾಗಿ ರೂಪಿಸುವುದು ಯೋಜನೆಯ ಮುಖ್ಯ ಉದ್ದೇಶ.

ಪ್ರಜಾವಾಣಿ ವಿಶೇಷ

ನಿಗದಿಯಂತೆ ಕಾಮಗಾರಿ 2018 ಜೂನ್‌ನಲ್ಲಿ ಆರಂಭವಾಗಿ, 2019ರ ಏಪ್ರಿಲ್ 17ರಂದು ಮುಕ್ತಾಯವಾಗಬೇಕಿತ್ತು. ಆದರೆ, ಕಾಮಗಾರಿ ಇಂದಿಗೂ ಪೂರ್ಣಗೊಂಡಿಲ್ಲ. ಸುತ್ತಲೂ ಏರಿ ನಿರ್ಮಿಸುವ ಕೆಲಸವೂ ಪೂರ್ಣಗೊಂಡಿದೆ. ಎಸ್‌ಟಿಪಿಯಲ್ಲಿ ಶುದ್ಧೀಕರಿಸಿದ ನೀರನ್ನು ಕೆರೆಗೆ ಹರಿಸಲಾಗುತ್ತಿದೆ. ಇಡೀ ಜಲಕಾಯ ತಿಳಿನೀರಿನಿಂದ ನಳನಳಿಸುತ್ತಿದೆ. ಸೊಳ್ಳೆಗಳ ತಾಣವಾಗಿದ್ದ ಜಾಗ ಈಗ ವಾಯುವಿಹಾರಿಗಳನ್ನು ಕೈಬೀಸಿ ಕರೆಯುತ್ತಿದೆ. ಪ್ರತಿನಿತ್ಯ ಸಾವಿರಾರು ಜನ ಈ ಕೆರೆಯ ಸುತ್ತ ವಾಯುವಿಹಾರ ನಡೆಸುತ್ತಿದ್ದಾರೆ. ಜಲಕಾಯದಲ್ಲಿ ಮೀನು ಸಾಕಾಣಿಕೆ ಆರಂಭಿಸಿದ್ದು, ಪಕ್ಷಿಗಳು ಬೀಡು ಬಿಡಲು ಆರಂಭಿಸಿವೆ.


ಇದರ ನಡುವೆ, ಒಂದೆರಡು ಕಡೆ ಒಳಚರಂಡಿ ನೀರು ಹರಿದು ಬರುವುದು ತಪ್ಪಿಲ್ಲ. ನಡಿಗೆ ಪಥ ಅಭಿವೃದ್ಧಿ, ಕಲ್ಯಾಣಿಗಳ ಪುನರುಜ್ಜೀವನ, ಪ್ರವೇಶದ್ವಾರ ಅಭಿವೃದ್ಧಿ, ಸಣ್ಣ ಕಾಲುವೆಗಳ ನಿರ್ಮಾಣ ಕಾಮಗಾರಿಗಳು ಇನ್ನೂ ಆರಂಭವಾಗಿಯೇ ಇಲ್ಲ. ಉಳಿದೆಲ್ಲಾ ಕಾಮಗಾರಿಗೆ ₹5 ಕೋಟಿ ಮೊತ್ತದ ಟೆಂಡರ್ ಪ್ರಕ್ರಿಯೆಯನ್ನು ಬಿಬಿಎಂಪಿ ಪೂರ್ಣಗೊಳಿಸಿದೆ. ಆದರೆ, ಕಾಮಗಾರಿ ಆರಂಭಕ್ಕೆ ತೊಡಕೊಂದು ಎದುರಾಗಿದೆ.

‘ಜಲಕಾಯದ ಏರಿಯೊಳಗೆ ಕೊಳಚೆ ನೀರಿನ ಪೈಪ್‌ಲೈನ್ ಹಾದು ಹೋಗಿದೆ. ಅದರಲ್ಲಿ ಕೊಳಚೆ ನೀರು ಸರಾಗವಾಗಿ ಹರಿದು ಹೋಗದೆ ಕೆರೆಗೆ ಸೇರಿಕೊಳ್ಳುತ್ತಿದೆ. ಪೈಪ್‌ಲೈನ್ ಬದಲಿಸುವ ಕೆಲಸವನ್ನು ಸದ್ಯದಲ್ಲೇ ಆರಂಭಿಸುವುದಾಗಿ ಜಲಮಂಡಳಿ ಹೇಳಿದೆ. ಇದಕ್ಕಾಗಿ ಕಾಯುತ್ತಿದ್ದೇವೆ. ಜಲಮಂಡಳಿ ತನ್ನ ಕೆಲಸ ಮುಗಿಸಿದರೆ, ನಡಿಗೆ ಪಥ ಸೇರಿ ಉಳಿದೆಲ್ಲಾ ಕಾಮಗಾರಿಯನ್ನೂ ಆರಂಭಿಸಲಾಗುವುದು’ ಎಂದು ಬಿಬಿಎಂಪಿ ಅಧಿಕಾರಿಗಳು ಹೇಳುತ್ತಾರೆ.

ಏರಿ ಮೇಲೆ 1,400 ಗಿಡ

ಏರಿಯ ಉದ್ದಕ್ಕೂ ಒಂದು ಬದಿಯಲ್ಲಿ ಸಸಿಗಳನ್ನು ನೆಡಲಾಗಿದೆ. ಮೆಟ್ರೊ ರೈಲು ಮಾರ್ಗಕ್ಕೆ ಹಲವೆಡೆ ಕಡಿದಿರುವ ಮರಗಳ ಬದಲಿಗೆ ಇಲ್ಲಿ ಸಸಿಗಳನ್ನು ನೆಟ್ಟು ಬೆಳೆಸಲು ಬೆಂಗಳೂರು ಮೆಟ್ರೊ ರೈಲು ಅಭಿವೃದ್ಧಿ ನಿಗಮ(ಬಿಎಂಆರ್‌ಸಿ-ಎಲ್) ಮುಂದಾಗಿದೆ.

‘ಸದ್ಯ 1,400 ಸಸಿಗಳನ್ನು ನೆಡಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೇಳುತ್ತಿದ್ದಾರೆ. ಇನ್ನೂ 500ಕ್ಕೂ ಹೆಚ್ಚು ಸಸಿಗಳನ್ನು ಬೆಳೆಸಲು ಅವಕಾಶ ಇದೆ’ ಎಂದು ಬಿಬಿಎಂಪಿ ಮುಖ್ಯ ಎಂಜಿನಿಯರ್ (ಕೆರೆ) ಬಿ.ಟಿ. ಮೋಹನಕೃಷ್ಣ ಹೇಳಿದರು.



ಕೆರೆಯಲ್ಲಿದ್ದ ಕಳೆ ತೆಗೆಯುವುದು ಸೇರಿ ಒಂದಷ್ಟು ಒಳ್ಳೆಯ ಕೆಲಸ ಆಗಿದೆ. ನಡಿಗೆ ಪಥ, ಉದ್ಯಾನ ನಿರ್ಮಿಸಿ, ಕೊಳಚೆ ನೀರು ಕೆರೆಗೆ ಬರುವುದನ್ನು ತಡೆದರೆ ಸುಂದರ ತಾಣವಾಗಲಿದೆ

ಚನ್ನಪ್ಪ, ಸ್ಥಳೀಯ ನಿವಾಸಿ

ಜಲ ಮಂಡಳಿಯಿಂದ ಒಳ ಚರಂಡಿ ಕಾಮಗಾರಿ ಪೂರ್ಣಗೊಳಿಸಿದರೆ ₹5 ಕೋಟಿ ಹೆಚ್ಚುವರಿ ಮೊತ್ತದಲ್ಲಿ ನಡಿಗೆ ಪಥ, ಕಲ್ಯಾಣಿಗಳ ಪುನರುಜ್ಜೀವನ ಹಾಗೂ ಇತರ ಕಾಮಗಾರಿ ಆರಂಭಿಸಲಾಗುವುದು

ಬಿ.ಟಿ. ಮೋಹನಕೃಷ್ಣ, ಬಿಬಿಎಂಪಿ ಮುಖ್ಯ ಎಂಜಿನಿಯರ್(ಕೆರೆ)

ಅನಿಲ್‌ಕುಮಾರ್ ಸಿ.ಎಂ ಆಪ್ತ ಕಾರ್ಯದರ್ಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಆಪ್ತ ಕಾರ್ಯದರ್ಶಿಯನ್ನಾಗಿ ನಿವೃತ್ತ ಪ್ರಧಾನ ಮುಖ್ಯ ಎಂಜಿನಿಯರ್ ಅನಿಲ್ ಕುಮಾರ್ ಅವರನ್ನು ನೇಮಿಸಲಾಗಿದೆ.

ಎನ್.ರಂಗರಾಜು ಅವರನ್ನು ವಿಶೇಷ ಕರ್ತವ್ಯಾಧಿಕಾರಿಯನ್ನಾಗಿ ನೇಮಿಸಿ ಆದೇಶ ಹೊರಡಿಸಲಾಗಿದೆ.

ನಗರದಲ್ಲಿ ಇಂದು

ಆರೋಗ್ಯ ಸ್ವಯಂಸೇವಕರ ಅಭಿಯಾನ ಉದ್ಘಾಟನೆ– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಆಯೋಜನೆ–ಬಿಜೆಪಿ, ಸ್ಥಳ–ಹೋಟೆಲ್ ರಾಡಿಸ್ಸನ್ ಬ್ಲೂ, ಅರಮನೆ ರಸ್ತೆ, ಬೆಳಿಗ್ಗೆ 11

ಶ್ರೀಕೃಷ್ಣದೇವರಾಯರ ಪಟ್ಟಾಭಿಷೇಕ ಮಹೋತ್ಸವ ಮತ್ತು ತೆಲುಗು ವಿಜ್ಞಾನ ಸಮಿತಿಯ ಸಂಸ್ಥಾಪನಾ ದಿನ: ಉದ್ಘಾಟನೆ– ಸಂಸದ ಡಿ.ವಿ.ಸದಾನಂದಗೌಡ, ಅತಿಥಿಗಳು– ಶಾಸಕ ಕೆ.ಆರ್. ರಮೇಶ್ ಕುಮಾರ್, ಸಚಿವ ಸಿ.ಎನ್.ಅಶ್ವತ್ಥ ನಾರಾಯಣ, ತೆಲುಗು ವಿಜ್ಞಾನ ಸಮಿತಿಯ ಅಧ್ಯಕ್ಷ ಎ.ರಾಧಾಕೃಷ್ಣ ರಾಜು, ಕೆ.ಮುನಿಸ್ವಾಮಿ ರಾಜು, ಆಯೋಜನೆ, ಸ್ಥಳ– ಕೃಷ್ಣದೇವರಾಯ ಕಲಾಮಂದಿರ, ತೆಲುಗು ವಿಜ್ಞಾನ ಸಮಿತಿ ಆವರಣ, ವೈಯಾಲಿಕಾವಲ್, ಬೆಳಿಗ್ಗೆ 11

’ಕೋವಿಡ್ ಮೂರನೇ ಅಲೆ ತಡೆಗಟ್ಟುವುದು’ ಕುರಿತು ವೆಬಿನಾರ್: ಭಾಗವಹಿಸುವವರು–ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್, ಆಯೋಜನೆ–ನಮ್ಮ ಬೆಂಗಳೂರು ಪ್ರತಿಷ್ಠಾನ, ಸಂಜೆ 7.30 (ಆನ್‌ಲೈನ್ ಕಾರ್ಯಕ್ರಮ)



70ನೇ ವರ್ಷಕ್ಕೆ ಕಾಲಿಟ್ಟ ಕಾಂಗ್ರೆಸ್ ಶಾಸಕ ಜಿ.ಪರಮೇಶ್ವರ್ ಅವರನ್ನು ಕಾಂಗ್ರೆಸ್ ಮುಖಂಡರಾದ ಬಿ.ವಿ.ಜಯರಾಮು, ಸುನಿಲ್, ಪಿಳ್ಳಪ್ಪ, ಜಗದೀಶ್ ಹಾಗೂ ಇತರರು ಅಭಿನಂದಿಸಿದರು

ಉಮಾಮಹಾದೇವನ್ ಮಹಿಳಾ ಇಲಾಖೆಗೆ ವರ್ಗಾವಣೆ

ಬೆಂಗಳೂರು: ಹಿರಿಯ ಐಎಎಸ್ ಅಧಿಕಾರಿ ಉಮಾ ಮಹಾದೇವನ್ ಅವರನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಎಸ್.ಸೆಲ್ವಕುಮಾರ್ ಅವರನ್ನು ಸಹಕಾರ ಇಲಾಖೆಯ ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಎರಡು ಕಟ್ಟಡಗಳಲ್ಲಿ 23 ಗಂಟೆಗಳ ಶೋಧ ಮುಗಿಸಿದ ಜಾರಿ ನಿರ್ದೇಶನಾಲಯದ ಅಧಿಕಾರಿಗಳು

ಜಮೀರ್ ವಿಲಾಸಿ ಬಂಗಲೆ: ಇ.ಡಿ ಕೆಂಗಣ್ಣು

ಪ್ರಜಾವಾಣಿ ವಾರ್ತೆ



ಜಮೀರ್ ಅಹ್ಮದ್ ಖಾನ್

ಬೆಂಗಳೂರು: ಕಾಂಗ್ರೆಸ್ ಶಾಸಕ ಜಮೀರ್ ಅಹ್ಮದ್ ಖಾನ್ ಮನೆಯಲ್ಲಿ ಜಾರಿ ನಿರ್ದೇಶನಾಲಯದ(ಇ.ಡಿ) ಶೋಧಕ್ಕೆ ಪ್ರಮುಖ ಕಾರಣವಾಗಿದ್ದು ಅವರು ಕಟ್ಟಿಸಿರುವ ಅರಮನೆಯನ್ನೇ ಹೋಲುವ ಅರೇಬಿಕ್ ಶೈಲಿಯ ವಿಲಾಸಿ ಬಂಗಲೆ!

ಕಂಟೋನ್ಮೆಂಟ್ ರೈಲು ನಿಲ್ದಾಣದ ಎದುರಿನ 33,479 ಚದರ ಅಡಿ ಜಾಗವನ್ನು 2006ರಲ್ಲಿ ಜಮೀರ್ ಖರೀದಿ ಮಾಡಿದ್ದರು. ಅದರಲ್ಲಿ 14,900 ಚದರ ಅಡಿ ಜಾಗದಲ್ಲಿ ಎರಡು ಬಂಗಲೆಗಳನ್ನು ನಿರ್ಮಿಸಲಾಗಿದೆ. ಇವುಗಳ ನಿರ್ಮಾಣಕ್ಕೆ ಏಳು ವರ್ಷ ಹಿಡಿದಿದೆ.

'ಮನೆಗೆ ಬಳಸಿರುವ ಗ್ರಾನೈಟ್, ಗೋಡೆಯಲ್ಲಿ ಶ್ವೇತ ಶಿಲೆಯ ಕಲಾಕೃತಿಗಳು, ಚಿನ್ನ ಲೇಪಿತ ಎಂದು ಹೇಳಲಾಗುವ ಪೀಠೋಪಕರಣಗಳು ಕೂಡ ಅರೇಬಿಕ್ ಶೈಲಿಯಲ್ಲೇ ಇವೆ. ಒಟ್ಟಾರೆ ಮನೆಯಲ್ಲಿ 40 ಕೊಠಡಿಗಳಿದ್ದು, ಶೋಧ ನಡೆಸಲು ಹೋಗಿದ್ದ ಇ.ಡಿ ಅಧಿಕಾರಿಗಳೇ ಬಂಗಲೆ ನೋಡಿ ಬೆರಗಾಗಿದ್ದಾರೆ' ಎಂದು ಮೂಲಗಳು ಹೇಳಿವೆ.

ಮನೆ ವಿನ್ಯಾಸಕ್ಕಾಗಿ ವಾಸ್ತುಶಿಲ್ಪಿಗಳನ್ನೂ ದುಬೈನಿಂದಲೇ ಕರೆಸಲಾಗಿತ್ತು. ಎರಡು ಕಟ್ಟಡ, ಅದರ ಮುಂದಿನ ಉದ್ಯಾನ ಕೂಡ ಅರಮನೆಯ ವೈಭವವನ್ನು ನೆನಪಿಸುವಂತಿವೆ. ಈ ಬಂಗಲೆಯೇ ಜಮೀರ್ ಅಹ್ಮದ್ ಮೇಲೆ ಇ.ಡಿ ಅಧಿಕಾರಿಗಳ ಕೆಂಗಣ್ಣು ಬೀಳಲು ಕಾರಣವಾಯಿತು ಎನ್ನಲಾಗಿದೆ.



ಜಮೀರ್ ಅಹ್ಮದ್ ಖಾನ್ ಅವರ ಭವ್ಯ ಬಂಗಲೆ

ಗುರುವಾರ ಬೆಳಿಗ್ಗೆಯಿಂದ ಶುಕ್ರವಾರ ಬೆಳಗಿನ ಜಾವದ ತನಕ ಸತತ 23 ಗಂಟೆಗಳ ಕಾಲ ಶೋಧ ಕಾರ್ಯ ನಡೆಸಿ ಇ.ಡಿ ಅಧಿಕಾರಿಗಳು ವಾಪಸ್ ಹೋಗಿದ್ದಾರೆ.


ಈ ಕುರಿತು ಪ್ರತಿಕ್ರಿಯಿಸಿರುವ ಜಮೀರ್, 'ಈ ಬಂಗಲೆ ಮೇಲೆ ಹಲವರು ಕಣ್ಣಿತ್ತು. ರಾಜಕೀಯದಲ್ಲಿರುವ ಕಾರಣ ನನಗೆ ವಿರೋಧಿಗಳಿದ್ದಾರೆ. ಯಾರೋ ಮೂರ್ನಾಲ್ಕು ಜನ ದೂರು ನೀಡಿದ್ದರಿಂದ ಇ.ಡಿ ಅಧಿಕಾರಿಗಳು ಬಂದು ಶೋಧ ನಡೆಸಿದ್ದಾರೆ. ದೂರು ನೀಡಿದವರು ಯಾರು ಎಂದು ಹೇಳಲು ಇ.ಡಿ ಅಧಿಕಾರಿಗಳು ನಿರಾಕರಿಸಿದರು. ಶೋಧ ನಡೆಸಿ ಯಾವುದೇ ತಪ್ಪುಗಳಿಲ್ಲ ಎಂದು ಮನವರಿಕೆ ಮಾಡಿಕೊಂಡು ಹೋಗಿರುವುದು ನಮಗೂ ನಿರಾಳವಾಗಿದೆ' ಎಂದರು.

'ಇಷ್ಟು ದೊಡ್ಡ ಮನೆ ನಿರ್ಮಾಣಕ್ಕೆ ಹಣ ಎಲ್ಲಿಂದ ಬಂತು, ಎಷ್ಟು ಖರ್ಚು ಮಾಡಲಾಗಿದೆ ಎಂದು ಪ್ರಶ್ನೆ ಮಾಡಿದರು. ಎಲ್ಲಾ ವ್ಯವಹಾರವನ್ನೂ ಬ್ಯಾಂಕ್ ಮೂಲಕವೇ ಮಾಡಿದ್ದೇನೆ. ಆ ಎಲ್ಲಾ ದಾಖಲೆಗಳನ್ನೂ ಒದಗಿಸಿದ್ದೇನೆ. ಅವರೂ ಬ್ಯಾಂಕ್‌ಗಳಿಗೆ ಹೋಗಿ ಮಾಹಿತಿ ಪಡೆದುಕೊಂಡರು. ಅವರು ನಿರೀಕ್ಷೆ ಮಾಡಿದಂತೆ ಯಾವ ಲೋಪವೂ ಕಂಡು ಬರಲಿಲ್ಲ' ಎಂದು ವಿವರಿಸಿದರು.

'ಐಎಂಎ ಹಗರಣದ ಬಗ್ಗೆ ಯಾವುದೇ ಪ್ರಶ್ನೆ ಅಥವಾ ಮಾಹಿತಿಯನ್ನೂ ಅವರು ಕೇಳಲಿಲ್ಲ. ಮುಂದಿನ ದಿನಗಳಲ್ಲಿ ಕರೆದಾಗ ಕಚೇರಿಗೆ ಬಂದು ಸ್ಪಷ್ಟನೆ ನೀಡಬೇಕು ಎಂದು ತಿಳಿಸಿದ್ದಾರೆ. ಆದರೆ, ಯಾವುದೇ ನೋಟಿಸ್ ನೀಡಿಲ್ಲ. ಯಾರನ್ನೂ ವಶಕ್ಕೆ ಪಡೆದಿಲ್ಲ' ಎಂದು ಸ್ಪಷ್ಟಪಡಿಸಿದರು.

'ಮನೆ ನಿರ್ಮಾಣಕ್ಕೆ ಎಷ್ಟು ಖರ್ಚಾಗಿದೆ ಎಂಬುದನ್ನು ಆದಾಯ ತೆರಿಗೆ(ಐ.ಟಿ) ಇಲಾಖೆಗೆ ಮಾಹಿತಿ ನೀಡಿದ್ದೇನೆ. ಮಾಧ್ಯಮಗಳಿಗೆ ಬಹಿರಂಗಪಡಿಸುವ ಅಗತ್ಯವಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಜಮೀರ್ ವಿರುದ್ಧ ದೂರು ಕೊಟ್ಟಿಲ್ಲ'




ರಾಮನಗರ: 'ಶಾಸಕ ಜಮೀರ್ ಅಹ್ಮದ್ ಖಾನ್ ಮನೆ ಮೇಲೆ ಇ.ಡಿ ಅಧಿಕಾರಿಗಳ ದಾಳಿ ಬಗ್ಗೆ ಹೆಚ್ಚೇನು ಗೊತ್ತಿಲ್ಲ. ನಾನಂತೂ ದೂರು ಕೊಟ್ಟಿಲ್ಲ' ಎಂದು ಮಾಜಿ ಮುಖ್ಯಮಂತ್ರಿ ಎಚ್‌.ಡಿ. ಕುಮಾರಸ್ವಾಮಿ ಪ್ರತಿಕ್ರಿಯಿಸಿದರು.

'ಯಾರು ದೂರು ಕೊಟ್ಟಿದ್ದಾರೆ ಎಂಬುದನ್ನು ಇ.ಡಿ ಅಧಿಕಾರಿಗಳೇ ಹೇಳಬೇಕು. ಕೇಂದ್ರದ ಸಂಸ್ಥೆಗಳಿಗೆ ಕೆಲವರು ಮೂಗರ್ಜಿ ಬರೆಯುತ್ತಾರೆ. ಅದನ್ನು ಆಧರಿಸಿ ಇಂತಹ ದಾಳಿ ನಡೆಯುವುದು ಸಹಜ. ನನ್ನ ತೋಟದ ಮನೆ ವಿಚಾರಕ್ಕೂ ಹಿಂದೆ ಇದೇ ರೀತಿ ದಾಳಿ ನಡೆದಿತ್ತು. ರಾಜಕೀಯದಲ್ಲಿ ಇದೆಲ್ಲ ಮಾಮೂಲಿ. ನಮ್ಮ ದಾಖಲೆಗಳು ಸರಿ ಇದ್ದರೆ ಯಾರು ಏನು ಮಾಡಲು ಸಾಧ್ಯವಿಲ್ಲ' ಎಂದರು.

ಕರ್ನಾಟಕದ ಬಗ್ಗೆ ನಿರ್ಲಕ್ಷ್ಯ: 'ಹಿಂದಿನ ಸಮ್ಮಿಶ್ರ ಸರ್ಕಾರದಲ್ಲಿ ನಾನು ಮುಖ್ಯಮಂತ್ರಿ ಆಗಿದ್ದಾಗ ಕೇಂದ್ರ ಜಲ ಸಂಪನ್ಮೂಲ ಸಚಿವರೇ ಮೇಕೆದಾಟು ಯೋಜನೆ ಸಂಬಂಧ ಡಿಪಿಆರ್ ಸಿದ್ಧಪಡಿಸಿ ಕೊಡಲು ಹೇಳಿದ್ದರು. ಈಗ ಅದಕ್ಕೆ ಅನುಮತಿ ನೀಡಿಯೇ ಇಲ್ಲ ಎಂದು ಸಂಸತ್‌ನಲ್ಲಿ ಹೇಳಿರುವುದು ಅವರ ಮಲತಾಯಿ ಧೋರಣೆಗೆ ಸಾಕ್ಷಿ' ಎಂದು ಕುಮಾರಸ್ವಾಮಿ ಹೇಳಿದರು.

ಪದೇ ಪದೇ ಕೇಳಿದ್ದನ್ನೇ ಕೇಳಿದರು...



ರೋಷನ್ ಬೇಗ್

ರೋಷನ್ ಬೇಗ್ ಮನೆಯಲ್ಲೂ ಇ.ಡಿ ಅಧಿಕಾರಿಗಳು ಶುಕ್ರವಾರ ಬೆಳಗಿನ ಜಾವದ ವೇಳೆಗೆ ಶೋಧ ಮುಗಿಸಿ ವಾಪಸ್ ಹೋದರು.

ದಾಳಿ ಬಗ್ಗೆ ಪ್ರತಿಕ್ರಿಯಿಸಿದ ಬೇಗ್, 'ಅಕ್ರಮ ಹಣಕಾಸು ವ್ಯವಹಾರ(ಮನಿ ಲಾಂಡ್ರಿಂಗ್) ನಡೆದಿದೆ ಎಂಬ ಅನುಮಾನದಲ್ಲಿ ಇ.ಡಿ ಅಧಿಕಾರಿಗಳು ಶೋಧ ನಡೆಸಿದರು. ಎರಡು–ಮೂರು ಗಂಟೆಗಳಲ್ಲೇ ನಡೆಯಬೇಕಿದ್ದ ಶೋಧವನ್ನು ಅನಗತ್ಯ ವಿಳಂಬ ಮಾಡಿದರು. ಕೇಳಿದ ಪ್ರಶ್ನೆಗಳನ್ನೇ ಪದೇ ಪದೇ ಕೇಳಿ ಕಾಲಹರಣ ಮಾಡಿದರು' ಎಂದರು.

'2004ರಿಂದ ಚುನಾವಣಾ ಆಯೋಗಕ್ಕೆ ಮತ್ತು ಪ್ರತಿವರ್ಷ ಲೋಕಾಯುಕ್ತಕ್ಕೆ ಆಸ್ತಿ ವಿವರ ಸಲ್ಲಿಕೆ ಮಾಡಿದ್ದೇನೆ. ಆ ಎಲ್ಲಾ ದಾಖಲೆಗಳನ್ನು ಅವರಿಗೆ ಹಾಜರುಪಡಿಸಿದ್ದೇನೆ' ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	116.86	17,195	5,385
ಹಾರಂಗಿ	2,859	2,855.12	7,487	9,081
ಕಬಿನಿ	2284.00	2,281.61	6,857	5,000
ಹೇಮಾವತಿ	2,922	2,919.85	11,709	10,580
ಲಿಂಗನಮಕ್ಕಿ	1,819	1,810.25	24,319	-
ಸೂಪಾ (ಮೀ)	564	553.65	19,399	4,713
ಮಾಣಿ	594	583.68	4282	-
ತುಂಗಭದ್ರಾ	1,633	1,632.08	77,008	37,511
ಮಲಪ್ರಭಾ	2079.5	2,076.05	3,787	1,394
ಘಟಪ್ರಭಾ	2175	2,172.60	15,154	24,487
ಭದ್ರಾ	186	184.7	13,217	6608
ಆಲಮಟ್ಟಿ (ಮೀ)	519.6	518.77	1,01,201	86,722
ನಾರಾಯಣಪುರ (ಮೀ)	492.25	491.77	40,000	28,960

* ನೆಲಮಟ್ಟದಿಂದ

'ಬೆಳಗಾವಿ: ₹7,800 ಕೋಟಿ ನಷ್ಟ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಪ್ರವಾಹ ಮತ್ತು ಅತಿವೃಷ್ಟಿಯಿಂದಾಗಿ ಜಿಲ್ಲೆಯಲ್ಲಿ ಬೆಳೆ, ಮನೆಗಳು ಹಾಗೂ ರಸ್ತೆ, ಸೇತುವೆ, ಕೆರೆ–ಕಟ್ಟೆ ಮೊದಲಾದ ಮೂಲಸೌಕರ್ಯಗಳು ಸೇರಿದಂತೆ ಒಟ್ಟು ₹ 7,800 ಕೋಟಿ ನಷ್ಟ ಉಂಟಾಗಿದೆ' ಎಂದು ಸಚಿವ ಗೋವಿಂದ ಕಾರಜೋಳ ತಿಳಿಸಿದರು.

'21,300 ವಿದ್ಯುತ್ ಕಂಬಗಳು ಹಾಗೂ 5,300 ಟ್ರಾನ್ಸ್‌ಫಾರ್ಮರ್‌ಗಳು ಮುಳುಗಡೆಯಾಗಿವೆ. ನೀರು ಕಡಿಮೆಯಾದ ಬಳಿಕ ಅವುಗಳ ಹಾನಿ ಅಂದಾಜು ಮಾಡಲಾಗುವುದು' ಎಂದು ಶುಕ್ರವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

'51 ಕಾಳಜಿ ಕೇಂದ್ರಗಳಲ್ಲಿ 38 ಸಾವಿರ ಜನರಿಗೆ ಆಶ್ರಯ ನೀಡಲಾಗಿದೆ. ಜನರಿಗೆ ಊಟೋಪಚಾರ, ಜಾನುವಾರುಗಳಿಗೆ ಮೇವು ಹಾಗೂ ಔಷಧೋಪಚಾರದ ವ್ಯವಸ್ಥೆ ಮಾಡಲಾಗಿದೆ. ಇನ್ನೂ 8–10 ದಿನಗಳವರೆಗೆ ಕೇಂದ್ರಗಳನ್ನು ಮುಂದುವರಿಸುವಂತೆ ಸೂಚಿಸಿದ್ದೇನೆ' ಎಂದು ತಿಳಿಸಿದರು.

'560 ಹಳ್ಳಿ ರಸ್ತೆಗಳು ಹಾಳಾಗಿವೆ. ಆ ಇಲಾಖೆಗೆ ಒಟ್ಟು ₹ 772 ಕೋಟಿ, ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ 300 ಕಿ.ಮೀ. ರಸ್ತೆ, 70 ಸೇತುವೆಗಳು ಹಾಳಾಗಿದ್ದು, ಹಾನಿ ಮೌಲ್ಯ ₹ 300 ಕೋಟಿ ಆಗುತ್ತದೆ. ಮನೆಗಳಿಗೆ ಸಂಬಂಧಿಸಿದ ಹಾನಿ ₹ 150 ಕೋಟಿ ಆಗಿದೆ. ಬೆಳೆ ಹಾನಿಯ ಮೊತ್ತವೇ ₹ 1,430 ಕೋಟಿ ಎಂದು ಅಂದಾಜಿಸಲಾಗಿದೆ. 7,350 ಕೋಳಿಗಳು ಕೊಚ್ಚಿ ಹೋಗಿವೆ' ಎಂದರು.

'ಕೇಂದ್ರ ಸರ್ಕಾರವು ರಾಜ್ಯಕ್ಕೆ 2019–20ರಲ್ಲಿ ₹1,725 ಕೋಟಿ, 2020–21ನೇ ಸಾಲಿನಲ್ಲಿ ₹725 ಕೋಟಿಯನ್ನು ಮಾರ್ಗಸೂಚಿ ಪ್ರಕಾರ ಬಿಡುಗಡೆ ಮಾಡಿದೆ. ಈ ಬಾರಿಯ ಹಾನಿ ವರದಿ ಸಲ್ಲಿಸಿದ ಬಳಿಕ ಅಧ್ಯಯನ ತಂಡ ಕಳುಹಿಸಲಿದೆ' ಎಂದರು.

ಕರಾವಳಿ, ಮಲೆನಾಡಿನಲ್ಲಿ ಸಾಧಾರಣ ಮಳೆ

ಮಂಗಳೂರು: ಕರಾವಳಿ ಹಾಗೂ ಮಲೆನಾಡು ಭಾಗದಲ್ಲಿ ಶುಕ್ರವಾರ ಸಾಧಾರಣ ಮಳೆ ಸುರಿದಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರಾಸರಿ 3.8 ಸೆಂ.ಮೀ. ಮಳೆ ದಾಖಲಾಗಿದೆ. ಒಂದು ಮನೆ ಪೂರ್ಣ ಹಾಗೂ ಒಂದು ಮನೆ ಭಾಗಶಃ ಹಾನಿಯಾಗಿವೆ. 19 ವಿದ್ಯುತ್ ಕಂಬಗಳು ನೆಲಕ್ಕೆ ಉರುಳಿವೆ.

ಚಿಕ್ಕಮಗಳೂರು ಮಲೆನಾಡು ಭಾಗ, ಕೊಪ್ಪ, ಕಳಸ, ಎನ್‌.ಆರ್‌.ಪುರ, ಶೃಂಗೇರಿ ಭಾಗದಲ್ಲಿ ಸಾಧಾರಣ ಮಳೆಯಾಗಿದೆ. ಕೆರೆಕಟ್ಟೆಯಲ್ಲಿ 12.3, ಹೊಸಕೆರೆ 8.1, ಬಿಳ್ಳೂರು 6.2, ಬಸರೀಕಟ್ಟೆ 5, ಗೋಣಿಬೀಡು ಮತ್ತು ಜಾವಳಿ 5.3, ಕಿಗ್ಗಾದಲ್ಲಿ 4.5ಸೆಂ.ಮೀ ಮಳೆಯಾಗಿದೆ. ಕೊಪ್ಪ ತಾಲ್ಲೂಕಿನ ಕೊಗ್ರೆ– ಮೇಗೂರು ಮಾರ್ಗದ ಸೇತುವೆಯ ತಳಪಾಯ ಅರ್ಧದಷ್ಟು ಕುಸಿದಿದೆ.

ಉಡುಪಿ ಜಿಲ್ಲೆಯ ಹಲವೆಡೆ ಸಾಧಾರಣ ಮಳೆ ಸುರಿದಿದೆ.

ತಗ್ಗಿದ ಮಳೆ: ಶಿವಮೊಗ್ಗ ಜಿಲ್ಲೆಯಲ್ಲಿ ಮಳೆ ಪ್ರಮಾಣ ತಗ್ಗಿದ್ದು, ಶುಕ್ರವಾರ 26.03 ಮಿ.ಮೀ. ಸರಾಸರಿ ಮಳೆಯಾಗಿದೆ. ತೀರ್ಥಹಳ್ಳಿಯಲ್ಲಿ 88.60 ಮಿ.ಮೀ, ಹೊಸನಗರದಲ್ಲಿ 72.40 ಮಿ.ಮೀ, ಸೊರಬದಲ್ಲಿ 8 ಮಿ.ಮೀ, ಸಾಗರದಲ್ಲಿ 4 ಮಿ.ಮೀ, ಭದ್ರಾವತಿ 5 ಮಿ.ಮೀ, ಶಿವಮೊಗ್ಗದಲ್ಲಿ 2.20 ಮಿ.ಮೀ, ಶಿಕಾರಿಪುರದಲ್ಲಿ 2 ಮಿ.ಮೀ ಮಳೆಯಾಗಿದೆ.

ಕೊಡಗು ಜಿಲ್ಲೆಯಲ್ಲಿ ಗುರುವಾರ ರಾತ್ರಿಯಿಡೀ ಗಾಳಿ ಸಹಿತ ಧಾರಾಕಾರ ಮಳೆಯಾಗಿದೆ. ಗಾಳಿಗೆ ಅಲ್ಲಲ್ಲಿ ಮರಗಳು ಧರೆಗುರುಳಿವೆ. ಹಾಸನ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಉತ್ತಮ ಮಳೆಯಾಗಿದೆ.

ಸುದ್ದಿ 2 ನಿಮಿಷ

ಹಾರ ಬೇಡ ಕನ್ನಡ ಪುಸ್ತಕ ಕೊಡಿ: ಸುನೀಲ್ ಕುಮಾರ್

ಬೆಂಗಳೂರು: 'ನನ್ನನ್ನು ಅಭಿನಂದಿಸಲು ಬರುವವರು ಹಾರ– ತುರಾಯಿಗಳನ್ನು ತರುವುದು ಬೇಡ. ಕೊಡಲೇಬೇಕು ಎಂದಿದ್ದರೆ, ಒಂದು ಕನ್ನಡ ಪುಸ್ತಕ ಕೊಡಿ' ಎಂದು ಸಚಿವ ವಿ.ಸುನೀಲ್‌ಕುಮಾರ್ ತಿಳಿಸಿದ್ದಾರೆ.

'ನೀವು ಕೊಟ್ಟ ಪುಸ್ತಕವನ್ನು ಕಾರ್ಕಳದ ಗ್ರಂಥಾಲಯಕ್ಕೆ ಕೊಡುಗೆಯಾಗಿ ನೀಡುತ್ತೇನೆ. ಇದರಿಂದ ನನ್ನ ಮತ ಕ್ಷೇತ್ರದ ವಿದ್ಯಾರ್ಥಿಗಳಿಗೆ ಮತ್ತು ಜ್ಞಾನ ದಾಹಿಗಳಿಗೆ ಪ್ರಯೋಜನ ಆಗುತ್ತದೆ' ಎಂದು ಹೇಳಿದ್ದಾರೆ.



ಕಾರ್ಕಳ ವಿಧಾನಸಭಾ ಕ್ಷೇತ್ರದಲ್ಲಿ ಯಾವುದೇ ಸಾರ್ವಜನಿಕ ಕಾರ್ಯಕ್ರಮದಲ್ಲಿ ಹಾರ ತುರಾಯಿಗಳನ್ನು ನೀಡಬಾರದು. ಅದರ ಬದಲಿಗೆ ಒಂದು ಕೆ.ಜಿ 'ಕಾರ್ಲ ಕಜೆ' ಎಂಬ ಸ್ಥಳೀಯ ತಳಿಯ ಕೆಂಪು ಅಕ್ಕಿಯನ್ನು ನೀಡುವಂತೆ ಸುನೀಲ್ ಸಲಹೆ ನೀಡಿದ್ದೂ ಅಲ್ಲದೆ, ಅಕ್ಕಿಯನ್ನು ಕೊಡುಗೆಯಾಗಿ ನೀಡುವ ಪರಿಪಾಟವನ್ನೂ ಆರಂಭಿಸಿದರು. ಈ ಬಾರಿ ಮುಂಗಾರು ಆರಂಭದಲ್ಲಿ ಕಾರ್ಕಳ ಮೂಲದ ಬಿಳಿ ಬೆಂಡೆ ಬೀಜವನ್ನು ಕ್ಷೇತ್ರದ ಜನರಿಗೆ ಉಚಿತವಾಗಿ ವಿತರಿಸಿ ಅದನ್ನು ಎಲ್ಲರೂ ಬೆಳೆಯುವಂತೆ ಪ್ರೋತ್ಸಾಹ ನೀಡಿದ್ದರು.

ಬಸವರಾಜ ಬೊಮ್ಮಾಯಿ ಸಂಪುಟದ ಅತಿ ಕಿರಿಯ ವಯಸ್ಸಿನ ಸಚಿವರೂ ಆಗಿರುವ ಸುನೀಲ್, ಎರಡು ವರ್ಷಗಳ ಕಾಲ ಆಡಳಿತ ಪಕ್ಷದ ಮುಖ್ಯ ಸಚೇತಕರಾಗಿ ಕಾರ್ಯ ನಿರ್ವಹಿಸಿದ್ದರು.

ವೃದ್ಧಾಪ್ಯ ವೇತನ ಬೇಡ ಎಂದ ಅಜ್ಜಿ; ವಿಡಿಯೊ ವೈರಲ್

ಚಿಕ್ಕಬಳ್ಳಾಪುರ: ಅವರಿಗೆ 80 ವರ್ಷ. ನಿಮಗೆ ವೃದ್ಧಾಪ್ಯ ವೇತನ ಬೇಡವಾ ಎಂದರೆ, ಬೇಡ ಸ್ವಾಮಿ... ಬೇರೆ ಯಾರಿಗಾದರೂ ಕೊಡಿ. ನನಗೆ ಹಣ ಬೇಕಾದರೆ ಈ ಹೂ ಮಾರಾಟ ಮಾಡುವೆ.

–ಹೀಗೆ ವೃದ್ಧಾಪ್ಯ ವೇತನ ನಿರಾಕರಿಸುವ ಮೂಲಕ ಗುಡಿಬಂಡೆಯ ರಾಜಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿ ಆಗಿದ್ದಾರೆ. ವೃದ್ಧಾಪ್ಯ ವೇತನ ಬೇಡ ಎಂದು ಹೇಳುವ ಅವರ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

'ನನ್ನ ಮಕ್ಕಳು ನನ್ನ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ. ನನಗೆ ಖರ್ಚಿಗೆ ಹಣ ಬೇಕು ಎಂದರೆ ಹೂ ಮಾರುವೆ. ಯಾರಿಗಾದರೂ ಇಲ್ಲದವರಿಗೆ ಹಣ ಕೊಡಿ. ನನಗೆ ದೇವರು ಆರೋಗ್ಯ ಕೊಟ್ಟಿದ್ದಾನೆ. ಅಷ್ಟೇ ಸಾಕು' ಎಂದು ಹೇಳಿರುವ ಅವರ ಮಾತುಗಳು ವಿಡಿಯೊದಲ್ಲಿವೆ. ಅವರ ಕುಟುಂಬವೂ ಆರ್ಥಿಕವಾಗಿ ಸಬಲವೇನೂ ಆಗಿಲ್ಲ. ಮುಕ್ಕಾಲು ಎಕರೆ ಜಮೀನು ಇದೆ ಎನ್ನಲಾಗುತ್ತಿದೆ.

₹ 6.39 ಕೋಟಿ ಮೌಲ್ಯದ ಮೊಬೈಲ್‌ಗಳ ದರೋಡೆ

ಪ್ರಜಾವಾಣಿ ವಾರ್ತೆ

ಕೋಲಾರ: ತಮಿಳುನಾಡಿನಿಂದ ಗುರುವಾರ ರಾತ್ರಿ ಜಿಲ್ಲೆಯ ಮಾರ್ಗವಾಗಿ ಬೆಂಗಳೂರಿಗೆ ಮೊಬೈಲ್ ಸಾಗಿಸುತ್ತಿದ್ದ ಕಂಟೈನರ್ ಅಡ್ಡಗಟ್ಟಿದ ದರೋಡೆಕೋರರು ₹ 6.39 ಕೋಟಿ ಮೌಲ್ಯದ ಮೊಬೈಲ್‌ಗಳನ್ನು ದೋಚಿ ಪರಾರಿಯಾಗಿದ್ದಾರೆ.

ಬೆಂಗಳೂರಿನ ಶ್ರೀಜಿ ಟ್ರಾನ್ಸ್ ಪೋರ್ಟ್ ಏಜೆನ್ಸಿಗೆ ಸೇರಿದ ಕಂಟೈನರ್‌ನಲ್ಲಿ ಚೆನ್ನೈನಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆಗೆ ಎಂ.ಐ ಕಂಪನಿಯ ಮೊಬೈಲ್‌ಗಳನ್ನು ಸಾಗಿಸಲಾಗುತ್ತಿತ್ತು. ಕಾರಿನಲ್ಲಿ ಹಿಂಬಾಲಿಸಿ ಬಂದ ಆರು ಮಂದಿ ದರೋಡೆಕೋರರು ಮುಳಬಾಗಿಲು ತಾಲ್ಲೂಕಿನ ದೇವರಾಯಸಮುದ್ರ ಬಳಿ ಕಂಟೈನರ್ ಅಡ್ಡಗಟ್ಟಿ ಚಾಲಕ ಸುರೇಶ್ ಜತೆ ಜಗಳವಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ದರೋಡೆಕೋರರು ಸುರೇಶ್ ಮೇಲೆ ಹಲ್ಲೆ ನಡೆಸಿ ಸಮೀಪದ ನಿರ್ಜನ ಪ್ರದೇಶಕ್ಕೆ ಎಳೆದೊಯ್ದು ಬಾಯಿಗೆ ಬಟ್ಟೆ ತುರುಕಿ, ಕೈ ಕಾಲುಗಳನ್ನು ಕಟ್ಟಿದ್ದಾರೆ. ಬಳಿಕ ಕಂಟೈನರ್‌ನಲ್ಲಿದ್ದ ಮೊಬೈಲ್‌ಗಳನ್ನು ಮತ್ತೊಂದು ಲಾರಿಗೆ ತುಂಬಿಸಿಕೊಂಡಿದ್ದಾರೆ. ನಂತರ ಖಾಲಿ ಕಂಟೈನರ್ ಅನ್ನು ಕೋಲಾರ ತಾಲ್ಲೂಕಿನ ನೆರ್ನಹಳ್ಳಿ ಬಳಿ ನಿಲ್ಲಿಸಿ ಮೊಬೈಲ್ ಸರಕಿನೊಂದಿಗೆ ಪರಾರಿಯಾಗಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಕೈ ಕಾಲು ಕಟ್ಟಿದ ಸ್ಥಿತಿಯಲ್ಲಿದ್ದ ಸುರೇಶ್ ಅವರನ್ನು ನೋಡಿದ ದಾರಿಹೋಕರು ಬಳಿ ಹೋಗಿ ವಿಚಾರಿಸಿದಾಗ ಪ್ರಕರಣ ಗೊತ್ತಾಗಿದೆ.

ಕೋವಿಡ್ ಹೆಚ್ಚಳ: ಗಡಿಯಲ್ಲಿ ಬಿಗಿಕ್ರಮ

ಮೈಸೂರು / ಮಡಿಕೇರಿ / ಚಾಮರಾಜನಗರ: ಕೇರಳದಲ್ಲಿ ಕೋವಿಡ್ ಪ್ರಕರಣ ಹೆಚ್ಚುತ್ತಿರುವುದರಿಂದ ಗಡಿ ಜಿಲ್ಲೆಗಳಲ್ಲಿ ವಾರಾಂತ್ಯ ಕರ್ಫ್ಯೂ ಘೋಷಿಸಿದ ಬೆನ್ನಲೇ, ಗಡಿ ಭಾಗ ಹಾಗೂ ಚೆಕ್‌ಪೋಸ್ಟ್‌ಗಳಲ್ಲಿ ಮತ್ತಷ್ಟು ಬಿಗಿಕ್ರಮ ಕೈಗೊಳ್ಳಲಾಗಿದೆ.

ಮೈಸೂರು ಜಿಲ್ಲೆಯ ಬಾವಲಿ ಚೆಕ್‌ಪೋಸ್ಟ್‌ನಲ್ಲಿ ಸಿಬ್ಬಂದಿ ಹೆಚ್ಚಿಸಿದ್ದು, ಕೇರಳದಿಂದ ಬರುವ ವಾಹನಗಳನ್ನು ತಡೆದು ತಪಾಸಣೆ ತೀವ್ರಗೊಳಿಸಲಾಗಿದೆ. 72 ಗಂಟೆಗಳೊಳಗೆ ಪಡೆದ ಆರ್‌ಟಿ–ಪಿಸಿಆರ್ ನೆಗೆಟಿವ್ ವರದಿ ತೋರಿಸದಿದ್ದರೆ ವಾಪಸ್ ಕಳುಹಿಸಲಾಗುತ್ತಿದೆ. ಚಾಮರಾಜೇಂದ್ರ ಮೃಗಾಲಯಕ್ಕೆ ಶನಿವಾರ ಹಾಗೂ ಭಾನುವಾರ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿದೆ.

ಕೊಡಗಿನಲ್ಲೂ ಕಟ್ಟುನಿಟ್ಟಿನ ನಿಯಮ ಜಾರಿಗೆ ತರಲಾಗಿದೆ. ಚಾಮರಾಜನಗರ ಜಿಲ್ಲೆಯ ಕೆಕ್ಕನಹಳ್ಳ ಚೆಕ್‌ಪೋಸ್ಟ್‌ನಲ್ಲಿ ವ್ಯವಸ್ಥೆಯನ್ನು ಸಚಿವ ಎಸ್‌.ಟಿ.ಸೋಮಶೇಖರ್ ಪರಿಶೀಲಿಸಿದರು.

'ಚುನಾವಣಾ ರಾಜಕೀಯದಿಂದ ನಿವೃತ್ತಿ'

ಪ್ರಜಾವಾಣಿ ವಾರ್ತೆ



ವಿ.ಶ್ರೀನಿವಾಸ ಪ್ರಸಾದ್

ಮೈಸೂರು: ಆತ್ಮತೃಪ್ತಿಯಿಂದ ಚುನಾವಣಾ ರಾಜಕಾರಣದಿಂದ ನಿವೃತ್ತಿಯಾಗುತ್ತಿರುವುದಾಗಿ ಚಾಮರಾಜನಗರ ಬಿಜೆಪಿ ಸಂಸದ ವಿ.ಶ್ರೀನಿವಾಸಪ್ರಸಾದ್ ಶುಕ್ರವಾರ ಇಲ್ಲಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವನಾಗಿ ಅವಧಿ ಪೂರ್ಣಗೊಳಿಸಿದ್ದರೆ ಆಗಲೇ ನಿವೃತ್ತಿ ಪಡೆಯುತ್ತಿದ್ದೆ. ಆದರೆ, ನಂತರ ನಡೆದ ರಾಜಕೀಯ ಬೆಳವಣಿಗೆಗಳಿಂದಾಗಿ ಮತ್ತೆ ಸ್ಪರ್ಧಿಸಬೇಕಾಯಿತು. 14 ಚುನಾವಣೆಗಳು ಸಾಕಾಗಿವೆ. ಈ ಲೋಕಸಭಾ ಅವಧಿ ಪೂರ್ಣಗೊಳಿಸಿ ನಿವೃತ್ತಿ ಪಡೆಯುತ್ತೇನೆ' ಎಂದರು.

ಪ್ರಸಾದ್ ತಮ್ಮ 75ನೇ ಜನ್ಮದಿನವನ್ನು ಒಡನಾಡಿ ಸೇವಾ ಸಂಸ್ಥೆಯ ಮಕ್ಕಳೊಂದಿಗೆ ಆಚರಿಸಿಕೊಂಡರು.

ಟೊಮೆಟೊಗಳನ್ನು ಚೆನ್ನಾಗಿ ಒರೆಸಿ, ಅದರ ತೊಟ್ಟನ್ನು ತೆಗೆದು ಸುಣ್ಣವನ್ನು ಹಚ್ಚಬೇಕು. ನಂತರ ಅವುಗಳನ್ನು ಪಾತ್ರೆಯಲ್ಲಿ ಹಾಕಿ ಪೇಪರ್‌ನಿಂದ ಮುಚ್ಚಿಟ್ಟರೆ, ಸುಮಾರು 20 ದಿನಗಳವರೆಗೆ ಟೊಮೆಟೊ ತಾಜಾ ಆಗಿ ಇರುತ್ತದೆ.



ಸಂಪ್ರೀತಿಯ ಸಾಂಗತ್ಯಕ್ಕೆ ಲೈಂಗಿಕ ಸುಖವೂ ಅನ್ಯೋನ್ಯತೆಯೂ



ಡಾ. ಬ್ರಹ್ಮಾನಂದ ನಾಯಕ

ಲೈಂಗಿಕತೆ ಕುರಿತು ಮಾತನಾಡುವುದೇ ನಿಷೇಧ ಎಂಬ ಭಾವನೆ ನಮ್ಮಲ್ಲಿದೆ. ಅದರ ಬಗ್ಗೆ ಕೊಂಚ ಮಾತನಾಡಿದರೂ ಸಾಕು, ಏನೋ ತಪ್ಪು ಮಾಡಿದ್ದೇವೆ ಎಂಬಂತಹ ಪರಿಸ್ಥಿತಿ ನಿರ್ಮಾಣವಾಗಿಬಿಡುತ್ತದೆ. ಪುರುಷರಂತೂ ಕಾಮದ ಕುರಿತ ವಿವರಗಳನ್ನು ಅಶ್ಲೀಲ ಸಾಹಿತ್ಯ, ವಿಡಿಯೊದಿಂದ ಅಥವಾ ನೈಜತೆಗಿಂತ ವೈಭವೀಕರಿಸಿ ಮಾತನಾಡುವ ಸ್ನೇಹಿತರಿಂದ ಪಡೆಯುವುದು ಸಾಮಾನ್ಯ. ಕೆಲವು ಹುಡುಗಿಯರಿಗಂತೂ ಲೈಂಗಿಕ ಶಿಕ್ಷಣವೆಂಬುದು ಮದುವೆಯಾಗುವವರೆಗೂ ಇರುವುದೇ ಇಲ್ಲ. ಆದರೆ ದಂಪತಿಯಲ್ಲಿ ಹೊಂದಾಣಿಕೆ ಬೇಕಾದರೆ ಲೈಂಗಿಕತೆ ಹಾಗೂ ಅನ್ಯೋನ್ಯತೆ ಎಂಬುದು ತುಂಬಾ ಮುಖ್ಯ.

ತೀರಾ ಹಿಂದೆ ಹಸಿವೆ, ಬಾಯಾರಿಕೆಯಂತೆ ಕಾಮವನ್ನೂ ಪರಿಗಣಿಸುತ್ತಿದ್ದರು. ಅದು ಮನುಷ್ಯನ ಮೂಲಭೂತ ಅವಶ್ಯಕತೆ ಎಂಬುದಂತೂ ನಿಜ. ಆದರೆ ಲೈಂಗಿಕತೆ ಎನ್ನುವುದು ಕೇವಲ ಮನರಂಜನೆಗಿರುವ ಚಟುವಟಿಕೆಯಲ್ಲ; ಹೀಗಾಗಿ ಸಹಜವಾಗಿಯೇ ಭಯ, ಆತಂಕ, ಒತ್ತಡ ಕೆಲವು ಸಮಸ್ಯೆಗಳಿಗೆ ಕಾರಣವಾಗಬಹುದು.

ದಂಪತಿ ಎದುರಿಸುವ ಕೆಲವು ಲೈಂಗಿಕ ಸಮಸ್ಯೆಗಳು

‘ಸುಹಾಗ್ ರಾತ್’ ಸಿಂಡ್ರೋಮ್: ಹೊಸದಾಗಿ ಮದುವೆಯಾದ ಭಾರತೀಯರಲ್ಲಿ ಇದೊಂದು ಮಾಮೂಲು ಸಮಸ್ಯೆ. ಅಂದರೆ ದಂಪತಿ ಈ ಸಂದರ್ಭದಲ್ಲಿ ನಿದ್ರೆ ಮಾಡುವುದೇ ಹೆಚ್ಚಂತೆ. ಕಾರಣ ಗೊತ್ತಿರುವಂಥದ್ದೇ. ಭಾರತದಲ್ಲಿ ವಿವಾಹವೆಂದರೆ 3-4 ದಿನಗಳ ಕಾಲ ವಿಜೃಂಭಣೆಯಿಂದ ನಡೆಯುವಂತಹ ಕಾರ್ಯಕ್ರಮ. ಎಲ್ಲವೂ ಮುಗಿಯುವ ಹೊತ್ತಿಗೆ ವಧು- ವರರಿಗೆ ಆಯಾಸದಿಂದ ನಿದ್ರೆ ಮಾಡಿದರೆ ಸಾಕಾಗಿರುತ್ತದೆ. ಹಿರಿಯರು ನಿಶ್ಚಯಿಸಿದ ಮದುವೆಯಾದರಂತೂ ಆತಂಕ, ಹಿಂಜರಿಕೆ ಸಹಜ. ಹೀಗಾಗಿ ಮೊದಲ ರಾತ್ರಿ ಲೈಂಗಿಕ ಕ್ರಿಯೆ ನಡೆಸದೇ ಇರುವ ದಂಪತಿ ಸಂಖ್ಯೆಯೂ ಜಾಸ್ತಿ. ಹಾಗೆಯೇ ದಂಪತಿಯ ಮಧ್ಯೆ ಪರಸ್ಪರ ಸಂವಹನ ನಡೆಯುವುದೂ ಕಡಿಮೆಯೇ. ಹೀಗಾಗಿ ಮೊದಲ ರಾತ್ರಿಯ ಬಗ್ಗೆ ಆತಂಕ, ಭಯವಿದ್ದರೆ ಅದು ಸಹಜವೇ! ನಿಮ್ಮ ಸ್ನೇಹಿತನೇನಾದರೂ ತನ್ನ ಮೊದಲ ರಾತ್ರಿಯ ಬಗ್ಗೆ ಅತಿರಂಜಿತವಾಗಿ ಹೇಳಿದರೆ ಅವನು ಸುಳ್ಳು ಹೇಳುತ್ತಿದ್ದಾನೆ ಎಂದುಕೊಳ್ಳಿ.

ಲೈಂಗಿಕತೆಯ ಕುರಿತು ಅರಿವಿನ ಕೊರತೆ: ಹೆಚ್ಚಿನವರಿಗೆ ಲೈಂಗಿಕ ಶಿಕ್ಷಣದ ಕೊರತೆಯಿರುತ್ತದೆ. ಪುರುಷರು ಸ್ವಲ್ಪ ಅರಿವು ಬೆಳೆಸಿಕೊಂಡಿದ್ದರೂ, ಕೆಲವು ಸಾಂಪ್ರದಾಯಿಕ ಹಿನ್ನೆಲೆಯುಳ್ಳ ಹುಡುಗಿಯರಿಗೆ ಈ ಬಗ್ಗೆ ತಿಳಿವಳಿಕೆ ಇಲ್ಲದಿರಬಹುದು. ಅಂತಹ ಸಂದರ್ಭದಲ್ಲಿ ಲೈಂಗಿಕ ಕ್ರಿಯೆ ನಡೆದರೆ ಖುಷಿಗಿಂತ ಆಘಾತವೇ ಜಾಸ್ತಿ. ಹೀಗಾಗಿ ಇದೊಂದು ಆಘಾತಕಾರಿ ಘಟನೆಯಾಗಿ ಕಾಡಬಹುದು. ದೈಹಿಕವಾಗಿ ನೋವಾದರಂತೂ ಕೇಳುವುದೇ ಬೇಡ.

ಇಂತಹ ಸಂದರ್ಭದಲ್ಲಿ ಸಂಗಾತಿಗಳು ಪರಸ್ಪರ ಮಾತುಕತೆಯಾಡುವುದು ಮುಖ್ಯ. ಲೈಂಗಿಕತೆ ಬಗ್ಗೆ ಚರ್ಚಿಸಿದ ನಂತರ ಮುಂದುವರಿಯಬಹುದು. ಅಗತ್ಯವಿದ್ದರೆ ಲೈಂಗಿಕ ತಜ್ಞರೊಂದಿಗೆ ಸಮಾಲೋಚನೆ ನಡೆಸಬಹುದು.

ಆತಂಕ: ನಮ್ಮ ಸಮಾಜದಲ್ಲಿ ಪುರುಷರನ್ನು ‘ಮ್ಯಾಕೊ’ ಎಂದೇ ಬಿಂಬಿಸಲಾಗುತ್ತಿದ್ದು, ಲೈಂಗಿಕ ಸಾಮರ್ಥ್ಯದ ಕುರಿತ ಭಯ ಮತ್ತು ಅಭದ್ರತೆಯು ಒತ್ತಡ ಹಾಗೂ ಆತಂಕವನ್ನು ಸೃಷ್ಟಿಸುತ್ತದೆ. ಹಲವರು ಅಶ್ಲೀಲ ವಿಡಿಯೊ ವೀಕ್ಷಣೆಯಿಂದ ತಮ್ಮ ಅಂಗಾಂಗಗಳ ಗಾತ್ರದ ಬಗ್ಗೆಯೂ ಕೀಳರಿಮೆ ಬೆಳೆಸಿಕೊಂಡಿರುತ್ತಾರೆ. ಆದರೆ ವಿಡಿಯೊದಲ್ಲಿರುವುದೆಲ್ಲ ಭ್ರಮೆ ಅಷ್ಟೆ. ಹೀಗಾಗಿ ಇಂತಹ ಕೀಳರಿಮೆ ಬಿಟ್ಟುಬಿಡಿ.

ಇವಲ್ಲದೇ ಶೀಘ್ರ ಸ್ಖಲನವಾಗುವುದು ಕೂಡ ಆತಂಕದ ಲಕ್ಷಣಗಳು. ಆರಂಭದಲ್ಲಿ ಇದು ಸಾಮಾನ್ಯ ಎಂದು ಪರಿಗಣಿಸಿದರೂ ಪದೇ ಪದೇ ಈ ಸಮಸ್ಯೆ ಎದುರಾದರೆ ತಜ್ಞರನ್ನು ಭೇಟಿ ಮಾಡಬಹುದು.

ಮಹಿಳೆಯರಲ್ಲಿ ನೋವು: ಲೈಂಗಿಕ ಕ್ರಿಯೆಯಲ್ಲಿ ಮಹಿಳೆಯರಿಗೆ ತೀವ್ರತರದ ನೋವು (ಡಿಸ್ಪರ್‍ಯುನಿಯ) ಕಾಡಬಹುದು. ಭಯ, ಆತಂಕದಿಂದ ಜನನಾಂಗ ಒಣಗಿದ್ದರೆ ಈ ಸಮಸ್ಯೆ ಉಂಟಾಗಬಹುದು. ಉದ್ರೇಕದ ಕೊರತೆಯಿದ್ದರೂ ಹೀಗಾಗಬಹುದು. ಆದರೆ ಈಗೆಲ್ಲ ಇದಕ್ಕೆ ಲುಬ್ರಿಕಂಟ್ ಜೆಲ್ಲಿ ಔಷಧದ ಅಂಗಡಿಯಲ್ಲಿ ಲಭ್ಯ. ಇದು ಬಿಟ್ಟು ಕಿಬ್ಬೊಟ್ಟೆ ಸೋಂಕು, ಬಿಗಿಯಾದ ಜನನಾಂಗದ ಪೊರೆ ನೋವಾಗಲು ಇತರ ಕಾರಣಗಳು. ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞರು ಇದಕ್ಕೆ ಪರಿಹಾರ ನೀಡಬಲ್ಲರು.

ಮಾನಸಿಕ ಕಾರಣಗಳಿಂದ ಜನನಾಂಗದ ಸ್ನಾಯುಗಳು ಬಿಗಿಯಾಗಿದ್ದರೂ ಸಮಸ್ಯೆ ಉದ್ಭವಿಸಬಹುದು. ಮನೆಯವರೇ ನಿಶ್ಚಯಿಸಿದ ಮದುವೆಯಲ್ಲಿ ಗಂಡ ಬಹುತೇಕ ಅಪರಿಚಿತನಾಗಿರುವುದರಿಂದ ಹಿಂಜರಿಕೆಯಿಂದ ಈ ತೊಂದರೆ ಉಂಟಾಗಬಹುದು. ಇಂತಹ ಸಂದರ್ಭದಲ್ಲಿ ಸಂಗಾತಿಗೆ ಹೆಚ್ಚು ಸಹನೆ ಬೇಕು. ಆದರೂ ಸರಿ ಹೋಗದಿದ್ದರೆ ಆಪ್ತ ಸಮಾಲೋಚಕರ ಸಲಹೆ ಪಡೆಯಬಹುದು.

ಅನ್ಯೋನ್ಯತೆ

ಹೆಚ್ಚಿನವರು ಲೈಂಗಿಕತೆಗೆ ಪರ್ಯಾಯವಾಗಿ ಅನ್ಯೋನ್ಯತೆ ಎಂಬ ಪದವನ್ನು ಬಳಸಬಹುದು. ಆದರೆ ಲೈಂಗಿಕತೆಗಿಂತ ಹೆಚ್ಚಿನ ಅರ್ಥ ಇದಕ್ಕಿದೆ. ಭಾವನಾತ್ಮಕ ಅನ್ಯೋನ್ಯತೆಯು ದಂಪತಿಯ ಮಧ್ಯೆ ಬಾಂಧವ್ಯವನ್ನು ವೃದ್ಧಿಸುತ್ತದೆ.

- ಅನ್ಯೋನ್ಯತೆ ಎನ್ನುವುದು ಆತ್ಮೀಯತೆಯನ್ನು ಹೆಚ್ಚಿಸುವಂತಿರಬೇಕು. ನಿತ್ಯದ ಕೆಲಸ ಹಂಚಿಕೊಂಡು ಇದನ್ನು ಸಾಧಿಸಬಹುದು. ಸಂಗಾತಿಯ ಆತಂಕ ಕಡಿಮೆ ಮಾಡುವ ಮೂಲಕ ಅನ್ಯೋನ್ಯತೆ ಹೆಚ್ಚಿಸಬಹುದು.
- ಇದು ಇಬ್ಬರ ನಡುವಿನ ಬಾಂಧವ್ಯದಲ್ಲಿ ಸಹಜವಾಗಿರಬೇಕು. ಎಲ್ಲದರ ಬಗ್ಗೆ ಮುಕ್ತವಾಗಿ ಮಾತನಾಡಿ, ಇದನ್ನು ಹೆಚ್ಚಿಸಿಕೊಳ್ಳಬೇಕು.
- ಅನ್ಯೋನ್ಯತೆ ಬೆಳೆಸಿಕೊಳ್ಳಲು ಕೊಂಚ ಸಮಯ ಬೇಕು. ಪ್ರತಿ ವಾರವೂ ನಿಗದಿತ ದಿನ, ನಿಗದಿತ ಸಂಜೆ ಸಂಗಾತಿಯೊಂದಿಗೆ ಇದಕ್ಕೆಂದೇ ಮೀಸಲಿಡಬಹುದು. ಮಕ್ಕಳು, ಸ್ನೇಹಿತರು, ಕೆಲಸ ಎಲ್ಲದಕ್ಕೂ ವಿರಾಮ ಕೊಟ್ಟು ಸಂಗಾತಿಯ ಜೊತೆ ಕಾಲ ಕಳೆದು, ಪರಸ್ಪರ ಮಾತನಾಡುತ್ತ ಸಾಂಗತ್ಯವನ್ನು ಹಂಚಿಕೊಳ್ಳಬಹುದು. ಒಟ್ಟಿಗೆ ನಡಿಗೆ, ಪಾರ್ಕ್‌ನಲ್ಲಿ ಬೆಂಚ್ ಮೇಲೆ ಕುಳಿತುಕೊಂಡು ಸಂಜೆಯ ಆಹ್ಲಾದಕತೆಯಲ್ಲಿ ಈ ಅನ್ಯೋನ್ಯತೆ ಸವಿಯಬಹುದು.

❖

> ನಿಮ್ಮ ಮಲಗುವ ಕೋಣೆಯಲ್ಲೇನು ನಡೆಯುತ್ತದೆ ಎಂಬುದು ನಿಮಗೆ ಬಿಟ್ಟದ್ದು, ನಿಜ. ಆದರೆ ಲೈಂಗಿಕ ಸುಖವನ್ನು ಆಸ್ವಾದಿಸಬೇಕಾದರೆ ಇಬ್ಬರೂ ಅನ್ಯೋನ್ಯತೆ ಬೆಳೆಸಿಕೊಳ್ಳಬೇಕು. ಇದು ಸಂತಸದ ಬದುಕಿಗೆ ಅವಶ್ಯಕ ಕೂಡ.

ಬಾಲ್ಯದಲ್ಲಿ ಲೈಂಗಿಕ ದೌರ್ಜನ್ಯ

ಭಾರತದಲ್ಲಿ ಮಕ್ಕಳ ಮೇಲೆ ಅದರಲ್ಲೂ ಪುಟ್ಟ ಹೆಣ್ಣುಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಜಾಸ್ತಿ. ಬಾಲಕಿಯರು ಭಯ ಪಟ್ಟು ಇದನ್ನು ಹೇಳಿಕೊಳ್ಳದೇ ಮಾನಸಿಕ ವೇದನೆ ಅನುಭವಿಸುತ್ತಿರುತ್ತಾರೆ. ತಮ್ಮ ಸುತ್ತು ಒಂದು ರೀತಿಯ ಗೋಡೆ ನಿರ್ಮಿಸಿಕೊಂಡಿರುತ್ತಾರೆ. ಯೌವನಕ್ಕೆ ಬಂದ ಮೇಲೆ ಲೈಂಗಿಕ ಕ್ರಿಯೆ ಎಂದರೆ ಇಂಥವರು ಹಿಂಜರಿಯಬಹುದು. ಆಗ ಸಂಗಾತಿಯು ಭಯ ಹೋಗಲಾಡಿಸುವ ಕೆಲಸ ಮಾಡಬೇಕಾಗುತ್ತದೆ.

- ಸಂಗಾತಿಯ ಜೊತೆ ಪ್ರೀತಿ- ಪ್ರೇಮ, ಭಾವನಾತ್ಮಕ ಅನ್ಯೋನ್ಯತೆ ಸಾಧಿಸಿದರೆ ಲೈಂಗಿಕ ಬದುಕೂ ಕೂಡ ಸಂತಸವಾಗಿರುತ್ತದೆ.
- ಮದುವೆಗಿಂತ ಮುನ್ನ ನೈತಿಕವಾದ ಲೈಂಗಿಕ ಶಿಕ್ಷಣ ಪಡೆಯಬೇಕಾಗುತ್ತದೆ. ಇದಕ್ಕೆ ಪೋಷಕರು ಸರಿಯಾದ ತಿಳಿವಳಿಕೆ ನೀಡಬೇಕು.
- ನಿಮಗೇನು ಬೇಕು ಎಂಬುದರ ಬಗ್ಗೆ ಸಂಗಾತಿಯ ಜೊತೆ ಮುಕ್ತವಾಗಿ ಚರ್ಚಿಸಿ.

ಜೀನ್ಸ್ ಮೇಲೆ ಕುರ್ತಾ

ಹಳೆಯ ಫ್ಯಾಷನ್‌ಗೆ ಹೊಸ ಸ್ಪರ್ಶ

ರೇಷ್ಮಾ

ಕೊರೊನಾ ಒಂದನೇ ಅಲೆ, ಎರಡನೇ ಅಲೆ, ಸತತ ಲಾಕ್‌ಡೌನ್, ನಿರಂತರವಾದ ವರ್ಕ್ ಫ್ರಂ ಹೋಮ್ ನಡುವೆ ಜನರು ಫ್ಯಾಷನ್ ಮೇಲೆ ಒಲವು ತೋರುವುದು ಕಡಿಮೆ ಮಾಡಿದ್ದಾರೆ. ಹೊಸ ಫ್ಯಾಷನ್ ಬಂದ ಕೂಡಲೇ ಧರಿಸಿ ಖುಷಿಪಡುತ್ತಿದ್ದ ಹುಡುಗಿಯರೂ ಕೂಡ ಈಗ ವಿವಿಧ ವಿನ್ಯಾಸದ ಉಡುಪುಗಳನ್ನು ಧರಿಸಲು ಮನಸ್ಸು ಮಾಡುತ್ತಿಲ್ಲ. ಹಾಗಂತ ಫ್ಯಾಷನ್ ಲೋಕದ ರಂಗು ಮಾಸಿಲ್ಲ. ಮರುಬಳಕೆ ಹಾಗೂ ಇರುವುದರಲ್ಲೇ ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳುವ ಟ್ರೆಂಡ್ ಅನ್ನು ಪರಿಚಯಿಸುತ್ತಿದ್ದಾರೆ ಫ್ಯಾಷನ್ ತಜ್ಞರು. ಈ ಮೂಲಕ ಫ್ಯಾಷನ್ ಲೋಕದಲ್ಲಿ ಹೊಸ ಭಾಷ್ಯ ಬರೆದಿದ್ದಾರೆ.



ಶಿಲ್ಪಿ ಚೌಧರಿ

‘ಈಗ ಬಹಳಷ್ಟು ಮಂದಿ ಮನೆಯಿಂದಲೇ ಕಚೇರಿ ಕೆಲಸ ಮಾಡುತ್ತಿದ್ದಾರೆ, ಇನ್ನೂ ಕೆಲವರು ಕಚೇರಿಗೆ ತೆರಳಲು ಆರಂಭಿಸಿದ್ದಾರೆ. ಇತ್ತೀಚೆಗೆ ಮಹಿಳೆಯರು ಸ್ಟೈಲಿಷ್ ಎನ್ನುವುದಕ್ಕಿಂತ ಆರಾಮದಾಯಕ ಎನ್ನಿಸುವ ಉಡುಪುಗಳ ಮೇಲೆ ಹೆಚ್ಚು ಒಲವು ತೋರುತ್ತಿದ್ದಾರೆ. ಈಗಿನ ಟ್ರೆಂಡ್ ಎಂದರೆ ಜೀನ್ಸ್ ಮೇಲೆ ಲಾಂಗ್ ಅಥವಾ ಶಾರ್ಟ್ ಕುರ್ತಾ, ಚೂಡಿದಾರ್ ಟಾಪ್ ಧರಿಸುವುದು. ಇದು ಇಂದಿನ ಟ್ರೆಂಡ್. ಜೊತೆಗೆ ಧರಿಸಿದರೆ ಸ್ಟೈಲಿಶ್ ಆಗಿ ಕಾಣಿಸಬಹುದು. ಜೀನ್ಸ್‌ನೊಂದಿಗೆ ನಿಮ್ಮ ಬಳಿ ಇರುವ ಹಳೆಯ ಚೂಡಿದಾರ್ ಟಾಪ್ ಅನ್ನೇ ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳಬಹುದು. ಇದರಿಂದ ಟ್ರೆಂಡ್‌ಗೆ ತೆರೆದುಕೊಂಡಂತಾಗುವುದಲ್ಲದೇ ಮರುಬಳಕೆಗೂ ಒತ್ತು ನೀಡಿದಂತಾಗುತ್ತದೆ. ಚೂಡಿದಾರ್ ಟಾಪ್‌ನಂತೆ ಇನ್ನೂ ಕೆಲವು ಸರಳ ವಿನ್ಯಾಸದ ಟಾಪ್‌ಗಳನ್ನು ಜೀನ್ಸ್ ಜೊತೆ ತೊಡುವುದರಿಂದ ಸುಂದರವಾಗಿ ಕಾಣಬಹುದು’ ಎನ್ನುತ್ತಾರೆ ವಸ್ತ್ರ ವಿನ್ಯಾಸಕಿ ಶಿಲ್ಪಿ ಚೌಧರಿ.

ಜೀನ್ಸ್ ಜೊತೆ ಬಟನ್ ಡೌನ್ ಶರ್ಟ್



ಜೀನ್ಸ್ ಮೇಲೆ ಉದ್ದನೆಯ ಶರ್ಟ್ ರೂಪದ ಟಾಪ್ ಧರಿಸಬಹುದು. ಸಾಮಾನ್ಯವಾಗಿ ಗಂಡಸರ ಶರ್ಟ್‌ನಂತೆ ಹೋಲುವ ಈ ಟಾಪ್ ದೊಡ್ಡ ದೊಡ್ಡ ಬಟನ್‌ಗಳನ್ನು ಹೊಂದಿರುತ್ತದೆ. ಮುಂದೆ ಗಿಡ್ಡವಾಗಿದ್ದು, ಹಿಂದೆ ಉದ್ದವಾಗಿರುವ ಈ ಟಾಪ್ ಜೀನ್ಸ್ ಮೇಲೆ ಹೆಚ್ಚು ಹೊಂದುತ್ತದೆ. ಕಡುನೀಲಿ ಬಣ್ಣದ ಜೀನ್ಸ್ ಜೊತೆಗೆ ತಿಳಿ ಆಕಾಶನೀಲಿ, ತಿಳಿ ಗುಲಾಬಿಯಂತಹ ಶರ್ಟ್‌ಗಳು ಹೆಚ್ಚು ಹೊಂದುತ್ತವೆ. ಶರ್ಟ್ ರೀತಿಯ ಈ ಡ್ರೆಸ್‌ಗಳು ಕೊಂಚ ಸಡಿಲವಾಗಿದ್ದು ದಪ್ಪ ಇರುವವರಿಗೆ ಹೆಚ್ಚು ಹೊಂದಿಕೆಯಾಗುತ್ತದೆ. ಇದು ಎಲ್ಲಾ ಕಾಲದಲ್ಲೂ ಸಲ್ಲುವಂತಿದ್ದು ಟ್ರೆಂಡಿ ಆಗಿಯೂ ಕಾಣಿಸುತ್ತದೆ.

ಟ್ಯೂನಿಕ್ ಟಾಪ್

ಸಾದಾ ಟ್ಯೂನಿಕ್ ಟಾಪ್ ಅನ್ನು ಕೂಡ ಜೀನ್ಸ್ ಜೊತೆ ಮ್ಯಾಚಿಂಗ್ ಮಾಡಿಕೊಳ್ಳಬಹುದು. ಮೊಣಕಾಲಿಗಿಂತ ಉದ್ದ ಅಥವಾ ಗಿಡ್ಡವಿರುವ ಯಾವುದೇ ಟ್ಯೂನಿಕ್ ಟಾಪ್ ಅನ್ನು ಕೂಡ ಜೀನ್ಸ್ ಜೊತೆ ಧರಿಸಬಹುದು. ಸಾಮಾನ್ಯವಾಗಿ ಪ್ರಿಂಟ್ ಇಲ್ಲದ ವಿವಿಧ ಬಣ್ಣದ ಟ್ಯೂನಿಕ್ ಟಾಪ್‌ಗಳು ಜೀನ್ಸ್‌ಗೆ ಹೆಚ್ಚು ಹೊಂದುತ್ತವೆ. ಇದರೊಂದಿಗೆ ಹೂವಿನ ಚಿತ್ತಾರದ, ಟೈ ಅಂಡ್ ಡೈ ಚಿತ್ತಾರದ ಉದ್ದನೆಯ ಟಾಪ್ ಕೂಡ ಜೀನ್ಸ್ ಜೊತೆ ಧರಿಸಲು ಆರಾಮದಾಯಕ ಎನ್ನಿಸುತ್ತದೆ. ಗಿಡ್ಡನೆಯ ಟ್ಯೂನಿಕ್ ಟಾಪ್ ಮೇಲೆ ಬೆಂಗಾಲಿ ಶೈಲಿಯ ‘ಕಾಂತ ಕಸೂತಿ’ ಇರುವ ಟಾಪ್ ಸುಂದರವಾಗಿ ಕಾಣುತ್ತದೆ. ಇದನ್ನು ಶಾಪಿಂಗ್, ಸಣ್ಣಪುಟ್ಟ ಪಾರ್ಟಿ, ಕಾರ್ಯಕ್ರಮಗಳಿಗೂ ಧರಿಸಬಹುದು. ಜೀನ್ಸ್ ಜೊತೆ ಇದನ್ನು ಧರಿಸಿದಾಗ ಶೂ, ಚಪ್ಪಲಿ ಯಾವುದನ್ನು ಬೇಕಾದರೂ ಧರಿಸಬಹುದು.



ಬಯಾಸ್ ಕಟ್ ಟಾಪ್

ಎರಡೂ ಬದಿಯಲ್ಲಿ ಗಿಡ್ಡವಾಗಿ ಮುಂಭಾಗ ಹಾಗೂ ಹಿಂಭಾಗದಲ್ಲಿ ಉದ್ದಕ್ಕೆ ಇಳಿಬಿಟ್ಟುಕೊಂಡಿರುವ ಡ್ರೆಸ್‌ಗೆ ಬಯಾಸ್ ಕಟ್ ಟಾಪ್ ಎನ್ನುತ್ತಾರೆ. ಸಾಮಾನ್ಯವಾಗಿ ಲೆಗ್ಗಿಂಗ್ಸ್ ಅಥವಾ ಜೀನ್ಸ್ ಜೊತೆ ಹೆಚ್ಚು ಹೊಂದುತ್ತದೆ. ಜೀನ್ಸ್ ಜೊತೆ ಹೊಂದಿಕೊಳ್ಳುವ ಈ ಹೊಸ ಟ್ರೆಂಡ್‌ನ ಟಾಪ್ ಎರಡೂ ಕಡೆ ಪೊಕೆಟ್ ಹೊಂದಿರುತ್ತದೆ. ಪೂರ್ವ ಏಷ್ಯಾ ಭಾಗದಲ್ಲಿ ಈ ಡ್ರೆಸ್‌ನ ಬಳಕೆ ಹೆಚ್ಚಿದೆ. ಸ್ಟೈಲಿಶ್ ನೋಟ ಇಷ್ಟಪಡುವ ಹೆಣ್ಣುಮಕ್ಕಳು ಈ ಡ್ರೆಸ್ ಅನ್ನು ಧರಿಸುವುದರಿಂದ ಇನ್ನಷ್ಟು ಸ್ಟೈಲಿಶ್ ಆಗಿ ಕಾಣಬಹುದು.

ಚಿತ್ರ: ಪ್ರಶಾಂತ್ ಎಚ್. ಜಿ.

ಪ್ರಜಾವಾಣಿ ನೋಡಿಯೊ

ರಿಬ್ಬನ್ ಪಕೋಡ ದಾಲ್ ವಡಾ

ರಶ್ಮಿ ಭಟ್

ನಳಪಾಕ



ಅನ್ನದ ಪಕೋಡ

ಬೇಕಾಗುವ ಸಾಮಗ್ರಿಗಳು: ಅನ್ನ – 3 ಕಪ್, ಕಡಲೆಹಿಟ್ಟು – 4 ಚಮಚ, ಈರುಳ್ಳಿ – 2 (ಸಣ್ಣಗೆ ಹೆಚ್ಚಿದ್ದು), ಹಸಿಮೆಣಸು – 1 (ಸಣ್ಣಗೆ ಹೆಚ್ಚಿದ್ದು), ಕೊತ್ತಂಬರಿ ಸೊಪ್ಪು, ಚಾಟ್ ಮಸಾಲ – ಒಂದೂವರೆ ಚಮಚ, ಉಪ್ಪು – ರುಚಿಗೆ ತಕ್ಕಷ್ಟು, ಶುಂಠಿ – 1 ಇಂಚು

ತಯಾರಿಸುವ ವಿಧಾನ: ಪಾತ್ರೆಯೊಂದಕ್ಕೆ ಬೇಯಿಸಿದ ಅನ್ನ, ಹೆಚ್ಚಿದ ಈರುಳ್ಳಿ, ಕೊತ್ತಂಬರಿ ಸೊಪ್ಪು, ಹಸಿಮೆಣಸು, ಜಜ್ಜಿದ ಶುಂಠಿ, ಚಾಟ್ ಮಸಾಲ, ಉಪ್ಪು ಹಾಗೂ ಕಡಲೆಹಿಟ್ಟು ಹಾಕಿ. ಅಗತ್ಯವಿರುವಷ್ಟು ನೀರು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ, ಪಕೋಡ ಹದಕ್ಕೆ ಕಲೆಸಿಕೊಳ್ಳಿ. ಕಾಯಿಸಿದ ಎಣ್ಣೆಗೆ ಹಿಟ್ಟನ್ನು ಉಂಡೆ ಮಾಡಿ ಒಂದೊಂದಾಗಿ ಬಿಡಿ. ಅದನ್ನು ಎರಡೂ ಕಡೆ ಚೆನ್ನಾಗಿ ಕರಿಯಿರಿ. ಅದನ್ನು ಪಡ್ಡು ಪಾತ್ರೆಯಲ್ಲಿ ಪಡ್ಡುವಿನಂತೆ ಕೂಡ ತಯಾರಿಸಬಹುದು. ಮಳೆಗಾಲದಲ್ಲಿ ಸಂಜೆ ಹೊತ್ತಿಗೆ ತಿನ್ನಲು ಇದು ಚೆನ್ನಾಗಿರುತ್ತದೆ.

ದಾಲ್ ವಡಾ



ಬೇಕಾಗುವ ಸಾಮಗ್ರಿಗಳು: ಕಡಲೆಬೇಳೆ – 1 ಕಪ್, ಉದ್ದಿನಬೇಳೆ – 1ಕಪ್, ತೊಗರಿಬೇಳೆ – 1 ಕಪ್, ಹಸಿಮೆಣಸು – 2, ಕೊತ್ತಂಬರಿ ಸೊಪ್ಪು – 3 ಚಮಚ (ಸಣ್ಣಗೆ ಹೆಚ್ಚಿದ್ದು), ಕರಿಬೇವು – 2 ಚಮಚ (ಸಣ್ಣಗೆ ಹೆಚ್ಚಿದ್ದು), ಶುಂಠಿ – 1 ಇಂಚು, ತೆಂಗಿನತುರಿ – 1 ಕಪ್, ಉಪ್ಪು – ರುಚಿಗೆ

ತಯಾರಿಸುವ ವಿಧಾನ: ಕಡಲೆಬೇಳೆ, ಉದ್ದಿನಬೇಳೆ ಹಾಗೂ ತೊಗರಿಬೇಳೆಯನ್ನು ಚೆನ್ನಾಗಿ ತೊಳೆದು 4 ಗಂಟೆಗಳ ಕಾಲ ನೆನೆಸಿಡಿ. ನಂತರ ಚೆನ್ನಾಗಿ ನೀರನ್ನು ಬಸಿದು ನೀರು ಸೇರಿಸಿಕೊಳ್ಳದೇ ಸ್ವಲ್ಪ ತರಿತರಿಯಾಗಿ ರುಬ್ಬಿಕೊಳ್ಳಿ. ರುಬ್ಬಿಕೊಂಡ ಮಿಶ್ರಣವನ್ನು ಪಾತ್ರೆಯೊಂದಕ್ಕೆ ಹಾಕಿ ಅದಕ್ಕೆ ತೆಂಗಿನತುರಿ, ಹೆಚ್ಚಿದ ಕೊತ್ತಂಬರಿ ಸೊಪ್ಪು, ಹಸಿಮೆಣಸು, ಶುಂಠಿ, ಕರಿಬೇವು ಹಾಗೂ ಉಪ್ಪು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಅದಕ್ಕೆ ಮತ್ತೆ ಒಂದು ಕಪ್ ತೆಂಗಿನತುರಿ ಸೇರಿಸಿ ಮಿಶ್ರಣ ಮಾಡಿ. ಎಣ್ಣೆ ಕಾದ ನಂತರ ಹಿಟ್ಟನ್ನು ವಡಾ ಆಕಾರಕ್ಕೆ ತಟ್ಟಿ ಎಣ್ಣೆಯಲ್ಲಿ ಕರಿಯಿರಿ. ಈಗ ನಿಮ್ಮ ಮುಂದೆ ರುಚಿಯಾದ ದಾಲ್ ವಡಾ ಅಥವಾ ಚಟ್ಟಂಬಡೆ ತಿನ್ನಲು ಸಿದ್ಧ.

ರಿಬ್ಬನ್ ಪಕೋಡ



ಬೇಕಾಗುವ ಸಾಮಗ್ರಿಗಳು: ಅಕ್ಕಿಹಿಟ್ಟು – 2 ಕಪ್, ಕಡಲೆಹಿಟ್ಟು – 1 ಕಪ್, ಖಾರದಪುಡಿ – 1 ಚಮಚ, ಅಜ್ವಾನ – ಅರ್ಧ ಚಮಚ, ಜೀರಿಗೆ – ಅರ್ಧ ಚಮಚ, ಎಳ್ಳು – ಅರ್ಧ ಚಮಚ, ಉಪ್ಪು – ರುಚಿಗೆ, ಇಂಗು – ಸ್ವಲ್ಪ (ನೀರಿನಲ್ಲಿ ಕರಗಿಸಿದ್ದು), ಬಿಸಿ ಎಣ್ಣೆ – 2 ಚಮಚ, ನೀರು – ಅಗತ್ಯ ಇರುವಷ್ಟು, ಉಪ್ಪು – ರುಚಿಗೆ

ತಯಾರಿಸುವ ವಿಧಾನ: ಒಂದು ಬೌಲ್‌ಗೆ ಅಕ್ಕಿಹಿಟ್ಟು ಹಾಗೂ ಕಡಲೆಹಿಟ್ಟು ಹಾಕಿ. ಅದಕ್ಕೆ ಖಾರದಪುಡಿ, ಅಜ್ವಾನಾ, ಜೀರಿಗೆ, ಎಳ್ಳು, ಉಪ್ಪು, ಇಂಗಿನ ನೀರು, ಕಾಯಿಸಿದ ಎಣ್ಣೆ ಹಾಕಿ ಚಮಚದಲ್ಲಿ ಎಲ್ಲವನ್ನೂ ಚೆನ್ನಾಗಿ ಮಿಶ್ರಣ ಮಾಡಿ. ಆ ಮಿಶ್ರಣಕ್ಕೆ ಸ್ವಲ್ಪ, ಸ್ವಲ್ಪ ನೀರು ಸೇರಿಸಿ ಗಟ್ಟಿಯಾಗಿ ಹಿಟ್ಟಿನ ಹದಕ್ಕೆ ಕಲೆಸಿಕೊಳ್ಳಿ. ಆ ಹಿಟ್ಟನ್ನು ಅಚ್ಚಿನ ಪಾತ್ರೆಗೆ ಹಾಕಿ ಕಾದ ಎಣ್ಣೆಗೆ ಬಿಡಿ. ಅದನ್ನು ಎಣ್ಣೆಯಲ್ಲಿ ಚೆನ್ನಾಗಿ ಕರಿಯಿರಿ.

(ಲೇಖಕಿ: ರಶ್ಮೀಸ್ ಗೋರ್ಮೆ ಯೂಟ್ಯೂಬ್ ಚಾನೆಲ್ ನಿರ್ವಾಹಕಿ)

ಪ್ರಜಾವಾಣಿ ನೋಡಿಯೊ
ರೆಸಿಪಿ ವಿಡಿಯೊಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ದಾಂಪತ್ಯದಲ್ಲಿ ಕಡಿಮೆಯಾದ ಆಸಕ್ತಿಗೆ ಪರಿಹಾರವೇನು?

ಏನಾದ್ರೂ ಕೇಳ್ಬೋದು



ನಡಹಳ್ಳಿ ವಸಂತ್

- **ಪುರುಷ. ವಿವಾಹವಾಗಿ 5 ವರ್ಷವಾಗಿದೆ. ಇಬ್ಬರು ಮಕ್ಕಳಿದ್ದಾರೆ. ಲೈಂಗಿಕ ಜೀವನ ಚೆನ್ನಾಗಿದೆ. ಕಳೆದ 6 ತಿಂಗಳಿನಿಂದ ಕಾಮಾಸಕ್ತಿ ಕಡಿಮೆಯಾಗಿದೆ. ಏಕೆಂದು ಗೊತ್ತಾಗುತ್ತಿಲ್ಲ. ಪರಿಹಾರವೇನು?**

ಹೆಸರು, ಊರು ತಿಳಿಸಿಲ್ಲ.

ನಿಮ್ಮ ಪತ್ರವನ್ನು ನೋಡಿದರೆ ಕಾಮಾಸಕ್ತಿ ನಿಮ್ಮ (ಪುರುಷರ) ಜನ್ಮಸಿದ್ಧ ಹಕ್ಕು ಎಂದು ತಿಳಿದುಕೊಂಡಿರುವಂತಿದೆ. ಮಧ್ಯವಯಸ್ಸಿನ ಕಡೆ ಸರಿದಂತೆ ಹಾರ್ಮೋನ್‌ಗಳ ಪ್ರಭಾವ ಕಡಿಮೆಯಾಗುವುದಲ್ಲದೆ ಇಬ್ಬರಿಗೂ ಕೌಟುಂಬಿಕ ಜವಾಬ್ದಾರಿಗಳು ಹೆಚ್ಚುವುದರಿಂದ ಕಾಮದ ಒತ್ತಡ ಕಡಿಮೆಯಾಗುತ್ತದೆ. ಆದರೆ ಆಸಕ್ತಿ ಕಡಿಮೆಯಾಗುವುದಿಲ್ಲ. ಪತಿ-ಪತ್ನಿ ಮುಕ್ತವಾಗಿ ಮಾತನಾಡಿ ಇಬ್ಬರಿಗೂ ಇಷ್ಟವಾಗುವಂತೆ ಕಾಮಸುಖವನ್ನು ಹಂಚಿಕೊಳ್ಳುವ ದಾರಿಯನ್ನು ಕಂಡುಕೊಳ್ಳಬೇಕು. ಅಂದರೆ ನಿಮ್ಮ ಆಸಕ್ತಿ, ಅಗತ್ಯಗಳಷ್ಟೇ ಪತ್ನಿಯ ಆಸಕ್ತಿ, ಅಗತ್ಯಗಳ ಕಡೆ ಕೂಡ ನೀವು ಗಮನಹರಿಸಬೇಕಾಗುತ್ತದೆ. ಇಬ್ಬರಿಗೂ ಕಾಮ ಆಕರ್ಷಕ ಎನ್ನಿಸಿದಾಗ ಆಸಕ್ತಿ ಕುಂದುವುದು ಹೇಗೆ ಸಾಧ್ಯ?

- **25ರ ಯುವಕ. ರೈತಾಪಿ ಕುಟುಂಬದಿಂದ ಬಂದಿದ್ದೇನೆ. ಯಾವ ದುರಭ್ಯಾಸವೂ ಇಲ್ಲ. ಏನಾದರೂ ಸಾಧಿಸಬೇಕೆಂದು ಕೆಎಎಸ್ ಪರೀಕ್ಷೆಗೆ ಓದುತ್ತಿದ್ದೇನೆ. ಸ್ಪಷ್ಟ ಗುರಿಯೊಂದಿಗೆ ಪ್ರಯತ್ನಿಸುತ್ತಿದ್ದರೂ ಆಗಾಗ ಕಾಮದ ಒತ್ತಡ ಹೆಚ್ಚಾಗಿ ಯಾರ ಜೊತೆಗಾದರೂ ಸೇರಬೇಕು ಎನ್ನಿಸುತ್ತದೆ. ನನ್ನ ಗುರಿಯನ್ನು ನೆನಪಿಸಿಕೊಂಡು ಹಿಡಿತಕ್ಕೆ ತರಲು ಪ್ರಯತ್ನಿಸುತ್ತೇನೆ. ಇನ್ನು ಮೂರು- ನಾಲ್ಕು ವರ್ಷ ಕಾಮಭಾವನೆ ಬರದಂತೆ ತಡೆಯುವುದು ಹೇಗೆ?**

ಹೆಸರು, ಊರು ಇಲ್ಲ.

ಹಸಿವು, ನಿದ್ದೆ, ನೀರಡಿಕೆಗಳು ಓದಿಗೆ ತೊಂದರೆ ಮಾಡುತ್ತಿದೆಯೇ? ಆದರೆ ಕಾಮದ ಬಯಕೆಯೊಂದೇ ಏಕಾಗ್ರತೆಗೆ ಹೇಗೆ ತೊಂದರೆ ಮಾಡುತ್ತಿದೆ ಗೊತ್ತೇ? ಮದುವೆಯಾಗುವವರೆಗೆ ಕಾಮದ ಆಕರ್ಷಣೆ ಕೆಟ್ಟದು, ಅದನ್ನು ಹಿಡಿತದಲ್ಲಿಡಬೇಕು ಎಂದು ಸಾಂಸ್ಕೃತಿಕವಾಗಿ ಬಂದಿರುವ ನಂಬಿಕೆ ನಿಮ್ಮ ಮನಸ್ಸಿನಾಳದಲ್ಲಿ ಬೇರುಬಿಟ್ಟಿದೆ. ಕಾಮ ತುಂಟ ಮಗುವಿನಂತೆ. ಹಿಡಿತದಲ್ಲಿಡಲು ಪ್ರಯತ್ನಿಸಿದಷ್ಟು ತುಂಟತನವನ್ನು ಹೆಚ್ಚಿಸುತ್ತದೆ! ಆಕರ್ಷಣೆ ಪ್ರಕೃತಿ ಸಹಜವಾದದ್ದು. ಅದನ್ನು ಸಾಮಾಜಿವಾಗಿ ಒಪ್ಪಿತವಾಗುವ ಮಿತಿಗಳಲ್ಲಿ ತೃಪ್ತಿಪಡಿಸಿಕೊಳ್ಳುವ ಪ್ರಜ್ಞೆಯನ್ನೂ ಪ್ರಕೃತಿ ನಮಗೆ ನೀಡಿದೆ. ಮನಸ್ಸಿನಲ್ಲಿ ಮೂಡುವ ಆಕರ್ಷಣೆಯನ್ನು ತಿರಸ್ಕರಿಸದೆ ಸಹಜವೆಂದು ಒಪ್ಪಿಕೊಂಡು ಆನಂದಿಸಿ.

- **29ರ ಪುರುಷ. ಪತ್ನಿಗೆ 20 ವರ್ಷ. ಕಳೆದ ಹತ್ತು ವರ್ಷಗಳಿಂದ ಹಸ್ತಮೈಥುನ ಮಾಡಿಕೊಳ್ಳುತ್ತಿದ್ದೆ. ಮದುವೆಯಾಗಿ 4 ತಿಂಗಳಾಗಿದ್ದು ನನಗೆ ಮಕ್ಕಳಾಗಲು ವೀರ್ಯಾಣುಗಳ ಸಮಸ್ಯೆ ಇರಬಹುದೇ ಎನ್ನುವ ಕೀಳರಿಮೆ ಕಾಡುತ್ತಿದೆ. ಪರಿಹಾರವೇನು?**

ಹಸ್ತಮೈಥುನ ಮಾಡದೆ ಶೇಖರಿಸಿಟ್ಟ ವೀರ್ಯಾಣುಗಳು ಯಾವಾಗಲೂ ಜೀವಂತವಾಗಿರುತ್ತವೆ ಎನ್ನುವುದು ತಪ್ಪು ಕಲ್ಪನೆ. ದೇಹದ ಎಲ್ಲಾ ಜೀವಕೋಶಗಳಂತೆ ವೀರ್ಯಾಣುಗಳು ಕೂಡ ನಿರ್ದಿಷ್ಟ ಅವಧಿಯ ನಂತರ ನಾಶವಾಗಿ ಹೊಸದು ಉತ್ಪತ್ತಿಯಾಗುತ್ತಲೇ ಇರುತ್ತದೆ. ಹಸ್ತಮೈಥುನಕ್ಕೂ ಮಕ್ಕಳಾಗುವುದಕ್ಕೂ ಸಂಬಂಧವಿಲ್ಲ. ಮದುವೆಯಾಗಿ ನಾಲ್ಕು ತಿಂಗಳಾಗಿದ್ದು 20 ವರ್ಷದ ಚಿಕ್ಕವಯಸ್ಸಿನ ಪತ್ನಿ ಇರುವಾಗ ಈಗಲೇ ಮಕ್ಕಳನ್ನು ಹೊಂದುವ ಒತ್ತಡವೇಕೆ? ಸದ್ಯಕ್ಕೆ ಕಾಮಪ್ರೇಮಗಳನ್ನು ಹಂಚಿಕೊಳ್ಳುತ್ತಾ ಇಬ್ಬರ ನಡುವಿನ ಆತ್ಮೀಯತೆಯನ್ನು ಹೆಚ್ಚು ಮಾಡಿಕೊಳ್ಳುವುದು ಹೇಗೆಂದು ಮಾತನಾಡಿಕೊಳ್ಳಿ. ಇಬ್ಬರ ದೇಹ, ಮನಸ್ಸು ಮಕ್ಕಳ ಬೆಳವಣಿಗೆಗೆ ಬೆಂಬಲ ನೀಡಲು ಸಿದ್ಧವಾದ ಮೇಲೆ ಅಗತ್ಯವಿದ್ದರೆ ವೈದ್ಯರನ್ನು ಸಂಪರ್ಕಿಸಬಹುದಲ್ಲವೇ?

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ.

bhoomika@prajavani.co.in

ವರ್ಷಗಟ್ಟಲೇ ಕಾದು ದಂಡ ವಿಧಿಸುವ ಪೊಲೀಸರು ● ದಂಡ ಸಂಗ್ರಹಕ್ಕೆ ಕಾಲಮಿತಿ ನಿಗದಿಪಡಿಸಲು ಜನರ ಒತ್ತಾಯ

ಪೊಲೀಸರ ಅನುಕೂಲಕ್ಕೆ ದಂಡಾಸ್ತ್ರ

● ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ದಂಡ ಸಂಗ್ರಹ ಪ್ರಕ್ರಿಯೆಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬದಲಾಯಿಸಿಕೊಂಡಿರುವ ಪೊಲೀಸರು, ಕಾನೂನು ಮೀರಿ ತಮ್ಮಿಷ್ಟದಂತೆ ವರ್ತಿಸಿ ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾಗುತ್ತಿದ್ದಾರೆ. ವರ್ಷಗಟ್ಟಲೇ ಕಾದು ಜನರಿಂದ ದಂಡ ಸಂಗ್ರಹಿಸುತ್ತಿರುವುದಕ್ಕೆ ಸಾರ್ವಜನಿಕರು ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ.

ನಿಯಮ ಉಲ್ಲಂಘನೆ ಪತ್ತೆಗೆ ಆಧುನಿಕ ತಂತ್ರಜ್ಞಾನಗಳನ್ನು ಬಳಸುತ್ತಿರುವ ಪೊಲೀಸರು, ದಂಡ ಸಂಗ್ರಹ ಕೆಲಸಕ್ಕೆ ಮಾತ್ರ ಚುರುಕು ಮುಟ್ಟಿಸಿಲ್ಲ. ಯಾವುದೋ ವರ್ಷದಲ್ಲಾದ ನಿಯಮ ಉಲ್ಲಂಘನೆ ದಂಡವನ್ನು ಮತ್ತ್ಯಾವುದೋ ವರ್ಷದಲ್ಲಿ ಸಂಗ್ರಹಿಸುತ್ತಿರುವ ಪೊಲೀಸರು, ದಂಡ ಸಂಗ್ರಹದಲ್ಲೂ ಕಾಲಮಿತಿ ಪಾಲಿಸುತ್ತಿಲ್ಲ.

ಸಿಬ್ಬಂದಿ ಕೊರತೆ ಹಾಗೂ ಸೌಕರ್ಯಗಳ ಅಲಭ್ಯತೆ ನೆಪ ಹೇಳುವ ಪೊಲೀಸರು, ತಮ್ಮ ಕೆಲಸದ ವೈಫಲ್ಯಗಳನ್ನು ಮುಚ್ಚಿಟ್ಟುಕೊಳ್ಳಲು ಜನರ ಮೇಲೆ ದಂಡಾಸ್ತ್ರ ಪ್ರಯೋಗಿಸುತ್ತಿದ್ದಾರೆ. ಮೊದಲ ಬಾರಿ ಸಂಚಾರ ನಿಯಮ ಉಲ್ಲಂಘಿಸುವ ವ್ಯಕ್ತಿಯನ್ನು ಪತ್ತೆ ಮಾಡಿ ದಂಡ ಸಂಗ್ರಹಿಸುವ ಕೆಲಸಕ್ಕೆ ಒತ್ತು ನೀಡಬೇಕಾದ ಪೊಲೀಸರು, ಅದೇ ವ್ಯಕ್ತಿ ಹಲವು ಬಾರಿ ನಿಯಮ ಉಲ್ಲಂಘಿಸುವವರೆಗೂ ಕಾದು ದಂಡ ಸಂಗ್ರಹಿಸುತ್ತಿದ್ದಾರೆ.

ಕೆಲ ಪ್ರಕರಣಗಳಲ್ಲಿ ಐದಾರು ವರ್ಷಗಳ ಬಳಿಕ ಸಾರ್ವಜನಿಕರಿಂದ ಪೊಲೀಸರು ದಂಡ ಸಂಗ್ರಹಿಸಿದ್ದಾರೆ. ವಾಹನದ ಮೌಲ್ಯಕ್ಕಿಂತ ದಂಡ ಮೊತ್ತವೇ ಹೆಚ್ಚಾಗಿದ್ದರಿಂದ, ಅಂಥ ವಾಹನಗಳನ್ನು ಸಾರ್ವಜನಿಕರು ಪೊಲೀಸರಿಗೇ ಕೊಟ್ಟು ಹೋಗಿರುವ ಪ್ರಕರಣಗಳೂ ನಡೆದಿವೆ.

ದಂಡ ಸಂಗ್ರಹ ತಡ ಮಾಡಿದ್ದರಿಂದ, ನೂರು ರೂಪಾಯಿ ಮೊತ್ತ ಸಾವಿರಾರು ರೂಪಾಯಿಗೆ ಬೆಳೆಯುತ್ತಿದೆ. ದಂಡದ ಮೊತ್ತ ಹೆಚ್ಚಾಗಲು ಕಾರಣವೇನು ? ಎಂಬುದನ್ನು ಹುಡುಕುತ್ತಾ ಹೋದರೆ, ಸಂಚಾರ ಪೊಲೀಸರ ವಿಳಂಬ ಧೋರಣೆ ಢಾಳಾಗಿ ಕಾಣಿಸುತ್ತದೆ.

ಬೆಳ್ಳಂದೂರಿನ ಖಾಸಗಿ ಕಂಪನಿ ಉದ್ಯೋಗಿ ಜಿ. ರವಿಕುಮಾರ್, '2017ರಲ್ಲಿ ಮಾರತ್ತಹಳ್ಳಿ ರಸ್ತೆಯ ಬದಿ ಬೈಕ್ ನಿಲ್ಲಿಸಿದ್ದೆ. ಅದೇ ರಸ್ತೆಯ ಕೊನೆಯಲ್ಲಿ 'ನೋ ಪಾರ್ಕಿಂಗ್' ಫಲಕವಿತ್ತಂತೆ. ಅದನ್ನು ನಾನು ಗಮನಿಸಿರಲಿಲ್ಲ. ನಿಯಮ ಉಲ್ಲಂಘನೆ ಆಗಿದೆ ಎಂಬ ಅರಿವು ನನಗಿರಲಿಲ್ಲ. ನನ್ನದು ತಪ್ಪು ಎಂದು ಯಾರೊಬ್ಬರೂ ಹೇಳಿರಲಿಲ್ಲ. ಅದಾದ ನಂತರ ಅದೇ ಜಾಗದಲ್ಲೇ 10 ಬಾರಿ ಬೈಕ್ ನಿಲ್ಲಿಸಿದ್ದೆ' ಎಂದರು.

'2021ರ ಜೂನ್‌ನಲ್ಲಿ ಮಾರತ್ತಹಳ್ಳಿ ಬಳಿ ಪೊಲೀಸರು ನನ್ನ ಬೈಕ್ ಅಡ್ಡಗಟ್ಟಿದ್ದರು. ಉಪಕರಣದಲ್ಲಿ ನೋಂದಣಿ ಸಂಖ್ಯೆ ಪರಿಶೀಲಿಸಿ, 11 ಬಾರಿ ನಿಯಮ ಉಲ್ಲಂಘಿಸಿರುವುದಾಗಿ ಹೇಳಿದ್ದರು. ಅದನ್ನು ಕೇಳಿ ಆಘಾತವಾಯಿತು. ನಾಲ್ಕು ವರ್ಷಗಳಲ್ಲಿ 11 ಬಾರಿ ಒಂದೇ ಕಡೆ ಬೈಕ್ ನಿಲ್ಲಿಸಿದರೂ ಪೊಲೀಸರು ಏನು ಹೇಳಿಲ್ಲ. ಮನೆಗೆ ನೋಟಿಸ್ ಸಹ ಕಳುಹಿಸಿಲ್ಲ. ಈಗ ಏಕಾಏಕಿ ಬೈಕ್ ಅಡ್ಡಗಟ್ಟಿ ದಂಡ ತುಂಬಿ ಎಂದರೆ ಹೇಗೆ ತುಂಬುವುದು ಎಂದು ಪ್ರಶ್ನಿಸಿದ್ದೆ. ಅದಕ್ಕೆ ಉತ್ತರಿಸದ ಪೊಲೀಸರು, ಬೈಕ್ ಜಪ್ತಿ ಮಾಡುವ ಬೆದರಿಕೆ ಹಾಕಿದರು. ಅನಿವಾರ್ಯವಾಗಿ ದಂಡ ಪಾವತಿಸಿದೆ' ಎಂದು ರವಿಕುಮಾರ್ ತಿಳಿಸಿದರು.

'ಮೊದಲ ಬಾರಿಯೇ ನನಗೆ ನೋಟಿಸ್ ನೀಡಿದ್ದರೆ ಅಥವಾ ಸ್ಥಳದಲ್ಲಿ ಕರ್ತವ್ಯದಲ್ಲಿದ್ದ ಕಾನ್‌ಸ್ಟೆಬಲ್ ತಿಳಿಸಿದ್ದರೆ, ಎರಡನೇ ಬಾರಿ ಆ ಜಾಗದಲ್ಲಿ ಬೈಕ್ ನಿಲ್ಲಿಸುತ್ತಿರಲಿಲ್ಲ. ನೋಟಿಸ್ ಕೊಡದಿರುವುದು ಪೊಲೀಸರ ತಪ್ಪು. ಅದರಿಂದ ನಾನು ದುಬಾರಿ ದಂಡ ತೆರಬೇಕಾಯಿತು' ಎಂದೂ ಬೇಸರ ವ್ಯಕ್ತಪಡಿಸಿದರು.

ಚಾಲಕರ ತಪ್ಪಿಗೆ ಮಾಲೀಕರಿಗೆ ದಂಡ: 'ನನ್ನ ಕಾರು ಚಲಾಯಿಸಲು ಚಾಲಕನನ್ನು ನೇಮಿಸಿಕೊಂಡಿದ್ದೇನೆ. ಆತನೇ ಹಲವೆಡೆ ಕಾರು ತೆಗೆದುಕೊಂಡು ಹೋಗುತ್ತಾನೆ. ಹಲವು ಬಾರಿ ಆತ ನಿಯಮ ಉಲ್ಲಂಘಿಸಿದ್ದು, ಈ ಸಂಗತಿ ನನಗೆ ಗೊತ್ತಿರಲಿಲ್ಲ. ಮೂರು ವರ್ಷ ಬಿಟ್ಟು ಪೊಲೀಸರು, ₹25 ಸಾವಿರ ದಂಡದ ನೋಟಿಸ್ ನೀಡಿದಾಗಲೇ ತಿಳಿಯಿತು' ಎಂದು ಚಾಮರಾಜಪೇಟೆ ವ್ಯಾಪಾರಿ ಭರತ್ ಹೇಳಿದರು.

'ಚಾಲಕ ಮೊದಲ ಬಾರಿ ತಪ್ಪು ಮಾಡಿದಾಗಲೇ ನೋಟಿಸ್ ನೀಡಬೇಕಿತ್ತು. ಅವಾಗಲೇ ದಂಡ ತುಂಬಿ, ಚಾಲಕನಿಗೆ ಎಚ್ಚರಿಕೆ ನೀಡುತ್ತಿದ್ದೆ. ಮತ್ತೊಮ್ಮೆ ಆತ ತಪ್ಪು ಮಾಡುತ್ತಿರಲಿಲ್ಲ. ಮೂರು ವರ್ಷ ಬಿಟ್ಟು ನೋಟಿಸ್ ಕೊಟ್ಟರೆ ಏನು ಪ್ರಯೋಜನ. ಪೊಲೀಸರ ಉದ್ದೇಶ ಜಾಗೃತಿಯೋ ಅಥವಾ ಹೆಚ್ಚು ದಂಡ ವಸೂಲಿ ಮಾಡುವುದೋ' ಎಂದು ವ್ಯವಸ್ಥೆ ಬಗ್ಗೆ ಪ್ರಶ್ನಿಸಿದರು.

ಬಸವನಗುಡಿಯ ನಿವಾಸಿ ಆರ್.ಕೆ. ರಾಮಕೃಷ್ಣ, 'ಕಾಲಮಿತಿ ಅಳವಡಿಸಿಕೊಂಡು ದಂಡ ಸಂಗ್ರಹಿಸುವುದು ಪೊಲೀಸರ ಕರ್ತವ್ಯ. ಸಿಬ್ಬಂದಿ ಕೊರತೆ ನೆಪ ಹೇಳಿ ಮನಸ್ಸಿಗೆ ಬಂದ ರೀತಿಯಲ್ಲಿ ದಂಡ ಸಂಗ್ರಹ ಮಾಡುವುದು ಸರಿಯಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಳೇ ಪ್ರಕರಣ ಹೆಸರಿನಲ್ಲೇ ಕಿರುಕುಳ: ಕೆಲ ಸಂಚಾರ ಪೊಲೀಸರು, ಹಳೇ ಪ್ರಕರಣಗಳ ದಂಡ ಸಂಗ್ರಹ ನೆಪದಲ್ಲಿ ನಡುರಸ್ತೆಯಲ್ಲಿ ವಾಹನ ಅಡ್ಡಗಟ್ಟಿ ಸಾರ್ವಜನಿಕರಿಗೆ ಕಿರುಕುಳ ನೀಡುತ್ತಿರುವ ಆರೋಪಗಳು ಇವೆ.

'ನಿಯಮ ಉಲ್ಲಂಘಿಸಿದ್ದೇವೆ' ಎಂಬುದೇ ಹಲವರಿಗೆ ಗೊತ್ತಾಗುತ್ತಿಲ್ಲ. ಮೊದಲ ಬಾರಿಯೇ ತಪ್ಪು ಗುರುತಿಸಿ ಹೇಳಬೇಕಾದ ಪೊಲೀಸರು, 'ನೂರು ರೂಪಾಯಿ ಮೊತ್ತ ಸಾವಿರಾರು ರೂಪಾಯಿ ಆಗಲಿ' ಎಂದು ಕಾಯುತ್ತಿರುವಂತೆ ಕಾಣುತ್ತಿದೆ. ಇದರಿಂದಲೇ ಬಹುತೇಕ ಕಡೆ ದಂಡ ಸಂಗ್ರಹ ಸಮಯದಲ್ಲಿ ಸಾರ್ವಜನಿಕರು ಹಾಗೂ ಪೊಲೀಸರ ನಡುವೆ ಜಟಾಪಟಿ ನಡೆಯುತ್ತಿದೆ.

'ಕಚೇರಿ ಹಾಗೂ ಇತರೆ ಕೆಲಸಕ್ಕೆ ಹೋಗುವಾಗ ಸುಖಾಸುಮ್ಮನೇ ವಾಹನ ನಿಲ್ಲಿಸುವ ಪೊಲೀಸರು, ದಾಖಲೆ ಕೇಳುತ್ತಾರೆ. ಅವುಗಳನ್ನು ನೀಡಿದ ತಕ್ಷಣ ಹಳೇ ಪ್ರಕರಣಗಳಿವೆ ಎಂಬ ರಾಗ ಎಳೆಯುತ್ತಾರೆ. ಎರಡು– ಮೂರು ವರ್ಷಗಳ ಹಿಂದಿನ ಪ್ರಕರಣಗಳನ್ನು ಹೇಳಿ ದಂಡ ಸಂಗ್ರಹಿಸುತ್ತಾರೆ. ಅದನ್ನು ಪ್ರಶ್ನಿಸಿದರೆ, ಏರುಧ್ವನಿಯಲ್ಲಿ ಮಾತನಾಡಿ ಕಿರುಕುಳ ನೀಡುತ್ತಾರೆ. ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಡಿ ಪ್ರಕರಣ ದಾಖಲಿಸುವುದಾಗಿ ಬೆದರಿಸುತ್ತಾರೆ' ಎಂದು ಹನುಮಂತನಗರದ ನಿವಾಸಿ ಯಶವಂತ್ ಅಳಲು ತೋಡಿಕೊಂಡರು.



ಬೆಂಗಳೂರಿನ ಬಸವೇಶ್ವರ ನಗರದಲ್ಲಿ ಸಂಚಾರ ನಿಯಮ ಉಲ್ಲಂಘಿಸಿದ ಬೈಕ್ ತಡೆಯಲು ಟ್ರಾಫಿಕ್ ಪೊಲೀಸರು ಪ್ರಯತ್ನಿಸಿದರು– ಸಂಗ್ರಹ ಚಿತ್ರ


'ಆರಂಭದಲ್ಲೇ ತಪ್ಪು ಗುರುತಿಸಿ ದಂಡ ಸಂಗ್ರಹಿಸಿ'

'ಯಾವುದೇ ವ್ಯಕ್ತಿ, ಮೊದಲ ಬಾರಿ ನಿಯಮ ಉಲ್ಲಂಘನೆ ಮಾಡಿದಾಗಲೇ ಪೊಲೀಸರು ದಂಡ ಸಂಗ್ರಹಿಸಬೇಕು. ಇದರಿಂದ ವರ್ಷ ಬಿಟ್ಟು ಸಾವಿರಾರು ರೂಪಾಯಿ ದಂಡ ತೆರುವುದು ತಪ್ಪುತ್ತದೆ' ಎಂಬುದು ಸಾರ್ವಜನಿಕರ ಒತ್ತಾಯ. 'ಪೊಲೀಸರು ತಮ್ಮ ಅನುಕೂಲಕ್ಕೆ ತಕ್ಕಂತೆ ಮನಬಂದಂತೆ ದಂಡ ವಿಧಿಸುವುದು ಸರಿಯಲ್ಲ. ಮೊದಲ ಬಾರಿ ನಿಯಮ ಉಲ್ಲಂಘಿಸಿದಾಗ, ನಿರ್ದಿಷ್ಟ ಕಾಲಮಿತಿಯೊಳಗೆ ದಂಡ ಸಂಗ್ರಹಿಸಲಿ. ಈ ರೀತಿಯಾದರೆ ರಸ್ತೆಯಲ್ಲಿ ಜಗಳ ಆಗುವುದು ತಪ್ಪುತ್ತದೆ. ಜನರಿಗೆ ನೆಮ್ಮದಿ ಸಿಗುತ್ತದೆ' ಎಂದೂ ಕೆಲವರು ಸಲಹೆ ನೀಡಿದರು.

ನಿತ್ಯ ಸಂಚಾರ ಸದಾ ಕಿರಿಕಿರಿ 2

270	**200**	**70**
ನಿಯಮ ಉಲ್ಲಂಘನೆ ಪತ್ತೆಗೆ ನಗರದಲ್ಲಿ ಅಳವಡಿಸಿರುವ ಕ್ಯಾಮೆರಾಗಳು	ಸದ್ಯ ಕಾರ್ಯನಿರ್ವಹಿಸುತ್ತಿರುವ ಕ್ಯಾಮೆರಾಗಳು	ಕಾಮಗಾರಿ, ಇತರೆ ಕಾರಣಗಳಿಂದ ನಿಷ್ಕ್ರಿಯವಾಗಿರುವ ಕ್ಯಾಮೆರಾಗಳು

ಸಂಚಾರ ಸೂಚನೆಗಳ ಅರಿವಿರಲಿ



ಸುದ್ದಿ 2 ನಿಮಿಷ

ಕೆಂಬತ್ತಹಳ್ಳಿ ಕೆರೆ ಒತ್ತುವರಿ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ: ಬಿಬಿಎಂಪಿ

ಬೊಮ್ಮನಹಳ್ಳಿ: ಅಂಜನಾಪುರ ವಾರ್ಡ್‌ನ ಕೆಂಬತ್ತಹಳ್ಳಿ ಕೆರೆ ಒತ್ತುವರಿ ತೆರವಿಗೆ ಸಂಬಂಧಿಸಿ ಪ್ರತಿಕ್ರಿಯಿಸಿದ ಬಿಬಿಎಂಪಿ ಬೊಮ್ಮನಹಳ್ಳಿ ಜಂಟಿ ಆಯುಕ್ತ ಎಂ.ರಾಮಕೃಷ್ಣ, 'ರಾಷ್ಟ್ರೀಯ ಹಸಿರು ಮಂಡಳಿ ಹಾಗೂ ಹೈಕೋರ್ಟ್ ಆದೇಶದಂತೆ ಒತ್ತುವರಿ ಪ್ರಯತ್ನ ನಡೆಯುತ್ತಿರುವಾಗಲೇ ತೆರವುಗೊಳಿಸಿದ್ದೇವೆ' ಎಂದರು.

'ಕೆಂಬತ್ತಹಳ್ಳಿ ಕೆರೆ ಮಾತ್ರವಲ್ಲದೇ ಬಿಬಿಎಂಪಿಗೆ ಒಳಪಡುವ ಜಮೀನು ಮತ್ತು ರಾಜಕಾಲುವೆ ಒತ್ತುವರಿ ವಿರುದ್ಧವೂ ಕಠಿಣ ಕ್ರಮ ಕೈಗೊಂಡಿದ್ದೇವೆ. ಇತ್ತೀಚೆಗೆ ಬೇಗೂರು ವಾರ್ಡ್‌ನ ಚಂದ್ರಶೇಖರಪುರದಲ್ಲಿ ಸರ್ವೆ ನಂ 4ರಲ್ಲಿ 3 ಎಕರೆ 16 ಗಂಟೆ ಬಿಬಿಎಂಪಿಗೆ ಒಳಪಟ್ಟ ಸರ್ಕಾರಿ ಜಮೀನು ಒತ್ತುವರಿಯಾಗಿತ್ತು. ಇದೀಗ ತೆರವುಗೊಳಿಸಿ ಬಂದೋಬಸ್ತ್ ಮಾಡಲಾಗಿದೆ' ಎಂದರು.

ಸ್ವಾಮೀಜಿ ಆಶೀರ್ವಾದ ಪಡೆದ ಸಿ.ಎಂ ಬಸವರಾಜ ಬೊಮ್ಮಾಯಿ



ತುಮಕೂರು: ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಇದೇ ಮೊದಲ ಬಾರಿಗೆ ಶುಕ್ರವಾರ ರಾತ್ರಿ ಸಿದ್ಧಗಂಗಾ ಮಠಕ್ಕೆ ಭೇಟಿ ನೀಡಿ ಸಿದ್ದಲಿಂಗ ಸ್ವಾಮೀಜಿ ಅವರ ಆಶೀರ್ವಾದ ಪಡೆದುಕೊಂಡರು.

ಮಠಕ್ಕೆ ಬರುತ್ತಿದ್ದಂತೆ ಮೊದಲಿಗೆ ಶಿವಕುಮಾರ ಸ್ವಾಮೀಜಿ ಗದ್ದುಗೆ ದರ್ಶನ ಪಡೆದರು. ಸ್ವಾಮೀಜಿ ಪುತ್ಥಳಿಗೆ ನಮಿಸಿ ಆಶೀರ್ವಾದ ಬೇಡಿದರು. ನಂತರ ಸಿದ್ದಲಿಂಗ ಸ್ವಾಮೀಜಿ ಅವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು. ಶಿವಕುಮಾರ ಸ್ವಾಮೀಜಿಯ ಬೆಳ್ಳಿ ಮೂರ್ತಿ ನೀಡಿ, ಅಕ್ಷತೆ ಹಾಕಿ ಆಶೀರ್ವದಿಸಿದರು. ಕೆಲ ಸಮಯ ಸ್ವಾಮೀಜಿ ಜತೆಗೆ ಚರ್ಚಿಸಿದರು.

ಸಚಿವರಾದ ಜೆ.ಸಿ. ಮಾಧುಸ್ವಾಮಿ, ಬಿ.ಸಿ. ನಾಗೇಶ್, ವಿ. ಸೋಮಣ್ಣ, ಮುರುಗೇಶ್ ನಿರಾಣಿ, ಸಂಸದ ಜಿ.ಎಸ್. ಬಸವರಾಜು, ಶಾಸಕರಾದ ಜಿ.ಬಿ. ಜ್ಯೋತಿ ಗಣೇಶ್, ಡಾ.ಸಿ.ಎಂ. ರಾಜೇಶ್ ಗೌಡ, ಎಂ.ಪಿ. ರೇಣುಕಾಚಾರ್ಯ, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸುರೇಶ್ ಗೌಡ ಇದ್ದರು.

ಯಕ್ಷಗಾನ: ಸಮಾಲೋಚನೆ ನಾಳೆ

ಬೆಂಗಳೂರು: ಯಕ್ಷವಾಹಿನಿ ಸಂಘಟನೆಯು 'ಕನ್ನಡ ಸಾಹಿತ್ಯದ ಶ್ರೀಮಂತಿಕೆಗೆ ಯಕ್ಷಗಾನ ಸಾಹಿತ್ಯದ ಕೊಡುಗೆ' ಎಂಬ ವಿಷಯದ ಮೇಲೆ ಇದೇ ಭಾನುವಾರ ಬೆಳಿಗ್ಗೆ 10ಕ್ಕೆ ಆನ್‌ಲೈನ್ ವೇದಿಕೆಯಲ್ಲಿ ಸಮಾಲೋಚನೆ ಹಮ್ಮಿಕೊಂಡಿದೆ.

ಕವಿ ಎಚ್.ಎಸ್. ವೆಂಕಟೇಶಮೂರ್ತಿ, ಚಿಂತಾಮಣಿ ಕೊಡ್ಲೆಕೆರೆ, ಜಾನಪದ ವಿದ್ವಾಂಸ ಚಕ್ಕೆರೆ ಶಿವಶಂಕರ ಯಕ್ಷಗಾನದ ಸಾಹಿತ್ಯ ವಿಮರ್ಶಾತ್ಮಕವಾಗಿ ಅವಲೋಕಿಸಲಿದ್ದಾರೆ. ಯಕ್ಷಗಾನ ಸಾಹಿತ್ಯದ ಆಳ, ವಿಸ್ತಾರ ಹಾಗೂ ವೈಶಿಷ್ಟ್ಯದ ಕುರಿತು ಪ್ರೊ.ಎಂ.ಎಲ್. ಸಾಮಗ, ಶ್ರೀಧರ ಡಿ.ಎಸ್., ಗಿಂಡಿಮನೆ ಮೃತ್ಯುಂಜಯ, ಆನಂದರಾಮ ಉಪಾಧ್ಯ, ರವಿ ಮಡೋಡಿ, ಮಹಾಬಲೇಶ್ವರ ಭಟ್ಟ ಇಟಗಿ, ಅಜಿತ್ ಕಾರಂತ, ಅಶ್ವಿನಿ ಮಾತನಾಡಲಿದ್ದಾರೆ. ಪುತ್ತೂರು ರಮೇಶ ಭಟ್ ಹಾಗೂ ಎ.ಪಿ. ಪಾಠಕ್ ಅವರಿಂದ ಗಾಯನ ನಡೆಯಲಿದೆ. 'ಯಕ್ಷವಾಹಿನಿ' ಯೂಟ್ಯೂಬ್ ಚಾನೆಲ್‌ನಲ್ಲಿ ಇದು ನೇರ ಪ್ರಸಾರವಾಗಲಿದೆ. ಜೂಮ್ ಮೂಲಕ ಭಾಗವಹಿಸುವವರು ಲಿಂಕ್‌ಗೆ ವಾಟ್ಸ್‌ಆ್ಯಪ್ ಸಂಖ್ಯೆ 9686112237.

ಆಸ್ತಿ ತೆರಿಗೆ ಬಾಕಿಗೆ ಭಾರಿ ದಂಡ

ಸಿಪಿಐ(ಮಾರ್ಕ್ಸ್‌ವಾದಿ) ಬೆಂಗಳೂರು ಜಿಲ್ಲಾ ಸಮಿತಿಗಳು ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯು ಮಹಾನಗರ ವ್ಯಾಪ್ತಿಯ ಆಸ್ತಿಗಳ ತೆರಿಗೆ ಬಾಕಿ ಉಳಿಸಿಕೊಂಡಿರುವವರಿಗೆ ನೋಟಿಸ್ ನೀಡಿ ಭಾರಿ ದಂಡ ವಸೂಲಿಗೆ ಮುಂದಾಗಿರುವ ಕ್ರಮವನ್ನು ಭಾರತ ಕಮ್ಯೂನಿಸ್ಟ್ ಪಕ್ಷದ (ಮಾರ್ಕ್ಸ್‌ವಾದಿ) ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲಾ ಸಮಿತಿಗಳು ತೀವ್ರವಾಗಿ ಖಂಡಿಸಿವೆ.

'2016 –17 ರ ವಲಯ ಪುನರ್ ವಿಂಗಡಣೆ ಆಧಾರಿತ ಆಸ್ತಿ ತೆರಿಗೆ ಪರಿಷ್ಕರಣೆ ಕುರಿತು ಆಸ್ತಿ ಮಾಲೀಕರಿಗೆ ಪಾಲಿಕೆ ನೋಟಿಸ್ ನೀಡಿಲ್ಲ. ಆದರೆ, ಅವರಿಂದ ಹಿಂದಿನ ದರದಲ್ಲೇ ತೆರಿಗೆ ಜಮಾ ಮಾಡಿಕೊಂಡು 5 ವರ್ಷಗಳ ನಂತರ ಇದೀಗ ವ್ಯತ್ಯಾಸದ ತೆರಿಗೆ ಮೊತ್ತವನ್ನು ಬಾಕಿ ಎಂದು ಪರಿಗಣಿಸಿ ದುಬಾರಿ ದಂಡ ವಸೂಲಿ ಮಾಡುತ್ತಿರುವುದು ಅಕ್ಷಮ್ಯ' ಎಂದು ಪಕ್ಷದ ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕೆ.ಎನ್. ಉಮೇಶ್ ಖಂಡಿಸಿದ್ದಾರೆ.

'ವಲಯ ಪುನರ್ ವಿಂಗಡಣೆ ಕುರಿತು ಮತ್ತು ಅದಕ್ಕೆ ಸಂಬಂಧಿಸಿದ ಪರೋಕ್ಷ ತೆರಿಗೆ ಹೆಚ್ಚಳ ಕುರಿತು ಈ ಹಿಂದೆಯೇ ಜನತೆ ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಅದ್ಯಾವುದನ್ನೂ ಲೆಕ್ಕಿಸದೆ ವಲಯ ಪುನರ್ ವಿಂಗಡಣೆ ಮತ್ತು ಸಂಬಂಧಿತ ತೆರಿಗೆ ಹೆಚ್ಚಳಕ್ಕೆ ಮುಂದಾಗಿದ್ದ ಬಿಬಿಎಂಪಿಯು ತೆರಿಗೆ ಪಾವತಿ ವೇಳೆಯಲ್ಲಿಯೇ ಸಂಬಂಧಿತ ವ್ಯತ್ಯಾಸದ ಮೊತ್ತ ಕುರಿತು ಅಗತ್ಯ ತಿಳಿವಳಿಕೆ ನೀಡಬೇಕಿತ್ತು' ಎಂದು ಅವರು ಹೇಳಿದ್ದಾರೆ.

ಅಧಿಕಾರಿಗಳೇ ಹೊಣೆ

'ಸಂಕಷ್ಟದ ಸಂದರ್ಭದಲ್ಲಿ ಜನರ ಮೇಲೆ ತೆರಿಗೆಯಲ್ಲದೆ ದಂಡದ ಹೊರೆ ಹೊರಿಸುವುದು ಸರಿಯಲ್ಲ. ಸಾರ್ವಜನಿಕರಿಗೆ ಅಧಿಕಾರಿಗಳೇ ಈ ಬಗ್ಗೆ ಮಾಹಿತಿ ನೀಡಬೇಕಿತ್ತು. ಇದು ಅಧಿಕಾರಿಗಳಿಂದ ಆಗಿರುವ ಪ್ರಮಾದ. ಅವರ ನಿರ್ಲಕ್ಷ್ಯವನ್ನು ಮರೆಮಾಚಿ, ಸಾರ್ವಜನಿಕರೇ ತೆರಿಗೆ ಪಾವತಿಸಿಲ್ಲ ಎಂದು ಹೇಳಲಾಗುತ್ತಿದೆ' ಎಂದು ವಿಧಾನ ಪರಿಷತ್ ಸದಸ್ಯ ಯು.ಬಿ. ವೆಂಕಟೇಶ್ ಹೇಳಿದ್ದಾರೆ.

'ಸರ್ಕಾರ ಕೂಡಲೇ ಈ ಆದೇಶ ಹಿಂಪಡೆಯಬೇಕು. ಕೋವಿಡ್ ಬಿಕ್ಕಟ್ಟು ಪರಿಹಾರವಾದ ನಂತರ, ಮುಂದಿನ ವರ್ಷ ಪರಿಷ್ಕೃತ ತೆರಿಗೆ ವ್ಯವಸ್ಥೆ ಜಾರಿ ಮಾಡಬೇಕು' ಎಂದೂ ಅವರು ಒತ್ತಾಯಿಸಿದ್ದಾರೆ.

ಜೀವಬೆದರಿಕೆ: ಮುನಿರತ್ನ ವಿರುದ್ಧ ಆರೋಪ

ಪ್ರಜಾವಾಣಿ ವಾರ್ತೆ



ಮುನಿರತ್ನ

ಬೆಂಗಳೂರು: 'ಜೆ.ಪಿ.ಪಾರ್ಕ್ ಆಟದ ಮೈದಾನದಲ್ಲಿ ಬಿಬಿಎಂಪಿ ಅನಧಿಕೃತ ಕಟ್ಟಡ ನಿರ್ಮಾಣ ಸಂಬಂಧ ಕೋರ್ಟ್‌ಗೆ ಪಿಐಎಲ್ ಸಲ್ಲಿಸಿದ್ದ ಸಾಮಾಜಿಕ ಕಾರ್ಯಕರ್ತ ರೋಲ್ಯಾಂಡ್ ಸೋನ್ಸ್ ಅವರಿಗೆ ಸಚಿವ ಮುನಿರತ್ನ ಅವರಿಂದ ಜೀವಬೆದರಿಕೆ ಇದ್ದು, ರೋಲ್ಯಾಂಡ್ ಅವರಿಗೆ ಪೊಲೀಸ್ ಭದ್ರತೆ ಒದಗಿಸಬೇಕು' ಎಂದು ಜನಾಧಿಕಾರ ಸಂಘರ್ಷ ಪರಿಷತ್ ಆಗ್ರಹಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಷತ್‌ನ ಸಹ ಅಧ್ಯಕ್ಷ ಪ್ರಕಾಶ್ ಬಾಬು, 'ಬಿಬಿಎಂಪಿಯಿಂದ ಮೈದಾನದಲ್ಲಿ ಅನಧಿಕೃತ ಮಾರುಕಟ್ಟೆ ಕಟ್ಟಡ ನಿರ್ಮಾಣ ಆಕ್ಷೇಪಿಸಿ ರೋಲ್ಯಾಂಡ್ ಅವರು ಕೋರ್ಟ್‌ಗೆ ಪಿಐಎಲ್ ಸಲ್ಲಿಸಿದ್ದರು. ಅದರಂತೆ ಮೈದಾನದ ಜಂಟಿ ಅಳತೆ ಮಾಡಲು ಕೋರ್ಟ್ ಸೂಚಿಸಿತ್ತು. ಅರ್ಜಿದಾರರಿಗೆ ಜೀವ ಬೆದರಿಕೆ ಇದ್ದಿದ್ದರಿಂದ ಅಳತೆ ಸಮಯದಲ್ಲಿ ಯಶವಂತಪುರ ಇನ್‌ಸ್ಪೆಕ್ಟರ್ ಸುರೇಶ್ ಅವರಿಂದ ಭದ್ರತೆ ಕೇಳಿದ್ದರು. ಆದರೆ, ಪೊಲೀಸರು ಭದ್ರತೆ ಒದಗಿಸಲಿಲ್ಲ' ಎಂದು ಆರೋಪಿಸಿದರು.

ಸಾಮಾಜಿಕ ಕಾರ್ಯಕರ್ತ ರೋಲ್ಯಾಂಡ್ ಸೋನ್ಸ್, 'ಪೊಲೀಸರು ಭದ್ರತೆ ನೀಡದಿದ್ದರೂ ಸ್ನೇಹಿತರೊಂದಿಗೆ ಸ್ಥಳಕ್ಕೆ ಹೋಗಿದ್ದೆ. ಆಗ ಬಿಬಿಎಂಪಿ ಕಾರ್ಯಪಾಲಕ ಎಂಜಿನಿಯರ್ ಮೋಹನ್ ಅವರಿಗೆ ಮುನಿರತ್ನ ಕರೆ ಮಾಡಿ, ನನಗೆ ಪರೋಕ್ಷವಾಗಿ ಬೆದರಿಕೆ ಹಾಕಿದರು. ಮತ್ತೆ ನನ್ನ ಮೊಬೈಲ್‌ಗೆ ಕರೆ ಮಾಡಿ ಹಲವು ಬಾರಿ ಧಮ್ಕಿ ಹಾಕಿದ್ದಾರೆ' ಎಂದು ವಿವರಿಸಿದರು.

'ಮನೆಯ ಹತ್ತಿರ ಇಬ್ಬರು ಅಪರಿಚಿತರು ಹೋಗಿ, ನನ್ನ ತಾಯಿಗೂ ಧಮ್ಕಿ ಹಾಕಿದ್ದರು. ಅವರನ್ನು ಹಿಡಿದು, ವಿಲ್ಸನ್ ಗಾರ್ಡನ್ ಠಾಣೆಗೆ ಒಪ್ಪಿಸಲಾಯಿತು. ಪೊಲೀಸ್ ಅಧಿಕಾರಿಗಳು ದೂರು ದಾಖಲಿಸಿಕೊಳ್ಳಲಿಲ್ಲ. ಮನೆಯ ಬಳಿ ಸಿಕ್ಕ ಪೆನ್‌ವೊಂದರಲ್ಲಿ ಬ್ಲೇಡ್ ಪತ್ತೆಯಾಗಿದೆ. ನ್ಯಾಯದ ಪರ ಹೋರಾಟಕ್ಕೆ ನಿಂತಿರುವುದರಿಂದ ಈ ರೀತಿಯ ಅಪಾಯಗಳನ್ನು ಎದುರಿಸಬೇಕಾಗಿದೆ. ಮುನಿರತ್ನ ಜೊತೆಗೆ ಪೊಲೀಸರು ಹಾಗೂ ಬಿಬಿಎಂಪಿ ಅಧಿಕಾರಿಗಳು ಶಾಮೀಲಾಗಿದ್ದಾರೆ. ಹಾಗಾಗಿ, ನನಗೆ ಹಾಗೂ ಕುಟುಂಬಕ್ಕೆ ಭದ್ರತೆ ಕಲ್ಪಿಸಬೇಕು' ಎಂದು ಮನವಿ ಮಾಡಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಸಚಿವ ಮುನಿರತ್ನ, 'ನನ್ನ ಮೇಲಿನ ಆರೋಪ ಸುಳ್ಳು. ಈ ವಿಚಾರಕ್ಕೂ ನನಗೂ ಯಾವುದೇ ಸಂಬಂಧವಿಲ್ಲ. ಆರೋಪ ಮಾಡಿರುವವರ ಮುಖ ಪರಿಚಯವೂ ನನಗಿಲ್ಲ. ಇತ್ತೀಚಿಗೆ ಈ ರೀತಿ ಸುಳ್ಳು ಆರೋಪ ಮಾಡುವವರು ಹೆಚ್ಚಾಗುತ್ತಿದ್ದಾರೆ. ಈ ಬಗ್ಗೆ ತನಿಖೆ ನಡೆಸಲು ಸೂಚಿಸಲಾಗುವುದು' ಎಂದು ಹೇಳಿದರು.



ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ ಸದಸ್ಯರು ಆನ್‌ಲೈನ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆ ವಿಧಿಸಲು ಆಗ್ರಹ

ಬೆಂಗಳೂರು: 'ನೈರುತ್ಯ ದೆಹಲಿಯಲ್ಲಿ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡಬೇಕು' ಎಂದು ಆಗ್ರಹಿಸಿ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ (ಎಐಎಂಎಸ್‌ಎಸ್) ಬೆಂಗಳೂರು ಜಿಲ್ಲಾ ಸಮಿತಿ ಸದಸ್ಯರು 'ಪ್ರತಿಭಟನಾ ದಿನ'ವನ್ನು ಶುಕ್ರವಾರ ಹಮ್ಮಿಕೊಂಡಿದ್ದರು.

'ಹೆಣ್ಣುಮಗುವನ್ನು ಉಳಿಸಿ' ಘೋಷವಾಕ್ಯದಡಿ ಸಂಘಟನೆಯ ಸದಸ್ಯರು ಭಿತ್ತಿಪತ್ರಗಳನ್ನು ಹಿಡಿದು ಆನ್‌ಲೈನ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

'ನೀರು ತರಲು ಹೋಗಿದ್ದ ಒಂಬತ್ತು ವರ್ಷದ ಬಾಲಕಿ ಮೇಲೆ ಅತ್ಯಾಚಾರ ನಡೆಸಿ, ಕೊಲೆ ಮಾಡಲಾಗಿದೆ. ಇದನ್ನು ಮುಚ್ಚಿ ಹಾಕಲು ತರಾತುರಿಯಲ್ಲಿ ಅಂತ್ಯಕ್ರಿಯೆ ನಡೆದಿದೆ. ಈ ಪ್ರಕರಣವನ್ನೇ ಮುಚ್ಚಿ ಹಾಕುವ ಹುನ್ನಾರ ನಡೆದಿದೆ' ಎಂದು ಸಂಘಟನೆಯ ಕಾರ್ಯದರ್ಶಿ ಎ.ಶಾಂತಾ ಆರೋಪಿಸಿದರು.

'ಆಡಳಿತ ವ್ಯವಸ್ಥೆಯ ನಿರ್ಲಕ್ಷ್ಯದಿಂದ ದೇಶದಲ್ಲಿ ಅತ್ಯಾಚಾರ ಪ್ರಕರಣಗಳು ಹೆಚ್ಚಾಗುತ್ತಲೇ ಇದ್ದು, ಅತ್ಯಾಚಾರಿಗಳು ನಿರ್ಭೀತಿಯಿಂದ ಓಡಾಡುವಂತಾಗಿದೆ. ಹೆಣ್ಣು ಮಗಳನ್ನು ಭೋಗದ ವಸ್ತುವನ್ನಾಗಿ ನೋಡುವ ಪುರುಷ ಪ್ರಧಾನ ವ್ಯವಸ್ಥೆ ಇನ್ನೂ ಜೀವಂತವಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಬಾಲಕಿ ಮೇಲೆ ಅತ್ಯಾಚಾರ ನಡೆಸಿ, ಕೊಲೆಗೈದಿರುವ ಆರೋಪಿಗಳಿಗೆ ಕೂಡಲೇ ಶಿಕ್ಷೆ ನೀಡಬೇಕು. ಜಸ್ಟೀಸ್ ವರ್ಮಾ ಸಮಿತಿಯ ಶಿಫಾರಸುಗಳನ್ನು ಜಾರಿ ಮಾಡಬೇಕು. ಅತ್ಯಾಚಾರಕ್ಕೆ ಪ್ರೇರೇಪಿಸುವ ಅಶ್ಲೀಲ ಸಿನಿಮಾಗಳು ಹಾಗೂ ವೆಬ್‌ಸೈಟ್‌ಗಳನ್ನು ನಿಷೇಧಿಸಬೇಕು' ಎಂದು ಆಗ್ರಹಿಸಿದರು.

'ಬೆಂಗಳೂರು ಅಭಿವೃದ್ಧಿ ಖಾತೆ ಬೇಕು'

ಮೈಸೂರು: 'ಯಾವ ಖಾತೆ ಬೇಕು ಎಂಬುದಾಗಿ ಮುಖ್ಯಮಂತ್ರಿ ಕೇಳಿದರೆ ಬೆಂಗಳೂರು ನಗರಾಭಿವೃದ್ಧಿ ಖಾತೆ ಮತ್ತು ಬೆಂಗಳೂರು ಉಸ್ತುವಾರಿ ನೀಡುವಂತೆ ಕೇಳುತ್ತೇನೆ' ಎಂದು ಸಚಿವ ಎಸ್.ಟಿ.ಸೋಮಶೇಖರ್ ಶುಕ್ರವಾರ ಇಲ್ಲಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬಿಬಿಎಂಪಿ ಚುನಾವಣೆ ಹಿನ್ನೆಲೆಯಲ್ಲಿ ಈ ಖಾತೆ ನನಗೆ ಅಗತ್ಯವಿದೆ. ಆದರೆ, ಮುಖ್ಯಮಂತ್ರಿ ಯಾವ ಖಾತೆ ಬೇಕು ಎಂದು ಕೇಳುವುದಿಲ್ಲ, ನಾನೂ ಹೇಳುವುದಿಲ್ಲ. ನೀವು (ಸುದ್ದಿಗಾರರು) ಕೇಳಿದ್ದಕ್ಕೆ ಹೇಳುತ್ತಿದ್ದೇನೆ' ಎಂದರು.

ಇ.ಡಿ ದಾಳಿಗೆ ಡಿಕೆಶಿ ಕಾರಣ: 'ಸಿದ್ದರಾಮಯ್ಯ ಮುಂದಿನ ಮುಖ್ಯಮಂತ್ರಿ ಎಂದು ಜಮೀರ್ ಅಹಮದ್ ಪದೇ ಪದೇ ಹೇಳುತ್ತಿದ್ದಾರೆ. ಹೀಗಾಗಿ, ಡಿ.ಕೆ.ಶಿವಕುಮಾರ್ ಅವರೇ ಇ.ಡಿ ಹಾಗೂ ಐ.ಟಿ ಇಲಾಖೆಯ ವಿಚಾರಣೆಯಲ್ಲಿ ಜಮೀರ್ ಹೆಸರು ಹೇಳಿರಬಹುದು. ಈಗ ಅವರ ನಿವಾಸದ ಮೇಲೆ ದಾಳಿ ನಡೆದಿದೆ' ಎಂದು ಹೇಳಿದರು.

ಬೆಂಗಳೂರು ನಗರ ಜಿಲ್ಲಾಡಳಿತ ಕಾರ್ಯಾಚರಣೆ

ಒತ್ತುವರಿಯಾಗಿದ್ದ 3 ಎಕರೆ ಭೂಮಿ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೇಗೂರು ಹೋಬಳಿಯ ಹುಳಿಮಾವು ಭಾಗದಲ್ಲಿ ಸುಮಾರು 40 ವರ್ಷಗಳಿಂದ ಅತಿಕ್ರಮಿಸಿಕೊಂಡು, ತಾಂತ್ರಿಕ ಶಿಕ್ಷಣ ಸಂಸ್ಥೆ ನಡೆಸುತ್ತಿದ್ದ ಇಸ್ಲಾಮಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಕಟ್ಟಡ ಸೇರಿದಂತೆ ಒಟ್ಟು 3.20 ಎಕರೆ ಭೂಮಿಯನ್ನು ಸರ್ಕಾರದ ವಶಕ್ಕೆ ಪಡೆಯಲಾಗಿದೆ' ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ತಿಳಿಸಿದರು.

ಮಂಜುನಾಥ್ ನೇತೃತ್ವದಲ್ಲಿ ಜಾರಿದಳದ ವಿಶೇಷ ಜಿಲ್ಲಾಧಿಕಾರಿ ದುರ್ಗಾಶ್ರೀ, ಬೆಂಗಳೂರು ದಕ್ಷಿಣ ಉಪವಿಭಾಗಾಧಿಕಾರಿ ಎಂ.ಜಿ.ಶಿವಣ್ಣ ಅವರ ತಂಡವು ಶುಕ್ರವಾರ ಕಾರ್ಯಾಚರಣೆ ನಡೆಸಿತು.

'ಹುಳಿಮಾವು ಗ್ರಾಮದ ಸರ್ವೆ ನಂಬರ್ 63ರಲ್ಲಿದ್ದ ಸುಮಾರು ₹37 ಕೋಟಿ ಬೆಲೆ ಬಾಳುವ ಆಸ್ತಿಯನ್ನು ಸರ್ಕಾರದ ಸುಪರ್ದಿಗೆ ಪಡೆದುಕೊಳ್ಳಲಾಗಿದೆ. ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡು, ಶಿಕ್ಷಣ ಸಂಸ್ಥೆಯನ್ನು ನಡೆಸುತ್ತಿದ್ದರು. ಸಂಸ್ಥೆಯು ಈ ಹಿಂದೆ ಜಮೀನನ್ನು ಗುತ್ತಿಗೆ ಅಥವಾ ಮಂಜೂರು ಮಾಡಿಕೊಡಲು ಕೋರಿ ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಿತ್ತು' ಎಂದರು.

'ಸರ್ಕಾರವು ಈ ಮನವಿಗಳನ್ನು ತಿರಸ್ಕರಿಸಿ, ಜಮೀನು ವಶಕ್ಕೆ ಪಡೆಯಲು ಸೂಚಿಸಿತ್ತು. ಈ ಬಗ್ಗೆ ಸಂಸ್ಥೆಯು ಸಲ್ಲಿಸಿದ್ದ ಮೇಲ್ಮನವಿಗಳನ್ನು ನ್ಯಾಯಾಲಯದಲ್ಲಿ ತಿರಸ್ಕರಿಸಿತ್ತು. ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದ ಮೇಲ್ಮನವಿಯೂ ತಿರಸ್ಕೃತಗೊಂಡಿದೆ' ಎಂದು ಹೇಳಿದರು.



ಒತ್ತುವರಿ ಜಾಗದಲ್ಲಿದ್ದ ಕಟ್ಟಡ

‘ವಜಾ ಕಾನೂನು ಬಾಹಿರವಾದರೆ ಬಾಕಿ ವೇತನಕ್ಕೆ ನೌಕರ ಅರ್ಹ’

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ನೌಕರರನ್ನು ವಜಾ ಮಾಡಿದ್ದು ಕಾನೂನು ಬಾಹಿರ ಎಂದಾದರೆ, ಆ ನೌಕರ ಬಾಕಿ ಎಲ್ಲಾ ವೇತನ ಪಡೆಯಲು ಅರ್ಹ’ ಎಂದು ಹೇಳಿರುವ ಹೈಕೋರ್ಟ್, ವಜಾಗೊಂಡಿದ್ದ ಉಪನ್ಯಾಸಕಿಗೆ ಅವರು ಮರಳಿ ಕೆಲಸಕ್ಕೆ ನೇಮಕವಾದ ತನಕದ ಬಾಕಿ ವೇತನ ಪಾವತಿಸಬೇಕು ಎಂದು ತಾಂತ್ರಿಕ ಶಿಕ್ಷಣ ಇಲಾಖೆಗೆ ನಿರ್ದೇಶನ ನೀಡಿದೆ.

ಮಂಗಳೂರಿನ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್ ಕಾಲೇಜಿನ ಉಪನ್ಯಾಸಕಿಯೊಬ್ಬರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ವೀರಪ್ಪ ನೇತೃತ್ವದ ವಿಭಾಗೀಯ ಪೀಠ, ‘ಬಾಕಿ ವೇತನ ಹಾಗೂ ಇತರ ಸವಲತ್ತು ನಿರಾಕರಿಸುವುದು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಆದೇಶಗಳ ಉಲ್ಲಂಘನೆ ಆಗಲಿದೆ’ ಎಂದು ಹೇಳಿತು.

2010ರಲ್ಲಿ ಉಪನ್ಯಾಸಕರಾಗಿ ನೇಮಕಗೊಂಡಿದ್ದ ಅರ್ಜಿದಾರರನ್ನು ನಕಲಿ ಜಾತಿ ಪ್ರಮಾಣ ಪತ್ರ ಸಲ್ಲಿಸಲಾಗಿದೆ ಎಂಬ ಕಾರಣ ನೀಡಿ 2014ರ ಜೂನ್‌ನಲ್ಲಿ ಸೇವೆಯಿಂದ ವಜಾಗೊಳಿಸಲಾಗಿತ್ತು. ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯು (ಕೆಎಸ್ಎಟಿ) 2017ರ ಜುಲೈನಲ್ಲಿ ಅರ್ಜಿದಾರರ ಪರ ಆದೇಶ ನೀಡಿತು. ಜೊತೆಗೆ ಎಲ್ಲಾ ಸವಲತ್ತುಗಳನ್ನು ಪಡೆಯಲು ಅರ್ಹರು ಎಂದು ತಿಳಿಸಿತ್ತು.

ಆದರೆ, ಬಾಕಿ ವೇತನ ಪಾವತಿಸಲು ನಿರ್ದೇಶನ ಕೋರಿ ಮತ್ತೊಮ್ಮೆ ಮಧ್ಯಂತರ ಅರ್ಜಿಯನ್ನು ಕೆಎಸ್‌ಎಟಿ ಮುಂದೆ ಉಪನ್ಯಾಸಕಿ ಸಲ್ಲಿಸಿದ್ದರು. ಹಲವು ಸುತ್ತಿನ ವಿಚಾರಣೆ ಬಳಿಕ 2020 ಜುಲೈ 30ರಂದು ಅರ್ಜಿಯನ್ನು ನ್ಯಾಯ ಮಂಡಳಿ ತಿರಸ್ಕರಿಸಿತ್ತು.

ಹೈಕೋರ್ಟ್‌ನಲ್ಲಿ ಅವರು ಮೇಲ್ಮನವಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಧಾರವಾಡ ಪೀಠ, ‘ಬಾಕಿ ವೇತನ ಪಡೆಯಲು ಅವರು ಅರ್ಹರು. 8 ವಾರಗಳಲ್ಲಿ ಬಾಕಿ ವೇತನ ಪಾವತಿಸಬೇಕು’ ಎಂದು ನಿರ್ದೇಶನ ನೀಡಿದೆ.

ಅರೆ ನ್ಯಾಯಾಂಗದಲ್ಲೂ ವಿಡಿಯೊ ಮುಖೇನ ವಿಚಾರಣೆ

ಬೆಂಗಳೂರು: ಅರೆ ನ್ಯಾಯಾಂಗದ ಅಧಿಕಾರಿಗಳೂ ವಿಡಿಯೊ ಕಾನ್ಫರೆನ್ಸ್ (ವಿ.ಸಿ) ಮೂಲಕ ವಿಚಾರಣೆ ಆರಂಭಿಸಲು ಸೌಲಭ್ಯ ಕಲ್ಪಿಸಲಾಗುತ್ತಿದೆ ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಮಾಹಿತಿ ನೀಡಿದೆ.

ಜಿಲ್ಲಾಧಿಕಾರಿ ಮತ್ತು ಉಪವಿಭಾಗಾಧಿಕಾರಿ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ವಿಚಾರಣೆಯನ್ನು ಸಾಂಕ್ರಾಮಿಕ ರೋಗದ ನಡುವೆಯೂ ನಡೆಸಲು ಇದು ಅನುಕೂಲ ಆಗಲಿದೆ ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಈ ಹಿಂದಿನ ವಿಚಾರಣೆ ವೇಳೆ ತಿಳಿಸಿತ್ತು.

‘ಇ-ಆಡಳಿತದ ಸಹಾಯ ಪಡೆದು ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆ ಆರಂಭಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ. ವಿಡಿಯೊ ಕಾನ್ಫರೆನ್ಸ್ ಮೂಲಕ ಸಭೆಗಳನ್ನು ನಡೆಸಲು ಈಗಾಗಲೇ ಸೌಲಭ್ಯ ನೀಡಲಾಗಿದೆ. ಆದರೆ, ವಿಚಾರಣೆ ನಡೆಸಲು ಬೇಕಾದ ಸೌಲಭ್ಯಗಳು ಇರಲಿಲ್ಲ’ ಎಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ವರದಿ ಸಲ್ಲಿಸಿದ್ದಾರೆ.

ಸೆಪ್ಟೆಂಬರ್ 16ರೊಳಗೆ ಎಲ್ಲಾ ಅರೆ ನ್ಯಾಯಾಂಗ ಅಧಿಕಾರಿಗಳಿಗೆ ವಿಡಿಯೊ ಕಾನ್ಫರೆನ್ಸ್ ವಿಚಾರಣೆ ನಡೆಸಲು ಬೇಕಾದ ಸೌಲಭ್ಯ ಕಲ್ಪಿಸಬೇಕು ಎಂದು ತಿಳಿಸಿದ ಪೀಠ, ವಿಚಾರಣೆ ಮುಂದೂಡಿತು.

ಜೆಇಇ ಮುಖ್ಯ ಪರೀಕ್ಷೆಯ ಫಲಿತಾಂಶ ಪ್ರಕಟ

ನವದೆಹಲಿ (ಪಿಟಿಐ): ಜೆಇಇ ಮುಖ್ಯ ಪರೀಕ್ಷೆಯ ಫಲಿತಾಂಶವನ್ನು ಶುಕ್ರವಾರ ಪ್ರಕಟಿಸಲಾಗಿದೆ. ಕರ್ನಾಟಕದ ಗೌರಬ್ ದಾಸ್ ಸೇರಿದಂತೆ 17 ಅಭ್ಯರ್ಥಿಗಳು 100 ಪರ್ಸಂಟೈಲ್ ಅಂಕ ಗಳಿಸಿದ್ದಾರೆ.

ಆಂಧ್ರಪ್ರದೇಶದ ನಾಲ್ವರು, ಬಿಹಾರದ ಒಬ್ಬರು, ರಾಜಸ್ಥಾನದ ಒಬ್ಬರು, ದೆಹಲಿಯ ಇಬ್ಬರು, ಹರಿಯಾಣದ ಇಬ್ಬರು, ತೆಲಂಗಾಣದ ಮೂವರು ಹಾಗೂ ಉತ್ತರ ಪ್ರದೇಶ ಇಬ್ಬರು 100 ಪರ್ಸಂಟೈಲ್ ಅಂಕ ಗಳಿಸಿದ ಇತರ ಅಭ್ಯರ್ಥಿಗಳು.

ಒಟ್ಟು 7.09 ಲಕ್ಷ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ವಿದೇಶಗಳಲ್ಲಿ 12 ನಗರಗಳು ಸೇರಿದಂತೆ 334 ನಗರಗಳಲ್ಲಿನ 915 ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲಾಗಿತ್ತು. ಪರೀಕ್ಷೆಯನ್ನು ಇಂಗ್ಲಿಷ್, ಕನ್ನಡ, ಹಿಂದಿ ಸೇರಿದಂತೆ 13 ಭಾಷೆಗಳಲ್ಲಿ ನಡೆಸಲಾಗಿತ್ತು.

ಕೇರಳ ಹೈಕೋರ್ಟ್ ಅಭಿಪ್ರಾಯ

‘ಪತ್ನಿ ಇಚ್ಛೆ ವಿರುದ್ಧ ಲೈಂಗಿಕ ಕ್ರಿಯೆ ನಡೆಸಿದರೆ ವೈವಾಹಿಕ ಅತ್ಯಾಚಾರ’

ಕೊಚ್ಚಿ(ಪಿಟಿಐ): ‘ಪತ್ನಿಯ ದೇಹ ಪತಿಗಾಗಿಯೇ ಮೀಸಲಾಗಿದೆ ಎಂದು ಭಾವಿಸಿಕೊಂಡು, ಆಕೆಯ ಇಚ್ಛೆಯ ವಿರುದ್ಧ ಲೈಂಗಿಕ ಕ್ರಿಯೆ ನಡೆಸುವುದು ವೈವಾಹಿಕ ಅತ್ಯಾಚಾರ’ ಎಂದು ಕೇರಳ ಹೈಕೋರ್ಟ್ ಹೇಳಿದೆ.

‘ವಿವಾಹ ಮತ್ತು ವಿಚ್ಛೇದನವು ಜಾತ್ಯತೀತ ಕಾನೂನು ವ್ಯಾಪ್ತಿಯಲ್ಲೇ ಇರಬೇಕು’ ಎಂದು ನ್ಯಾಯಮೂರ್ತಿಗಳಾದ ಎ. ಮುಹಮ್ಮದ್ ಮುಸ್ತಾಖ್ ಮತ್ತು ಕೌಸರ್ ಎಡಪ್ಪಗಾಥ್ ಅವರನ್ನೊಳಗೊಂಡ ಪೀಠವು ಅಭಿಪ್ರಾಯಪಟ್ಟಿದೆ.

‘ವಿವಾಹದ ಸಂದರ್ಭದಲ್ಲಿ ಪತಿ ಮತ್ತು ಪತ್ನಿ ಇಬ್ಬರೂ ಸಮಾನರು ಎಂದು ಪರಿಗಣಿಸಲಾಗುತ್ತದೆ. ಪತ್ನಿಗಿಂತ ತಾನು ಹೆಚ್ಚು ಶ್ರೇಷ್ಠ ಎಂದು ಪತಿ ಭಾವಿಸಿಕೊಳ್ಳಬಾರದು. ಇದು ಆಕೆಯ ದೇಹವಾಗಿರಬಹುದು ಅಥವಾ ವೈಯಕ್ತಿಕ ಸ್ಥಾನಮಾನಕ್ಕೆ ಸಂಬಂಧಪಟ್ಟದ್ದಾಗಿರಬಹುದು’ ಎಂದು ಪೀಠವು ಹೇಳಿದೆ.

ವಿಚ್ಛೇದನ ನೀಡಿದ ಕೌಟುಂಬಿಕ ನ್ಯಾಯಾಲಯದ ತೀರ್ಪು ಪ್ರಶ್ನಿಸಿ ವ್ಯಕ್ತಿಯೊಬ್ಬರು ಸಲ್ಲಿಸಿದ್ದ ಎರಡು ಅರ್ಜಿಗಳನ್ನು ತಿರಸ್ಕರಿಸಿದ ನ್ಯಾಯಾಲಯ, ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದೆ.

‘ವೈವಾಹಿಕ ಅತ್ಯಾಚಾರವು ವಿಚ್ಛೇದನ ಪಡೆದುಕೊಳ್ಳಲು ಪ್ರಮುಖ ಅಂಶವಾಗಿದೆ’ ಎಂದು ಪೀಠವು ಹೇಳಿದೆ. ‘ಈ ಪ್ರಕರಣದಲ್ಲಿ ಮಹಿಳೆಯು ವಿಚ್ಛೇದನ ಪಡೆದುಕೊಳ್ಳಲು 12 ವರ್ಷಗಳಿಂದ ನ್ಯಾಯಾಂಗದ ದೇವಾಲಯದಲ್ಲಿ ಕಾಯುತ್ತಿದ್ದಾರೆ. ವಿಳಂಬವಾಗಿರುವುದನ್ನು ಸಹಿಸಿಕೊಳ್ಳಲು ಈ ಮಹಿಳೆಯಿಂದ ಸಾಧ್ಯವಿಲ್ಲ. ಅವಳ ಕಣ್ಣೀರಿಗೆ ನಾವು ಸಹ ಉತ್ತರದಾಯಿತ್ವವಾಗಿದ್ದೇವೆ’ ಎಂದು ನ್ಯಾಯಾಲಯ ಹೇಳಿದೆ.

‘ಶ್ರೀಮಂತ ಪಾಟೀಲಗೆ ಸಚಿವ ಸ್ಥಾನ ನೀಡಿ’

ಬೆಂಗಳೂರು: ಮರಾಠಾ ಸಮುದಾಯವನ್ನು ಪ್ರತಿನಿಧಿಸುವ ಏಕೈಕ ಶಾಸಕರಾಗಿರುವ ಶ್ರೀಮಂತ ಪಾಟೀಲ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಅಖಿಲ ಕರ್ನಾಟಕ ಕ್ಷತ್ರಿಯ ಮರಾಠಾ ಸಂಘಟನೆಗಳ ಒಕ್ಕೂಟ ಆಗ್ರಹಿಸಿದೆ.

ಒಕ್ಕೂಟದ ವತಿಯಿಂದ ಶುಕ್ರವಾರ ನಡೆದ ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ಕ್ಷತ್ರಿಯ ಮರಾಠಾ ಪರಿಷತ್ ಅಧ್ಯಕ್ಷ ರಾಣೋಜಿರಾವ್ ಸಾತೆ, ‘ಶ್ರೀಮಂತ ಪಾಟೀಲ ಅವರಿಗೆ ಸಚಿವ ಸ್ಥಾನ ನೀಡದಿರುವುದರಿಂದ ನೋವುಂಟಾಗಿದೆ’ ಎಂದರು.

ಶ್ರೀಕಲಾಗೆ ‘ಗೋಲ್ಡನ್ ಬ್ಯಾಡ್ಜ್’ ಪ್ರಶಸ್ತಿ

ಬೆಂಗಳೂರು: ಬರಹಗಾರರ ವೇದಿಕೆ ಮೋಟಿವೇಷನಲ್ ಸ್ಟ್ರಿಪ್ಸ್ ಹಾಗೂ ಗುಜರಾತ್ ಸಾಹಿತ್ಯ ಅಕಾಡೆಮಿ ನೀಡುವ ‘ಗೋಲ್ಡನ್ ಬ್ಯಾಡ್ಜ್’ ಪ್ರಶಸ್ತಿಯನ್ನು ಇಲ್ಲಿನ ಲೇಖಕಿ ಶ್ರೀಕಲಾ ಪಿ. ವಿಜಯನ್ ಅವರು ವರ್ಚುವಲ್ ಕಾರ್ಯಕ್ರಮದಲ್ಲಿ ಸ್ವೀಕರಿಸಿದರು.



ಶ್ರೀಕಲಾ ವಿಜಯನ್

ಬಾಗಲಗುಂಟೆಯ ಸೌಂದರ್ಯ ಶಾಲೆಯಲ್ಲಿ ಶಿಕ್ಷಕಿಯಾಗಿ ಅವರು ಕಾರ್ಯನಿರ್ವಹಿಸುತ್ತಿದ್ದಾರೆ. ಅವರ ‘ಸೋಲ್ ಇನ್ ಹೋಲ್’ ಪುಸ್ತಕದ ‘ಅಲಿಷಾ ಜರ್ನಿ’ ಎಂಬ ಕವಿತೆ ಈ ಪ್ರಶಸ್ತಿಗೆ ಆಯ್ಕೆಯಾಗಿತ್ತು. ವಿಶ್ವದ ಶ್ರೇಷ್ಠ ಬರಹಗಾರರ ವೇದಿಕೆಯ ಸಂಸ್ಥಾಪಕ ಶಿಜು ಎಚ್. ಪಲ್ಲಿತಾಜೆತ್ ಹಾಗೂ ಗುಜರಾತ್ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ವಿಷ್ಣು ಪಾಂಡ್ಯ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಶ್ರೀನಿವಾಸ್ ಅಧ್ಯಕ್ಷ

ಬೆಂಗಳೂರು: ಜನಹಿತ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಗೆ ಅಧ್ಯಕ್ಷರಾಗಿ ಎಂ.ವಿ. ಶ್ರೀನಿವಾಸ್ ಆಯ್ಕೆಯಾಗಿದ್ದಾರೆ.



ಶ್ರೀನಿವಾಸ್

ಉಪಾಧ್ಯಕ್ಷ ಸ್ಥಾನಕ್ಕೆ ಕೆ. ಉಮೇಶ್ ಬಾಬು ಚುನಾಯಿತರಾಗಿದ್ದಾರೆ. ಈ ಸ್ಥಾನಗಳಿಗೆ ಗುರುವಾರ (ಆ.5) ಚುನಾವಣೆ ನಡೆದಿತ್ತು.



ಕೆ. ಉಮೇಶ್ ಬಾಬು

ಹುಳಿಯಾರು ಪೊಲೀಸ್ ಠಾಣೆ ಮೇಲೆ ಎಸಿಬಿ ದಾಳಿ

ಪ್ರಜಾವಾಣಿ ವಾರ್ತೆ

ಹುಳಿಯಾರು: ಪಟ್ಟಣದ ಖಾಸಗಿ ಹಣಕಾಸು ಕಂಪನಿಯಲ್ಲಿ ನಡೆದಿದ್ದ ಅವ್ಯವಹಾರದ ವಸೂಲಾತಿ ಹಣದ ವಿಷಯವಾಗಿ ಪೊಲೀಸರ ವಿರುದ್ಧ ನೀಡಿದ ದೂರಿನ ಮೇರೆಗೆ ಭ್ರಷ್ಟಾಚಾರ ನಿಗ್ರಹ ದಳದ ತಂಡ ಶುಕ್ರವಾರ ಹುಳಿಯಾರು ಪೊಲೀಸ್ ಠಾಣೆ ಮೇಲೆ ದಾಳಿ ನಡೆಸಿತು.

ಪಟ್ಟಣದಲ್ಲಿ ಹಣಕಾಸು ಸಂಸ್ಥೆಯೊಂದರ ವ್ಯವಸ್ಥಾಪಕ ಸುಮಾರು ₹50 ಲಕ್ಷವನ್ನು ಅವ್ಯವಹಾರ ಮಾಡಿದ್ದರು. ಹಣವನ್ನು ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ತೊಡಗಿಸಿದ್ದರು. ಬೆಟ್ಟಿಂಗ್ ಹಣವನ್ನು ವ್ಯಕ್ತಿಯಿಂದ ವಸೂಲಾತಿ ಮಾಡುವ ವೇಳೆ ಹಣವನ್ನು ಪಟ್ಟಣದ ಮೊಬೈಲ್ ಅಂಗಡಿಯೊಂದರಲ್ಲಿ ಕೊಡುವಂತೆ ಹುಳಿಯಾರು ಪೊಲೀಸ್ ಠಾಣೆ ಪಿಎಸ್‌ಐ ಹೇಳಿದ್ದಾರೆ ಎನ್ನಲಾದ ಆಡಿಯೊ ಜಾಡು ಹಿಡಿದ ಎಸಿಬಿ ತಂಡ ಶುಕ್ರವಾರ ತಡ ರಾತ್ರಿವರೆಗೂ ತನಿಖೆ ನಡೆಸಿತು.

ಜಿಕೆವಿಕೆ ಆವರಣದಲ್ಲಿ 'ಕೃಷಿ ಮೇಳ'ಕ್ಕೆ ಭರದ ಸಿದ್ಧತೆ • ಶೀಘ್ರದಲ್ಲೇ ದಿನಾಂಕ ನಿಗದಿ

ಕೃಷಿ ವಿ.ವಿ: 10 ಹೊಸ ತಳಿಗಳ ಅಭಿವೃದ್ಧಿ

• ಮನೋಹರ್ ಎಂ.

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ರೈತರಿಗಾಗಿ ಈ ಬಾರಿ 10 ಹೊಸ ತಳಿಗಳನ್ನು ಹೊರತಂದಿದೆ. ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ (ಜಿಕೆವಿಕೆ) 'ಕೃಷಿ ಮೇಳ'ಕ್ಕೆ ಭರದ ಸಿದ್ಧತೆ ನಡೆಯುತ್ತಿದ್ದು, ಹೊಸ ತಳಿಗಳನ್ನು ಪ್ರಾತ್ಯಕ್ಷಿಕೆಗಳ ಮೂಲಕ ರೈತರು ಮೇಳದಲ್ಲಿ ವೀಕ್ಷಿಸಬಹುದು.

ಕಳೆದ ವರ್ಷವೂ ಕೋವಿಡ್ ಪರಿಸ್ಥಿತಿ ಇದ್ದಿದ್ದರಿಂದ ಕೃಷಿ ಮೇಳವನ್ನು ಆನ್‌ಲೈನ್ ಮತ್ತು ಭೌತಿಕವಾಗಿ ಹಮ್ಮಿಕೊಂಡು ನಿಗದಿತ ಸಂಖ್ಯೆಯ ಜನರಿಗೆ ಮಾತ್ರ ಭೌತಿಕವಾಗಿ ಪ್ರವೇಶ ಕಲ್ಪಿಸಲಾಗಿತ್ತು. ಕೋವಿಡ್ ಮೂರನೇ ಅಲೆಯ ಬಗ್ಗೆ ತಜ್ಞರು ಮುನ್ನೆಚ್ಚರಿಕೆ ನೀಡಿರುವುದರಿಂದ ಈ ಬಾರಿಯ ಮೇಳ ಆಯೋಜನೆಗೂ ಅಡ್ಡಿಯಾಗಿದೆ.

'ಕಳೆದ ವರ್ಷಗಳಲ್ಲಿ ಅಭಿವೃದ್ಧಿಪಡಿಸಿರುವ ತಳಿಗಳಿಗೆ ಹೋಲಿಸಿದರೆ, ಈ ವರ್ಷ ಸುಧಾರಿತ ತಳಿಗಳನ್ನು ಹೊರತಂದಿದ್ದೇವೆ. ರೈತರಿಗೆ ಹೆಚ್ಚು ಅನುಕೂಲಕರವಾದ 10 ನೂತನ ತಳಿಗಳನ್ನು ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿದೆ' ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್. ರಾಜೇಂದ್ರ ಪ್ರಸಾದ್ 'ಪ್ರಜಾವಾಣಿ'ಗೆ ತಿಳಿಸಿದರು.



ಕಬ್ಬಿನ ಹೊಸ ತಳಿ

'ಈ ಎಲ್ಲ ತಳಿಗಳು ಹಿಂದಿನ ತಳಿಗಳಿಗಿಂತ ಶೇ 10ರಷ್ಟು ಹೆಚ್ಚು ಇಳುವರಿ ನೀಡುವ ಸಾಮರ್ಥ್ಯ ಹೊಂದಿದ್ದು, ರೋಗಗಳಿಗೆ ಹೆಚ್ಚು ತುತ್ತಾಗುವುದಿಲ್ಲ. ಈ ತಳಿಗಳನ್ನು ಬೆಳೆಯುವುದರಿಂದ ರೈತರಿಗೆ ಸಮಸ್ಯೆಗಳು ಕಡಿಮೆ ಮತ್ತು ಹೆಚ್ಚು ಲಾಭ ಪಡೆಯಬಹುದು. ಬೇಸಾಯ ಪದ್ಧತಿಯ 28 ಹೊಸ ತಾಂತ್ರಿಕತೆಗಳನ್ನೂ ಈ ಬಾರಿ ಪರಿಚಯಿಸಲಾಗಿದೆ' ಎಂದರು.

ತಳಿಗಳ ವಿಶೇಷ: ಹೆಚ್ಚು ಇಳುವರಿ ಮತ್ತು ಬೆಂಕಿರೋಗ ನಿರೋಧಕ ಶಕ್ತಿಯುಳ್ಳ ಭತ್ತದ ಎರಡು ತಳಿಗಳು, ಬುಡಕೊಳೆ ರೋಗ ನಿರೋಧಕತೆ ಹೊಂದಿರುವ ರಾಗಿ, ತುಕ್ಕು ಮತ್ತು ಎಲೆ ಅಂಗಮಾರಿ ರೋಗಗಳಿಂದ ಪಾರಾಗಬಲ್ಲ ನವಣೆ, ಕಂದು ಚುಕ್ಕೆ ರೋಗ ತಡೆಯಬಲ್ಲ ಸಾಮೆ ಮತ್ತು ಬರಗು ತಳಿಗಳು, ಹೂ ಗೊಂಚಲು ಗೋಳಾಕಾರದಿಂದ ಕೂಡಿರುವ ಬೀಜದ ದಂಟು, ಸ್ವಯಂ ಗರಿ ಕಳಚುವ ಹಾಗೂ ಬೆಲ್ಲ ತಯಾರಿಗೆ ಯೋಗ್ಯವಾದ ಕಬ್ಬು, ಉತ್ತಮ ಮೇವಿನ ಜೀರ್ಣತೆ ಗುಣಗಳನ್ನು ಹೊಂದಿರುವ ಮೇವಿನ ತೋಕೆ ಹೆಸರಿನ ಗೋಧಿ, ಕಡಿಮೆ ಅಂಟು ಪ್ರಮಾಣ ಮತ್ತು ಹೆಚ್ಚು ಸಕ್ಕರೆ ಅಂಶ ಹೊಂದಿರುವ 'ಬೈರಚಂದ್ರ' ಹೆಸರಿನ ಹಲಸು.

'ಭೌತಿಕ–ಆನ್‌ಲೈನ್ ಮೇಳ'ಕ್ಕೆ ಚಿಂತನೆ

'ಕೃಷಿ ಮೇಳ'ಕ್ಕೆ ಎಲ್ಲ ಸಿದ್ಧತೆಗಳು ಪ್ರಗತಿಯಲ್ಲಿವೆ. ಬೆಳೆಗಳ ಪ್ರದರ್ಶನ ತಾಕುಗಳೂ ಸಿದ್ಧಗೊಂಡಿವೆ. ಮೂರನೇ ಅಲೆಯ ಮುನ್ಸೂಚನೆ ಇರುವುದರಿಂದ ಆನ್‌ಲೈನ್ ವೇದಿಕೆ ಮತ್ತು ಭೌತಿಕವಾಗಿ ಎರಡೂ ರೀತಿಯಲ್ಲಿ ಮೇಳ ಆಯೋಜಿಸಲು ಚಿಂತನೆ ನಡೆಸಲಾಗಿದೆ' ಎಂದು ಎಸ್.ರಾಜೇಂದ್ರ ಪ್ರಸಾದ್ ತಿಳಿಸಿದರು.



ರಾಜೇಂದ್ರ ಪ್ರಸಾದ್

'ಅಕ್ಟೋಬರ್ ಕೊನೆಯ ವಾರ ಅಥವಾ ನವೆಂಬರ್ ಮೊದಲ ವಾರದಲ್ಲಿ ಮೇಳ ಆಯೋಜಿಸಲು ನಿರ್ಧರಿಸಲಾಗಿದೆ. ಕೋವಿಡ್ ಪರಿಸ್ಥಿತಿ ನಿಯಂತ್ರಣದಲ್ಲಿದ್ದರೆ ಭೌತಿಕವಾಗಿ ಎಂದಿನಂತೆ ಮೇಳ ನಡೆಯಲಿದೆ. ಪರಿಸ್ಥಿತಿ ಬಿಗಡಾಯಿಸಿದರೆ, ಆನ್‌ಲೈನ್ ವೇದಿಕೆಯಲ್ಲಿ 'ಕೃಷಿ ಮೇಳ' ವೀಕ್ಷಣೆಗೆ ವ್ಯವಸ್ಥೆ ಮಾಡಲಾಗುವುದು' ಎಂದರು.



'ಬೈರಚಂದ್ರ' ತಳಿಯ ಹಲಸು

ಹೊಸ ತಳಿಗಳು

- ಭತ್ತ (ಕೆಎಂಪಿ-220 ಮತ್ತು ಎಂಎಸ್‌ಎನ್-99)
- ರಾಗಿ (ಕೆಎಂಆರ್-316)
- ನವಣೆ (ಜಿಪಿಯುಎಫ್-3)
- ಸಾಮೆ (ಜಿಪಿಯುಎಲ್-6)
- ಬರಗು (ಜಿಪಿಯುಪಿ-28)
- ಬೀಜದ ದಂಟು (ಕೆಬಿಜಿಎ-15)
- ಕಬ್ಬು (ಸಿಒವಿಸಿ-18061)
- ಹಲಸು (ಬೈರಚಂದ್ರ)
- ಮೇವಿನ ತೋಕೆಗೋಧಿ (ಆರ್‌ಒ-11-1)

ಸುದ್ದಿ 2 ನಿಮಿಷ

ಕಾಂಗ್ರೆಸ್ ಚಾಲಕರ ಘಟಕ ಆರಂಭ: ಡಿ.ಕೆ. ಶಿವಕುಮಾರ್

ಬೆಂಗಳೂರು: ವಾಹನ ಚಾಲಕರಿಗೆ ಸಮಾಜದಲ್ಲಿ ಗೌರವಯುತ ಸ್ಥಾನಮಾನ ನೀಡಲು ಮತ್ತು ಅವರ ಸಮಸ್ಯೆಗಳಿಗೆ ಧ್ವನಿಯಾಗುವ ಉದ್ದೇಶದಿಂದ ಕಾಂಗ್ರೆಸ್ ಪಕ್ಷದಲ್ಲಿ ಚಾಲಕರ ಘಟಕ ಆರಂಭಿಸಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಆಟೊ, ಟ್ಯಾಕ್ಸಿ, ಓಲಾ, ಉಬರ್, ಬಸ್, ಲಾರಿ ಸೇರಿದಂತೆ ವಿವಿಧ ಚಾಲಕರ ಸಂಘಟನೆಗಳ ಪದಾಧಿಕಾರಿಗಳ ಜತೆ ಶುಕ್ರವಾರ ಸಭೆ ನಡೆಸಿದ ಅವರು, 'ರಾಜ್ಯದಲ್ಲಿ 41 ಲಕ್ಷ ಜನರು ಚಾಲಕ ವೃತ್ತಿಯಲ್ಲಿ ದುಡಿಯುತ್ತಿದ್ದಾರೆ. ಅವರಲ್ಲಿ 25 ಲಕ್ಷ ಜನರು ಕಾರ್ಮಿಕ ಇಲಾಖೆಯಲ್ಲಿ ನೋಂದಣಿ ಮಾಡಿಸಿದ್ದಾರೆ. ಆದರೆ, ಕೇವಲ 8.25 ಲಕ್ಷ ಮಂದಿ ಚಾಲಕರು ಇದ್ದಾರೆ ಎಂದು ರಾಜ್ಯ ಸರ್ಕಾರ ಸುಳ್ಳು ಹೇಳುತ್ತಿದೆ' ಎಂದರು.

ಪ್ರದೇಶ ಕಾಂಗ್ರೆಸ್ ಸಮಿತಿಯ ಅಡಿಯಲ್ಲಿ ಚಾಲಕರ ಘಟಕ ಆರಂಭಿಸುವಂತೆ ಹಿರಿಯ ನಾಯಕರಾದ ಆಸ್ಕರ್ ಫರ್ನಾಂಡಿಸ್ ಸಲಹೆ ನೀಡಿದ್ದರು. ಅದರಂತೆ ರಾಜ್ಯದ ಎಲ್ಲ ಜಿಲ್ಲೆಗಳ ಚಾಲಕರನ್ನೂ ಒಳಗೊಂಡ ನೂತನ ಚಾಲಕರ ಘಟಕ ಆರಂಭಿಸಲಾಗುವುದು. ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕನಿಷ್ಠ 100 ಮಂದಿ ಚಾಲಕರನ್ನು ಸದಸ್ಯರನ್ನಾಗಿ ನೋಂದಣಿ ಮಾಡಲಾಗುವುದು ಎಂದು ತಿಳಿಸಿದರು.



'ಚಾಲಕ ವೃತ್ತಿಯಲ್ಲಿ ಇರುವವರು ಧರ್ಮ, ಜಾತಿಯ ತಾರತಮ್ಯ ಇಲ್ಲದೇ ಸಮಾಜಕ್ಕಾಗಿ ದುಡಿಯುತ್ತಾರೆ. ಚಾಲಕರ ನೋವುಗಳಿಗೆ ಧ್ವನಿಯಾಗುವುದು ನಮ್ಮ ಉದ್ದೇಶ' ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಸೇರಿದಂತೆ ಹಲವು ಮುಖಂಡರು ಸಭೆಯಲ್ಲಿದ್ದರು.

'681 ವಿದೇಶಿಯರು ನಾಪತ್ತೆ'

ಬೆಂಗಳೂರು: 'ವಿದ್ಯಾಭ್ಯಾಸ, ಉದ್ಯೋಗ ಸೇರಿ ಹಲವು ಉದ್ದೇಶಕ್ಕಾಗಿ ನಗರಕ್ಕೆ ಬಂದಿದ್ದ ವಿದೇಶಿಯರ ಪೈಕಿ 681 ಮಂದಿ ನಾಪತ್ತೆಯಾಗಿದ್ದಾರೆ' ಎಂದು ಕಮಿಷನರ್ ಕಮಲ್ ಪಂತ್ ಹೇಳಿದರು.

ನಗರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಾಪತ್ತೆಯಾದವರ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ' ಎಂದರು.

'ಜೆ.ಸಿ.ನಗರ ಠಾಣೆಯಲ್ಲಿ ನಡೆದ ಘಟನೆ ಬಗ್ಗೆ ಸಿಐಡಿ ತನಿಖೆ ನಡೆಸುತ್ತಿದೆ. ಕೆಲ ವಿದೇಶಿಯರು, ಡ್ರಗ್ಸ್ ಮಾರಾಟ ಹಾಗೂ ಅಕ್ರಮ ಚಟುವಟಿಕೆಯಲ್ಲಿ ತೊಡಗಿರುವ ಮಾಹಿತಿ ಇದೆ.'

'ವಿದೇಶಿಯರಿಗೆ ಬಾಡಿಗೆ ಮನೆ ನೀಡುವ ಮುನ್ನ ಮಾಲೀಕರು ವಿಚಾರಿಸಬೇಕು. ತಮ್ಮ ಮನೆಯಲ್ಲಿರುವ ವಿದೇಶಿಯರ ಬಗ್ಗೆ ಸಮೀಪದ ಠಾಣೆಗೆ ಮಾಹಿತಿ ನೀಡಬೇಕು. ವಿದೇಶಿಯರು ಅಪರಾಧ ಎಸಗಿ ಸಿಕ್ಕಿಬಿದ್ದರೆ ಮಾಲೀಕರ ವಿರುದ್ಧವೂ ಕ್ರಮ ಕೈಗೊಳ್ಳಲಾಗುವುದು' ಎಂದೂ ಹೇಳಿದರು.

ಕಿರುಕುಳ: ಗ್ರಾಮ ಪಂಚಾಯಿತಿ ಅಧ್ಯಕ್ಷೆ ಆತ್ಮಹತ್ಯೆಗೆ ಯತ್ನ

ಕೋಲಾರ: ತಾಲ್ಲೂಕಿನ ಕೊಂಡರಾಜನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪುಷ್ಪಾ ಅವರು ಶುಕ್ರವಾರ ಆತ್ಮಹತ್ಯೆಗೆ ಯತ್ನಿಸಿದ್ದು, ಜಾಲಪ್ಪ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮನೆಯಲ್ಲಿ ನಿದ್ದೆ ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿ ಅಸ್ವಸ್ಥರಾಗಿದ್ದ ಅವರನ್ನು ಕುಟುಂಬ ಸದಸ್ಯರು ಕೂಡಲೇ ಆಸ್ಪತ್ರೆಗೆ ದಾಖಲಿಸಿದ್ದಾರೆ. ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಪುಷ್ಪಾ ಅವರ ದೇಹಸ್ಥಿತಿ ಗಂಭೀರವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ನಾಗೇಶ್ ಹಾಗೂ ಸದಸ್ಯ ವಿಜಯ್‌ಕುಮಾರ್ ಅವರ ಕಿರುಕುಳದಿಂದ ಬೇಸರಗೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ' ಎಂದು ಪುಷ್ಪಾ ಅವರು ಆತ್ಮಹತ್ಯೆಗೆ ಯತ್ನಿಸುವುದಕ್ಕೂ ಮುನ್ನ ಪತ್ರ ಬರೆದಿಟ್ಟಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.



ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಪಂಚಾಯಿತಿ ಅಧ್ಯಕ್ಷೆ ಪುಷ್ಪಾ

ನಾಗೇಶ್ ಮತ್ತು ವಿಜಯ್‌ಕುಮಾರ್ ವಿರುದ್ಧ ಕೋಲಾರ ಗ್ರಾಮಾಂತರ ಠಾಣೆ ಪೊಲೀಸರು ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

₹6 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಕಡೆ ಶುಕ್ರವಾರ ಕಾರ್ಯಾಚರಣೆ ನಡೆಸಿರುವ ಸಿಸಿಬಿ ಪೊಲೀಸರು, ₹6 ಕೋಟಿ ಮೌಲ್ಯದ ಮಾದಕ ವಸ್ತು ಜಪ್ತಿ ಮಾಡಿದ್ದಾರೆ. ಈ ಸಂಬಂಧ ನಾಲ್ವರನ್ನು ಬಂಧಿಸಿದ್ದಾರೆ.

'ಅಸ್ಸಾಂನ ನಬರನ್ ಚಕ್ಮಾ (30), ಆಂಧ್ರಪ್ರದೇಶದ ಮೊಬಿನ್ ಬಾಬು (32), ಬೆಂಗಳೂರಿನ ರೋಲ್ಯಾಂಡ್ ರೋಡ್ನಿ ರೋಜರ್ (26) ಮತ್ತು ತಮಿಳುನಾಡಿನ ತರುಣ್ ಕುಮಾರ್ ಲಾಲ್‌ಚಂದ್ (40) ಬಂಧಿತರು. ಅವರಿಂದ 15 ಕೆ.ಜಿ ಹಶೀಶ್, 11 ಕೆ.ಜಿ ಗಾಂಜಾ, 530 ಗ್ರಾಂ ಚರಸ್, ನಾಲ್ಕು ಹೈಡ್ರೋ ಗಾಂಜಾ ಸಸಿಗಳನ್ನು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಆರೋಪಿಗಳು ನಗರದ ಹಲವು ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ವಾಸವಾಗಿದ್ದುಕೊಂಡು ಮಾದಕ ವಸ್ತುಗಳನ್ನು ಗ್ರಾಹಕರಿಗೆ ಪೂರೈಕೆ ಮಾಡುತ್ತಿದ್ದರು. ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಖಾಸಗಿ ಕಂಪನಿ ಉದ್ಯೋಗಿಗಳೇ ಗ್ರಾಹಕರಾಗಿದ್ದರು.'

'ಹೆಣ್ಣೂರು ಹಾಗೂ ರಾಮಮೂರ್ತಿನಗರ ಠಾಣೆ ವ್ಯಾಪ್ತಿಗಳಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ. ಆರೋಪಿಗಳ ಜೊತೆಯಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿರುವ ಮಾಹಿತಿ ಇದೆ' ಎಂದೂ ಪೊಲೀಸರು ಹೇಳಿದರು.

ನೈಜೀರಿಯಾ ಪ್ರಜೆ ಬಂಧನ: ನಗರದಲ್ಲಿ ಅಕ್ರಮವಾಗಿ ನೆಲೆಸಿ ಡ್ರಗ್ಸ್ ಮಾರುತ್ತಿದ್ದ ನೈಜೀರಿಯಾ ಪ್ರಜೆ ಒನ್ಯಾಕ ಇಮ್ಯಾನುಲ್ ಜೇಮ್ಸ್ (31) ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಬೈಯಪ್ಪನಹಳ್ಳಿ ಠಾಣೆ ವ್ಯಾಪ್ತಿಯ ಹಳೇ ಮದ್ರಾಸ್ ರಸ್ತೆಯ ಸ್ವಾಮಿ ವಿವೇಕಾನಂದ ರಸ್ತೆ ಬಳಿ ಆರೋಪಿ ಡ್ರಗ್ಸ್ ಮಾರುತ್ತಿದ್ದ. ಅದೇ ವೇಳೆಯೇ ದಾಳಿ ಮಾಡಿ ಆತನನ್ನು ಬಂಧಿಸಲಾಗಿದೆ. ಆರೋಪಿಯ ವೀಸಾ ಹಾಗೂ ಪಾಸ್‌ಪೋರ್ಟ್ ಅವಧಿ ಮುಕ್ತಾಯವಾಗಿದೆ' ಎಂದೂ ವಿವರಿಸಿದರು.

ಡ್ರಗ್ಸ್ ಪ್ರಕರಣ ಭೇದಿಸಿದ ಸಿಸಿಬಿ ಪೊಲೀಸರ ತಂಡಕ್ಕೆ ನಗರದ ಪೊಲೀಸ್ ಕಮಿಷನರ್ ಅವರು ₹ 1 ಲಕ್ಷ ಬಹುಮಾನ ಘೋಷಿಸಿದ್ದಾರೆ.

ಲಾರಿ ಚಾಲಕನ ಬಂಧನ

'ಆಂಧ್ರಪ್ರದೇಶದಿಂದ ಗಾಂಜಾವನ್ನು ನಗರಕ್ಕೆ ತಂದು ಮಾರುತ್ತಿದ್ದ ತಮಿನ್ (43) ಎಂಬಾತನನ್ನು ಕಮರ್ಷಿಯಲ್ ಸ್ಟ್ರೀಟ್ ಪೊಲೀಸರು ಬಂಧಿಸಿದ್ದಾರೆ. ಆತನಿಂದ ₹ 2 ಲಕ್ಷ ಮೌಲ್ಯದ 8 ಕೆ.ಜಿ ಗಾಂಜಾ ಜಪ್ತಿ ಮಾಡಲಾಗಿದೆ.

'ಶಿವಾಜಿನಗರದ ತೊಪ್ಪ ಮೊದಲಿಯಾರ್ ರಸ್ತೆಯಲ್ಲಿರುವ ನಾಲಾ ಹತ್ತಿರ ಆರೋಪಿ ಗಾಂಜಾ ಮಾರಲು ಬಂದಿದ್ದ. ಅದೇ ವೇಳೆ ದಾಳಿ ಮಾಡಿ ಆತನನ್ನು ಸೆರೆಹಿಡಿಯಲಾಗಿದೆ' ಎಂದೂ ಸಿಸಿಬಿ ಅಧಿಕಾರಿ ಹೇಳಿದರು.

ಚಿತ್ರಾವಳಿ



ಬೆಂಗಳೂರಿನಲ್ಲಿ ಗುರುವಾರ ನಡೆದ ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ ಸಭೆಯಲ್ಲಿ ಅಭಿವೃದ್ಧಿ ಆಯುಕ್ತೆ ವಂದಿತಾ ಶರ್ಮ, ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಮತ್ತು ಸಮಿತಿಯ ಸಂಚಾಲಕ, ಕೆನರಾ ಬ್ಯಾಂಕ್‌ನ ಜನರಲ್ ಮ್ಯಾನೇಜರ್ ಬಿ. ಚಂದ್ರಶೇಖರ ರಾವ್ ಪಾಲ್ಗೊಂಡಿದ್ದರು.



ಸಂಜಯನಗರದ ಎಇಸಿಎಸ್ ಬಡಾವಣೆ ಹಾಗೂ ಹನುಮಯ್ಯ ಬಡಾವಣೆಗಳಲ್ಲಿ ಶಾಸಕರ ಅನುದಾನದ ₹1 ಕೋಟಿ ವೆಚ್ಚದಲ್ಲಿ ರಸ್ತೆ ಡಾಂಬರೀಕರಣ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಬೈರತಿ ಸುರೇಶ್ ಶುಕ್ರವಾರ ಚಾಲನೆ ನೀಡಿದರು. ಹೆಬ್ಬಾಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಾಲಾಜಿ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಇದ್ದರು.



ಒಕ್ಕಲಿಗರ ಸಂಘದ ಮಾಜಿ ಉಪಾಧ್ಯಕ್ಷ ಕೆ.ಮಲ್ಲಯ್ಯ, ಕೆಂಪೇಗೌಡ ಕೇಂದ್ರ ಸಮಿತಿ ಪ್ರಧಾನ ಕಾರ್ಯದರ್ಶಿ ಮರಿಮಲ್ಲಯ್ಯ, ಲೇಖಕ ಆಲೂರು ನಾಗಪ್ಪ, ಕೆಂಪೇಗೌಡ ಕೇಂದ್ರ ಸಮಿತಿಯ ಅಧ್ಯಕ್ಷ ಆರ್.ಅಶ್ವತ್, ಸಮಿತಿಯ ಎಂ.ಎನ್ ನರಸೇಗೌಡ, ಕೆ.ಎನ್.ಲಿಂಗೇಗೌಡ, ಎಚ್.ಎಸ್.ಚಂದ್ರಶೇಖರ್, ಎಂ.ಗೋಪಾಲ್, ಎಚ್.ಸಿ.ಕೃಷ್ಣ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸಂಕ್ಷಿಪ್ತ ಸುದ್ದಿ

ಎಚ್.ಎಸ್. ದೊರೆಸ್ವಾಮಿ ಅವರಿಗೆ ನಾಳೆ ಶ್ರದ್ಧಾಂಜಲಿ

ಬೆಂಗಳೂರು: ಕರ್ನಾಟಕ ಪ್ರಜಾಧಿಕಾರ ಹೋರಾಟ ಸಮಿತಿ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಹಯೋಗದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಅವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಆಗಸ್ಟ್ 8ರಂದು ಬೆಳಿಗ್ಗೆ 11 ಗಂಟೆಗೆ ಗಾಂಧಿಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ, 'ದೊರೆಸ್ವಾಮಿ ಅವರಿಗೆ ನುಡಿನಮನ ಕಾರ್ಯಕ್ರಮದಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್, ಕೆಪಿಸಿಸಿ ಉಪಾಧ್ಯಕ್ಷ ಬಿ.ಎಲ್.ಶಂಕರ್, ಬಿ.ಆರ್.ಪಾಟೀಲ, ಜೆಡಿಎಸ್ ಮುಖಂಡ ವೈ.ಎಸ್.ವಿ ದತ್ತ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ' ಎಂದರು.

ಆ.10ರವರೆಗೆ ಇ-ಕೆವೈಸಿ ದೃಢೀಕರಣ

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆಯ ಎಲ್ಲ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಚೀಟಿದಾರರ ಆಧಾರ್ ದೃಢೀಕರಣವನ್ನು (ಇ-ಕೆವೈಸಿ) ಉಚಿತವಾಗಿ ಮಾಡಲಾಗುತ್ತಿದೆ.

ಸಾರ್ವಜನಿಕರು ಇದೇ 10ರವರೆಗೆ ತಮ್ಮ ವ್ಯಾಪ್ತಿಯ ನ್ಯಾಯಬೆಲೆ ಅಂಗಡಿಗಳಿಗೆ ಭೇಟಿ ನೀಡಿ, ಆಧಾರ್ ನೋಂದಾಯಿಸಿಕೊಳ್ಳುವಂತೆ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಪ್ರಕಟಣೆ ತಿಳಿಸಿದೆ.

'ರಾಖಿ ಪೋಸ್ಟ್' ಆನ್‌ಲೈನ್ ಸೇವೆ

ಬೆಂಗಳೂರು: ಅಂಚೆ ಇಲಾಖೆಯು 'ರಕ್ಷಾ ಬಂಧನ'ದ ಅಂಗವಾಗಿ ಸಹೋದರರು ಹಾಗೂ ಯೋಧರಿಗೆ ರಾಖಿ ತಲುಪಿಸಲು 'ರಾಖಿ ಪೋಸ್ಟ್' ಎಂಬ ಆನ್‌ಲೈನ್ ಸೇವೆ ಆರಂಭಿಸಿದೆ.

ವಿಶೇಷ ವಿನ್ಯಾಸದ ರಾಖಿಗಳನ್ನು ಅಂಚೆ ಇಲಾಖೆಯ ವೆಬ್‌ಸೈಟ್‌ನಲ್ಲೇ ಖರೀದಿಸಬಹುದು. ಅತ್ಯಾಕರ್ಷಕ ವಿನ್ಯಾಸದ ಲಕೋಟೆಯಲ್ಲಿ ಅರ್ಥಪೂರ್ಣ ಸಂದೇಶ ಸಹಿತವಾಗಿ ರಾಖಿಯನ್ನು ನಿಗದಿತ ವಿಳಾಸಗಳಿಗೆ ಇಲಾಖೆಯೇ ತಲುಪಿಸಲಿದೆ.

ರಾಖಿ ಪೋಸ್ಟ್‌ಗೆ ₹100 ಶುಲ್ಕ ನಿಗದಿಪಡಿಸಲಾಗಿದೆ. ಆಸಕ್ತರು http://karnatakapost.gov.in/rakhi-post ಅಥವಾ ಕರ್ನಾಟಕ ಅಂಚೆ ಇಲಾಖೆ ಅಂತರ್ಜಾಲ ಪುಟದಲ್ಲಿ 'ರಾಖಿ ಪೋಸ್ಟ್' ಲಿಂಕ್ ಮೂಲಕವೂ ಈ ಸೇವೆ ಲಭ್ಯವಿದೆ ಎಂದು ಪ್ರಕಟಣೆ ತಿಳಿಸಿದೆ.



ವಾಹನ ದಟ್ಟಣೆ

ಗೂಡ್ ಶೆಡ್ ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ನಿರ್ಬಂಧ ವಿಧಿಸಿರುವುದರಿಂದ ಎಸ್.ಜೆ.ಪಿ ರಸ್ತೆಯಲ್ಲಿ ಶುಕ್ರವಾರ ವಾಹನ ದಟ್ಟಣೆ ಉಂಟಾಗಿತ್ತು – ಪ್ರಜಾವಾಣಿ ಚಿತ್ರ

ವಾಹನ ಸಂಚಾರ ಮಾರ್ಗ ಬದಲಾವಣೆ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬಾಲಗಂಗಾಧರನಾಥ ಸ್ವಾಮೀಜಿ ಮೇಲ್ಸೇತುವೆಯ ಟೌನ್‌ಹಾಲ್ ಮಾರ್ಗದ ಎಸ್.ಜೆ.ಪಿ ರಸ್ತೆಯ ಜಂಕ್ಷನ್‌ನಲ್ಲಿ ಶನಿವಾರದಿಂದ (ಆ.7) ವೈಟ್ ಟಾಪಿಂಗ್ ಕಾಮಗಾರಿ ಪ್ರಾರಂಭವಾಗಲಿದೆ ಎಂದು ಬಿಬಿಎಂಪಿ ಹೇಳಿದೆ.

ಪಾಲಿಕೆಯ ವತಿಯಿಂದ ನಗರದ ಎನ್.ಆರ್ ರಸ್ತೆಯನ್ನು ಟೆಂಡರ್ ಶ್ಯೂರ್ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಕಾಮಗಾರಿ ನಡೆಯುವ ವೇಳೆ ಸಂಚಾರ ದಟ್ಟಣೆ ತಡೆಯುವ ನಿಟ್ಟಿನಲ್ಲಿ, ಕೆ.ಆರ್ ಮಾರುಕಟ್ಟೆ ಮೇಲ್ಸೇತುವೆ ರಸ್ತೆಯ ಮೂಲಕ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಹೇಳಿದ್ದಾರೆ.

ನಗರದ ಗೂಡ್ ಶೆಡ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಿರ್ವಹಿಸುವ ಸಂಬಂಧ ಗೂಡ್ ಶೆಡ್ ರಸ್ತೆಯಲ್ಲಿ ಸಂಚಾರವನ್ನು ನಿರ್ಬಂಧಿಸಿ ಎಲ್ಲ ವಾಹನಗಳನ್ನು ಮೇಲ್ಸೇತುವೆಯ ಮೂಲಕ ಮಾರುಕಟ್ಟೆ ಮತ್ತು ಟೌನ್‌ಹಾಲ್ ಕಡೆಗೆ ಸಂಚಾರ ಬದಲಾವಣೆ ಮಾಡಲಾಗಿತ್ತು. ಆದರೆ, ಎಸ್.ಜೆ.ಪಿ ರಸ್ತೆಯ ಜಂಕ್ಷನ್ ಹತ್ತಿರ ಮಳೆಯಾದರೆ ನೀರು ನಿಲ್ಲುವ ಸಾಧ್ಯತೆ ಇರುವುದರಿಂದ ಅಡ್ಡಮೋರಿಯನ್ನು ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

15 ದಿನದೊಳಗೆ ಕಾಮಗಾರಿ ಪೂರ್ಣ: ಕಾಮಗಾರಿಯನ್ನು 15 ದಿನದೊಳಗೆ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ. ಇದು ಪೂರ್ಣಗೊಂಡ ಬಳಿಕ ಗೂಡ್ ಶೆಡ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತದೆ. ಕಾಮಗಾರಿ ಸಮಯದಲ್ಲಿ ಸಾರ್ವಜನಿಕರು ಹಾಗೂ ವಾಹನ ಸವಾರರು ಸಹಕರಿಸಬೇಕು ಎಂದು ಬಿಬಿಎಂಪಿ ಹೇಳಿದೆ.

ವಿದ್ಯುತ್ ವ್ಯತ್ಯಯ ಇಂದಿನಿಂದ

ಬೆಂಗಳೂರು: ತುರ್ತು ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 7ರಿಂದ 15ರವರೆಗೆ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

7: ಸರ್ಜಾಪುರ, ಇಟ್ಟಂಗೂರು, ಹಂದೇನಹಳ್ಳಿ, ಕೋತಗಾನಹಳ್ಳಿ, ಬಿ. ಹೊಸಹಳ್ಳಿ, ಬಿಕ್ಕನಹಳ್ಳಿ, ಆದಿಗೊಂಡನಹಳ್ಳಿ, ಬೆಂಡಿಗಾನಹಳ್ಳಿ, ಸೊಳ್ಳೆಪುರ, ಬಿದರುಗುಪ್ಪೆ, ನರಸಾಪುರ, ಹರೆನೂರು, ಸಿಲ್ಕ್‌ಫಾರಂ, ಅಡಿಗರ ಕಲ್ಲಹಳ್ಳಿ, ಎಸ್. ಮೇಡಹಳ್ಳಿ, ಸುಲ್ತಾನ್ ಪಾಳ್ಯ, ಬಿಲ್ಲಾಪುರ, ಬುರುಗುಂಟೆ, ತಿಂಡ್ಲು, ಮುಗಳೂರು.

8: ಸಿಟಿ ಮಾರುಕಟ್ಟೆ, ಅವೆನ್ಯೂ ರಸ್ತೆ, ಬಿ.ವಿ.ಕೆ. ಅಯ್ಯಂಗಾರ್ ರಸ್ತೆ, ಆರ್.ಟಿ. ರಸ್ತೆ, ಸಿ.ಟಿ. ರಸ್ತೆ, ಚಿಕ್ಕಪೇಟೆ, ನಗರ್ತಪೇಟೆ, ಎಸ್.ಪಿ. ರಸ್ತೆ, ಪುರಭವನ, ಜೆ.ಸಿ. ರಸ್ತೆ, ಮಿನರ್ವ ವೃತ್ತ, ಕೆ.ಜಿ. ರಸ್ತೆ, ಗಾಂಧಿ ನಗರ, ಮಸೀದಿ, ಮೈಸೂರು ರಸ್ತೆ ಪೊಲೀಸ್ ಕ್ವಾರ್ಟರ್ಸ್, ಗೋರಿಪಾಳ್ಯ, ಬಿನ್ನಿಪೇಟೆ, ಹೊಸತರಗುಪೇಟೆ, ಚಾಮರಾಜಪೇಟೆ, ಎ.ಎಂ. ರಸ್ತೆ, ಕಲಾಸಿಪಾಳ್ಯ, ವಿಕ್ಟೋರಿಯಾ ಆಸ್ಪತ್ರೆ, ಕಿಮ್ಸ್, ಶಂಕರಪುರ, ವೈದ್ಯಕೀಯ ಕಾಲೇಜು, ಎಸ್.ಜೆ. ಪಾರ್ಕ್.

9ರಿಂದ 15: ಜೆ.ಪಿ. ನಗರ, ಕೆ.ಆರ್. ಬಡಾವಣೆ, ಪುಟ್ಟೇನಹಳ್ಳಿ ಕೆರೆ, ಇಂಚರ ಹೋಟೆಲ್ ಹಿಂಭಾಗ, ಅಷ್ಟಲಕ್ಷ್ಮಿ ಬಡಾವಣೆ, ಅಶ್ವತ್ಥನಾರಾಯಣ ಬಡಾವಣೆ, ಅಣ್ಣಯ್ಯ ರೆಡ್ಡಿ ಬಡಾವಣೆ, ಕಾವೇರಿ ನಗರ, ವಿವೇಕಾನಂದ ನಗರ, ಕತ್ರಿಗುಪ್ಪೆ ಮುಖ್ಯರಸ್ತೆ, ಬನಶಂಕರಿ ಮೂರನೇ ಹಂತ, ಆರ್.ಆರ್. ನಗರ, ಪದ್ಮನಾಭ ನಗರ, ಸಿದ್ಧಯ್ಯ ರಸ್ತೆ, ನಾಗಾರ್ಜುನ ಎನ್‌ಕ್ಲೇವ್, ಸಿಂಧೂರ ಕಲ್ಯಾಣ ಮಂಟಪ, ಜರಗನಹಳ್ಳಿ, ಭುವನೇಶ್ವರಿ ನಗರ, ಇಟ್ಟಮಡು, ಕೆಇಬಿ ಬಡಾವಣೆ, ರಾಮ್ ರಾವ್ ಬಡಾವಣೆ, ಅರೆಹಳ್ಳಿ, ಸುಧಾಮ ನಗರ, ಅಯೋಧ್ಯ ನಗರ, ಕಾಮಾಕ್ಯ ಬಡಾವಣೆ, ಕೃಷ್ಣಪ್ಪ ಬಡಾವಣೆ, ಸಾರ್ವಭೌಮ ನಗರ, ಆರ್‌ಬಿಐ ಬಡಾವಣೆ, ಶ್ರೀನಿಧಿ ಬಡಾವಣೆ, ರಿಲಯನ್ಸ್ ಕ್ಲಬ್, ವೆಂಕಟಾದ್ರಿ ಬಡಾವಣೆ, ಗುರುರಾಜ ಬಡಾವಣೆ, ಎಸ್‌ಬಿಎಂ ರಸ್ತೆ ಹಾಗೂ ಕರ್ನಾಟಕ ಬ್ಯಾಂಕ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

₹ 26 ಲಕ್ಷ ಮೌಲ್ಯದ 250 ಮೊಬೈಲ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಬೈಲ್ ಕಳವು ಮಾಡುತ್ತಿದ್ದ ಆರೋಪದಡಿ ಮೂವರನ್ನು ಕಲಾಸಿಪಾಳ್ಯ ಪೊಲೀಸರು ಬಂಧಿಸಿದ್ದಾರೆ.

'ಆಂಧ್ರಪ್ರದೇಶ ಅನಂತಪುರದ ಜಿಲ್ಲೆಯ ರಾಜು (35), ಕೇರಳದ ತಿರುವನಂತಪುರದ ನಿಸಾಮುದ್ದೀನ್ (40) ಮತ್ತು ಹೈದರಾಬಾದ್‌ನ ಮೊಹಮ್ಮದ್ ರಫಿ (30) ಬಂಧಿತರು. ಅವರಿಂದ ₹ 26 ಲಕ್ಷ ಮೌಲ್ಯದ 250 ಮೊಬೈಲ್‌ಗಳು ಹಾಗೂ ಒಂದು ಕಾರು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಕಲಾಸಿಪಾಳ್ಯದ ಎ.ವಿ.ರಸ್ತೆಗೆ ಬಂದಿದ್ದ ಆರೋಪಿಗಳು ಕಾರಿನೊಳಗೆ ಮೊಬೈಲ್‌ಗಳನ್ನು ಇಟ್ಟುಕೊಂಡಿದ್ದರು. ಅವುಗಳನ್ನು ಕೇರಳದ ವ್ಯಕ್ತಿಯೊಬ್ಬನಿಗೆ ಮಾರಾಟ ಮಾಡಲು ಕಾಯುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದೂ ತಿಳಿಸಿದರು.



ಜಪ್ತಿ ಮಾಡಲಾದ ಮೊಬೈಲ್‌ಗಳ ಜೊತೆ ಪೊಲೀಸರ ತಂಡ

'ಆರೋಪಿ ರಾಜು, ಆಂಧ್ರಪ್ರದೇಶದಲ್ಲಿ ಬಾಳೆಮಂಡಿಯಲ್ಲಿ ಕೆಲಸ ಮಾಡುತ್ತಿದ್ದ. ಆರು ತಿಂಗಳ ಹಿಂದೆ ಬೆಂಗಳೂರಿಗೆ ಬಂದಿರುವ ಆರೋಪಿ, ಇಲ್ಲಿಯೇ ಬಾಡಿಗೆ ಮನೆಯಲ್ಲಿ ವಾಸವಾಗಿದ್ದ. ಇತರೆ ಆರೋಪಿಗಳ ಜೊತೆ ಸೇರಿ ಜನರನ್ನು ಸುಲಿಗೆ ಮಾಡಲಾರಂಭಿಸಿದ್ದ.'

'ರಸ್ತೆಯಲ್ಲಿ ಒಬ್ಬಂಟಿಯಾಗಿ ನಡೆದುಕೊಂಡು ಹೋಗುತ್ತಿದ್ದವರು ಹಾಗೂ ವಾಯುವಿಹಾರ ಮಾಡುತ್ತಿದ್ದವರನ್ನು ಗುರಿಯಾಗಿಸಿಕೊಂಡು ಆರೋಪಿಗಳು ಕೃತ್ಯ ಎಸಗುತ್ತಿದ್ದರು. ಕದ್ದ ಮೊಬೈಲ್‌ಗಳನ್ನು ಪರಿಚಯಸ್ಥರ ಮೂಲಕ ಮಾರುತ್ತಿದ್ದರು. ಬಂದ ಹಣದಲ್ಲಿ ಐಷಾರಾಮಿ ಜೀವನ ನಡೆಸುತ್ತಿದ್ದರು' ಎಂದೂ ಪೊಲೀಸರು ಹೇಳಿದರು.

ಒತ್ತುವರಿ ತೆರವು: ಪ್ರತಿಭಟನೆ

ರಾಜರಾಜೇಶ್ವರಿನಗರ: ಮಾಗಡಿ ರಸ್ತೆಯ ಶ್ರೀಗಂಧಕಾವಲ್‌ನ ಒಕ್ಕಲಿಗರ ಸಂಘದ ಶಾಲೆಗೆ ಹೊಂದಿಕೊಂಡಂತಿರುವ ಜಾಗವನ್ನು ಏಕಾಏಕಿ ತೆರವುಗೊಳಿಸಲು ಮುಂದಾಗಿರುವ ಸರ್ಕಾರದ ಕ್ರಮವನ್ನು ಖಂಡಿಸಿ ಅಖಿಲ ಕರ್ನಾಟಕ ಒಕ್ಕಲಿಗರ ಮಹಾಪರಿಷತ್ತು ಮತ್ತು ಒಕ್ಕಲಿಗರ ಜಾಗೃತಿ ಸೇನೆ ವತಿಯಿಂದ ಪ್ರತಿಭಟನೆ ನಡೆಯಿತು.

ಒಕ್ಕಲಿಗರ ಸಂಘದ ಮಾಜಿ ಉಪಾಧ್ಯಕ್ಷ ಕೆ.ಮಲ್ಲಯ್ಯ ಪ್ರತಿಭಟನೆಯಲ್ಲಿ ಮಾತನಾಡಿ 'ಒಕ್ಕಲಿಗರ ಸಂಘಕ್ಕೆ ನೋಟಿಸ್ ಮತ್ತು ಸೂಚನೆ ನೀಡದೆ ಜಾಗ ತೆರವುಗೊಳಿಸಿರುವುದು ಖಂಡನೀಯ' ಎಂದರು.

'1967 ರಲ್ಲಿ ಎಂ.ವಿ.ಕೃಷ್ಣಪ್ಪ ಕಂದಾಯ ಸಚಿವರಾಗಿದ್ದಾಗ 15 ಎಕರೆ ಮತ್ತು 10 ಎಕರೆ ಗುತ್ತಿಗೆ ಎಂದು ನಮೂದಿಸಿ ಒಟ್ಟು 25 ಎಕರೆಯನ್ನು ರಾಜ್ಯ ಒಕ್ಕಲಿಗರ ಸಂಘಕ್ಕೆ ನೀಡಲಾಗಿತ್ತು. 54 ವರ್ಷಗಳ ಹಿಂದೆಯೇ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪನೆ ಮಾಡಿ 4 ಎಕರೆಯಲ್ಲಿ ಕಟ್ಟಡ ನಿರ್ಮಿಸಿ ಶಿಕ್ಷಣ ನೀಡುತ್ತಿದ್ದೇವೆ. ಗುತ್ತಿಗೆ ಅವಧಿ ಮುಗಿದಿದೆ ಎಂದು ಹೇಳಿ ಮಕ್ಕಳ ಶೌಚಾಲಯ ಹಾಗೂ ಮೈದಾನವನ್ನು ಕೆಡವಿ ತೊಂದರೆ ನೀಡುತ್ತಿದ್ದಾರೆ. ಸರ್ಕಾರಕ್ಕೆ ಈ ಜಮೀನಿನ ಮೇಲೆ ಯಾವುದಾದರೂ ಹಣದ ಸಂದಾಯವಾಗಬೇಕಾದರೆ ಒಕ್ಕಲಿಗರ ಸಂಘದ ವತಿಯಿಂದ ನೀಡಲು ತಯಾರಿದ್ದೇವೆ' ಎಂದರು.

ಅಪಘಾತ; ಚಾಲಕ, ಪ್ರಯಾಣಿಕರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಜಾಲ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಕಾರು–ಆಟೊ ನಡುವೆ ಅಪಘಾತ ಸಂಭವಿಸಿದ್ದು, ಆಟೊ ಚಾಲಕ ಹಾಗೂ ಇಬ್ಬರು ಪ್ರಯಾಣಿಕರು ಸಾವನ್ನಪ್ಪಿದ್ದಾರೆ.

'ಚಾಲಕ ಕಿರಣ್‌ಕುಮಾರ್ (26), ಪ್ರಯಾಣಿಕರಾದ ಅನ್ವರ್ ಹುಸೇನ್ (28), ರಾಹುಲ್ (21) ಮೃತರು. ಅಪಘಾತಕ್ಕೆ ಕಾರು ಚಾಲಕನ ನಿರ್ಲಕ್ಷ್ಯ ಕಾರಣವೆಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ. ಕಾರು ಸ್ಥಳದಲ್ಲೇ ಬಿಟ್ಟು ಆತ ಪರಾರಿಯಾಗಿದ್ದಾನೆ. ಆತನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಕಿರಣ್‌ಕುಮಾರ್ ಅವರು ಪ್ರಯಾಣಿಕರನ್ನು ಹತ್ತಿಸಿಕೊಂಡು ಶುಕ್ರವಾರ ಸಂಜೆ ಬೂದಿಗೆರೆ ಕಡೆಯಿಂದ ಬಾಗಲೂರು ಕಡೆಗೆ ಹೊರಟಿದ್ದರು. ಅದೇ ವೇಳೆಗೆ ಬಾಗಲೂರು ಕಡೆಯಿಂದ ಬೂದಿಗೆರೆ ಕಡೆಗೆ ಬರುತ್ತಿದ್ದ ಕಾರು (ಕೆಎ 51 ಎಂಎ2400), ಆಟೊಗೆ ಡಿಕ್ಕಿ ಹೊಡೆದಿತ್ತು. ಆಟೊ ಚಾಲಕ ಹಾಗೂ ಪ್ರಯಾಣಿಕರಿಬ್ಬರಿಗೆ ತೀವ್ರ ಪೆಟ್ಟಾಗಿ ಮೃತಪಟ್ಟಿದ್ದಾರೆ' ಎಂದೂ ತಿಳಿಸಿದರು.

ಪ್ರತಾಪಸಿಂಹ ವಿರುದ್ಧ ಶಾಸಕ ಅಪ್ಪಚ್ಚು ರಂಜನ್ ವಾಗ್ದಾಳಿ

ಮಡಿಕೇರಿ: 'ಕೊಡಗಿಗೆ ಅನ್ಯಾಯವಾಗಿದ್ದರೂ ಸಂಸದ ಪ್ರತಾಪಸಿಂಹ ಮೌನವಾಗಿದ್ದಾರೆ. ಅವರದ್ದು ಜಾಣ ಮೌನ. ಒತ್ತಡ ಹಾಕಬೇಕಿತ್ತು. ಲೋಕಸಭೆ ಚುನಾವಣೆ ವೇಳೆ ಎರಡು ವಿಧಾನಸಭಾ ಕ್ಷೇತ್ರಗಳಿಂದ 80 ಸಾವಿರ ಮತಗಳ ಲೀಡ್ ಕೊಡಿಸಿದ್ದೆವು. ಅವರ ಮೌನ ಬೇಸರ ತರಿಸಿದೆ' ಎಂದು ಶಾಸಕ ಅಪ್ಪಚ್ಚು ರಂಜನ್ ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ಜಿಲ್ಲಾವಾರು ಹಾಗೂ ಸಾಮಾಜಿಕ ನ್ಯಾಯದ ಪ್ರಕಾರ ಸಚಿವ ಸ್ಥಾನ ಸಿಗುವ ನಿರೀಕ್ಷೆಯಿತ್ತು. ಆದರೆ, ಹಿರಿಯರನ್ನು ವರಿಷ್ಠರು ಕಡೆಗಣಿಸಿದ್ದಾರೆ' ಎಂದು ಅಸಮಾಧಾನ ಹೊರಹಾಕಿದರು. 'ಕೆಲ ಜಿಲ್ಲೆಗಳಿಗೆ ಮೂರು ಸಚಿವ ಸ್ಥಾನ ನೀಡಲಾಗಿದೆ. ಇದು ಸರಿಯಾದ ಕ್ರಮವೇ' ಎಂದು ಪ್ರಶ್ನಿಸಿದರು.

ಮೆಟ್ರೊ: ರಾತ್ರಿ 8ರವರೆಗೆ ಸೇವೆ



ಬೆಂಗಳೂರು: ಕೋವಿಡ್ ಹರಡುವುದನ್ನು ತಡೆಯುವುದಕ್ಕಾಗಿ ರಾಜ್ಯ ಸರ್ಕಾರವು ರಾತ್ರಿ 9ರ ನಂತರ ಕರ್ಫ್ಯೂ ವಿಧಿಸಿರುವುದರಿಂದ, ನಗರದಲ್ಲಿ ಮೆಟ್ರೊ ರೈಲು ಸೇವೆ ರಾತ್ರಿ 8ರವರೆಗೆ ಮಾತ್ರ ಲಭ್ಯ ಇರಲಿದೆ ಎಂದು ಬಿಎಂಆರ್‌ಸಿಎಲ್ ಹೇಳಿದೆ.

ಎರಡೂ ಮಾರ್ಗದ ಕೊನೆಯ ನಿಲ್ದಾಣಗಳಾದ ಬೈಯಪ್ಪನಹಳ್ಳಿ, ರೇಷ್ಮೆ ಸಂಸ್ಥೆ, ನಾಗಸಂದ್ರ, ಮೈಸೂರು ರಸ್ತೆ ಹಾಗೂ ಕೆಂಪೇಗೌಡ (ಮೆಜೆಸ್ಟಿಕ್) ನಿಲ್ದಾಣದಿಂದ ರಾತ್ರಿ 9 ಗಂಟೆಯ ಬದಲು ರಾತ್ರಿ 8 ಗಂಟೆಗೆ ಕೊನೆಯ ರೈಲು ಹೊರಡಲಿದೆ. ಈ ಬದಲಾವಣೆ ಆ. 7ರಿಂದಲೇ ಜಾರಿಯಾಗಲಿದೆ ಎಂದು ಬಿಎಂಆರ್‌ಸಿಎಲ್ ಹೇಳಿದೆ.

ಕೋವಿಡ್ ಲಸಿಕೆ: ಸೌಮ್ಯ ಅಡ್ಡ ಪರಿಣಾಮ ಸಾಮಾನ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇತರ ಲಸಿಕೆಗಳಂತೆಯೇ ಕೋವಿಡ್ ಲಸಿಕೆ ಪಡೆದ ಬಳಿಕ ಕೂಡ ಜ್ವರ, ಮೈ–ಕೈ ನೋವು, ಲಸಿಕೆ ಪಡೆದ ಜಾಗದಲ್ಲಿ ಊತ ಸೇರಿದಂತೆ ಸೌಮ್ಯ ಅಡ್ಡ ಪರಿಣಾಮಗಳು ಕೆಲವರಿಗೆ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತದೆ' ಎಂದು ಆರೋಗ್ಯ ಇಲಾಖೆ ತಿಳಿಸಿದೆ.

'ಕೋವಿಡ್‌ನಿಂದ ಸಂಭವಿಸಬಹುದಾದ ತೀವ್ರ ಅನಾರೋಗ್ಯ ಹಾಗೂ ಸಾವನ್ನು ಲಸಿಕೆಯು ತಡೆಯುತ್ತದೆ. ಲಸಿಕೆ ಪಡೆದ ಬಳಿಕ ಮೊಬೈಲ್ ಸಂಖ್ಯೆಗೆ ಸಂದೇಶ ರವಾನೆಯಾಗದಿದ್ದಲ್ಲಿ ಆತಂಕ ಪಡಬೇಕಾದ ಅಗತ್ಯವಿಲ್ಲ. ಸಹಾಯವಾಣಿ ಸಂಖ್ಯೆ 104ಕ್ಕೆ ಕರೆ ಮಾಡಿ, ಲಸಿಕೆ ಪಡೆದ ಕೇಂದ್ರದ ಮಾಹಿತಿ ನೀಡಿದರೆ ಕೇಂದ್ರದ ಸಿಬ್ಬಂದಿ ಸಂಬಂಧಪಟ್ಟ ಜಿಲ್ಲೆಯ ನಿಯಂತ್ರಣ ಕೊಠಡಿಗೆ ಮಾಹಿತಿ ರವಾನಿಸುತ್ತಾರೆ. ಬಳಿಕ ಸಮಸ್ಯೆಗೆ ಪರಿಹಾರ ದೊರೆಯಲಿದೆ' ಎಂದು ಇಲಾಖೆ ಮಾಹಿತಿ ನೀಡಿದೆ.

'ಜ್ವರ, ಉಸಿರಾಟದ ಸಮಸ್ಯೆ ಸೇರಿದಂತೆ ವಿವಿಧ ಕೋವಿಡ್ ಲಕ್ಷಣಗಳು ಗೋಚರಿಸಿದಾಗ ತಕ್ಷಣ ವೈದ್ಯರನ್ನು ಸಂಪರ್ಕಿಸಿ, ತಪಾಸಣೆ ಮಾಡಿಸಿಕೊಳ್ಳಬೇಕು. ಸ್ವಯಂ ಚಿಕಿತ್ಸೆಗೆ ಒಳಗಾಗಿ ಸಮಸ್ಯೆಯನ್ನು ಉಲ್ಬಣ ಮಾಡಿಕೊಳ್ಳಬಾರದು. ಏನು ಆಗದು ಎಂಬ ಮನೋಭಾವವೂ ಬೇಡ. ಆರಂಭದಲ್ಲಿಯೇ ಚಿಕಿತ್ಸೆ ಪಡೆದುಕೊಂಡಲ್ಲಿ ಅಪಾಯ ತಪ್ಪಿಸಲು ಸಾಧ್ಯ' ಎಂದು ತಿಳಿಸಿದೆ.

'ಅನಗತ್ಯವಾಗಿ ಔಷಧಗಳನ್ನು ಖರೀದಿಸುವುದು, ಸಂಗ್ರಹಿಸಿ ಇಟ್ಟುಕೊಳ್ಳುವುದು ಮಾಡಬಾರದು. ವೈದ್ಯರ ಸಲಹೆ ಪಡೆದ ಬಳಿಕವಷ್ಟೇ ಮಾತ್ರೆಗಳನ್ನು ಸೇವಿಸಬೇಕು. ಸಾಮಾಜಿಕ ಜಾಲತಾಣದಲ್ಲಿ ಹರಿದಾಡುವ ಮಾಹಿತಿಗಳ ಸತ್ಯಾಸತ್ಯತೆಯನ್ನು ಅರಿಯದೆ ಯಾವುದೇ ನಿರ್ಧಾರ ಕೈಗೊಳ್ಳಬಾರದು. ಕೋವಿಡ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು' ಎಂದು ಹೇಳಿದೆ.

ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ಸೂಚನೆ

ಲಸಿಕೆ: 2ನೇ ಡೋಸ್‌ಗೆ ಆದ್ಯತೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಸಂಭಾವ್ಯ ಕೋವಿಡ್ 3ನೇ ಅಲೆಯ ಕಾರಣ ರಾಜ್ಯದ ಎಲ್ಲ ಜನರಿಗೆ ರಕ್ಷಣೆ ನೀಡುವುದು ಅತ್ಯವಶ್ಯ. ಹಾಗಾಗಿ, ಜಿಲ್ಲೆಗಳಿಗೆ ಹಂಚಿಕೆಯಾದ ಲಸಿಕೆಯನ್ನು ಪೂರ್ಣಪ್ರಮಾಣದಲ್ಲಿ ಬಳಸಿ, ಎರಡನೇ ಡೋಸ್‌ಗೆ ಆದ್ಯತೆ ನೀಡಬೇಕು ಎಂದು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ತಿಳಿಸಿದ್ದಾರೆ.

ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಅವರು ಬಿಬಿಎಂಪಿ ಮುಖ್ಯ ಆಯುಕ್ತರು ಹಾಗೂ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದಾರೆ.

'ಜನಸಂಖ್ಯೆ ಆಧಾರದಲ್ಲಿ ಜಿಲ್ಲೆಗಳಿಗೆ ಹಂಚಿಕೆಯಾದ ಲಸಿಕೆಯ ಡೋಸ್‌ಗಳನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಬೇಕು. ಮೊದಲ ಡೋಸ್ ಲಸಿಕೆ ಪಡೆದ ಫಲಾನುಭವಿಗಳ ದಿನವಾರು ಲಸಿಕಾಕರಣದ ಸಂಖ್ಯೆಯ ಆಧಾರದ ಮೇಲೆ ಎರಡನೇ ಡೋಸ್‌ನ ದಿನಾಂಕವನ್ನು ಪೂರ್ವ ನಿರ್ಧರಿಸಬೇಕು. ಕೋವಿನ್ ಪೋರ್ಟಲ್‌ನಲ್ಲಿ ಎರಡನೇ ಡೋಸ್ ಲಸಿಕೆ ವಿತರಣೆಗೆ ಪ್ರತ್ಯೇಕ ಅವಧಿಯನ್ನು ನಿಗದಿಪಡಿಸಲು ಅವಕಾಶ ಕಲ್ಪಿಸಬೇಕು' ಎಂದು ಹೇಳಿದ್ದಾರೆ.

ಕೋವ್ಯಾಕ್ಸಿನ್ 2ನೇ ಡೋಸ್ ಮಾತ್ರ: 'ಹಂಚಿಕೆಯಾದ ಕೋವಿಶೀಲ್ಡ್ ಲಸಿಕೆಯಲ್ಲಿ ಭಾಗಶಃ ಡೋಸ್‌ಗಳನ್ನು ಎರಡನೇ ಡೋಸ್ ವಿತರಣೆಗೆ ಕಾಯ್ದಿರಿಸಬೇಕು. ಕೋವ್ಯಾಕ್ಸಿನ್ ಲಸಿಕೆಯನ್ನು ಸಂಪೂರ್ಣವಾಗಿ ಎರಡನೇ ಡೋಸ್‌ಗೆ ಬಳಸಬೇಕು. ಲಸಿಕಾ ಕೇಂದ್ರಗಳಲ್ಲಿ ಎರಡನೇ ಡೋಸ್‌ಗಾಗಿಯೇ ಪ್ರತ್ಯೇಕ ದಿನ ಅಥವಾ ಸಮಯ ನಿಗದಿಪಡಿಸಬೇಕು. ಮೊದಲ ಮತ್ತು ಎರಡನೇ ಡೋಸ್ ಲಸಿಕೆಗೆ ಫಲಾನುಭವಿಗಳು ಪ್ರತ್ಯೇಕವಾಗಿ ಸಾಲಿನಲ್ಲಿ ನಿಲ್ಲಲು ವ್ಯವಸ್ಥೆ ಮಾಡಬೇಕು' ಎಂದು ಸೂಚಿಸಿದ್ದಾರೆ.

ರಾಜ್ಯದಲ್ಲಿ ಈವರೆಗೆ 3.22 ಕೋಟಿ ಡೋಸ್ ಲಸಿಕೆಯನ್ನು ವಿತರಿಸಲಾಗಿದೆ. 2.51 ಕೋಟಿ ಮಂದಿ ಮೊದಲ ಡೋಸ್ ಲಸಿಕೆ ಪಡೆದಿದ್ದಾರೆ. ಅವರಲ್ಲಿ 71.46 ಲಕ್ಷ ಮಂದಿ ಎರಡೂ ಡೋಸ್ ಪೂರ್ಣಗೊಳಿಸಿದ್ದಾರೆ. 3,500ಕ್ಕೂ ಅಧಿಕ ಸರ್ಕಾರಿ ಕೇಂದ್ರಗಳಲ್ಲಿ ಲಸಿಕೆ ವಿತರಿಸಲಾಗುತ್ತಿದೆ.

ಲಸಿಕೆಗಾಗಿ ಜಿಲ್ಲಾಧಿಕಾರಿ ಮನೆ ಎದುರು ಪ್ರತಿಭಟನೆ

ಹಾಸನ: ಕೋವಿಡ್ ಲಸಿಕೆ ನೀಡುವಂತೆ ಆಗ್ರಹಿಸಿ ಸಾರ್ವಜನಿಕರು ಜಿಲ್ಲಾಧಿಕಾರಿ ಆರ್.ಗಿರೀಶ್ ಅವರ ಮನೆ ಎದುರು ಶುಕ್ರವಾರ ಪ್ರತಿಭಟನೆ ನಡೆಸಿದರು.

ಸೀಮಿತ ಪ್ರಮಾಣದ ಲಸಿಕೆ ಪೂರೈಕೆಯಾಗಿದ್ದು, ಕೆಲದಿನಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬರುತ್ತಿರುವುದರಿಂದ ನೂಕುನುಗ್ಗಲು ಉಂಟಾಗುತ್ತಿದೆ. ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಹಿಮ್ಸ್) ಲಸಿಕಾ ಕೇಂದ್ರದಲ್ಲಿ 'ಲಸಿಕೆ ಲಭ್ಯವಿಲ್ಲ' ಎಂಬ ಫಲಕ ಹಾಕಿದ್ದರಿಂದ ಸಿಟ್ಟಿಗೆದ್ದ ಸಾರ್ವಜನಿಕರು ಧರಣಿ ನಡೆಸಿದರು. ಹಲವರಿಗೆ ಗುರುವಾರವೇ ಟೋಕನ್ ನೀಡಲಾಗಿತ್ತು.

'ಲಸಿಕೆ ಪಡೆಯುವಂತೆ ಸರ್ಕಾರವೇ ಜಾಗೃತಿ ಮೂಡಿಸುತ್ತಿದೆ. ಆದರೆ, ಅಗತ್ಯ ಪ್ರಮಾಣದಲ್ಲಿ ಲಸಿಕೆ ಪೂರೈಸುತ್ತಿಲ್ಲ. ನಿತ್ಯ ಸಾಲಿನಲ್ಲಿ ನಿಂತು ಹೋಗುವಂತಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಜಿಲ್ಲೆಗೆ ಪ್ರತಿದಿನ 15 ಸಾವಿರ ಡೋಸ್ ಲಸಿಕೆ ಅಗತ್ಯವಿದೆ. ಸದ್ಯ 2-3 ಸಾವಿರ ಡೋಸ್ ಲಸಿಕೆ ಲಭ್ಯವಾಗುತ್ತಿದೆ. ಅಗತ್ಯ ಲಸಿಕೆ ಪೂರೈಸುವಂತೆ ಮನವಿ ಮಾಡಲಾಗಿದೆ' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಎಂ.ಸತೀಶ್ ಕುಮಾರ್ ತಿಳಿಸಿದರು.

ಕೋವಿಡ್ ಮೂರನೇ ಅಲೆ ಸಾಧ್ಯತೆ ● ಹೊರ ರಾಜ್ಯಗಳಿಂದ ಬರುವ ಪ್ರಯಾಣಿಕರ ಮೇಲೆ ನಿಗಾ

ನಗರದಲ್ಲಿ ಕಂಟೈನ್‌ಮೆಂಟ್ ವಲಯಗಳ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಕ್ರಮೇಣವಾಗಿ ಏರುತ್ತಿದ್ದು, ಮೂರನೇ ಅಲೆ ಪ್ರಾರಂಭವಾಗಿರುವ ಸಾಧ್ಯತೆ ದಟ್ಟವಾಗುತ್ತಿದೆ. ಕಂಟೈನ್‌ಮೆಂಟ್ ವಲಯಗಳ ಸಂಖ್ಯೆಯೂ ಹೆಚ್ಚುತ್ತಿದ್ದು, ಮೂರಕ್ಕಿಂತ ಹೆಚ್ಚು ಪ್ರಕರಣಗಳಿರುವ 155 ಕ್ಲಸ್ಟರ್‌ಗಳನ್ನು ಗುರುತಿಸಲಾಗಿದೆ.

ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಸೋಂಕು ಪ್ರಮಾಣ ಹೆಚ್ಚಾಗುತ್ತಿದ್ದು, ಕೇರಳ, ಮಹಾರಾಷ್ಟ್ರಗಳಿಂದ ಬರುತ್ತಿರುವ ಪ್ರಯಾಣಿಕರ ಮೇಲೆ ವಿಶೇಷ ನಿಗಾ ಇಡಲಾಗುತ್ತಿದ್ದು, ಮೂರು ದಿನಗಳ ಅವಧಿಯ ಆರ್‌ಟಿ–ಪಿಸಿಆರ್ ನೆಗೆಟಿವ್ ವರದಿಗಳನ್ನು ಪರಿಶೀಲಿಸಲಾಗುತ್ತಿದೆ. ವರದಿ ಇಲ್ಲದವರ ಗಂಟಲು ದ್ರವದ ಮಾದರಿ ಸಂಗ್ರಹಿಸಿ, ಅವರನ್ನು ಸಾಂಸ್ಥಿಕ ಕ್ವಾರಂಟೈನ್‌ನಲ್ಲಿ ಇಡಲಾಗುತ್ತಿದೆ.

'ಹದಿನಾಲ್ಕು ದಿನಗಳ ಹಿಂದೆ ದಿನದಲ್ಲಿ 300ರಿಂದ 350 ಕೋವಿಡ್ ಪ್ರಕರಣಗಳು ವರದಿಯಾಗುತ್ತಿದ್ದವು. ಈಗ, ದಿನಕ್ಕೆ 450ರಿಂದ 460 ಹೊಸ ಪ್ರಕರಣಗಳು ವರದಿಯಾಗುತ್ತಿವೆ. ಇದರಿಂದ ಸಕ್ರಿಯ ಪ್ರಕರಣಗಳ ಸಂಖ್ಯೆಯೂ ಹೆಚ್ಚುತ್ತಿದ್ದು, ಆಸ್ಪತ್ರೆಯಿಂದ ಗುಣಮುಖರಾಗಿ ಹೊರಬರುತ್ತಿರುವವರ ಸಂಖ್ಯೆಯಲ್ಲಿ ಇಳಿಕೆಯಾಗುತ್ತಿದೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಡಿ. ರಂದೀಪ್ ಹೇಳಿದರು.



ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಆರೋಗ್ಯ ಸಿಬ್ಬಂದಿ ಪ್ರಯಾಣಿಕರಿಗೆ ಶುಕ್ರವಾರ ಕೋವಿಡ್ ಪರೀಕ್ಷೆ ನಡೆಸಿದರು – ಪ್ರಜಾವಾಣಿ ಚಿತ್ರ

ನಗರದಲ್ಲಿ ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿದ ಅವರು, '155 ಕ್ಲಸ್ಟರ್‌ಗಳ ಪೈಕಿ, ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ 78 ಹಾಗೂ ಮನೆಗಳಲ್ಲಿ 70 ಕ್ಲಸ್ಟರ್‌ಗಳನ್ನು ಗುರುತಿಸಲಾಗಿದೆ. ವಸತಿ ನಿಲಯಗಳಲ್ಲಿ 4 ಹಾಗೂ ಹೋಟೆಲ್‌ಗಳಲ್ಲಿ 3 ಕ್ಲಸ್ಟರ್‌ಗಳಿವೆ' ಎಂದರು.

'ಕೇರಳ, ಮಹಾರಾಷ್ಟ್ರದಿಂದ ಬಂದ ಪ್ರಯಾಣಿಕರನ್ನು ಹೋಟೆಲ್‌ಗಳಲ್ಲಿ ಸಾಂಸ್ಥಿಕ ಕ್ವಾರಂಟೈನ್‌ಗೆ ಒಳಪಡಿಸುವ ಕಾರ್ಯ ಗುರುವಾರದಿಂದ ಪ್ರಾರಂಭವಾಗಿದೆ. ಗುರುವಾರವೇ 25 ಪ್ರಯಾಣಿಕರನ್ನು ಕ್ವಾರಂಟೈನ್ ಮಾಡಲಾಗಿದೆ' ಎಂದು ತಿಳಿಸಿದರು.

'ಹೋಟೆಲ್‌ಗಳಲ್ಲಿನ ಕ್ವಾರಂಟೈನ್ ದರವನ್ನು ಸರ್ಕಾರ ಶೀಘ್ರವೇ ಪ್ರಕಟಿಸಲಿದೆ. ಈ ಹಿಂದೆ ಕ್ವಾರಂಟೈನ್‌ಗೆ ಮೀಸಲಾಗಿದ್ದ 10ರಿಂದ 15 ಹೋಟೆಲ್‌ಗಳಲ್ಲಿಯೇ ಈ ಬಾರಿಯೂ ಪ್ರಯಾಣಿಕರನ್ನು ಕ್ವಾರಂಟೈನ್ ಮಾಡಲು ನಿರ್ಧರಿಸಲಾಗಿದ್ದು, ಈ ಬಗ್ಗೆ ಹೋಟೆಲ್‌ಗಳ ಮಾಲೀಕರೊಂದಿಗೆ ಮಾತುಕತೆ ನಡೆಯುತ್ತಿದೆ' ಎಂದೂ ಮಾಹಿತಿ ನೀಡಿದರು.

ಕೋವಿಡ್ ಪರೀಕ್ಷೆ: 'ಹೊರರಾಜ್ಯಗಳಿಂದ ಬರುತ್ತಿರುವವರ ಮೇಲೆ ನಿಗಾ ಇಡಲಾಗಿದ್ದು, ನಿತ್ಯ 2000 ಮಂದಿಗೆ ಕೋವಿಡ್ ಪರೀಕ್ಷೆ ಮಾಡಲಾಗುತ್ತಿದೆ. ರೈಲು, ಬಸ್ ನಿಲ್ದಾಣಗಳಲ್ಲಿ 9 ತಂಡಗಳನ್ನು ನಿಯೋಜನೆ ಮಾಡಲಾಗಿದೆ. ಪ್ರಯಾಣಿಕರಲ್ಲಿ ಶೇ 2ಕ್ಕಿಂತ ಕಡಿಮೆ ಪ್ರಕರಣಗಳು ಮಾತ್ರ ಕಂಡು ಬಂದಿವೆ. ಸೋಂಕು ದೃಢಪಟ್ಟವರನ್ನು ತಕ್ಷಣವೇ ಕೋವಿಡ್ ಆರೈಕೆ ಕೇಂದ್ರಗಳಿಗೆ ಕಳುಹಿಸಲಾಗುತ್ತಿದೆ' ಎಂದು ರಂದೀಪ್ ಮಾಹಿತಿ ನೀಡಿದರು.

'ಬೊಮ್ಮನಹಳ್ಳಿಯಲ್ಲಿ ಒಂದು ಡೆಲ್ಟಾ ಪ್ರಕರಣ ಪತ್ತೆಯಾಗಿದೆ. ಅವರಿಗೆ ಜುಲೈ 14ರಂದು ಸೋಂಕು ದೃಢಪಟ್ಟಿತ್ತು. ಚಿಕಿತ್ಸೆ ಮುಂದುವರಿಸಲಾಗಿದೆ. ಅವರ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರಿಗೆ ಕೋವಿಡ್ ಪರೀಕ್ಷೆ ಮಾಡಲಾಗಿದ್ದು, ಕ್ವಾರಂಟೈನ್‌ನಲ್ಲಿ ಇಡಲಾಗಿದೆ' ಎಂದು ತಿಳಿಸಿದರು.

'ವಲಯಕ್ಕೊಂದು ಮಕ್ಕಳ ಆರೈಕೆ ಕೇಂದ್ರ'



'ಮೂರನೇ ಅಲೆಯು ಮಕ್ಕಳ ಮೇಲೆ ಹೆಚ್ಚು ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಮಕ್ಕಳ ತಜ್ಞರ ಸಮಿತಿ ಎಚ್ಚರಿಸಿದ್ದು, ಮುಂದೆ ಪ್ರತಿ ವಲಯಕ್ಕೊಂದು ಮಕ್ಕಳ ಆರೈಕೆ ಕೇಂದ್ರ ಮಾಡುವ ಪ್ರಯತ್ನ ನಡೆದಿದೆ' ಎಂದು ರಂದೀಪ್ ತಿಳಿಸಿದರು.

'ಮಕ್ಕಳ ಚಿಕಿತ್ಸೆಗೇ ಮೀಸಲಾಗಿರುವ ಆಸ್ಪತ್ರೆಯನ್ನು ಪದ್ಮನಾಭನಗರದಲ್ಲಿ ಈಗಾಗಲೇ ತೆರೆಯಲಾಗಿದೆ. ಪ್ರತಿ ವಲಯದಲ್ಲಿ ಒಂದು ಮಕ್ಕಳ ಆಸ್ಪತ್ರೆಯನ್ನು ಇದಕ್ಕಾಗಿ ಮೀಸಲಿಡುವ ಚಿಂತನೆಯೂ ಇದೆ' ಎಂದು ಅವರು ಹೇಳಿದರು.

ನಗರದ ಕೋವಿಡ್ ಅಂಕಿ–ಅಂಶ

12,29,781 ▲ ಒಟ್ಟು ಪ್ರಕರಣಗಳು (12,29,340 ನಿನ್ನೆಯ ವಿವರ)

8,560 ಸಕ್ರಿಯ ಪ್ರಕರಣಗಳು

12,05,312 ▲ ಗುಣಮುಖರಾದವರು

15,908 ▲ ಒಟ್ಟು ಸಾವು

ಶುಕ್ರವಾರದ ಏರಿಕೆ

ಹೊಸ ಪ್ರಕರಣ	441	▲
ಗುಣಮುಖ	434	▼
ಸಾವು	07	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಕಪ್ಪು ಶಿಲೀಂಧ್ರ ಸೋಂಕು 2 ದಿನದಲ್ಲಿ 20 ಸಾವು

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದಲ್ಲಿ ಕಪ್ಪು ಶಿಲೀಂಧ್ರ ಸೋಂಕಿಗೆ ಎರಡೇ ದಿನಗಳಲ್ಲಿ 20 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ.

ಈ ಅವಧಿಯಲ್ಲಿ ಸೋಂಕು ತಗಲಿರುವ ಹೊಸ ಪ್ರಕರಣ ವರದಿಯಾಗಿಲ್ಲ. ಆದರೆ, ಕಳೆದೊಂದು ವಾರದಿಂದ ಅಧಿಕ ಸಂಖ್ಯೆಯಲ್ಲಿ ಮರಣ ಪ್ರಕರಣಗಳು ವರದಿಯಾಗುತ್ತಿವೆ. ರಾಜ್ಯದಲ್ಲಿ ಈವರೆಗೆ 3,713 ಕಪ್ಪು ಶಿಲೀಂಧ್ರ ಸೋಂಕು ಪ್ರಕರಣಗಳು ದೃಢಪಟ್ಟಿವೆ. ಸೋಂಕಿತರಲ್ಲಿ 387 ಮಂದಿ ಸಾವಿಗೀಡಾಗಿದ್ದಾರೆ.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಕಪ್ಪು ಶಿಲೀಂಧ್ರ ಸೋಂಕು ಪ್ರಕರಣಗಳು ಪತ್ತೆಯಾಗಿವೆ. ವರದಿಯಾದ ಒಟ್ಟು ಪ್ರಕರಣಗಳಲ್ಲಿ ಶೇ 33 ರಷ್ಟು ಪ್ರಕರಣಗಳು ಬೆಂಗಳೂರಿನಲ್ಲಿಯೇ ನಡೆದಿವೆ. ಈವರೆಗೆ 1,182 ಮಂದಿ ಸೋಂಕಿತರಾಗಿರುವುದು ಖಚಿತಪಟ್ಟಿದೆ. ಅವರಲ್ಲಿ 127 ಮಂದಿ ಸಾವಿಗೀಡಾಗಿದ್ದಾರೆ.

ಧಾರವಾಡದಲ್ಲಿ 284, ವಿಜಯಪುರದಲ್ಲಿ 226, ಕಲಬುರ್ಗಿಯಲ್ಲಿ 207, ಬಳ್ಳಾರಿಯಲ್ಲಿ 165, ಬೆಳಗಾವಿಯಲ್ಲಿ 159, ಚಿತ್ರದುರ್ಗದಲ್ಲಿ 156, ರಾಯಚೂರಿನಲ್ಲಿ 137, ಮೈಸೂರಿನಲ್ಲಿ 132, ಬಾಗಲಕೋಟೆಯಲ್ಲಿ 131, ದಾವಣಗೆರೆಯಲ್ಲಿ 118, ಕೋಲಾರದಲ್ಲಿ 110 ಹಾಗೂ ದಕ್ಷಿಣ ಕನ್ನಡದಲ್ಲಿ 103 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 100ರ ಗಡಿಯೊಳಗೆ ಇದೆ. ಕಳೆದ ಒಂದು ತಿಂಗಳಿನಿಂದ ಹೊಸ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿದೆ.

ರಾಜ್ಯದ 26 ಜಿಲ್ಲೆಗಳಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ. ದಕ್ಷಿಣ ಕನ್ನಡದಲ್ಲಿ 30, ಧಾರವಾಡ ಹಾಗೂ ಬಳ್ಳಾರಿಯಲ್ಲಿ ತಲಾ 28, ಕಲಬುರ್ಗಿಯಲ್ಲಿ 23, ದಾವಣಗೆರೆಯಲ್ಲಿ 20, ಮೈಸೂರಿನಲ್ಲಿ 17, ಶಿವಮೊಗ್ಗದಲ್ಲಿ 15, ಬಾಗಲಕೋಟೆಯಲ್ಲಿ 13, ಹಾಸನ ಹಾಗೂ ಚಿಕ್ಕಬಳ್ಳಾಪುರದಲ್ಲಿ ತಲಾ 11 ಹಾಗೂ ಗದಗದಲ್ಲಿ 10 ಮಂದಿ ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 10ಕ್ಕಿಂತ ಕಡಿಮೆಯಿದೆ.

ಕರ್ಫ್ಯೂ: ಬಸ್ ಸಂಚಾರ ಯಥಾಸ್ಥಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಡಿ ಜಿಲ್ಲೆಗಳಲ್ಲಿ ವಾರಾಂತ್ಯದ ಕರ್ಫ್ಯೂ ಇದ್ದರೂ ಬಸ್‌ಗಳ ಸಂಚಾರ ಎಂದಿನಂತೆ ಇರಲಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಅಂತರರಾಜ್ಯ ಬಸ್‌ಗಳ ಸಂಚಾರ ಮೊದಲೇ ಕಡಿಮೆ ಇದೆ. ಕರ್ಫ್ಯೂ ಇದ್ದರೂ ಬಸ್ ಸಂಚಾರದಲ್ಲಿ ಯಾವುದೇ ವ್ಯತ್ಯಯ ಆಗುವುದಿಲ್ಲ ಎಂದು ತಿಳಿಸಿದರು.

ಬೆಂಗಳೂರಿನಲ್ಲಿ ವಾರಾಂತ್ಯದ ಕರ್ಫ್ಯೂ ಇಲ್ಲದ ಕಾರಣ ಬಸ್ ಸಂಚಾರದಲ್ಲಿ ಯಾವುದೇ ವ್ಯತ್ಯಾಸ ಆಗುವುದಿಲ್ಲ. ರಾತ್ರಿ ಕರ್ಫ್ಯೂಗೆ ಸಂಬಂಧಿಸಿದಂತೆ ಇರುವ ನಿಯಮಗಳನ್ನು ಈ ಹಿಂದಿನಿಂದ ಪಾಲಿಸಲಾಗುತ್ತಿದೆ ಎಂದು ಬಿಎಂಟಿಸಿ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದರು.

ಸರ್ಕಾರದ ನಿರ್ಧಾರಕ್ಕೆ ಸ್ವಾಗತ ● ಮಾರ್ಗಸೂಚಿ ಪಾಲನೆಗೆ ಒತ್ತು ನೀಡಲು ಒತ್ತಾಯ

ಪ್ರಾಥಮಿಕ ಶಾಲೆಗಳ ಆರಂಭಕ್ಕೆ ಒತ್ತಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಆ.23ರಿಂದ 9,10 ಮತ್ತು ಪಿಯು ತರಗತಿಗಳನ್ನು ಪುನರಾರಂಭಿಸಲು ಮುಂದಾಗಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ಶಿಕ್ಷಣ ತಜ್ಞರು, ಪೋಷಕರು ಹಾಗೂ ಖಾಸಗಿ ಶಾಲಾ–ಕಾಲೇಜು ಆಡಳಿತ ಮಂಡಳಿಗಳು ಮಿಶ್ರ ಪ್ರತಿಕ್ರಿಯೆ ನೀಡಿವೆ. ಮೊದಲು ಉನ್ನತ ತರಗತಿಗಳನ್ನು ಆರಂಭಿಸಲು ತೀರ್ಮಾನಿಸಿರುವ ಕುರಿತು ಕೆಲವರು ಆಕ್ಷೇಪವನ್ನೂ ವ್ಯಕ್ತಪಡಿಸಿದ್ದಾರೆ.

'ದೇಶದ ಹಲವು ರಾಜ್ಯಗಳಲ್ಲಿ ಹಾಗೂ ವಿಶ್ವದ ಬೇರೆ ಬೇರೆ ದೇಶಗಳಲ್ಲಿ, ಮೊದಲು ಪ್ರಾಥಮಿಕ ಶಾಲೆಗಳನ್ನು ಆರಂಭಿಸುವುದು ಸೂಕ್ತ ಎಂದು ತಜ್ಞ ವೈದ್ಯರು, ಆ ಕ್ಷೇತ್ರದ ಪರಿಣಿತರು ನೀಡಿದ್ದಾರೆ. ಆದರೆ, ಇದಕ್ಕೆ ತದ್ವಿರುದ್ಧವಾಗಿ ಉನ್ನತ ತರಗತಿಗಳನ್ನು ಮೊದಲು ಆರಂಭಿಸುವ ನಿರ್ಧಾರದ ಹಿಂದಿರುವ ತರ್ಕ ಅರ್ಥವಾಗುತ್ತಿಲ್ಲ' ಎಂದು ರಾಜ್ಯ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ವೇದಿಕೆ ಹೇಳಿದೆ.

'ಶಾಲೆಗಳು ತೆರೆಯದೇ ಇರುವುದಕ್ಕೆ ಅತಿ ಹೆಚ್ಚು ಕಲಿಕೆಯ ನಷ್ಟವಾಗಿರುವುದು ಒಂದರಿಂದ ಎಂಟನೆಯ ತರಗತಿಯ ಮಕ್ಕಳಿಗೆ, ಅದರಲ್ಲಿಯೂ ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಹೆಚ್ಚು. ಈ ಶಾಲೆಗಳನ್ನು ಮೊದಲು ತೆರೆಯುವುದು ವೈಜ್ಞಾನಿಕವಾಗಿ ಮತ್ತು ಸುರಕ್ಷತೆಯ ದೃಷ್ಟಿಯಿಂದ ಸೂಕ್ತ ಕ್ರಮವಾಗುತ್ತದೆ' ಎಂದು ವೇದಿಕೆ ಅಭಿಪ್ರಾಯಪಟ್ಟಿದೆ.

'50ಕ್ಕಿಂತ ಕಡಿಮೆ ಮಕ್ಕಳು ಇರುವ ಶಾಲೆಗಳನ್ನು ಇದೇ ಸೋಮವಾರದಿಂದಲೇ ಆರಂಭಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು. ಇದೇ ವೇಳೆ, ಸರ್ಕಾರಿ ಶಾಲೆಗಳ ಸಬಲೀಕರಣಕ್ಕೆ ಸರ್ಕಾರ ಒತ್ತು ನೀಡಬೇಕು' ವೇದಿಕೆಯ ಮಹಾಪೋಷಕ ಮತ್ತು ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ ಒತ್ತಾಯಿಸಿದ್ದಾರೆ.

ಮಾರ್ಗಸೂಚಿ ಪಾಲಿಸಬೇಕು: '9,10 ಮತ್ತು ಪಿಯು ತರಗತಿಗಳನ್ನು ಆರಂಭಿಸಲು ನಿರ್ಧರಿಸಿರುವುದು ಸ್ವಾಗತಾರ್ಹ. ಆದರೆ, ಕೋವಿಡ್ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಮತ್ತು ಈ ನಿಯಮಗಳು ಪಾಲನೆಯಾಗುತ್ತಿವೆಯೇ ಎಂದು ಪರಿಶೀಲಿಸುವ ಕೆಲಸವೂ ಆಗಬೇಕು' ಎಂದು ಉಳ್ಳಾಲದ ಆಕ್ಸ್‌ಫರ್ಡ್ ಕಾಲೇಜಿನ ಪ್ರಾಚಾರ್ಯ ಡಾ.ಬಿ.ಆರ್. ಸುಪ್ರೀತ್ ಹೇಳಿದರು.

'ಹೊರ ರಾಜ್ಯಗಳಿಂದಲೂ ವಿದ್ಯಾರ್ಥಿಗಳು ಬರುತ್ತಾರೆ. ಅವರಿಂದ ಇಲ್ಲಿನ ಮಕ್ಕಳಿಗೂ ಸೋಂಕು ಹರಡುವ ಸಾಧ್ಯತೆ ಇರುತ್ತದೆ. ಬೇರೆ ರಾಜ್ಯದಿಂದ ಬರುವ ವಿದ್ಯಾರ್ಥಿಗಳಿಗೆ ಕೋವಿಡ್ ಪರೀಕ್ಷೆ ನಡೆಸಿದ ನಂತರವೇ ತರಗತಿಗೆ ಬರಮಾಡಿಕೊಳ್ಳುವ ಕೆಲಸವಾಗಬೇಕು' ಎಂದರು.

'ಪ್ರೌಢಶಾಲೆಯ ಮಕ್ಕಳು ಪ್ರಾಥಮಿಕ ಶಾಲೆಯ ಮಕ್ಕಳಿಗಿಂತ ಮಾನಸಿಕವಾಗಿ ಹೆಚ್ಚು ಪ್ರಬುದ್ಧವಾಗಿರುವುದರಿಂದ ಮೊದಲು ಉನ್ನತ ತರಗತಿಗಳನ್ನು ಪ್ರಾರಂಭಿಸಲು ಸರ್ಕಾರ ನಿರ್ಧಾರ ತೆಗೆದುಕೊಂಡಿದೆ. ಇದು ಉತ್ತಮ ನಿರ್ಧಾರವೇ. ಏಕೆಂದರೆ, ಮಾಧ್ಯಮಗಳಲ್ಲಿ ಬರುವ ಸುದ್ದಿಗಳನ್ನು ನೋಡುವ ಪ್ರೌಢಮಕ್ಕಳು, ಶಾಲಾ–ಕಾಲೇಜುಗಳಲ್ಲಿ ಅಂತರ ಕಾಪಾಡಿಕೊಳ್ಳುವ, ಮಾಸ್ಕ್ ಧರಿಸುವ ಮೂಲಕ ಮಾರ್ಗಸೂಚಿ ಪಾಲನೆ ಮಾಡುತ್ತಾರೆ. ಪ್ರಾಥಮಿಕ ಶಾಲೆಯ ಮಕ್ಕಳಲ್ಲಿ ಈ ನಿಯಮಗಳ ಪಾಲನೆ ಕಷ್ಟವಾಗಬಹುದು' ಎಂದೂ ಹೇಳಿದರು.

'ವಿಜ್ಞಾನ ಮತ್ತು ಗಣಿತದಂತಹ ತಾಂತ್ರಿಕ ವಿಷಯಗಳನ್ನು ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ತರಗತಿಗಳನ್ನು ಕೂಡಲೇ ಆರಂಭಿಸಬೇಕಾದ ಅಗತ್ಯವಿದೆ. ಏಕೆಂದರೆ, ಈ ಮಕ್ಕಳು ತಕ್ಷಣದಲ್ಲಿಯೇ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಬೇಕಾಗುತ್ತದೆ. ತಾಂತ್ರಿಕ ಶಿಕ್ಷಣದ ಅಡಿಪಾಯ ಸರಿಯಾಗಿ ಬೀಳದಿದ್ದರೆ, ಅವರ ಭವಿಷ್ಯಕ್ಕೂ ತೊಂದರೆಯಾಗುವ ಸಾಧ್ಯತೆ ಇದೆ' ಎಂದೂ ಹೇಳಿದರು.

ಸುರಕ್ಷತೆಗೆ ಒತ್ತು ನೀಡಬೇಕು: '8,9ನೇ ತರಗತಿ ಆರಂಭಿಸಲು ನಿರ್ಧರಿಸಿರುವುದು ಸ್ವಾಗತಾರ್ಹ. ಆದರೂ, ಮಕ್ಕಳ ಸುರಕ್ಷತೆಗೆ ಹೆಚ್ಚು ಒತ್ತು ನೀಡಿ ಶಾಲೆಗಳನ್ನು ಪುನರಾರಂಭಿಸಬೇಕು. 18 ವರ್ಷದೊಳಗಿನವರಿಗೆ ಲಸಿಕೆ ಹಾಕಿಸಲು ಅವಕಾಶವಿಲ್ಲ. ಲಸಿಕೆ ಹಾಕಿರದ ಮಕ್ಕಳನ್ನು ಶಾಲೆಗೆ ಕಳುಹಿಸಲು ಆತಂಕವೂ ಇದೆ' ಎಂದು ಪೋಷಕಿ ಜಾನಕಿ ಹೇಳಿದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	20.20 ಕೋಟಿ ▲	3.18 ಕೋಟಿ
ಸಕ್ರಿಯ ಪ್ರಕರಣ	1.60 ಕೋಟಿ ▲	4.06 ಲಕ್ಷ ▼
ಗುಣಮುಖ	18.17 ಕೋಟಿ ▲	3.10 ಕೋಟಿ
ಸಾವು	42.86 ಲಕ್ಷ ▲	4.27 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	7.06 ಲಕ್ಷ ▲	37,689 ▼
ಗುಣಮುಖ	4.68 ಲಕ್ಷ ▲	38,362 ▼
ಸಾವು	10,396 ▲	601 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	1.20 ಲಕ್ಷ ▲
ಬ್ರಿಟನ್	30,093 ▼
ಬ್ರೆಜಿಲ್	40,054 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	58.64 ▲
ಬ್ರೆಜಿಲ್	6.65
ಬ್ರಿಟನ್	12.66 ▲

(*ರಾತ್ರಿ 12 ಗಂಟೆವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.33 ಲಕ್ಷ
ತಮಿಳುನಾಡು	34,260 ▲
ದೆಹಲಿ	25,065 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	63.36
ಕೇರಳ	35.13 ▲
ತಮಿಳುನಾಡು	25.71 ▲

ಪ್ರಜಾವಾಣಿ ಗ್ರಾಫಿಕ್ಸ್

ಡೆಲ್ಟಾ ದೃಢಪಟ್ಟಿದ್ದ ವ್ಯಕ್ತಿ ನಾಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೆಲ್ಟಾ ರೂಪಾಂತರ ತಳಿಯ ಕೊರೊನಾ ವೈರಾಣು ಸೋಂಕಿತ ವ್ಯಕ್ತಿಯು ಪತ್ತೆಯಾಗದಿರುವುದು ಬಿಬಿಎಂಪಿಗೆ ತಲೆನೋವಾಗಿ ಪರಿಣಮಿಸಿದೆ.

29 ವರ್ಷದ ವ್ಯಕ್ತಿಯೊಬ್ಬರಿಗೆ ಡೆಲ್ಟಾ ದೃಢಪಟ್ಟಿತ್ತು. ಅವರು ಆಸ್ಪತ್ರೆಯಿಂದ ಬಿಡುಗಡೆಯನ್ನೂ ಹೊಂದಿದ್ದರು. ಆದರೆ, ಈವರೆಗೆ ಅವರ ಸುಳಿವು ಇಲ್ಲದಿರುವುದು ಮತ್ತು ಅವರ ಮೊಬೈಲ್ ಫೋನ್ ಸ್ಥಗಿತಗೊಂಡಿರುವುದರಿಂದ ಬಿಬಿಎಂಪಿಯ ಅಧಿಕಾರಿಗಳು ಪೊಲೀಸರ ಮೊರೆ ಹೋಗಿದ್ದು, ಅವರನ್ನು ಪತ್ತೆ ಹಚ್ಚುವಂತೆ ಕೋರಿದ್ದಾರೆ.

'ವ್ಯಕ್ತಿಯ ಮೊಬೈಲ್ ಫೋನ್ ಕಾರ್ಯಾಚರಣೆಯಲ್ಲಿದ್ದ ಕೊನೆಯ ಸ್ಥಳ ಮಾಗಡಿ ರಸ್ತೆ. ನಂತರ ಅವರ ಫೋನ್ ಸ್ಥಗಿತಗೊಂಡಿದೆ. ಆದರೆ, ಆ ವ್ಯಕ್ತಿ ನಮಗೆ ಉತ್ತರಹಳ್ಳಿಯ ವಿಳಾಸ ನೀಡಿದ್ದರು. ಮಾಗಡಿ ರಸ್ತೆಯ ಪ್ರದೇಶಗಳು ಪಶ್ಚಿಮ, ಆರ್.ಆರ್. ನಗರ ಮತ್ತು ದಾಸರಹಳ್ಳಿ ವಲಯದ ವ್ಯಾಪ್ತಿಗೆ ಬರುತ್ತವೆ. ಈಗ ನಾವು ಪೊಲೀಸರ ವರದಿ ಕಾಯುತ್ತಿದ್ದೇವೆ. ವ್ಯಕ್ತಿಯು ಪತ್ತೆಯಾಗಿ, ಅವರ ವಿಳಾಸ ಯಾವುದು ಎಂದು ದೃಢಪಟ್ಟರೆ, ಆ ವಲಯಕ್ಕೆ ಪ್ರಕರಣವನ್ನು ವರ್ಗಾಯಿಸಲಾಗುವುದು' ಎಂದು ಬೊಮ್ಮನಹಳ್ಳಿ ವಲಯದ ಜಂಟಿ ಆಯುಕ್ತ ಎಂ. ರಾಮಕೃಷ್ಣ 'ಪ್ರಜಾವಾಣಿ'ಗೆ ತಿಳಿಸಿದರು.

'ವ್ಯಕ್ತಿಯು ಈಗಾಗಲೇ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಅಲ್ಲದೆ, ಇದು ಮೂರು ವಾರಗಳ ಹಿಂದಿನ ಪ್ರಕರಣ. ಅಂದರೆ, ಇದು ಸಕ್ರಿಯವಾಗಿಲ್ಲದ ಪ್ರಕರಣ. ವ್ಯಕ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ವಿಶೇಷ ಆಯುಕ್ತ (ಆರೋಗ್ಯ) ಡಿ. ರಂದೀಪ್ ಹೇಳಿದರು.

ಜೋಗ: ಸಂಘರ್ಷಕ್ಕೆ ಕಾರಣವಾದ ಕೋವಿಡ್ ನೆಗೆಟಿವ್ ವರದಿ

ಕಾರ್ಗಲ್: ಜೋಗ ಜಲಪಾತ ವೀಕ್ಷಣೆಗೆ ಪ್ರವಾಸಿಗರಿಗೆ ಕೋವಿಡ್ ನೆಗೆಟಿವ್ ದೃಢೀಕರಣ ಕಡ್ಡಾಯಗೊಳಿಸಿರುವ ಜಿಲ್ಲಾಧಿಕಾರಿ ಆದೇಶ ಶುಕ್ರವಾರ ಸಂಘರ್ಷಕ್ಕೆ ಕಾರಣವಾಗಿತ್ತು.

ಉತ್ತರ ಕರ್ನಾಟಕ ಮತ್ತು ಉತ್ತರ ಕನ್ನಡ ಜಿಲ್ಲೆಯಿಂದ ಬಂದಿದ್ದ ಭಾರಿ ಸಂಖ್ಯೆಯ ಪ್ರವಾಸಿಗರು, 'ಆರ್‌ಟಿಪಿಸಿಆರ್ ಪರೀಕ್ಷಾ ವರದಿ ಕಡ್ಡಾಯ ಎಂದು ಸರ್ಕಾರ ಘೋಷಣೆ ಮಾಡಿಲ್ಲ. ಮಾಹಿತಿ ಪ್ರಚುರ ಪಡಿಸದೆ ಈ ರೀತಿಯ ಕ್ರಮಕ್ಕೆ ಮುಂದಾಗಿರುವುದು ಸರಿಯಲ್ಲ' ಎಂದು ಭದ್ರತಾ ಸಿಬ್ಬಂದಿಯೊಂದಿಗೆ ಸಂಘರ್ಷಕ್ಕಿಳಿದರು. ಭದ್ರತಾ ಸಿಬ್ಬಂದಿಯ ಮಾತನ್ನು ಮೀರಿ ಒಳ ಪ್ರವೇಶಿಸಲು ಪ್ರವಾಸಿಗರು ಮುಂದಾದರು.

ಕೂಡಲೇ ಮಧ್ಯೆ ಪ್ರವೇಶಿಸಿದ ಜೋಗದ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ನಿರ್ಮಲಾ, ಪರಿಸ್ಥಿತಿಯನ್ನು ಹತೋಟಿಗೆ ತಂದರು.

'ಪ್ರವಾಸಿಗರಲ್ಲಿ 945 ಮಂದಿ ಮಾತ್ರ ಆರ್‌ಟಿಪಿಸಿಆರ್ ನೆಗೆಟಿವ್ ವರದಿ ಹಾಜರುಪಡಿಸಿದ ಕಾರಣ ಅವರಿಗಷ್ಟೆ ಜಲಪಾತ ಪ್ರದೇಶದ ಒಳಗೆ ಪ್ರವೇಶ ನೀಡಲಾಯಿತು' ಎಂದು ಪ್ರವಾಸೋದ್ಯಮ ಇಲಾಖೆ ಮೂಲಗಳು ತಿಳಿಸಿವೆ.

ಚಿತ್ರಾವಳಿ









1 ನಗರದ ಅವಲಹಳ್ಳಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ 'ಕೋವಿಡ್ ಲಸಿಕೆ ಲಭ್ಯವಿಲ್ಲ' ಎಂಬ ಫಲಕವನ್ನು ಶುಕ್ರವಾರ ಇಡಲಾಗಿತ್ತು – ಪ್ರಜಾವಾಣಿ ಚಿತ್ರ

2 ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ದೊಡ್ಡಬೊಮ್ಮಸಂದ್ರದ ಕೊಡವಸಮಾಜದಲ್ಲಿ ಆಕ್ಟ್ ಫೈಬರ್‌ನೆಟ್, ನಾರಾಯಣ ಹೃದಯಾಲಯ ಹಾಗೂ ಸ್ಥಳೀಯ ಕಾಂಗ್ರೆಸ್ ಮುಖಂಡರ ಸಹಯೋಗದಲ್ಲಿ ಆಯೋಜಿಸಿದ್ದ ಉಚಿತ ಲಸಿಕೆ ಅಭಿಯಾನಕ್ಕೆ ಶಾಸಕ ಕೃಷ್ಣಬೈರೇಗೌಡ ಚಾಲನೆ ನೀಡಿದರು. ಮುಖಂಡರಾದ ಆರ್.ಎಂ.ಶ್ರೀನಿವಾಸ್, ಎನ್.ಎನ್.ಶ್ರೀನಿವಾಸಯ್ಯ, ಬಿ.ಎಸ್.ಗೋಪಾಲಕೃಷ್ಣ, ಸಂತೋಷ್ ರಾಜನ್, ಸುರೇಶ್, ಮಲ್ಯಾದ್ರಿ, ಜನಾರ್ದನ್, ಕೊಡವ ಸಮಾಜದ ಅಧ್ಯಕ್ಷ ಪೂಣಚ್ಚ ಇತರರು ಇದ್ದರು.

3 ಬಿಜೆಪಿ ಬ್ಯಾಟರಾಯನಪುರ ಕ್ಷೇತ್ರದ ವತಿಯಿಂದ ಸಹಕಾರನಗರದ ಆಟದ ಮೈದಾನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಆನಂದ ಗುರೂಜಿ ಅವರು ಬಡವರಿಗೆ ಆಹಾರದ ಕಿಟ್ ವಿತರಿಸಿದರು. ಅಂತರರಾಷ್ಟ್ರೀಯ ವಿಮಾನನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎ.ರವಿ, ಪಾಲಿಕೆ ಮಾಜಿ ಸದಸ್ಯರಾದ ಕೆ.ಎ.ಮುನೀಂದ್ರಕುಮಾರ್, ಅಶ್ವತ್ಥನಾರಾಯಣಗೌಡ, ಎಂ.ಈ.ಪಿಳ್ಳಪ್ಪ, ಬಿಜೆಪಿ ಮುಖಂಡರಾದ ನಂಜಪ್ಪ, ವೆಂಕಟೇಶ್, ಮಂಜುನಾಥ್, ಸಂತೋಷ್, ಎಂ.ರಾಮಚಂದ್ರ ಇದ್ದರು.

4 ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿಯವರನ್ನು ಬೆಂಗಳೂರಿನಲ್ಲಿ ಶುಕ್ರವಾರ ಭೇಟಿ ಮಾಡಿ ಆಶೀರ್ವಾದ ಪಡೆದರು. ಸಚಿವ ಮುರುಗೇಶ ನಿರಾಣಿ ಇದ್ದರು.


3ನೇ ಅಲೆ ಎದುರಿಸಲು ಸಿದ್ಧತೆ

ಬೆಂಗಳೂರು: ಕೋವಿಡ್ ಮೂರನೇ ಅಲೆ ಎದುರಿಸಲು 2021–22ನೇ ಸಾಲಿನ ರಾಜ್ಯ ವಿಪತ್ತು ನಿರ್ವಹಣಾ ಯೋಜನೆಯಡಿ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಮಾಹಿತಿ ನೀಡಿದೆ.

ವಿಪತ್ತು ನಿರ್ವಹಣಾ ಕಾಯ್ದೆಯ ನಿಯಮಗಳ ಜಾರಿಗೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ಯೋಜನೆ ಸಿದ್ಧಪಡಿಸಿ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಮುಂದೆ ಅನುಮೋದನೆಗಾಗಿ ಇಡಲಾಗಿದೆ ಎಂದು ಸರ್ಕಾರದ ಪರ ವಕೀಲರು ವಿವರಿಸಿದರು.

'ಜಿಲ್ಲಾ ವಿಪತ್ತು ಪರಿಹಾರ ನಿಧಿ ರಚನೆ ಮಾಡುವ ಸಂಬಂಧ ಅನುಸರಿಸಿರುವ ಕ್ರಮಗಳ ಕುರಿತು ಅಂಕಿ–ಅಂಶ ಸಹಿತ ಮಾಹಿತಿಯನ್ನು ಎಲ್ಲಾ ಜಿಲ್ಲಾಧಿಕಾರಿಗಳಿಂದ ತರಿಸಿಕೊಳ್ಳಬೇಕು' ಎಂದು ಪೀಠ ನಿರ್ದೇಶನ ನೀಡಿತು.



ವಿಧಾನ ಪರಿಷತ್ ಸದಸ್ಯ ಎಂ. ನಾರಾಯಣಸ್ವಾಮಿ, ಅಗರ ಪ್ರಕಾಶ್ ಅವರು ಕುಟುಂಬಗಳಿಗೆ ದಿನಸಿ ಕಿಟ್, ಚೆಕ್ ವಿತರಿಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್, ಮುಖಂಡರಾದ ರಾಧಮ್ಮ ವೆಂಕಟೇಶ್, ಪ್ರಸನ್ನಕುಮಾರ್, ಪ್ರವೀಣ್ ಗೌಡ ಇದ್ದರು.

ಕೋವಿಡ್: ಮೃತರ ಕುಟುಂಬಕ್ಕೆ ನೆರವು

ಕೆ.ಆರ್.ಪುರ: ಕಾಂಗ್ರೆಸ್ ಪಕ್ಷ ಕೊರೊನಾ ಸಂಕಷ್ಟದ ಕಾಲದಲ್ಲಿ ಬಡಜನರ ಸೇವೆ ಮಾಡುವ ಮೂಲಕ ಸಂಕಷ್ಟ ನಿವಾರಣೆ ಮಾಡುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ಎಂ. ನಾರಾಯಣಸ್ವಾಮಿ ಹೇಳಿದರು.

ಕೆ.ಆರ್.ಪುರ ಸಮೀಪದ ರಾಮಮೂರ್ತಿನಗರದಲ್ಲಿ ಬ್ಲಾಕ್ ಕಾಂಗ್ರೆಸ್ ಪಕ್ಷದ ವತಿಯಿಂದ ಹಮ್ಮಿಕೊಂಡಿದ್ದ ಅಭಯ ಹಸ್ತ ಕಾರ್ಯಕ್ರಮದಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳಿಗೆ ಚೆಕ್ ವಿತರಣೆ ಹಾಗೂ ದಿನಸಿ ಕಿಟ್ ವಿತರಿಸಿ ಮಾತನಾಡಿದರು.

ಕಾಂಗ್ರೆಸ್ ಮುಖಂಡ ಅಗರ ಆರ್. ಪ್ರಕಾಶ್ ಮಾತನಾಡಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಶಾಂತಿ ಕೇವಲ ಶಬ್ದಗಳಲ್ಲ; ದೇಶವನ್ನು, ಪ್ರಜೆಗಳನ್ನು ಮುನ್ನಡೆಸುವ ಶಕ್ತಿಶಾಲಿ ತತ್ವಗಳು, ಚಿಂತನೆಗಳು.

-ಜವಾಹರಲಾಲ್ ನೆಹರೂ

ಶಾಸನಸಭೆಯಲ್ಲಿ ದಾಂದಲೆಗೆ ಅವಕಾಶ ಇಲ್ಲ ಸುಪ್ರೀಂ ಕೋರ್ಟ್ ತೀರ್ಪು ಸ್ವಾಗತಾರ್ಹ

ಶಾಸನಸಭೆಯ ಕಲಾಪ ನಡೆಯುವ ಸಂದರ್ಭದಲ್ಲಿ ಸದನದೊಳಗೆ ಶಾಸಕರು ನಡೆಸುವ ಹಿಂಸೆ ಅಥವಾ ದಾಂದಲೆಗೆ ವಾಕ್ ಸ್ವಾತಂತ್ರ್ಯ ಅಥವಾ ವಿಶೇಷ ಅಧಿಕಾರದ ಹೆಸರಿನಲ್ಲಿ ರಕ್ಷಣೆ ಇಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿರುವುದು ಸ್ವಾಗತಾರ್ಹ. ಚುನಾಯಿತ ಜನಪ್ರತಿನಿಧಿಗಳು ಸಮರ್ಪಕವಾದ ಮತ್ತು ಸಂಸದೀಯ ನಡವಳಿಕೆ ಹೊಂದಿರಬೇಕಾದ ಅಗತ್ಯ ಇದೆ ಎಂಬುದನ್ನೂ ಇದು ದೃಢಪಡಿಸಿದೆ. ದೇಶದ ದಂಡನಾ ಕಾನೂನಿನ ಅಡಿಯಲ್ಲಿ ಅಪರಾಧ ಎಂದು ಗುರುತಿಸಿದ ಕೃತ್ಯವನ್ನು ಶಾಸನಸಭೆಯ ಒಳಗೆ ನಡೆಸಿದರೂ ಅದನ್ನು ಅಪರಾಧ ಎಂದೇ ಪರಿಗಣಿಸಬೇಕು. ಆದರೆ, ಜನಪ್ರತಿನಿಧಿಗಳಲ್ಲಿ ಕೆಲವರು ಇಂತಹ ಅಪರಾಧವನ್ನು ಸದನದೊಳಗೆ ಎಸಗಿ ಶಿಕ್ಷೆಯಿಂದ ತಪ್ಪಿಸಿಕೊಂಡ ಉದಾಹರಣೆಗಳು ಇವೆ. ಶಾಸಕರು ನಡೆಸುವ ಹಿಂಸಾತ್ಮಕ ಕೃತ್ಯಗಳನ್ನು ನ್ಯಾಯಾಂಗದ ಪರಿಶೀಲನೆಗೆ ಒಳಪಡಿಸಿ, ತನಿಖೆ ಮತ್ತು ವಿಚಾರಣೆಗೆ ಒಳಪಡಿಸುವುದನ್ನು ಸಂಸದೀಯ ವಿಶೇಷಾಧಿಕಾರ ಎಂಬ ಹೆಸರಿನಲ್ಲಿ ತಡೆಯಲಾಗುತ್ತದೆ. ಶಾಸಕಾಂಗದ ವಿಶೇಷಾಧಿಕಾರವನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಲಾಗಿಲ್ಲ. ಜನಪ್ರತಿನಿಧಿಗಳು ತಮ್ಮ ಕಾನೂನುಬದ್ಧ ಕರ್ತವ್ಯ ನಿರ್ವಹಿಸುವುದಕ್ಕೆ ಮಾತ್ರ ಶಾಸಕಾಂಗದ ವಿಶೇಷಾಧಿಕಾರವು ಸೀಮಿತವಾಗಿರಬೇಕು ಎಂಬುದನ್ನು ಸ್ಪಷ್ಟಪಡಿಸುವ ಅಗತ್ಯ ಇದೆ. ಶಾಸನಸಭೆಯಲ್ಲಿ ಹಿಂಸಾಚಾರ ನಡೆಸಿದರೆ ಅದರ ಪರಿಣಾಮದಿಂದ ರಕ್ಷಣೆ ಪಡೆಯಲು ಈ ವಿಶೇಷಾಧಿಕಾರ ಬಳಕೆ ಆಗಬಾರದು.



ಜನಪ್ರತಿನಿಧಿಗಳು ತಮ್ಮ ಕಾನೂನುಬದ್ಧ ಕರ್ತವ್ಯ ನಿರ್ವಹಿಸುವುದಕ್ಕೆ ಮಾತ್ರ ಶಾಸಕಾಂಗದ ವಿಶೇಷಾಧಿಕಾರವು ಸೀಮಿತವಾಗಿರಬೇಕು ಎಂಬುದನ್ನು ಸ್ಪಷ್ಟಪಡಿಸುವ ಅಗತ್ಯ ಇದೆ

ಕೇರಳ ವಿಧಾನಸಭೆಯಲ್ಲಿ 2015ರಲ್ಲಿ ಎಡ ಪ್ರಜಾಸತ್ತಾತ್ಮಕ ರಂಗದ (ಎಲ್‌ಡಿಎಫ್) ಸದಸ್ಯರು ದಾಂದಲೆ ನಡೆಸಿದ್ದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಈ ತೀರ್ಪು ನೀಡಿದೆ. ಆಗ ಆಡಳಿತಾರೂಢ ಮೈತ್ರಿಕೂಟವಾಗಿದ್ದ ಎಲ್‌ಡಿಎಫ್ ಆಗ ವಿರೋಧ ಪಕ್ಷವಾಗಿತ್ತು. ಆಗಿನ ಹಣಕಾಸು ಸಚಿವರ ಮೇಲೆ ಭ್ರಷ್ಟಾಚಾರದ ಆರೋಪ ಇತ್ತು. ಹಾಗಾಗಿ, ಅವರು ಬಜೆಟ್ ಮಂಡಿಸಲು ಅವಕಾಶ ನೀಡುವುದಿಲ್ಲ ಎಂದು ಎಲ್‌ಡಿಎಫ್ ಶಾಸಕರು ದಾಂದಲೆ ನಡೆಸಿದ್ದರು. ಸದನದಲ್ಲಿ ನಡೆಸಿದ್ದ ಈ ದಾಂದಲೆಯಿಂದ ಭಾರಿ ಹಾನಿಯೂ ಆಗಿತ್ತು. ದಾಂದಲೆ ಆರೋಪದಲ್ಲಿ ಆರು ಶಾಸಕರ ಮೇಲೆ ಪ್ರಕರಣ ದಾಖಲಿಸಲಾಗಿತ್ತು. ಅವರ ಪೈಕಿ ಒಬ್ಬರು ಈಗ ಸಚಿವರಾಗಿದ್ದಾರೆ. ಎಲ್‌ಡಿಎಫ್ ಅಧಿಕಾರಕ್ಕೆ ಬಂದ ಬಳಿಕ ಈ ಪ್ರಕರಣವನ್ನು ಹಿಂದಕ್ಕೆ ಪಡೆಯಲು ಬಯಸಿತ್ತು. ಆದರೆ, ತಿರುವನಂತಪುರದ ಮುಖ್ಯ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಈ ಮನವಿಯನ್ನು ತಿರಸ್ಕರಿಸಿದರು. ಹೈಕೋರ್ಟ್ ಕೂಡ ಅದನ್ನು ಎತ್ತಿ ಹಿಡಿಯಿತು. ಹೈಕೋರ್ಟ್ ನಿರ್ಧಾರವನ್ನು ಪ್ರಶ್ನಿಸಿ ಕೇರಳ ಸರ್ಕಾರವು ಸುಪ್ರೀಂ ಕೋರ್ಟ್‌ನ ಮೆಟ್ಟಿಲು ಏರಿತ್ತು. ಈ ಅರ್ಜಿಯ ಆಧಾರದಲ್ಲಿ ಸುಪ್ರೀಂ ಕೋರ್ಟ್ ಈಗ ತೀರ್ಪು ನೀಡಿದೆ. ಹಾಗಾಗಿ, ಸಚಿವ ಮತ್ತು ಇತರರ ವಿರುದ್ಧ ತನಿಖೆ ನಡೆಸಲು ಅವಕಾಶ ದೊರೆತಂತಾಗಿದೆ. ಸದನದ ಕಲಾಪದ ವೇಳೆ ವಿಧಾನಸಭೆಯ ಸದಸ್ಯರು ನಡೆಸಿದ ಕೃತ್ಯಗಳಿಗೆ ರಕ್ಷಣೆ ಒದಗಿಸುವ ಸಂವಿಧಾನದ 194 (2) ವಿಧಿಯನ್ನು ಸರ್ಕಾರ ಉಲ್ಲೇಖಿಸಿತ್ತು. ಈಗಿನ ಆದೇಶವು ಸಂವಿಧಾನದ ವಿಧಿಯ ವ್ಯಾಪ್ತಿ ಏನು ಎಂಬುದನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಲು ನೆರವಾಗಲಿದೆ.

ಶಾಸಕರ ನಡವಳಿಕೆಯು ಪ್ರತಿಭಟನೆಯ ಅಭಿವ್ಯಕ್ತಿಯಷ್ಟೇ ಆಗಿತ್ತು, ವಾಕ್ ಸ್ವಾತಂತ್ರ್ಯದ ಹಕ್ಕಿನಲ್ಲಿ ಈ ಅವಕಾಶ ಇದೆ ಎಂದು ಕೇರಳ ಸರ್ಕಾರವು ವಾದಿಸಿತ್ತು. ಕುರ್ಚಿಗಳನ್ನು ಎತ್ತಿ ಎಸೆಯುವುದು, ಮೇಜುಗಳನ್ನು ಮುರಿಯುವುದು, ಕಂಪ್ಯೂಟರ್ ಮತ್ತು ಧ್ವನಿವರ್ಧಕ ಉಪಕರಣಗಳನ್ನು ಎಸೆಯುವುದನ್ನು ಯಾವ ವಾಕ್ ಸ್ವಾತಂತ್ರ್ಯವೂ ಅವಕಾಶ ಕೊಡುವುದಿಲ್ಲ. ಹಾಗೆಯೇ, ಪ್ರಕರಣವನ್ನು ಹಿಂದಕ್ಕೆ ಪಡೆಯುವ ಸರ್ಕಾರದ ಅಧಿಕಾರದಲ್ಲಿ ನ್ಯಾಯಾಂಗವು ಮಧ್ಯಪ್ರವೇಶಿಸಬಾರದು ಎಂಬ ಸರ್ಕಾರದ ವಾದ ಕೂಡ ಸರಿಯಾದುದಲ್ಲ. ಪ್ರಕರಣವನ್ನು ಹಿಂದಕ್ಕೆ ಪಡೆಯುವ ಸರ್ಕಾರದ ನಿರ್ಧಾರವು ಸದುದ್ದೇಶದಿಂದ ಕೂಡಿದೆಯೇ, ಸಾರ್ವಜನಿಕ ಹಿತಾಸಕ್ತಿಯನ್ನು ಹೊಂದಿದೆಯೇ ಎಂಬುದನ್ನು ಪರಿಶೀಲನೆಗೆ ಒಳಪಡಿಸುವ ಅಧಿಕಾರ ನ್ಯಾಯಾಲಯಕ್ಕೆ ಇದೆ. ಶಾಸನಸಭೆಯ ಸದಸ್ಯರ ವಿಶೇಷಾಧಿಕಾರ ಮತ್ತು ಹಕ್ಕುಗಳ ಬಗ್ಗೆ ಇದ್ದ ಕೆಲವು ತಪ್ಪು ಗ್ರಹಿಕೆಗಳನ್ನು ಸುಪ್ರೀಂ ಕೋರ್ಟ್‌ನ ತೀರ್ಪು ಪರಿಹರಿಸಿದೆ. ಈ ತೀರ್ಪು ಭವಿಷ್ಯದ ಸಂಭಾವ್ಯ ಪ್ರಕರಣಗಳಿಗೆ ಮಾರ್ಗದರ್ಶಿ ಆಗಬೇಕು. ಆರು ಶಾಸಕರ ವಿರುದ್ಧದ ತನಿಖೆ ಕೂಡ ಉತ್ತಮ ಉದಾಹರಣೆ ಎನಿಸಿಕೊಳ್ಳಬೇಕು.

ದಿನದ ಟ್ವೀಟ್


ರಾಜಕಾರಣಿಗಳ ಹೆಸರೇಕೆ?



ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿಯ ಹೆಸರನ್ನು ಮೇಜರ್ ಧ್ಯಾನ್‌ಚಂದ್ ಖೇಲ್ ರತ್ನ ಪ್ರಶಸ್ತಿ ಎಂದು ಬದಲಿಸಿರುವುದು ಮೋದಿ ನೇತೃತ್ವದ ಸರ್ಕಾರದ ಮಹತ್ವದ ನಿರ್ಧಾರ. ಈಗ, ನರೇಂದ್ರ ಮೋದಿ ಕ್ರೀಡಾಂಗಣ ಮತ್ತು ಜೇಟ್ಲಿ ಕ್ರೀಡಾಂಗಣದ ಹೆಸರುಗಳನ್ನೂ ಅವರು ಬದಲಿಸುತ್ತಾರೆ ಎಂಬ ಭರವಸೆ ಇದೆ. ಎಲ್ಲ ರಾಜಕಾರಣಿಗಳ ಹೆಸರುಗಳನ್ನೂ ತೆಗೆದುಹಾಕಿ.

ಧ್ರುವ್ ರಾಠೆ, ಯುಟ್ಯೂಬರ್

ಕಿಡಿನುಡಿ



ಬಿ.ಎಸ್.ಯಡಿಯೂರಪ್ಪನವರು ಸಾಕಷ್ಟು ಶ್ರಮವಹಿಸಿ ರಾಜ್ಯದಲ್ಲಿ ಬಿಜೆಪಿ ಕಟ್ಟಿ ಬೆಳೆಸಿದ್ದಾರೆ. ಬಹಳಷ್ಟು ಅನುಭವ ಹೊಂದಿರುವ ಅವರಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಲಹೆ ಪಡೆದರೆ ತಪ್ಪೇನು? ಮನೆಯ ಹಿರಿಯ ಯಜಮಾನ ಮನೆಯಲ್ಲಿದ್ದರೂ ಎಲ್ಲ ಕೆಲಸಗಳು ಹೇಗೆ ನಡೆಯುತ್ತವೆಯೋ ಅದೇ ರೀತಿ ಸರ್ಕಾರ ನಡೆಯುತ್ತದೆ.

ಆನಂದ್ ಸಿಂಗ್, ಸಚಿವ

25 ವರ್ಷಗಳ ಹಿಂದೆ

ಬುಧವಾರ, 7-8-1996

● **ಡಾ.ರಾಜ್‌ಗೆ ಫಾಲ್ಕೆ ಪ್ರಶಸ್ತಿ ಪ್ರದಾನ**

ನವದೆಹಲಿ, ಆ. 6– ಭಾರತೀಯ ಚಲನಚಿತ್ರ ರಂಗದ ದಾದಾ ಸಾಹೇಬ್ ಫಾಲ್ಕೆ ಉತ್ತುಂಗ ಪ್ರಶಸ್ತಿಯನ್ನು ಇಂದು ಇಲ್ಲಿನ ವಿಜ್ಞಾನ ಭವನದ ಸಭಾಂಗಣದಲ್ಲಿ ನಡೆದ ವರ್ಣರಂಜಿತ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ರಾಷ್ಟ್ರಪತಿ ಡಾ. ಶಂಕರ ದಯಾಳ್ ಶರ್ಮಾ ಅವರು ಕನ್ನಡದ ಮೇರು ನಟ ಡಾ. ರಾಜ್‌ಕುಮಾರ್ ಅವರಿಗೆ ಪ್ರದಾನ ಮಾಡಿ, ಉತ್ತಮ ಚಲನಚಿತ್ರಗಳ ಬೆಳವಣಿಗೆಗೆ ಮತ್ತಷ್ಟು ಕ್ರಿಯಾತ್ಮಕ ಸಂವತ್ಸರಗಳು ಲಭಿಸಲಿ ಎಂದು ಹಾರೈಸಿದರು.

● **ಪ್ರಚಾರಕ್ಕೆ ರಾವ್ ವಿಮಾನ ಬಳಕೆ: ಕೇಂದ್ರಕ್ಕೆ ನೋಟಿಸ್**

ನವದೆಹಲಿ, ಆ.6 (ಪಿಟಿಐ)– ಕಳೆದ ಲೋಕಸಭಾ ಚುನಾವಣೆಯ ಪ್ರಚಾರದ ಸಂದರ್ಭದಲ್ಲಿ ಮಾಜಿ ಪ್ರಧಾನಿ ಪಿ.ವಿ. ನರಸಿಂಹ ರಾವ್ ಅವರು ವಾಯುಪಡೆಯ ವಿಮಾನ ಬಳಸಿದ ಆರೋಪದ ಸಂಬಂಧ ಕೇಂದ್ರ ಸರ್ಕಾರಕ್ಕೆ ದೆಹಲಿ ಹೈಕೋರ್ಟ್ ನೋಟಿಸು ಜಾರಿ ಮಾಡಿದೆ.

ರಾಷ್ಟ್ರೀಯ ಮುಕ್ತಿಮೋರ್ಚಾದ ಅಧ್ಯಕ್ಷರು ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿಯ ಸಂಬಂಧ ವಿಭಾಗೀಯ ಪೀಠ ಅ. 28ರ ಒಳಗೆ ಉತ್ತರಿಸುವಂತೆ ಕೇಂದ್ರಕ್ಕೆ ಆದೇಶಿಸಿದೆ. ಮಾಜಿ ಪ್ರಧಾನಿ ವಾಯು ಪಡೆಯ ವಿಮಾನವನ್ನು ಖಾಸಗಿ ಅಥವಾ ರಾಜಕೀಯ ಉದ್ದೇಶಕ್ಕೆ ಬಳಸಿದ್ದರು ಎಂದು ರಕ್ಷಣಾ ಸಚಿವರು ತಿಳಿಸಿದ್ದರು ಎಂದು ಅರ್ಜಿಯಲ್ಲಿ ಅವರು ಹೇಳಿದ್ದಾರೆ.

50 ವರ್ಷಗಳ ಹಿಂದೆ

ಶನಿವಾರ, 7-8-1971

● **ಕಾವೇರಿ ವಿವಾದ: ತಮಿಳುನಾಡು ದಾವಾ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಮೈಸೂರಿನ 'ತಡೆಅರ್ಜಿ' ಸಲ್ಲಿಕೆ**

ನವದೆಹಲಿ, ಆ. 6– ಮೈಸೂರು ಸರ್ಕಾರಕ್ಕೆ ಪೂರ್ವಭಾವಿಯಾಗಿ ತಿಳಿವಳಿಕೆ ನೀಡದೆ ಕಾವೇರಿ ನೀರು ವಿವಾದಕ್ಕೆ ಸಂಬಂಧಿಸಿದ ತಮಿಳುನಾಡಿನ ದಾವಾ ಬಗೆಗೆ ಮುಂದಿನ ಕ್ರಮ ಕೈಗೊಳ್ಳಬಾರದೆಂದು ಕೋರುವ 'ತಡೆ ಅರ್ಜಿ'ಯೊಂದನ್ನು ಸುಪ್ರೀಂ ಕೋರ್ಟ್‌ನಲ್ಲಿ ಇಂದು ಮೈಸೂರು ರಾಜ್ಯ ಸಲ್ಲಿಸಿತು.

ಕಾವೇರಿ ನೀರು ಹಂಚಿಕೆಗೆ ಸಂಬಂಧಿಸಿದ ವಿವಾದದಲ್ಲಿ ತಮಿಳುನಾಡು ಸರ್ಕಾರವು ದಾವಾ ಹೂಡಿದ್ದು, ಹೇಮಾವತಿ ಮತ್ತು ಕಪಿಲಾ ಯೋಜನೆಗಳ ಕಾಮಗಾರಿಯನ್ನು ಮುಂದುವರಿಸಿಕೊಂಡು ಹೋಗದಂತೆ ತಾತ್ಕಾಲಿಕ ತಡೆ ನೀಡಬೇಕೆಂದು ಕೋರಿದೆ.

● **ಮತಚೀಟಿಗಳ ಮೇಲೆ ಅಸಹಜ ಗುರುತು: ತನಿಖೆಗೆ ದೆಹಲಿ ಹೈಕೋರ್ಟ್‌ನ ನಿರ್ಧಾರ**

ನವದೆಹಲಿ, ಆ. 6– ಲೋಕಸಭೆಗೆ ಮಾರ್ಚ್ ತಿಂಗಳಲ್ಲಿ ನಡೆದ ಚುನಾವಣೆಗಳಲ್ಲಿ ಬಳಸಲಾದ ಬಹುಸಂಖ್ಯೆಗಳ ಮತಚೀಟಿಗಳು ಯಾವುದೋ ಯಾಂತ್ರಿಕ ಅಥವಾ ರಾಸಾಯನಿಕ ವಿಧಾನಗಳಿಂದ ಮಾಡಿದ ಗುರುತುಗಳನ್ನು ತೋರಿಸುತ್ತವೆ ಎಂಬ ಆಪಾದನೆಯ ಬಗ್ಗೆ ತನಿಖೆ ನಡೆಸಲು ದೆಹಲಿ ಹೈಕೋರ್ಟ್ ಇಂದು ನಿರ್ಧರಿಸಿತು.

ಸ್ವಾತಂತ್ರ್ಯ ಚಳವಳಿಯ ಹಿರಿಯ ನಾಯಕರು ಬಂಧನದಲ್ಲಿದ್ದಾಗ ಕಿರಿಯರ ನಿರ್ಭೀತ ಹೋರಾಟದ ಕತೆ...

ಕ್ವಿಟ್ ಇಂಡಿಯಾ ಚಳವಳಿ ಭೂಗತ ಬಾನುಲಿ!



ವಿಶ್ಲೇಷಣೆ

ನಟರಾಜ್ ಹುಳಿಯಾರ್

1942ರ ಆಗಸ್ಟ್ 8, ಆ ಸಂಜೆ ಗಾಂಧೀಜಿ ಬ್ರಿಟಿಷರಿಗೆ 'ಕ್ವಿಟ್ ಇಂಡಿಯಾ' (ಭಾರತ ಬಿಟ್ಟು ತೊಲಗಿ) ಎಂದು ಅಂತಿಮ ಎಚ್ಚರಿಕೆ ಕೊಟ್ಟರು. ಬಾಂಬೆಯ ಗ್ವಾಲಿಯರ್ ಕೆರೆ ಮೈದಾನದ ಸುತ್ತ ಕಾಯುತ್ತಿದ್ದ ಜನಸಮೂಹಕ್ಕೆ 'ಡೂ ಆರ್ ಡೈ' (ಮಾಡು ಇಲ್ಲವೇ ಮಡಿ) ಕರೆಯನ್ನೂ ಕೊಟ್ಟರು. ದೇಶದುದ್ದಕ್ಕೂ ಮಿಂಚಿನ ಸಂಚಾರವಾಗಿತ್ತು. ಮಾರನೆಯ ಬೆಳಗಿಗೇ ಗಾಂಧೀಜಿಯ ಬಂಧನವಾಯಿತು. ಕಾಂಗ್ರೆಸ್ಸಿನ ಮುಂಚೂಣಿ ನಾಯಕರಾದ ನೆಹರೂ, ಸರ್ದಾರ್ ಪಟೇಲ್, ಮೌಲಾನ ಆಜಾದ್ ಸೇರಿದಂತೆ ರಾಷ್ಟ್ರದಾದ್ಯಂತ ಹಿರಿಯ, ಕಿರಿಯ ಚಳವಳಿಯ ನಾಯಕರೆಲ್ಲ ಬಂಧನಕ್ಕೆ ಒಳಗಾದರು.

ಇದರಿಂದ ಸಿಟ್ಟಿಗೆದ್ದ ಜನ ತಂತಾವೇ ನಾಯಕರಾದರು. ತಮಗೆ ತೋಚಿದಂತೆ 'ಮಾಡು ಇಲ್ಲವೇ ಮಡಿ' ಕರೆಯನ್ನು ಜಾರಿಗೊಳಿಸತೊಡಗಿದರು. ಪೊಲೀಸ್ ಠಾಣೆಗಳು, ಅಂಚೆ ಕಚೇರಿಗಳು, ಟೆಲಿಫೋನ್ ವೈರುಗಳು, ರೈಲ್ವೆ ಹಳಿಗಳು... ಮುಂತಾಗಿ ಸರ್ಕಾರಿ ಆಸ್ತಿಯನ್ನು ಧ್ವಂಸ ಮಾಡತೊಡಗಿದರು. ಆಗಸ್ಟ್ 9ರ ರಾತ್ರಿ 32 ವರ್ಷದ ರಾಮಮನೋಹರ ಲೋಹಿಯಾ ಸಮಾಜವಾದಿ ಸಂಗಾತಿಗಳಾದ ಅಚ್ಯುತ್ ಪಟವರ್ಧನ್, ಅರುಣಾ ಅಸಫ್ ಅಲಿ, ಸುಚೇತಾ ಕೃಪಲಾನಿ ಮೊದಲಾದವರ ಜೊತೆಗೆ ಭೂಗತರಾದರು. ಈ ವಿವರಗಳೆಲ್ಲ ಚರಿತ್ರೆಯ ಪುಸ್ತಕಗಳಲ್ಲಿವೆ; ಆದರೆ ಲೋಹಿಯಾರ ಪುಟ್ಟ ತಂಡ ಕಾಂಗ್ರೆಸ್ ರೇಡಿಯೊ ಮೂಲಕ ಆಗಸ್ಟ್ ಕ್ರಾಂತಿಯ ಚೈತನ್ಯವನ್ನು ಕಾಯ್ದಿಟ್ಟುಕೊಂಡು ಚಳವಳಿಯನ್ನು ಮುನ್ನಡೆಸಿದ ರೋಮಾಂಚಕಾರಿ ಸಾಹಸದ ವಿವರಗಳು ಹಿನ್ನೆಲೆಗೆ ಸರಿದುಬಿಟ್ಟಿವೆ; 'ಡೂ ಆರ್ ಡೈ' ಘೋಷಣೆ ರೂಪಿಸಿದವರು ಸೋಷಲಿಸ್ಟ್ ಯೂಸುಫ್ ಮೆಹರಾಲಿ ಎಂಬ ಸತ್ಯವೂ ಹುದುಗಿಹೋಗಿದೆ!


'ಕಾಂಗ್ರೆಸ್ಸಿನ ಮುಂಚೂಣಿ ನಾಯಕರು ಜೈಲಿನಲ್ಲಿರುವಾಗ ಜನ ಹಿಂಸೆಗಿಳಿಯುತ್ತಾರೆ, ಹಿಂಸೆಗಿಳಿದ ತಕ್ಷಣ ಸ್ವಾತಂತ್ರ್ಯ ಚಳವಳಿಯನ್ನು ಬಗ್ಗು ಬಡಿಯುವುದು ಸುಲಭ' ಎಂದು ಬ್ರಿಟಿಷ್ ಆಡಳಿತವು ಭಾರತೀಯ ಪೊಲೀಸರನ್ನೇ ಭಾರತೀಯರ ಮೇಲೆ ಛೂಬಿಟ್ಟಿತ್ತು. ಜನರನ್ನು ಜೈಲಿಗಟ್ಟಿದ ಮೇಲೆ ಚಳವಳಿಯ ಕತೆ ಮುಗಿಯಿತು ಎಂದುಕೊಂಡಿದ್ದ ಬ್ರಿಟಿಷ್ ಸರ್ಕಾರ 'ಇದು ಕಾಂಗ್ರೆಸ್ ರೇಡಿಯೊ! ಭಾರತದ ಯಾವುದೋ ಭಾಗದಿಂದ ನಾವು ಮಾತಾಡುತ್ತಿದ್ದೇವೆ! ತರಂಗಾಂತರ 41.42' ಎಂದು ಬಾನುಲಿಯಲ್ಲಿ ಹೆಣ್ಣು ದನಿಯೊಂದು ಘೋಷಿಸಿದಾಗ ಬೆಚ್ಚಿತು. ಮರುಗಳಿಗೆಗೆ ಗಂಡಿನ ದನಿಯಲ್ಲಿ ಸ್ವಾತಂತ್ರ್ಯ ಚಳವಳಿಗೆ ಮಾರ್ಗದರ್ಶನ, ಬ್ರಿಟಿಷ್ ಹಿಂಸೆಗಳ ವರದಿಗಳು ಬಿತ್ತರವಾಗತೊಡಗಿದವು. ಪ್ರತಿರಾತ್ರಿ 8.30ರ ಸುಮಾರಿಗೆ ಇಕ್ಬಾಲರ 'ಸಾರೆ ಜಹಾಂ ಸೆ ಅಚ್ಛಾ' ಹಾಡು ಮೊಳಗುತ್ತಿತ್ತು; ಹಿಂದೂಸ್ತಾನಿ ಅಥವಾ ಇಂಗ್ಲಿಷಿನಲ್ಲಿ ಶುರುವಾಗುತ್ತಿದ್ದ ಪ್ರಸಾರ 'ವಂದೇ ಮಾತರಂ'ನೊಂದಿಗೆ ಮುಗಿಯುತ್ತಿತ್ತು.

ಕಾಂಗ್ರೆಸ್ ರೇಡಿಯೊ, ಫ್ರೀಡಂ ರೇಡಿಯೊ, ಆಜಾದಿ ರೇಡಿಯೊ ಎಂದು ಕರೆಯಲಾಗುತ್ತಿದ್ದ ಈ ರೇಡಿಯೊವನ್ನು ಬ್ರಿಟಿಷ್ ಪೊಲೀಸರು 'Illegal ಕಾಂಗ್ರೆಸ್ ರೇಡಿಯೊ' ಎನ್ನುತ್ತಿದ್ದರು! ಈ ಪ್ರಸಾರದ ಕೆಲವು ಮಾದರಿಗಳು ಹೀಗಿದ್ದವು: 'ಬ್ರಿಟಿಷರು ಸ್ವಾತಂತ್ರ್ಯ ಚಳವಳಿಯನ್ನು ತುಳಿಯಲು ಏನೆಲ್ಲಾ ಮಾಡುತ್ತಿದ್ದಾರೆ. ಆದರೆ ಭಾರತೀಯರು ಜಗ್ಗದೆ ಎದುರಾಳಿಯನ್ನು ಎದುರಿಸುತ್ತಿದ್ದಾರೆ ಹಾಗೂ ಸ್ವಾತಂತ್ರ್ಯಕ್ಕಾಗಿ ಪ್ರಾಣ ಬಿಡಲೂ ತಯಾರಾಗಿದ್ದಾರೆ ಎಂಬುದು ಬ್ರಿಟಿಷರಿಗೆ ಅರಿವಾಗತೊಡಗಿದೆ... ದಬ್ಬಾಳಿಕೆಯ ಆಳ್ವಿಕೆಯನ್ನು ಮೂಕ ಪ್ರಾಣಿಗಳಂತೆ ಸಹಿಸಲು ಭಾರತೀಯರು ಸಿದ್ಧರಿಲ್ಲ ಎಂಬುದನ್ನು ಚಳವಳಿ ಸಿದ್ಧ ಮಾಡಿ ತೋರಿಸಿದೆ... ಬ್ರಿಟಿಷ್ ಆಡಳಿತ ಕೊನೆಗೊಂಡು ಭಾರತೀಯರ ಆಳ್ವಿಕೆ ಬರುವ ತನಕ ಚಳವಳಿ ಮುಂದುವರಿಯುತ್ತಲೇ ಇರುತ್ತದೆ...'

'ಹಿಂದೂಗಳು, ಮಹಮ್ಮದೀಯರು, ಕ್ರಿಶ್ಚಿಯನ್ನರು, ಪಾರ್ಸಿಗಳು ಎಲ್ಲರೂ ಸ್ವಾತಂತ್ರ್ಯಕ್ಕಾಗಿ ಹಂಬಲಿಸುತ್ತಿದ್ದಾರೆ. ಆದರೆ ಈ ಕಾಲದಲ್ಲಿ ಸುಳ್ಳು ಹೇಳುವುದು ಕಾನೂನುಬದ್ಧವಾಗಿಬಿಟ್ಟಿದೆ! ಉದಾಹರಣೆಗೆ, 'ಈಗ ಭಾರತೀಯರನ್ನು ಭಾರತೀಯರೇ ಆಳುತ್ತಿದ್ದಾರೆ' ಎಂದು ಹೇಳಲಾಗುತ್ತಿದೆ; ಇದಕ್ಕಿಂತ ದೊಡ್ಡ ಸುಳ್ಳೆಂದರೆ 'ಕೆಲವೇ ಮಂದಿ ಮಾತ್ರ ಸ್ವಾತಂತ್ರ್ಯ ಕೇಳುತ್ತಿದ್ದಾರೆ; ಆದರೆ ಒಂಬತ್ತು ಕೋಟಿ ಮಹಮ್ಮದೀಯರು ಸ್ವಾತಂತ್ರ್ಯಕ್ಕೆ ವಿರುದ್ಧವಾಗಿದ್ದಾರೆ' ಎನ್ನುವುದು. ಇಂಥ ಸುಳ್ಳನ್ನು ಬ್ರಿಟಿಷರನ್ನು ಬಿಟ್ಟರೆ ಜಗತ್ತಿನಲ್ಲಿ ಬೇರೆ ಯಾರೂ ಹೇಳಲು ಸಾಧ್ಯವಿಲ್ಲ! ಲಕ್ಷಗಟ್ಟಲೆ, ಕೋಟಿಗಟ್ಟಲೆ ಮುಸ್ಲಿಮರು ನಮಗೆ ಹೆಗಲೆಣೆಯಾಗಿ ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಾ ಬಂದಿದ್ದಾರೆ ಎಂಬುದನ್ನು ಚರಿತ್ರೆ ಸಾರಿ ಹೇಳುತ್ತಿದೆ...'

'ಚಳವಳಿಗಾರರನ್ನು ಬಂಧಿಸಲು ಪೊಲೀಸ್ ಅಧಿಕಾರಿಯೊಬ್ಬ ಪೊಲೀಸ್ ತಂಡದೊಂದಿಗೆ ಹಳ್ಳಿಯೊಂದಕ್ಕೆ ಬಂದ; ಆದರೆ ಹಳ್ಳಿಯ ಜನ ಅಲ್ಲಿ ಹೇಗೆ ಮುತ್ತಿಕೊಂಡರೆಂದರೆ, ಪೊಲೀಸರು ಕಂಗಾಲಾಗಿ ಯಾರನ್ನೂ ಬಂಧಿಸಲಾಗದೆ ಅಲ್ಲಿಂದ ಹೊರಟರು. ಡಾರ್ಜಿಲಿಂಗ್ ಗೋಲಿಬಾರಿನಲ್ಲಿ ಹಲವರು ಗಾಯಗೊಂಡರು, ಮೂವರು ಮೃತಪಟ್ಟರು. ಭಾರತೀಯರು ಇದನ್ನೆಲ್ಲ ಸಹಿಸುವುದಿಲ್ಲ'.

'ವಿದೇಶಿ ವಸ್ತುಗಳ ಫ್ಯಾಕ್ಟರಿ, ಕಚೇರಿಗಳೆದುರು ಶಾಂತಿಯುತವಾಗಿ ಪಿಕೆಟಿಂಗ್ ನಡೆಸಿ. ಸರ್ಕಾರಿ ನೌಕರಿ ಬಿಟ್ಟುಬನ್ನಿ. ಮನೆಮನೆಗಳಲ್ಲಿ ಚರಕಾ ಇರಲಿ. ಹಳ್ಳಿಗಳನ್ನು ಸ್ವಾವಲಂಬಿಗಳನ್ನಾಗಿ ಮಾಡಿ. ಹಿಂದೂ-ಮುಸ್ಲಿಂ ಸಾಮರಸ್ಯ ಕಾಪಾಡಿ'.



ಈ ಪ್ರಸಾರಗಳಲ್ಲಿ ಪತ್ರಿಕೆಗಳಲ್ಲಿ ವರದಿಯಾಗದ ಪೊಲೀಸ್ ಹಿಂಸೆ, ಜನರ ಹೋರಾಟಗಳ ವಿವರಗಳಿರುತ್ತಿದ್ದವು. ಬಾಂಬೆ, ನಾಸಿಕ್, ಕಲ್ಕತ್ತಾದ ಗುಪ್ತ ಕೇಂದ್ರಗಳಿಂದ ಕಾಂಗ್ರೆಸ್ ರೇಡಿಯೊ ಬಿತ್ತರವಾಗುತ್ತಿತ್ತು.

ಬಾಂಬೆ ಬ್ರಿಟಿಷ್ ಸರ್ಕಾರದ ಅಡಿಶನಲ್ ಸೆಕ್ರೆಟರಿ ಎಚ್.ವಿ.ಆರ್. ಅಯ್ಯಂಗಾರ್ ಕಾಂಗ್ರೆಸ್ ರೇಡಿಯೊ ಪ್ರಸಾರಗಳನ್ನು ಕೇಳಿಸಿಕೊಳ್ಳುತ್ತಾ, ಆ ಮಾತುಗಳ ವಿಷಯ, ಭಾಷೆ, ಧೋರಣೆಗಳನ್ನೆಲ್ಲ 'ಸ್ಟಡಿ' ಮಾಡುತ್ತಿದ್ದ; ಬ್ರಿಟಿಷ್ ಅಧಿಕಾರಿ ಸ್ಕಾಟ್ ತಯಾರಿಸಿದ ವರದಿಗಳನ್ನೂ ಆಧರಿಸಿ, 'ಈ ಪ್ರಸಾರದಲ್ಲಿ ಕಾಂಗ್ರೆಸ್ ಸೋಷಲಿಸ್ಟ್ ಫಿಲಾಸಫಿ ಇದೆ; ಭೂಗತವಾಗಿರುವ ಲೋಹಿಯಾ ಈ ಪ್ರಸಾರಗಳ ಹಿನ್ನೆಲೆಯಲ್ಲಿದ್ದಂತಿದೆ' ಎಂದು ತೀರ್ಮಾನಿಸಿದ. 'ಸ್ವತಂತ್ರ ಇಂಡಿಯಾ ರೈತರ, ಕಾರ್ಮಿಕರ, ಕೂಲಿಕಾರರದಾಗಿರುತ್ತದೆ'; 'ಸ್ವಾತಂತ್ರ್ಯಕ್ಕೋಸ್ಕರ ಕ್ರಾಂತಿ ಎಂದರೆ ಬಡವರಿಗಾಗಿ ಕ್ರಾಂತಿ...' ಇಂಥ ವಾಕ್ಯಗಳನ್ನು ಅಯ್ಯಂಗಾರ್ ಹೆಕ್ಕಿ ತೋರಿಸಿದ. 'ಇದು ಸೋಷಲಿಸ್ಟರ ಕ್ರಾಂತಿಕಾರಿ ಚಳವಳಿ' ಎಂದು ಬ್ರಿಟಿಷ್ ಸರ್ಕಾರ ತೀರ್ಮಾನಿಸಿತು.

ಇಂದುಮತಿ ಕೇಳ್ಕರ್ ಬರಹಗಳಲ್ಲಿ, ಗೌತಮ್ ಚಟರ್ಜಿ ಸಂಗ್ರಹಿಸಿದ ಪತ್ರಾಗಾರದ ದಾಖಲೆಗಳಲ್ಲಿ ಈ ಕುರಿತ ಹೆಚ್ಚಿನ ವಿವರಗಳಿವೆ: ರೇಡಿಯೊದ ಐಡಿಯಾ ಕೊಟ್ಟ ಲೋಹಿಯಾ ಹಣಕಾಸನ್ನೂ ಕಲೆ ಹಾಕಿದ್ದರು; ಪ್ರಸಾರಕ್ಕಾಗಿ ವರದಿ, ವಿಶ್ಲೇಷಣೆಗಳನ್ನು ಸಿದ್ಧಪಡಿಸುತ್ತಿದ್ದರು. ವಿಠಲದಾಸ್ ಮಾಧವಜೀ, ಚಂದ್ರಕಾಂತ ಬಾಬುರಾವ್ ಜವೇರಿ ಮೊದಲಾದವರ ಜೊತೆಗೆ 22 ವರ್ಷದ ದಿಟ್ಟ ವಿದ್ಯಾರ್ಥಿನಿ ಉಷಾ ಮೆಹ್ತಾ 'ಕಾಂಗ್ರೆಸ್ ರೇಡಿಯೊ'ದ ನಿತ್ಯದ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು. 90 ದಿನಗಳ ನಂತರ ಈ ಅಲೆಮಾರಿ ರೇಡಿಯೊ ಸ್ಟೇಶನ್ನಿನ ಮೇಲೆ ಪೊಲೀಸರ ದಾಳಿಯಾಯಿತು; ಲೋಹಿಯಾ ಮಾರುವೇಷಗಳಲ್ಲಿ, ಯಾವಯಾವುದೋ ಹೆಸರುಗಳಲ್ಲಿ ದೇಶದ ಯಾವುದೋ ಮೂಲೆಯಲ್ಲಿದ್ದರು. ವಿಠಲದಾಸ್, ಜವೇರಿ, ಉಷಾ ಮೆಹ್ತಾ ಜೈಲು ಶಿಕ್ಷೆಗೊಳಗಾದರು. ಸ್ವತಂತ್ರ ಭಾರತದಲ್ಲಿ ಮುಂಬೈ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆದ ಉಷಾ ಮೆಹ್ತಾ ಇಂಡಿಯಾದ ಸಾರ್ವಜನಿಕ ಜೀವನದ ಪತನ ಕಂಡು 'ಇದಕ್ಕಾಗಿ ನಾವು ಅಂದು ಹೋರಾಡಬೇಕಿತ್ತೇ?' ಎಂದು ನೊಂದುಕೊಳ್ಳುತ್ತಿದ್ದರು; 2010ರಲ್ಲಿ ತೀರಿಕೊಂಡರು.

ಈ ಸಲವೂ ಎಂದಿನಂತೆ ಕ್ವಿಟ್ ಇಂಡಿಯಾ ಚಳವಳಿಯ ಯಾಂತ್ರಿಕ ಆಚರಣೆಗಳು ನಡೆಯಲಿವೆ; ಈ ಚಳವಳಿಯ ವಾರಸುದಾರರು ತಾವೇ ಎಂದು ಬಣ್ಣಿಸಿಕೊಳ್ಳುವ ಬೂಟಾಟಿಕೆ ದಾಸರೂ ಮೆರೆಯಲಿದ್ದಾರೆ. ಈ ಅಬ್ಬರಗಳ ನಡುವೆ, ನಿಜಕ್ಕೂ ಕ್ವಿಟ್ ಇಂಡಿಯಾ ಚಳವಳಿಯನ್ನು ಮುನ್ನಡೆಸಿದ ಅಜ್ಞಾತ ಗುಂಪುಗಳು; ಪೊಲೀಸರ ಹಿಂಸೆಗೆ ಬಲಿಯಾದ ಜನರ ತ್ಯಾಗ; ರಾತ್ರೋರಾತ್ರಿ ಕರಪತ್ರಗಳನ್ನು ಹಂಚುತ್ತಿದ್ದ ನಿರ್ಭೀತ ತರುಣ ತರುಣಿಯರು; ಭೂಗತ ಬಾನುಲಿಯ ಮೂಲಕ ದೇಶವನ್ನು ಎಚ್ಚರದಲ್ಲಿಟ್ಟ ಧೀರರು... ಇಂಥ ಸ್ಫೂರ್ತಿದಾಯಕ ಸತ್ಯಗಳು ಕಣ್ಮರೆಯಾಗಬಾರದು. ಜಗತ್ತಿನ ಸ್ವಾತಂತ್ರ್ಯ ಹೋರಾಟಗಳ ಚರಿತ್ರೆಯಲ್ಲೇ ಅನನ್ಯವಾದ 'ಕ್ವಿಟ್ ಇಂಡಿಯಾ' ಚಳವಳಿ ನಮ್ಮ ನಾಯಕರು ಹಾಗೂ ಜನಸಾಮಾನ್ಯರು ತ್ಯಾಗ, ಬಲಿದಾನಗಳ ಮೂಲಕ ಗಳಿಸಿಕೊಟ್ಟಿರುವ ಸ್ವಾತಂತ್ರ್ಯ ಎಷ್ಟು ಅಮೂಲ್ಯವಾದುದು, ಯಾಕೆ ಅದನ್ನು ನಾವು ರಕ್ಷಿಸಿಕೊಳ್ಳುತ್ತಲೇ ಇರಬೇಕಾಗುತ್ತದೆ ಎಂಬುದನ್ನು ಎಲ್ಲರಿಗೂ ನೆನಪು ಮಾಡುತ್ತಿರಲೇಬೇಕು.

ಚುರುಮುರಿ



ಇಂತಿ ದುಃಖತಪ್ತರು

● ಸಿ.ಎನ್.ರಾಜು

ಲಕ್ಕಿಗಳು ಗೂಟದ ಕಾರು ಹತ್ತಿದ್ದರು. ಸಚಿವರಾಗದ ದುಃಖಿಗಳು ಶೋಕಸಭೆಯಲ್ಲಿ ನೋವು ತೋಡಿಕೊಂಡರು.

'ಮನೆ ದೇವರಿಗೆ ಕಾಯಿ ಒಡೆದೆ, ಫ್ಯಾಮಿಲಿ ಸ್ವಾಮೀಜಿಯ ಪಾದ ಹಿಡಿದೆ. ಫಲ ಸಿಗಲಿಲ್ಲ...' ಒಬ್ಬರು ಕಣ್ಣು ಒರೆಸಿಕೊಂಡರು.

'ಮಂತ್ರಿಯಾಗೇ ಕ್ಷೇತ್ರಕ್ಕೆ ಬರ್ತೀನಿ ಅಂತ ಮಾತು ಕೊಟ್ಟಿದ್ದೆ. ಈಗ ಹೇಗೆ ಹೋಗಲಿ?...' ಇನ್ನೊಬ್ಬರ ಸಂಕಟ.

'ಸೂಟ್‌ಕೇಸು, ಸಿ.ಡಿ ಕೇಸು ಯಾವುದೂ ಇಲ್ಲದೆ ಪರಿಶುದ್ಧನಾಗಿದ್ದ ನನಗೆ ಮಂತ್ರಿ ಸ್ಥಾನ ಕೊಡದೆ ಮಾನ ಕಳೆದುಬಿಟ್ರು' ಎಂದರು ಮತ್ತೊಬ್ಬರು.

'ಹಿಂದಿನ ಸಂಪುಟದಲ್ಲಿ ಉನ್ನತ ಖಾತೆ ಹಿಡಿದು ಕ್ಷೇತ್ರದ ತುಂಬಾ ಫುಡ್‌ಕಿಟ್ ಹಂಚಿ ಜನಪ್ರಿಯ ಕೆಲಸ ಮಾಡಿದ್ದ, ನನ್ನ ಸೇವೆ ಪರಿಗಣಿಸಲಿಲ್ಲ...' ನಿಟ್ಟುಸಿರುಬಿಟ್ಟರು ಹಿರಿಯರು.

'ಮಕ್ಕಳನ್ನೆಲ್ಲಾ ಪಾಸ್ ಮಾಡಿದ ಮಂತ್ರಿಯೇ ಫೇಲ್ ಆಗಿಬಿಟ್ಟರು, ನಿಮ್ಮದೇನು ಮಹಾ ಬಿಡಿ...' ಸಮಾಧಾನ ಹೇಳಿದ್ರು ಪಕ್ಕದವರು.

'ನಿಮ್ಮೂರಿನ ಸಿದ್ಧಿವಿನಾಯಕ ಸೇವಾ ಮಂಡಳಿ ಅಧ್ಯಕ್ಷರಾಗಿದ್ದ ನೀವು ಎಮ್ಮೆಲ್ಲೆಯಾಗಿ ಸರ್ಕಾರದ ಮಂಡಳಿ ಅಧ್ಯಕ್ಷರಾದರೂ ಆಗಿದ್ರಿ, ನಮಗೆ ಆ ಭಾಗ್ಯವೂ ಇಲ್ವಲ್ಲಾರೀ...' ಮಗದೊಬ್ಬರು ಅಲವತ್ತುಕೊಂಡರು.

'ನೀವು ಪರಾಕ್ರಮಿ ಥರಾ ಮೈಕ್ ಸಿಕ್ಕಿದಾಗಲೆಲ್ಲಾ ನಾಯಕರನ್ನು ಹೀನಾಮಾನವಾಗಿ ಬೈದು ವೈರಲ್ ಆಗಿ ರೈವಲ್ ಆದ್ರಿ, ನಾನು ನಾಯಕರಿಗೆ ನಿಷ್ಠನಾಗಿ, ವಿಧೇಯನಾಗಿದ್ರೂ ಸಚಿವ ಸ್ಥಾನ ದಕ್ಕಲಿಲ್ಲ...' ಮತ್ತೊಬ್ಬರ ದುಃಖ.

'ಅತೃಪ್ತ ಶಾಸಕರು ಬಂಡೆದ್ದು ಪ್ರತ್ಯೇಕ ಸಭೆ ಮಾಡ್ತಿದ್ದಾರೆ ಅಂತ ಟೀವಿಯಲ್ಲಿ ಬ್ರೇಕಿಂಗ್ ನ್ಯೂಸ್ ಬರ್ತಿದೆ...' ಎಂದು ಶಾಸಕರು ಟಿ.ವಿ. ನೋಡಿ ಗಾಬರಿಯಾದರು.

'ಚಾನೆಲ್‌ನವರು ಹೊರಗೆ ಕಾಯ್ತಾ ಇರಬಹುದು. ಕೇಳಿದ್ರೆ ಊಟಕ್ಕೆ ಸೇರಿದ್ವಿ, ಯಾವುದೇ ಭಿನ್ನಾಭಿಪ್ರಾಯ ಇಲ್ಲ ಅಂತ ಹೇಳೋಣ. ಇಲ್ಲಾಂದ್ರೆ ಇದನ್ನೇ ಗುಲ್ಲೆಬ್ಬಿಸಿ, ಗಬ್ಬೆಬ್ಬಿಸಿ ಮುಂದಿನ ಚುನಾವಣೆಗೆ ನಮಗೆ ಟಿಕೆಟ್ ಇಲ್ಲದಂತೆ ಮಾಡಿಬಿಡ್ತಾರೆ...' ಎಂದು ಎಲ್ಲರೂ ಲಗುಬಗೆಯಲ್ಲಿ ಹೊರಟರು.

ಸಂಗತ

ಭ್ರಷ್ಟಾಚಾರವೆಂಬ ವೈರಸ್: ಮದ್ದೆಲ್ಲಿ?

ದೇಶದ ಭ್ರಷ್ಟಾಚಾರ ನಿರ್ಮೂಲನಾ ಸಾಮರ್ಥ್ಯದ ಬಗ್ಗೆ ಜನ ನಿರಾಶಾವಾದಿಗಳಾಗಿದ್ದಾರೆ ಎನ್ನುತ್ತದೆ ಸಮೀಕ್ಷೆ

● ಡಾ. ಸರ್ಫ್ರಾಜ್ ಚಂದ್ರಗುತ್ತಿ

ಭ್ರಷ್ಟಾಚಾರ ಎಂಬುದು ವಿಶ್ವವ್ಯಾಪಿಯಾದ ರೋಗ ನಿಜ. ಆದರೂ ಮೂವತ್ತೂರು ಕೋಟಿ ದೇವತೆಗಳು ನೆಲೆಸಿದ್ದಾರೆಂದು ಹೇಳಲಾಗಿರುವ ನಮ್ಮ ದೇಶದಲ್ಲೇಕೆ ನೈತಿಕತೆ ಹಿಂದೆ ಸರಿದು, ಇಷ್ಟೊಂದು ಪ್ರಮಾಣದಲ್ಲಿ ಭ್ರಷ್ಟಾಚಾರ ವಿಜೃಂಭಿಸುತ್ತಿದೆ ಎಂಬುದು ಅರ್ಥವಾಗುವುದಿಲ್ಲ. ಬದುಕೇ ಬೇರೆ ಧರ್ಮವೇ ಬೇರೆ ಎಂಬ ನೀಚ ಮನಃಸ್ಥಿತಿಯಿಂದಾಗಿ ಭಾರತದ ಪ್ರಜಾತಂತ್ರ ವ್ಯವಸ್ಥೆಗೆ ಭಾರಿ ಗಂಡಾಂತರ ಉಂಟಾಗಿರುವುದಂತೂ ಸತ್ಯ.

ಕೊಪ್ಪಳದಲ್ಲಿ ಯಶಸ್ವಿ ಟೌನ್‌ಶಿಪ್‌ನ ಕುಡಿಯುವ ನೀರು ಮತ್ತು ಒಳಚರಂಡಿ ಕಾರ್ಯಕ್ಕೆ ಅನುಮತಿ ನೀಡಲು ಮುಂಗಡವಾಗಿ ಲಂಚ ಪಡೆದುಕೊಳ್ಳುವಾಗ ಜಲಮಂಡಳಿಯ ಮುಖ್ಯ ಎಂಜಿನಿಯರ್ ಒಬ್ಬರನ್ನು ಭ್ರಷ್ಟಾಚಾರ ನಿಗ್ರಹ ದಳ ಇತ್ತೀಚೆಗೆ ಬಂಧಿಸಿರುವುದು ವರದಿಯಾಗಿತ್ತು. ಪಿಎಚ್.ಡಿ ವಿದ್ಯಾರ್ಥಿಯೊಬ್ಬರಿಂದ ಲಂಚ ಪಡೆದ ಆರೋಪ ಸಾಬೀತಾದ್ದರಿಂದ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿಯೊಬ್ಬರಿಗೆ ಜೈಲುವಾಸ ಸಮೇತ ದಂಡ ವಿಧಿಸಲಾಗಿರುವ ಸುದ್ದಿ ಸದ್ದುಮಾಡಿದೆ. ಜಮೀನಿನ ಮ್ಯುಟೇಷನ್ ಮಾಡಿಕೊಡಲು ತಹಶೀಲ್ದಾರರೊಬ್ಬರು ಲಂಚಕ್ಕೆ ಬೇಡಿಕೆಯಿಟ್ಟು, ಮುಂಗಡ ಸ್ವೀಕರಿಸುವಾಗ ಎಸಿಬಿ ಬಲೆಗೆ ಬಿದ್ದಿದ್ದಾರೆ.

ಇಂತಹ ನೂರಾರು ಘಟನೆಗಳಿಗೆ ಈ ದೇಶದ ಪ್ರಜೆ ಮೂಕಪ್ರೇಕ್ಷಕನಾಗಿದ್ದಾನೆ. ಸಾಮಾಜಿಕ, ರಾಜಕೀಯ, ಔದ್ಯೋಗಿಕ ಹೀಗೆ ಎಲ್ಲ ಸ್ತರಗಳಲ್ಲಿಯೂ ಕಾಸು ಕೊಡದೆ ಕೆಲಸವಾಗದು ಎಂಬ ಸ್ಥಿತಿ ನಿರ್ಮಾಣವಾಗಿದೆ. ಲಂಚ ಸರಾಗವಾಗಿ ಹರಿದುಬರಲು ಎಲ್ಲ ಸರ್ಕಾರಿ ಕಚೇರಿಗಳಲ್ಲಿ ಮಧ್ಯವರ್ತಿಗಳು ಹುಟ್ಟಿಕೊಂಡಿದ್ದಾರೆ. ಮತ್ತೂ ವಿಚಿತ್ರವೆಂದರೆ, ಸರ್ಕಾರಿ ಕಚೇರಿಗಳಲ್ಲಿ ದೇವರ ಫೋಟೊ ತೂಗುಹಾಕಿ ಪೂಜೆ, ಪ್ರಸಾದ ಎಲ್ಲ ಆದ ಮೇಲೆ ದಂಧೆ ಶುರುವಾಗುತ್ತದೆ! ದೇವರಿಗೆ ತಪ್ಪು ಕಾಣಿಕೆ ಸಲ್ಲಿಸಿ ಯಾವ ಅನಾಚಾರವನ್ನಾದರೂ ಮಾಡಬಹುದೆಂಬ ವಿನಾಶಕಾರಿ ಮನಃಸ್ಥಿತಿ ನಮ್ಮ ಸುತ್ತ ಬೆಳೆದುಹೋಗಿದೆ.

'ನಾವು ಪ್ರತೀ ತುತ್ತು ಅನ್ನ ತಿನ್ನುವಾಗಲೂ ಈ ಅನ್ನ ನಮ್ಮ ಬೆವರಿನಿಂದ ಬೇಯಿಸಿದ್ದೇ ಅಥವಾ ಯಾರದ್ದೋ ಕಣ್ಣೀರಿನಿಂದಲೇ ಎಂದು ಆಲೋಚಿಸಬೇಕು' ಎಂದಿದ್ದರು ಡಿವಿಜಿ. ಆದರೆ ಇಂದು ಅನೇಕರು ಕಾಡಿಸಿ ಪೀಡಿಸಿ ಪ್ರತಿದಿನ, ಪ್ರತಿಕ್ಷಣ ಲಂಚಕ್ಕಾಗಿ ನಾಲಗೆ ಚಾಚುತ್ತಾರೆ. ಈ ಹಿಂದೆ ಲೋಕಾಯುಕ್ತ, ಈಗಿನ ಎಸಿಬಿ, ಐಟಿ ದಾಳಿಯ ಸಂದರ್ಭದಲ್ಲಿ ಇಂತಹ ಹೆಗ್ಗಣಗಳ ವಿರಾಟ್‌ರೂಪಗಳನ್ನು ನೋಡಿ ಜನ ನಿಬ್ಬೆರಗಾಗಿದ್ದಾರೆ. ಇಂಥ ವ್ಯವಸ್ಥೆಯನ್ನು ಕಂಡೇ ಕವಿ ಬಿ.ಸಿ.ರಾಮಚಂದ್ರ ಶರ್ಮ- 'ಕಡಲುಗಳ್ಳರ ಕಾಟ ಕೊನೆಗೊಂಡರೇನಂತೆ, ಒಡಲುಗಳ್ಳರು ಇನ್ನೂ ಇಲ್ಲೆ ಇಹರೋ' ಎಂದು ಉದ್ಗರಿಸಿದ್ದಾರೆ ('ಎಂದಿಗೆ'- ಕವನ).

ಇವರೆಲ್ಲರ ನಡುವೆ, ತಮ್ಮ ವೃತ್ತಿಧರ್ಮಕ್ಕೆ ಲೋಪವಾಗದಂತೆ ಅತ್ಯಂತ ಪ್ರಾಮಾಣಿಕತೆಯಿಂದ ಜನಸೇವೆ ಮಾಡುವ ಅಧಿಕಾರಿಗಳಿದ್ದಾರೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಎಲ್ಲವೂ ಹಾಳಾಗಿಲ್ಲ, ಒಳ್ಳೆಯದು ಇನ್ನೂ ಇದೆ ಎಂಬ ಭರವಸೆ ಉಳಿಸಿಕೊಳ್ಳುವಂತೆ ಅವರು ಬದುಕುತ್ತಿದ್ದಾರೆ. ಆದರೆ ಇಂತಹ ಪ್ರಾಮಾಣಿಕ ಸೇವಕರನ್ನು ಹುಡುಕಿ ವ್ಯವಸ್ಥೆ ಬೇಟೆಯಾಡಿರುವ ಉದಾಹರಣೆಗಳೂ ಇವೆ!

1974ರ ಜೂನ್ 5ರಂದು ಪಟ್ನಾದ ಗಾಂಧಿ ಮೈದಾನದಲ್ಲಿ ಜಯಪ್ರಕಾಶ್ ನಾರಾಯಣ್ 'ಈ ದೇಶದಲ್ಲಿ ಹೆಚ್ಚುತ್ತಿರುವುದು ಎರಡೇ. ಒಂದು, ಬೆಲೆಗಳು. ಮತ್ತೊಂದು, ಭ್ರಷ್ಟಾಚಾರ. ಲಂಚ ನೀಡದೆ ಇಲ್ಲಿ ಯಾವ ಕೆಲಸವೂ ನಡೆಯುವುದಿಲ್ಲ. ವಿದ್ಯೆ ನೀಡುವ ಸಂಸ್ಥೆಗಳೂ ಭ್ರಷ್ಟಾಚಾರದ ಆಗರಗಳಾಗಿವೆ' ಎಂದಿದ್ದರು. ಅಂದಿನ ಸ್ಥಿತಿ ಇಂದಿಗೂ ಬದಲಾಗಿಲ್ಲ.

ಭ್ರಷ್ಟಾಚಾರವು ಕೊರೊನಾಕ್ಕಿಂತ ಭೀಕರ ವೈರಸ್! ಭ್ರಷ್ಟಾಚಾರದಿಂದ ಇಡೀ ಸಮಾಜದ-ದೇಶದ ನೈತಿಕತೆಯ ಅಧಃಪತನವಾಗುತ್ತದೆ. ಏಷ್ಯಾ ಖಂಡದಲ್ಲಿಯೇ ಭಾರತದಲ್ಲಿ ಅತಿ ಹೆಚ್ಚು ಲಂಚದ ಪ್ರಕರಣಗಳು ದಾಖಲಾಗುತ್ತಿವೆ ಎಂದು ಭ್ರಷ್ಟಾಚಾರದ ಮೇಲಿನ ಕಣ್ಗಾವಲು ಸಂಸ್ಥೆ ಟ್ರಾನ್ಸ್‌ಪರೆನ್ಸಿ ಇಂಟರ್‌ನ್ಯಾಷನಲ್ ಸಮೀಕ್ಷೆ ಹೇಳಿರುವುದು ವರದಿಯಾಗಿದೆ.



ಆಫ್ರಿಕಾದ ಜನಪ್ರಿಯ ಲೇಖಕ ಚಿನುವ ಅಚಿಬೆ 'ಎ ಮ್ಯಾನ್ ಆಫ್ ದಿ ಪೀಪಲ್' (ಜನನಾಯಕ- ಅನು: ವಿಕ್ರಂ ಚದುರಂಗ) ಕಾದಂಬರಿಯಲ್ಲಿ ರಾಜಕಾರಣದ ಭ್ರಷ್ಟ ವ್ಯವಸ್ಥೆ ಕುರಿತು ಮನೋಜ್ಞ ಚಿತ್ರಣ ನೀಡುತ್ತಾರೆ. ಆಫ್ರಿಕಾದ ಗೂಗಿ, ವೋಲೆ ಶೋಯಿಂಕಾ ಅವರ ಕೃತಿಗಳಲ್ಲಿ ಹಾಗೂ ಕನ್ನಡದ ಸಂದರ್ಭದಲ್ಲಿ ಮಾಸ್ತಿ, ಕಾರಂತ, ಲಂಕೇಶ್, ತೇಜಸ್ವಿ, ಅನಂತಮೂರ್ತಿ ಮೊದಲಾದವರ ಬರಹಗಳಲ್ಲಿ ರಾಜಕಾರಣದ ಭ್ರಷ್ಟಗೊಂಡ ವ್ಯವಸ್ಥೆಯ ಚಿತ್ರಣವಿದೆ.

ಸರ್ಕಾರಿ ನೌಕರರನ್ನು ಕಚೇರಿಯ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡಲು ಪ್ರಧಾನಿ ಇತ್ತೀಚೆಗೆ 'ಮಿಷನ್ ಕರ್ಮಯೋಗಿ' ಎಂಬ ಯೋಜನೆ ರೂಪಿಸಿದ್ದಾರೆ. ಈ ಮೂಲಕ ಅವರು ದಕ್ಷ ಹಾಗೂ ಚೈತನ್ಯಯುತರಾಗಿ ಕರ್ತವ್ಯ ನಿರ್ವಹಿಸಲು ಸೂಕ್ತ ತರಬೇತಿ ನೀಡುವ ಪ್ರಸ್ತಾವವಿದೆ ಎಂದು ಹೇಳಲಾಗಿದೆ. 2022ರ ಡಿಸೆಂಬರ್ ವೇಳೆಗೆ ದೇಶವನ್ನು ಭ್ರಷ್ಟಾಚಾರ ಮುಕ್ತಗೊಳಿಸಬೇಕೆಂಬ ಸಂಕಲ್ಪವನ್ನು ಸರ್ಕಾರ ಘೋಷಿಸಿದೆ. ಈ ಕುರಿತು ಜನಾಭಿಪ್ರಾಯ ಕೇಳಿ 'ಲೋಕಲ್ ಸರ್ಕಲ್' ಸಂಸ್ಥೆ ನಡೆಸಿದ ಸಮೀಕ್ಷೆಯಲ್ಲಿ, ಜನ ಭ್ರಷ್ಟಾಚಾರ ನಿರ್ಮೂಲನೆ ಕಷ್ಟ ಸಾಧ್ಯ ಎಂದಿದ್ದಾರೆ. ದೇಶದ ಭ್ರಷ್ಟಾಚಾರ ನಿರ್ಮೂಲನಾ ಸಾಮರ್ಥ್ಯದ ಬಗ್ಗೆ ಅವರು ನಿರಾಶಾವಾದಿಗಳಾಗಿದ್ದಾರೆ ಎನ್ನುತ್ತದೆ ಸಮೀಕ್ಷೆ. ಏನೇ ಇರಲಿ, ಸರ್ಕಾರದ ಈ ನಿರ್ಧಾರ ಜನಸಾಮಾನ್ಯರಲ್ಲಿ ವ್ಯವಸ್ಥೆಯ ಸುಧಾರಣೆ ಕುರಿತು ಸಣ್ಣ ಪ್ರಮಾಣದಲ್ಲಾದರೂ ಭರವಸೆಯನ್ನು ಹುಟ್ಟುಹಾಕಿದೆ.

ವಾಚಕರ ವಾಣಿ

ನಿತ್ಯವೂ ಸೋಲುತ್ತದೆ...

ಒಲಿಂಪಿಕ್ಸ್ ಕ್ರೀಡಾಕೂಟದ ಹಾಕಿ ತಂಡದಲ್ಲಿ ವಂದನಾ ಕಟಾರಿಯ ತಮ್ಮ ಪ್ರತಿಭೆಯನ್ನು ಮೆರೆದಿರುವುದಕ್ಕಾಗಿ ಪ್ರಶಂಸೆಗೆ ಒಳಗಾಗಬೇಕಿತ್ತು. ಆದರೆ ಜಾತಿನಿಂದನೆಗೆ ಒಳಗಾಗಿದ್ದಾರೆ. ದಲಿತ ಮಹಿಳೆಯಿಂದ ಹಾಕಿ ತಂಡ ಸೋತಿಲ್ಲ, ಜಾತಿ ನಿಂದನೆಯಿಂದ ಭಾರತ ಸಾಮಾಜಿಕವಾಗಿ ನಿತ್ಯವೂ ಸೋಲುತ್ತದೆ.

ನಂಜನಹಳ್ಳಿ ನಾರಾಯಣ, ಬೆಂಗಳೂರು

ಪ್ರಮಾಣವಚನ ಸ್ವೀಕಾರದ ಈ ಪರಿ!

ಕೆಲವು ದಿನಗಳ ಹಿಂದೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದು ಲಾರಿ ಅಪಘಾತವಾಗಿ ಮಗುಚಿ ಬಿದ್ದಿತ್ತು. ಅಲ್ಲಿ ಸೇರಿದ ಜನರು ಚಾಲಕ, ಕ್ಲೀನರ್ ಅವರನ್ನು ರಕ್ಷಣೆ ಮಾಡುವುದು ಬಿಟ್ಟು, ಲಾರಿಯಲ್ಲಿ ಇದ್ದ ಸೋಪು, ಶಾಂಪೂ ಮತ್ತಿತರ ವಸ್ತುಗಳನ್ನು ಎಷ್ಟು ಸಿಗುತ್ತದೋ ಅಷ್ಟು ಎತ್ತಿಕೊಂಡು ಓಡುತ್ತಿದ್ದರು. ಮತ್ತೊಮ್ಮೆ, ಪೆಟ್ರೋಲ್ ತುಂಬಿದ ಲಾರಿ ಮಗುಚಿದಾಗ ಜನರು ಅಪಾಯ ಲೆಕ್ಕಿಸದೆ, ಮನೆಯಲ್ಲಿನ ಪಾತ್ರೆ, ಚೊಂಬು, ಬಕೆಟ್‌ನಲ್ಲಿ ಸಿಕ್ಕಷ್ಟು ಪೆಟ್ರೋಲ್ ತುಂಬಿಸಿಕೊಂಡು ಓಡುತ್ತಿದ್ದರು.

ಇತ್ತೀಚೆಗೆ ರಾಜ್ಯದಲ್ಲಿ ಸಚಿವರು ಪ್ರಮಾಣವಚನ ಸ್ವೀಕರಿಸಿದ ಪರಿ ನೋಡಿ ಈ ಘಟನೆಗಳು ನೆನಪಿಗೆ ಬಂದವು. ರಾಜ್ಯದ ಜನರು ಕೋವಿಡ್, ನೆರೆ ಹಾವಳಿ, ಬೆಲೆ ಏರಿಕೆ, ನಿರುದ್ಯೋಗದಂತಹ ಆಘಾತಗಳಿಂದ ಒದ್ದಾಡುತ್ತಿರುವಾಗ ಶಾಸಕರು ಸಚಿವ ಸ್ಥಾನಕ್ಕಾಗಿ ಲಾಬಿ ಮಾಡುತ್ತಾ, ಸಿಕ್ಕರೆ ಸಾಕೆಂದು ಅವಸರಪಡುತ್ತಾ ಪರದಾಡುತ್ತಿದ್ದರು. ಸ್ಥಾನ ಸಿಕ್ಕವರಿಗೆ ಒಳಗೊಳಗೆ ಒಂದಿಷ್ಟು ಖುಷಿ, ಸಿಗದಿದ್ದವರ ಅಪಾರ ದುಃಖ ನೋಡಿ ರಾಜ್ಯದ ಜನ ಮುಸಿ ಮುಸಿ ನಗುತ್ತಿದ್ದರು. ಜನರ ಸೇವೆ ಮಾಡಲು ಲಾಬಿ ಮಾಡಿ ಸಚಿವರಾಗಬೇಕೇ ಎಂಬ ಪ್ರಶ್ನೆ ಮತದಾರನನ್ನು ಸದಾ ಕಾಡುತ್ತಲೇ ಇರುತ್ತದೆ.

ವಿ.ತಿಪ್ಪೇಸ್ವಾಮಿ, ಹಿರಿಯೂರು

ಲೈವ್ ಸಂವಾದ: ಒಂದು ಸ್ಪಷ್ಟನೆ

'ಬೊಮ್ಮಾಯಿ ಸಚಿವ ಸಂಪುಟ: ಹೊಸ ದಾರಿ ಹಿಡಿಯಬಹುದೇ?' ಎಂಬ 'ಪ್ರಜಾವಾಣಿ' ಲೈವ್ ಸಂವಾದದಲ್ಲಿ ಶಾಸಕ ಎಸ್.ಸುರೇಶ್ ಕುಮಾರ್ ಅವರಿಗೆ ಸಚಿವ ಸ್ಥಾನ ಲಭ್ಯವಾಗದ ಕುರಿತು ನನ್ನ ಅಭಿಪ್ರಾಯ ಅರ್ಧವಷ್ಟೇ ಪ್ರಕಟವಾಗಿರುವ ಹಿನ್ನೆಲೆಯಲ್ಲಿ ಈ ಸ್ಪಷ್ಟನೆ. ಸುರೇಶ್ ಕುಮಾರ್ ಅವರನ್ನು ಸೌಮ್ಯವಾದಿ ಎಂದು ನಾನು ಬಣ್ಣಿಸಿಲ್ಲ. ನಾನು ಹೇಳಿದ್ದು ಹೀಗಿದೆ- 'ಸುರೇಶ್ ಕುಮಾರ್ ಅವರಿಗೆ ಸೌಮ್ಯವಾದಿ ಅನ್ನುವ ಇಮೇಜ್ ಇತ್ತು. ಅದನ್ನು ಕಳೆದುಕೊಳ್ಳುವುದಕ್ಕೆ ಅವರು ಬಹಳ ಪ್ರಯತ್ನಗಳನ್ನು ಮಾಡಿದ್ರು. ಅದಕ್ಕಾಗಿ ಹಲವು ಸಲ hawkish ಆಗಿ ಮಾತನಾಡಿದ್ರು. ಆದರೂ ಅವರ ಬದಲಿಗೆ ಅವರಿಗಿಂತ ಕಿರಿಯರಾದ ಸುನಿಲ್ ಕುಮಾರ್ ಅವರನ್ನು ಸಂಪುಟಕ್ಕೆ ತಂದಿದ್ದಾರೆ. ಆ ಆಯ್ಕೆ ಈ ಸರ್ಕಾರದ ಇಮೇಜ್‌ಗೆ ಹೊಂದುತ್ತದೆ. ಸುರೇಶ್ ಕುಮಾರ್ ಅವರನ್ನು ಹಾಗೇ ಬಿಟ್ಟುಬಿಡ್ತಾರೆ ಅಂತ ನನಗೆ ಅನ್ನಿಸುವುದಿಲ್ಲ. ಸಂಘಟನೆಗೆ ಬಳಸ್ತಾರೆ ಅಂತ ಅನ್ಸತ್ತೆ'.

ಡಿ.ಉಮಾಪತಿ, ನವದೆಹಲಿ

ಸಂಕೀರ್ಣ ಜವಾಬ್ದಾರಿಗೆ ಬೇಡವೇ ಕನಿಷ್ಠ ವಿದ್ಯಾರ್ಹತೆ?

ಈಗ ಎಲ್ಲ ವೃತ್ತಿ ಕ್ಷೇತ್ರಗಳಿಗೂ ನಿಗದಿತ ಅಥವಾ ಅಗತ್ಯಕ್ಕಿಂತ ಹೆಚ್ಚಿನ ವಿದ್ಯಾರ್ಹತೆ ಉಳ್ಳವರು ಪ್ರವೇಶಿಸುವಷ್ಟು ನಿರುದ್ಯೋಗ ಸಮಸ್ಯೆ ನಮ್ಮ ಯುವಜನರನ್ನು ಕಾಡುತ್ತಿದ್ದರೆ, ರಾಜಕೀಯ ಕ್ಷೇತ್ರದಲ್ಲಿ ಉದ್ಯೋಗಕ್ಕಾಗಿ ಕನಿಷ್ಠ ವಿದ್ಯಾರ್ಹತೆ ಇರಬೇಕೆಂಬ ಈ ಸಮಸ್ಯೆಯೇ ಇಲ್ಲವೆಂದು ಕಾಣುತ್ತದೆ! ಬಸವರಾಜ ಬೊಮ್ಮಾಯಿಯವರ ಮಂತ್ರಿಮಂಡಲ ಬಹುಶಃ ಈವರೆಗೆ ಕರ್ನಾಟಕ ಕಂಡ ಸರಾಸರಿ ಕನಿಷ್ಠ ವಿದ್ಯಾರ್ಹತೆಯ ಸಚಿವ ಸಂಪುಟವೆಂದು ಕಾಣುತ್ತದೆ. ಇಂದು ಒಂದು ಕನಿಷ್ಠ ದರ್ಜೆಯ ಸರ್ಕಾರಿ ಹುದ್ದೆಗೆ ಅಭ್ಯರ್ಥಿಗಳಾಗಿ ಪದವೀಧರರಿರಲಿ, ಸ್ನಾತಕೋತ್ತರ ಪದವೀಧರರ ನೂಕುನುಗ್ಗಲನ್ನು ಕಾಣುವಷ್ಟು ಸಮಾಜದಲ್ಲಿ ಜನರ ಶೈಕ್ಷಣಿಕ ಅರ್ಹತೆ ಹೆಚ್ಚಿರುವಾಗ, ಆ ಸಮಾಜವನ್ನು ಆಳಲು ಬೇಕಾದ ಜ್ಞಾನ, ಕೌಶಲ ಮತ್ತು ದಕ್ಷತೆಗಳನ್ನು ಬೇಡುವ ನಮ್ಮ ಸಚಿವರಿಗೆ ಯಾವ ಕನಿಷ್ಠ ಶೈಕ್ಷಣಿಕ ಅರ್ಹತೆಯೂ ಬೇಡವೆ? ಸದ್ಯದ ಬೊಮ್ಮಾಯಿಯವರ ಸಚಿವ ಸಂಪುಟದ 29 ಜನರಲ್ಲಿ ಕೇವಲ ಏಳನೇ ತರಗತಿಯವರೆಗೆ ಓದಿರುವವರೂ ಸೇರಿದಂತೆ ಎಸ್‌ಎಸ್‌ಎಲ್‌ಸಿ ಅಥವಾ ಪಿಯು ಪಾಸೋ ಫೇಲೋ ಆಗಿ ಸ್ಥಗಿತಗೊಂಡು ಪದವಿ ಮಟ್ಟವನ್ನೂ ಮುಟ್ಟದವರು ಬರೋಬ್ಬರಿ 12 ಜನ!

ಸಚಿವರೆಂದರೆ ರಾಜ್ಯದ ಕ್ಷೇಮಾಭಿವೃದ್ಧಿಯನ್ನು ನೋಡಿಕೊಳ್ಳುವ ಹೊಣೆ ಹೊತ್ತವರು, ಈ ಸಂಬಂಧ ಹಲವು ಜ್ಞಾನಶಿಸ್ತುಗಳ ವಿಷಯ- ವಿವರಗಳನ್ನೊಳಗೊಂಡ ಯೋಜನೆಗಳನ್ನು ಪರಿಶೀಲಿಸಿ ಅನುಮೋದನೆ ಮಾಡಬೇಕಾದವರು. ಅದಕ್ಕಾಗಿ ವಿಷಯ ಪರಿಣತರೊಂದಿಗೆ, ಅಧಿಕಾರಿ ವೃಂದದವರೊಂದಿಗೆ ಚರ್ಚಿಸಿ ಕಡತಗಳಲ್ಲಿ ಷರಾ ಬರೆಯಬೇಕಾದವರು ಅಥವಾ ಆದೇಶ ನೀಡಬೇಕಾದವರು. ಪದವಿ ಪಡೆದವರೆಲ್ಲ ಈ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಬಲ್ಲರು ಎಂದು ಹೇಳಲಾಗದಾದರೂ, ಒಂದು ಜವಾಬ್ದಾರಿಗೆ ಒಂದು ಕನಿಷ್ಠ ಅರ್ಹತೆ ಎಂಬುದು ಬೇಡವೆ? ಹಾಗಾದರೆ ಸರ್ಕಾರಿ ಹುದ್ದೆಗಳಿಗಾದರೂ ಕನಿಷ್ಠ ವಿದ್ಯಾರ್ಹತೆ ಏಕೆ ಬೇಕು? ಸಚಿವರು ಎಲ್ಲಕ್ಕೂ ಅಧಿಕಾರಿಗಳ ಸಲಹೆ-ಸೂಚನೆಗಳನ್ನೇ ಅವಲಂಬಿಸುವಂತಾದರೆ ಆಡಳಿತ ಎಂದರೆ ಅಧಿಕಾರಶಾಹಿಯದ್ದೇ ಆಟ ಎಂದಾಗುವುದಿಲ್ಲವೆ? ಆಗ ಸಚಿವರಾದರೂ ಏಕೆ ಬೇಕು?


ಈ ಹಿಂದೆ ಶಿಕ್ಷಣ ವ್ಯಾಪಕವಾಗಿಲ್ಲದಿದ್ದಾಗ, ಸಾರ್ವಜನಿಕ ಜೀವನದಲ್ಲಿನ ಅನುಭವ ಮತ್ತು ಸಾಮಾನ್ಯ ಜ್ಞಾನವನ್ನೇ ನೆಚ್ಚುವುದು ಅನಿವಾರ್ಯವಾಗಿತ್ತು. ಅಲ್ಲದೆ, ಆಗ ಸಮಾಜಕ್ಕೆ ಒಂದು ಮೌಲ್ಯ ವ್ಯವಸ್ಥೆಯ, ಬದ್ಧತೆಯ ರಕ್ಷಣೆಯೂ ಇತ್ತು, ಜೊತೆಗೆ ಆಗ ಆಡಳಿತ ಈಗಿನಷ್ಟು ಆಳದ ತಿಳಿವಳಿಕೆ ಬೇಡುವ ವಿಷಯಗಳನ್ನಾಧರಿಸಿದ ಅಭಿವೃದ್ಧಿ ಯೋಜನೆಗಳನ್ನೊಳಗೊಂಡ ಒಂದು ಸಂಕೀರ್ಣ ಜವಾಬ್ದಾರಿಯಾಗಿರಲಿಲ್ಲ. ಆದರೆ ಜಾಗತೀಕರಣದ ಈ ದಿನಗಳಲ್ಲಿ? ಹಾಗಾಗಿ, ಒಂದು ಪದವಿ ಗಳಿಸುವುದು ಒಂದು ಸಾಮಾನ್ಯ ಸಾಧನೆ ಎನಿಸಿರುವ ದಿನಗಳಲ್ಲಿಯೂ- ಅದಕ್ಕೀಗ ಹಲವು ಮುಕ್ತ ಅವಕಾಶಗಳು ಇರುವಾಗಲೂ- ಆ ಮಟ್ಟವನ್ನೂ ಮುಟ್ಟಲಾಗದವರಿಗೆ, ಆ ಮನೋವೃತ್ತಿ ಅಥವಾ ಆಕಾಂಕ್ಷೆಯೇ ಇಲ್ಲದವರಿಗೆ ಸಚಿವತನದ ಜವಾಬ್ದಾರಿ ನೀಡುವ ಅನಿವಾರ್ಯ ಏಕೆ? ಜನರಿಂದ ಆರಿಸಿಬಂದವರು ಎಂಬುದೊಂದೇ ಅರ್ಹತೆ ಸಾಕೆ? ಈಗ ಜನರಿಂದ ಆರಿಸಿ ಬರಲು ಯಾವ ಯಾವ ಅರ್ಹತೆಗಳು ಅವಶ್ಯಕ ಎಂಬುದು ಜಗಜ್ಜಾಹೀರಾಗಿರುವಾಗ? ಬಲ್ಲವರು ಯೋಚಿಸಿ ತೀರ್ಮಾನಿಸಬೇಕು.

ಡಿ.ಎಸ್.ನಾಗಭೂಷಣ, ಶಿವಮೊಗ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸಂಸತ್ ಅಧಿವೇಶನ ಸುಗಮವಾಗಿ ನಡೆಯದಿರಲು ಕಾರಣ ಸರ್ಕಾರವೇ, ವಿರೋಧ ಪಕ್ಷವೇ?

ಸದನದ ಕಲಾಪಗಳ ಸಂಸ್ಕೃತಿಯು ಗದ್ದಲದ ಸಂಸ್ಕೃತಿಯತ್ತ...



ಕಳೆದೆರಡು ದಶಕಗಳಿಂದ ಸಂಸತ್ತು ಮತ್ತು ವಿಧಾನ ಮಂಡಲಗಳ ಚರ್ಚೆಗಳನ್ನು ಗಮನಿಸಿದಲ್ಲಿ ಆಡಳಿತ ಪಕ್ಷದ ಎಲ್ಲಾ ಕ್ರಮಗಳನ್ನು ವಿರೋಧಿಸುವುದೇ ಸರಿಯಾದ ಧೋರಣೆ ಎಂಬ ಭಾವನೆ ಪ್ರತಿಪಕ್ಷಗಳಲ್ಲಿರುವುದು ಕಾಣಿಸುತ್ತದೆ. ಪ್ರತಿಭಟನೆಯ ನೆಪದಲ್ಲಿ ಭಾರತದ ಜನತೆಯ ಆಶೋತ್ತರಗಳನ್ನು, ಸಂಸದೀಯ ಕಲಾಪಗಳ ಮಹತ್ವವನ್ನು, ಪ್ರಜಾಪ್ರಭುತ್ವದ ನಿಲುವುಗಳನ್ನು ಇಂದಿನ ರಾಜಕೀಯ ಪಕ್ಷಗಳು ಬಲಿಕೊಡುತ್ತಿವೆ

ಪ್ರಜಾವಾಣಿ ಚರ್ಚೆ

• ವಿಶ್ವೇಶ್ವರ ಹೆಗಡೆ ಕಾಗೇರಿ

ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ಇರುವಂತಹ ಪದ್ಧತಿಯೇ ಪ್ರಜಾಪ್ರಭುತ್ವ. ಇಲ್ಲಿ ಪ್ರಜೆಗಳ ಭಾವನೆ, ಪ್ರಜೆಗಳ ಆಕಾಂಕ್ಷೆ ಮತ್ತು ಆಶೋತ್ತರಗಳ ಉದ್ದೇಶವನ್ನಿಟ್ಟು, ಒಂದು ಸದನದ ಜನಪ್ರತಿನಿಧಿಗಳಿಗಾಗಿ ಕರ್ತವ್ಯವನ್ನು ನಿರ್ವಹಿಸುವಂತಹ ವ್ಯವಸ್ಥೆಯೇ ಸಂಸದೀಯ ವ್ಯವಸ್ಥೆ.

ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳ ಪಾತ್ರ ಮಹತ್ವದ್ದಾಗಿರುತ್ತದೆ. ರಾಜಕೀಯ ಪಕ್ಷಗಳು ಈ ಸಂಸದೀಯ ವ್ಯವಸ್ಥೆಯ ಬೆನ್ನೆಲುಬು. ಅದರಂತೆ ಭಾರತದ ಸಂವಿಧಾನವು ಚುನಾವಣಾ ಆಯೋಗಕ್ಕೆ ಪ್ರತ್ಯೇಕ ಸ್ಥಾನಮಾನವನ್ನು ನೀಡಿ ದೇಶದಲ್ಲಿ ಮುಕ್ತ ಹಾಗೂ ನ್ಯಾಯೋಚಿತ ಚುನಾವಣೆಯ ಉದ್ದೇಶವನ್ನು ಈಡೇರಿಸಿದೆ. ರಾಷ್ಟ್ರ ಮತ್ತು ಜನರು ಎದುರಿಸುತ್ತಿರುವ ಬಹುಮುಖ ಸಮಸ್ಯೆಗಳನ್ನು ನಿಭಾಯಿಸಲು ಸಕ್ರಿಯವಾಗಿ ಶ್ರಮಿಸುವ ವ್ಯವಸ್ಥೆಯೇ ಯಶಸ್ವಿ ಪ್ರಜಾಪ್ರಭುತ್ವ.

ಈ ವ್ಯವಸ್ಥೆಯಲ್ಲಿ ಶಾಸಕಾಂಗವು ಸಾರ್ವಭೌಮ ಮತ್ತು ಸರ್ವೋಚ್ಚ ಅಧಿಕಾರವನ್ನು ಹೊಂದಿದೆ. ಈ ವೇದಿಕೆಗಳು ಜನರ ವಿಶ್ವಾಸವನ್ನು ಗಳಿಸಿಕೊಳ್ಳಬೇಕಾದರೆ ಅವುಗಳು ವ್ಯವಸ್ಥಿತ ರೀತಿಯಲ್ಲಿ ಕಾರ್ಯನಿರ್ವಹಿಸಬೇಕಾದುದು ಅತ್ಯಗತ್ಯ.

ಸಂವಿಧಾನದಲ್ಲಿ ದೇಶದ ಸಂಸತ್ತು ಮತ್ತು ರಾಜ್ಯದ ವಿಧಾನ ಮಂಡಲಗಳಿಗೆ ಅತ್ಯುನ್ನತ ಸ್ಥಾನಮಾನವನ್ನು ನೀಡಿದ್ದು, ಅಲ್ಲಿನ ಸದಸ್ಯರಿಗೆ ಸಂಪೂರ್ಣ ವಾಕ್ ಸ್ವಾತಂತ್ರ್ಯವನ್ನು ಕಲ್ಪಿಸಲಾಗಿದೆ. ಅಂದರೆ ಸದನದ ಕಲಾಪವನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ. ಸದನದ ಕಲಾಪಗಳನ್ನು ನಿಯಮಾವಳಿಗಳಂತೆ ನಡೆಸಲು ಸದನದ ಮುಖ್ಯಸ್ಥರಾಗಿ ಸಭಾಧ್ಯಕ್ಷರು ಸ್ವತಂತ್ರ ಹಾಗೂ ನಿಷ್ಪಕ್ಷಪಾತ ದೃಷ್ಟಿಕೋನವನ್ನು ಹೊಂದಿರುವಂತೆ ಸಂವಿಧಾನದಲ್ಲಿ ಹಾಗೂ ನಿಯಮಾವಳಿಗಳಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ.

ಈ ಸಂಸದೀಯ ವ್ಯವಸ್ಥೆಯಲ್ಲಿ ಪಕ್ಷ ಪದ್ಧತಿಯ ಮೇರೆಗೆ ಆಡಳಿತ ನಡೆಸುವಂತಹ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳಿರುತ್ತವೆ. ಅವುಗಳೆರಡರ ಮುಖ್ಯ ಧ್ಯೇಯ ಕಲ್ಯಾಣ ರಾಜ್ಯವನ್ನು ಸೃಷ್ಟಿಸುವುದೇ ಆಗಿದೆ. ಅವುಗಳು ಒಂದು ವ್ಯವಸ್ಥೆಯ ಎರಡು ಮುಖಗಳಿದ್ದಂತೆ. ಆದರೆ ಕಳೆದೆರಡು ದಶಕಗಳಿಂದ ಸಂಸತ್ತು ಮತ್ತು ವಿಧಾನ ಮಂಡಲಗಳ ಚರ್ಚೆಗಳನ್ನು ಗಮನಿಸಿದಲ್ಲಿ ಆಡಳಿತ ಪಕ್ಷದ ಎಲ್ಲಾ ಕ್ರಮಗಳನ್ನು ವಿರೋಧಿಸುವುದೇ ಸರಿಯಾದ ಧೋರಣೆ ಎಂಬ ಭಾವನೆ ಪ್ರತಿಪಕ್ಷಗಳಲ್ಲಿರುವುದು ಕಾಣಿಸುತ್ತದೆ. ಪ್ರತಿಭಟನೆಯ ನೆಪದಲ್ಲಿ ಭಾರತದ ಜನತೆಯ ಆಶೋತ್ತರಗಳನ್ನು, ಸಂಸದೀಯ ಕಲಾಪಗಳ ಮಹತ್ವವನ್ನು, ಪ್ರಜಾಪ್ರಭುತ್ವದ ನಿಲುವುಗಳನ್ನು ಇಂದಿನ ರಾಜಕೀಯ ಪಕ್ಷಗಳು ಬಲಿಕೊಡುತ್ತಿವೆ. ಆಡಳಿತ ಪಕ್ಷವು ತಾನು ಮಾಡಿದ್ದೇ ಸರಿ ಎಂಬ ಧೋರಣೆಯಲ್ಲಿದ್ದರೂ ಅದನ್ನು ಸರಿಪಡಿಸಲು ಸಂಸದೀಯ ಪದ್ಧತಿಯಲ್ಲಿ ಕೆಲವೊಂದು ಮಾರ್ಗೋಪಾಯಗಳನ್ನು ಅಳವಡಿಸಿಕೊಳ್ಳಲಾಗಿದೆ.

ಕಲಾಪ ನಡೆಸಲು ಅವಕಾಶ ನೀಡದಿರುವುದರ ಹಿಂದೆ ಹಲವಾರು ಕಾರಣಗಳಿವೆ. ಅವುಗಳಲ್ಲಿ ಪ್ರಮುಖವಾದುವುಗಳು:

1. ವಿರೋಧ ಪಕ್ಷ ಎಂಬ ಕಾರಣಕ್ಕೋಸ್ಕರ ಹಲವಾರು ಬಾರಿ ಸರ್ಕಾರದ ನಿಲುವು/ನಿರ್ಣಯವನ್ನು ವಿರೋಧಿಸುವಂತಹ ಪ್ರವೃತ್ತಿ



2. ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವ ಸದಾವಕಾಶದಿಂದ ವಂಚಿತರಾಗಿದ್ದೇವೆ ಎನ್ನುವ ಭಾವನೆಯನ್ನು ವಿಪಕ್ಷ ಹೊಂದಿರುವುದು

3. ರಾಜಕೀಯ ಪಕ್ಷಗಳು ತಮ್ಮ ಸದಸ್ಯರನ್ನು ಸದನದ ಶಿಸ್ತು ಹಾಗೂ ಗೌರವಕ್ಕೆ ಧಕ್ಕೆ ಬಾರದಂತೆ ವರ್ತಿಸುವಂತೆ ಮಾಡಲು ವಿಫಲವಾಗಿರುವುದು

4. ಸದನದ ಕಲಾಪವನ್ನು ಮೊಟಕುಗೊಳಿಸುವ ಸದಸ್ಯರ ವಿರುದ್ಧ ಸಮಯೋಚಿತ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳದೇ ಇರುವುದು

5. ರಾಜಕೀಯ ಪಕ್ಷಗಳು ಆಂತರಿಕವಾಗಿ ತಮ್ಮ ಸದಸ್ಯರಿಗೆ ಸದನದ ನಿಯಮಾವಳಿಗಳನ್ನು ಪಾಲಿಸುವಂತೆ ತರಬೇತಿ ನೀಡದೇ ಇರುವುದು

6. ಪ್ರತಿಪಕ್ಷವು ಸದನದ ಕಾರ್ಯಕಲಾಪ ಸಲಹಾ ಸಮಿತಿಯ ಸಭೆಯನ್ನು ಬಹಿಷ್ಕರಿಸುವುದು

ಸಾಂವಿಧಾನಿಕ ಸಂಸ್ಥೆಗಳು ತಮ್ಮದೇ ಆದ ಪರಂಪರೆ, ಸಂಸ್ಕೃತಿ, ರೀತಿ-ನೀತಿಗಳನ್ನು ಹೊಂದಿವೆ. ಆದರೆ, ಇತ್ತೀಚಿನ ದಿನಗಳಲ್ಲಿ ಈ ಸಂಸ್ಥೆಗಳ ಕಲಾಪಗಳ ಸಂಸ್ಕೃತಿಯು ಗದ್ದಲದ ಸಂಸ್ಕೃತಿಯತ್ತ ಸಾಗುತ್ತಿದೆ. ಆಟದಲ್ಲಿ ಗೆಲ್ಲಲಾರದವನು ಸುಮ್ಮನೆ ತಕರಾರು ಎತ್ತಿ ಆಟ ನಡೆಯದಂತೆ ಮಾಡುವುದು ಸರಿಯಲ್ಲ. ಈ ರೀತಿ ಮಾಡುತ್ತಲೇ ಹೋದರೆ ಆಟ ಸುಸೂತ್ರವಾಗಿ ನಡೆಯುವುದೇ ಇಲ್ಲ, ಫಲಿತಾಂಶ ದೊರೆಯುವುದಿಲ್ಲ.

ನೆಹರೂರವರು 'ಸಂಸತ್ತಿನಲ್ಲಿ ಪ್ರಬಲವಾದ ವಿರೋಧ ಪಕ್ಷವಿರಬೇಕು' ಎಂದು ಬಯಸಿದ್ದರು, ಆದರೆ ಕಲಾಪ ನಡೆಸಲು ಬಿಡಲಾರದಂತಹ ವಿರೋಧ ಪಕ್ಷವನ್ನು ನಿರೀಕ್ಷಿಸಿರಲಿಲ್ಲ. ವಿರೋಧ ಪಕ್ಷಗಳ ಧ್ವನಿ ಎತ್ತರದಲ್ಲಿರಬೇಕು, ಆದರೆ ತಾರ್ಕಿಕ ಚರ್ಚೆಯ ನೆಲೆಗಟ್ಟಿನ ಮೇಲೆ ಆ ಧ್ವನಿ ನಿಂತಿರಬೇಕು, ಸಾರ್ವಜನಿಕ ಹೊಣೆಗಾರಿಕೆ, ಪರಿಣಾಮಕಾರಿ ಚರ್ಚೆ, ಆಡಳಿತ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸುವಂತಹ ಸಂವಾದದ ಅಧಿವೇಶನಗಳನ್ನು ಪ್ರಬುದ್ಧ ಜನತೆ ನಿರೀಕ್ಷಿಸುತ್ತಿದ್ದಾರೆ.

'ಆಡಳಿತ ಪಕ್ಷದಿಂದ ಮೌಲ್ಯರಹಿತ ಅಧಿಕಾರ ಬಳಕೆ, ವಿರೋಧ ಪಕ್ಷಗಳ ಸಂಯಮ ರಹಿತ ನಡವಳಿಕೆ ಹಾಗೂ ಸಭಾಧ್ಯಕ್ಷರ ಪಕ್ಷಪಾತಿ ಧೋರಣೆ ಸಂಸತ್ತಿನ ದೋಷಗಳ ಅಂಶಗಳು' ಎಂದು ಅರುಣ್ ಶೌರಿ ಹೇಳಿರುವ ಮಾತಿನಂತೆ 'ವಿರೋಧ ಪಕ್ಷದ ಸಂಯಮರಹಿತ ನಡವಳಿಕೆ ಮಾತ್ರ ಸಂಸತ್ ಕಲಾಪ ನಡೆಯದಿರಲು ಕಾರಣವಾಗಿದೆ. ವಿಪಕ್ಷ ಸದನದಿಂದ ಹೊರಹೋಗುವುದು ಕೊನೆಯ ಅಸ್ತ್ರವಾಗಬೇಕು. ಕ್ಷುಲ್ಲಕ ಕಾರಣಗಳಿಗಾಗಿ ಸದನವನ್ನು ಬಹಿಷ್ಕರಿಸುವುದು, ಶೂನ್ಯವೇಳೆಯ ದುರುಪಯೋಗ, ಅರ್ಥವಿಲ್ಲದ ಗೊತ್ತುವಳಿಗಳ ಮಂಡನೆ ವಿರೋಧ ಪಕ್ಷಗಳ ಸಾಮಾನ್ಯ ನಡೆಯಾಗಿದೆ. ಹಕ್ಕುಚ್ಯುತಿಗಳ ಮಂಡನೆಯೂ ಇದೇ ರೀತಿಯಾಗಿದೆ. ಸಚಿವರು ಉದ್ದೇಶಪೂರ್ವಕವಾಗಿ ಸುಳ್ಳು ಹೇಳಿದರೆ, ಸದನದ ಹಕ್ಕು ಉಲ್ಲಂಘಿಸಿರುವುದು ಸ್ಪಷ್ಟವಾಗಿ ಗೋಚರವಾದರೆ ಹಕ್ಕುಚ್ಯುತಿ ಮಂಡಿಸಬೇಕು. ಸಣ್ಣ ಪುಟ್ಟ ವಿಷಯಗಳಿಗೆಲ್ಲ ಮಂಡಿಸಿದರೆ ಸಾರ್ವಜನಿಕರು ಸದನವನ್ನು ಗಂಭೀರವಾಗಿ ಪರಿಗಣಿಸದಿರಲು ಕಾರಣವಾಗಬಹುದು.

ಶಾಸನ ಸಭೆಯ ಸುಗಮ ಕಲಾಪಕ್ಕೆ ಈ ಅಂಶಗಳು ನೆರವಾಗಬಹುದು:

1. ಶಾಸನ ಸಭೆಯ ಅಧಿವೇಶನದ ಕಾಲಾವಧಿಯನ್ನು ಹೆಚ್ಚಿಸುವುದು

2. ಈಗಿರುವ 3 ಅಧಿವೇಶನದ ಪದ್ಧತಿಯನ್ನು 4 ಅಧಿವೇಶನಗಳಾಗಿ ಮಾರ್ಪಡಿಸುವುದು (ಜನವರಿಯಿಂದ ಮಾರ್ಚ್‌ವರೆಗೆ ಬಜೆಟ್ ಅಧಿವೇಶನ, ಏಪ್ರಿಲ್‌ನಿಂದ ಜೂನ್‌ವರೆಗೆ ಬೇಸಿಗೆ ಕಾಲದ ಅಧಿವೇಶನ, ಜುಲೈನಿಂದ ಸೆಪ್ಟೆಂಬರ್‌ವರೆಗೆ ಮುಂಗಾರು ಅಧಿವೇಶನ ಮತ್ತು ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ ಚಳಿಗಾಲದ ಅಧಿವೇಶನ)

3. ಸದನದ ಕಾರ್ಯಕಲಾಪವನ್ನು ಬಹಿಷ್ಕರಿಸುವ ಹಾಗೂ ಮೊಟಕುಗೊಳಿಸುವ ಸದಸ್ಯರ ವಿರುದ್ಧ ತಕ್ಷಣವೇ ಕಠಿಣ ಕ್ರಮವನ್ನು ಜರುಗಿಸುವುದು

4. ಕಾರ್ಯಕಲಾಪಗಳ ನಿಯಮಾವಳಿಗಳನ್ನು ಸೂಕ್ತ ತಿದ್ದುಪಡಿ ಮೂಲಕ ಹೆಚ್ಚು ಬಲಪಡಿಸುವುದು

5. ಪ್ರತಿಪಕ್ಷಗಳು ಪ್ರತಿಪಾದಿಸುವ ವಿಷಯಗಳನ್ನು ಚರ್ಚಿಸುವ ಸಲುವಾಗಿ ಸದನದಲ್ಲಿ ಪ್ರತ್ಯೇಕವಾಗಿ ದಿನ ಹಾಗೂ ಸಮಯವನ್ನು ನಿಗದಿಪಡಿಸುವುದು

ವಿರೋಧ ಪಕ್ಷಗಳು ಇರುವುದೇ ಟೀಕಿಸಲು ಎಂಬುದನ್ನು ಮರೆತು ಪ್ರಜೆಗಳ ಹಿತ ಕಾಪಾಡುವಲ್ಲಿ ಆಡಳಿತ ಪಕ್ಷಕ್ಕೆ ಸಾಥ್ ನೀಡಬೇಕು. ಹಾಗಾದಾಗ ಮಾತ್ರ ಸುಸೂತ್ರ ಆಡಳಿತ ಹಾಗೂ ಸುಗಮವಾಗಿ ಕಲಾಪ ನಡೆಯುತ್ತದೆ. ಆದರೆ, ಸಂಸತ್ತು ಮತ್ತು ವಿಧಾನ ಮಂಡಲಗಳ ಇತ್ತೀಚಿನ ಕಲಾಪಗಳನ್ನು ಗಮನಿಸಿದಲ್ಲಿ ಯಾವುದೋ ಒಂದೆರಡು ವಿಷಯಗಳನ್ನು ಹಿಡಿದುಕೊಂಡು ಆಡಳಿತ ಪಕ್ಷವನ್ನು ದುರ್ಬಲಗೊಳಿಸಬಹುದೆಂಬ ನಿಲುವಿನಲ್ಲಿ, ಕಾರ್ಯಕಲಾಪಗಳು ನಡೆಯದಂತೆ ಅಡ್ಡಿಪಡಿಸುವುದು, ಕಾರ್ಯಕಲಾಪಗಳನ್ನು ಬಹಿಷ್ಕರಿಸುವುದು, ಇಡೀ ಸದನದ ಸದಸ್ಯರುಗಳ ಹಕ್ಕಿಗೆ ಧಕ್ಕೆ ತಂದಂತೆ ಆಗುವುದಿಲ್ಲವೇ? ಆಡಳಿತ/ಪ್ರತಿಪಕ್ಷಗಳು ತಮ್ಮ ಹೊಣೆಗಾರಿಕೆಗಳನ್ನು ಅರಿತು ಸಂಸತ್ತು/ವಿಧಾನ ಮಂಡಲಗಳ ಕಾರ್ಯಕಲಾಪಗಳು ಸಂಸದೀಯ ವ್ಯವಸ್ಥೆಯ ಧ್ಯೇಯೋದ್ದೇಶಗಳಿಗೆ ಅನುಗುಣವಾಗಿ ನಡೆಯುವಂತೆ ಮಾಡಬೇಕು. ಈ ದಿಸೆಯಲ್ಲಿ ಜನಪ್ರತಿನಿಧಿಗಳೆಲ್ಲರೂ ತಮ್ಮ ತಮ್ಮ ನಡೆಯನ್ನು ಪರಿಶೀಲಿಸಿಕೊಳ್ಳುವ ಅಗತ್ಯವಿದೆ. ಅದೇ ರೀತಿ ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ಪಕ್ಷದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಹಂತದಿಂದ ಹಿಡಿದು ಶಾಸಕಾಂಗಕ್ಕೆ ಆಯ್ಕೆಯಾದ ಮೇಲೂ ರಾಜಕೀಯ ಶಿಕ್ಷಣ, ಸದನದಲ್ಲಿನ ನಡವಳಿಕೆ, ಪ್ರಜಾಪ್ರಭುತ್ವದ ಮೌಲ್ಯಗಳು ಮತ್ತು ಅವರ ನೈತಿಕ ಬೆಳವಣಿಗೆಗೆ ಮಹತ್ವ ನೀಡುವಂತಹ ವ್ಯವಸ್ಥೆಯನ್ನು ಜಾರಿಗೆ ತರುವಲ್ಲಿ ಗುರುತರವಾದ ಪಾತ್ರವಹಿಸಬೇಕು. ಈ ದಿಸೆಯಲ್ಲಿ ತ್ವರಿತ ಕ್ರಮದ ಅಗತ್ಯವಿದೆ ಎನ್ನುವುದು ನನ್ನ ಬಲವಾದ ಒತ್ತಾಯ.

ಲೇಖಕ: ಸಭಾಧ್ಯಕ್ಷ, ಕರ್ನಾಟಕ ವಿಧಾನ ಸಭೆ



ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಭೀಮೇಶ್ವರ ವ್ರತ

ಆಧುನಿಕತೆ ಬೆಳೆದಂತೆ ಮಾನವರಲ್ಲಿ ಹಿಂದಿನ ಸಂಪ್ರದಾಯಗಳನ್ನು ಮರೆಯುವ, ಮೂದಲಿಸುವ ದುರ್ವರ್ತನೆ ಬೆಳೆಯುತ್ತಿದೆ. ನಮ್ಮ ಹಿರಿಯರು ಹಾಕಿ ಕೊಟ್ಟ ಸತ್ಸಂಪ್ರದಾಯವನ್ನು ಮುರಿಯುವುದೇ ಆಧುನಿಕತೆಯ ಲಕ್ಷಣ ಅನ್ನುವ ಅವಲಕ್ಷಣಗಳೂ ಹೆಚ್ಚುತ್ತಿವೆ. ಹಿಂದಿನ ಕಾಲದವರು ದಡ್ಡರು, ತಾವೇನೋ ಮಹಾನ್ ಬುದ್ಧಿವಂತರು ಅನ್ನೋ ಅಹಂ ಮೆತ್ತಿಕೊಂಡ ಜನರಿಂದ ಸಮಾಜದ ನೈತಿಕ ಚೌಕಟ್ಟು ಒಡೆದು, ಮನೆಮನಗಳಲ್ಲಿ ಅಶಾಂತಿಯ ಕ್ಷೋಭೆ ಆವರಿಸುತ್ತಿದೆ. ಯಾವುದನ್ನು ನಮ್ಮ ಸಮಾಜದಲ್ಲಿ ಆಗಬಾರದೆಂದು ನಮ್ಮ ಹಿರಿಯರು ಯೋಚಿಸಿ-ಯೋಜಿಸಿ ಧರ್ಮ-ಸಂಸ್ಕೃತಿಯನ್ನು ರೂಪಿಸಿದ್ದರೋ, ಅದರ ಅಸ್ತಿತ್ವವನ್ನೆ ಅಲುಗಾಡಿಸುತ್ತಾ ತಮ್ಮ ನೆಮ್ಮದಿಯನ್ನು ತಾವೇ ಹಾಳು ಮಾಡಿಕೊಳ್ಳುತ್ತಿದ್ದಾರೆ.

ನಮ್ಮ ಪೂರ್ವಿಕರು ಯಾವ ನಿಯಮವನ್ನೂ ಯೋಚಿಸದೆ ಮಾಡಿಲ್ಲ. ಸಾವಿರಾರು ವರ್ಷಗಳ ದೃಷ್ಟಾಂತಗಳನ್ನು ತೂಗಿ ನೋಡಿ ಮನುಷ್ಯನ ಮರ್ಕಟದಂಥ ಮನಸ್ಸಿಗೆ ಕಡಿವಾಣ ಹಾಕುವ ನೀತಿ-ನಿಯಮಗಳನ್ನು ಜಾರಿಗೆ ತಂದಿದ್ದಾರೆ. ಆದರೆ ಆಧುನಿಕ ಮನುಷ್ಯರು ಸಂಪ್ರದಾಯಗಳ ಹಿಂದಿನ ಸದುದ್ದೇಶ ತಿಳಿಯದೆ ನಿರ್ಲಕ್ಷಿಸುತ್ತಿದ್ದಾರೆ. ಅದರ ದುಷ್ಪರಿಣಾಮವನ್ನು ಆಧುನಿಕ ಮಾನವರು ಈಗ ಅನುಭವಿಸುತ್ತಿದ್ದಾರೆ. ಎಲ್ಲಾ ಇದ್ದರೂ, ಏನೋ ಕಳೆದುಕೊಂಡ ಭಾವದಲ್ಲೇ ಜೀವನ ಸವೆಸುತ್ತಿದ್ದಾರೆ. ಮನುಷ್ಯ ಮಿತಿ ಅನ್ನುವ ಜೀವನದ ಲೆಕ್ಕಾಚಾರದಲ್ಲಿ ಎಡವಿ, ವೈವಾಹಿಕ ಸಂಬಂಧಗಳನ್ನು ಶಿಥಿಲಗೊಳಿಸಿಕೊಳ್ಳುತ್ತಿದ್ದಾರೆ.

ನಮ್ಮ ಸುಖ-ದುಃಖಗಳಿಗೆ ಮನಸ್ಸೇ ಕಾರಣ. ಮನಸ್ಸಿನ ಆಮಿಷಕ್ಕೆ ಬೀಳದೆ, ಸಂಯಮದಿಂದ ಸಂಸಾರ ನಿರ್ವಹಿಸಬೇಕು. ಮನುಷ್ಯನ ಆಸೆಗೆ ಕೊನೆ ಎಂಬುದಿಲ್ಲ. ಅವನ ಅತಿ ಆಸೆಯಿಂದ ಸಮಾಜದ ವ್ಯವಸ್ಥೆ ಹೇಗೆ ಹಾಳಾಗುತ್ತದೆ ಎಂಬುದನ್ನು ಅರಿತ ನಮ್ಮ ಗುರು-ಹಿರಿಯರು ನೈತಿಕ ಚೌಕಟ್ಟುಗ ಳನ್ನು ಹಾಕಿದ್ದಾರೆ. ಅಂಥ ಚೌಕಟ್ಟು ಮುರಿದರೆ ಬದುಕಿನಲ್ಲಿ ಮತ್ತೆಂದೂ ಏಳಲಾರದ ಪ್ರಪಾತಕ್ಕೆ ಬೀಳಬೇಕಾಗುತ್ತದೆ. ಸಿಹಿ ಮಿತಿಯಾಗಿ ತಿಂದರೆ ಚೆನ್ನ. ಅತಿಯಾಗಿ ತಿನ್ನಲು ಯತ್ನಿಸಿದರೆ ವಾಕರಿಕೆ ಬರುತ್ತದೆ. ಹಾಗೇ, ಆಸೆ ಎಂಬುದು ಮಿತಿಯಾಗಿದ್ದರೆ ಬದುಕು ಚೆನ್ನಾಗಿರುತ್ತದೆ; ಅತಿ ಆಸೆ ಪಟ್ಟರೆ ಬದುಕು ಕೆಡುತ್ತದೆ. ಇಂದಿನ ದಿನಗಳಲ್ಲಿ ವೈವಾಹಿಕ ಬಂಧಗಳನ್ನು ಸಡಿಲಗೊಳಿಸುತ್ತಿರುವುದು ಮಿತಿಮೀರಿದ ಆಸೆಗಳು. ಹಿರಿಯರ ಅನುಭವ ಕೇಳಿ ಭವಿಷ್ಯದ ಬದುಕನ್ನು ರೂಪಿಸಿಕೊಳ್ಳಬೇಕು. ಇಲ್ಲದಿದ್ದರೆ, ಭವಿಷ್ಯದ ಬದುಕು ಬರ್ಬರವಾಗುತ್ತದೆ. ಪತಿ-ಪತ್ನಿಯರ ಸಂಬಂಧ ದೈವಾಂಶ ಸಂಭೂತವಾಗಿದೆ ಎಂಬುದನ್ನು ತಿಳಿಸಲು ನಮ್ಮ ಧರ್ಮ-ಸಂಸ್ಕೃತಿಯಲ್ಲಿ ದೇವರುಗಳ ದಾಂಪತ್ಯದ ವಿವರವಿದೆ. ಆ ಜಗನ್ಮಾತೆ ಪಾರ್ವತಿಯೇ ಶಿವನನ್ನು ಮದುವೆಯಾದಾಗ ಪತಿವ್ರತಾಧರ್ಮದ ಉಪದೇಶ ಪಡೆಯುತ್ತಾಳೆ ಎಂಬುದನ್ನ ವೇದವ್ಯಾಸರ ಶಿವಮಹಾಪುರಾಣದಲ್ಲಿ ಹೇಳಲಾಗಿದೆ. ತಾಯಿ ಮೇನಾದೇವಿಯು ಮಗಳು ಪಾರ್ವತಿ ಗಂಡನ ಮನೆಯಲ್ಲಿ ಹೇಗೆ ಬಾಳಬೇಕೆಂಬುದನ್ನು ತಿಳಿಸಿಕೊಡುತ್ತಾಳೆಂದಮೇಲೆ, ಹುಲುಮಾನವರಾದ ನಾವು ಬದುಕಿನ ಪಾಠವನ್ನು ಅನುಭಾವಿಗಳಿಂದ ಕೇಳಿ ಅನುಸರಿಸಲೇಬೇಕು.

ವೇದವ್ಯಾಸರ ಮತ್ತೊಂದು ಉತ್ಕೃಷ್ಟ ಪುರಾಣವಾದ ಸ್ಕಂದಪುರಾಣದಲ್ಲಿ 'ಜ್ಯೋತಿರ್ಭೀಮೇಶ್ವರ ವ್ರತ'ದ ಬಗ್ಗೆ ಉಲ್ಲೇಖವಿದೆ. ಸತ್ತ ರಾಜಕುಮಾರನನ್ನು ಮದುವೆಯಾದ ಪತಿವ್ರತೆ ಆಷಾಢಮಾಸದ ಅಮಾವಾಸ್ಯೆಯಂದು ಶಿವಪಾರ್ವತಿಯನ್ನು ಆರಾಧಿಸಿ ಪತಿಯನ್ನು ಬದುಕಿಸಿಕೊಂಡ ವಿವರವಿದೆ. ವಾರಾಹ ಋಷಿಯ ಶಾಪಕ್ಕೆ ಮೃತನಾದ ಬ್ರಾಹ್ಮಣನನ್ನು ಅನಸೂಯಾದೇವಿ ತನ್ನ ಪಾತಿವ್ರತ್ಯದಿಂದ ಬದುಕಿಸಿದ ಕತೆ ಇದೆ. ಈಶ್ವರನಿಗೆ ಸಂಬಂಧಿಸಿದ ದಿನವಾದ ಭೀಮನ ಅಮಾವಾಸ್ಯೆಯಂದು ಮುತ್ತೈದೆಯರು ಭೀಮೇಶ್ವರ ವ್ರತವನ್ನು ಮಾಡಿದರೆ, ಪತಿಯ ಆಯುಷ್ಯ ವೃದ್ಧಿಸುತ್ತದೆ. ಕನ್ಯೆಯರು ಭೀಮೇಶ್ವರವ್ರತವನ್ನು ಮಾಡಿದರೆ ಒಳ್ಳೆಯ ಗಂಡ ಸಿಗುತ್ತಾನೆ ಎಂಬ ನಂಬಿಕೆ ಇದೆ. ಇಂಥ ನಂಬಿಕೆ-ಆಚರಣೆಗಳೇ ಸಂಬಂಧಗಳನ್ನು ಗಟ್ಟಿಗೊಳಿಸುತ್ತವೆ. ಇದೇ 'ಸಚ್ಚಿದಾನಂದ'ದ ನೆಮ್ಮದಿಯ ಬದುಕಿಗೂ ಕಾರಣವಾಗುತ್ತದೆ.

ಸದನದ ಸುಗಮ ನಿರ್ವಹಣೆ ಆಡಳಿತ ಪಕ್ಷದ್ದೇ ಹೊಣೆ

• ಸೀತಾರಾಮ ಯೆಚೂರಿ

ಸಂಸದೀಯ ಪ್ರಜಾಸತ್ತೆಯಲ್ಲಿ, ಸಂಸತ್ತಿನ ಕಲಾಪ ಸುಲಲಿತವಾಗಿ ನಡೆಯುವಂತೆ ನೋಡಿಕೊಳ್ಳುವ ಮುಖ್ಯ ಹೊಣೆಗಾರಿಕೆ ಆಡಳಿತ ಪಕ್ಷದ್ದು. ಸ್ವಾತಂತ್ರ್ಯ ಬಂದಾಗಿನಿಂದಲೇ ಭಾರತವು ಈ ತತ್ವವನ್ನು ಅನುಸರಿಸಿಕೊಂಡು ಬಂದಿದೆ. ವಿವಾದಾತ್ಮಕ ವಿಚಾರಗಳನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಸಭಾಪತಿ ಮತ್ತು ಸ್ಪೀಕರ್ ಹಾಗೂ ವಿರೋಧ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಕೆಲಸವನ್ನು ಸರ್ಕಾರವು ಮಾಡಬೇಕು. ಈ ಹೊಣೆಗಾರಿಕೆಯಲ್ಲಿ ಬಿಜೆಪಿ ವಿಫಲವಾಗಿದೆ. ಈ ವೈಫಲ್ಯವೇ ಈಗ ಸಂಸತ್ ಕಲಾಪವು ಸ್ಥಗಿತಗೊಳ್ಳಲು ಕಾರಣ.

ಮೊದಲನೆಯದಾಗಿ, ಬಿಜೆಪಿ ಮುಖ್ಯ ವಿರೋಧ ಪಕ್ಷವಾಗಿದ್ದಾಗ, ಅದರಲ್ಲೂ ಮುಖ್ಯವಾಗಿ 2009–2014ರ ಅವಧಿಯಲ್ಲಿ ಈ ಪಕ್ಷದ ಸಂಸದರು ಸಂಸತ್ ಕಲಾಪಕ್ಕೆ ಕೊನೆಯಿಲ್ಲದ ರೀತಿಯಲ್ಲಿ ಅಡ್ಡಿಪಡಿಸಿದ್ದರು. 2ಜಿ ಹಗರಣದ ಬಗ್ಗೆ ಜಂಟಿ ಸಂಸದೀಯ ಸಮಿತಿ ತನಿಖೆ ನಡೆಸಬೇಕು ಎಂದು ಆಗ್ರಹಿಸಿ ಕೆಲವೊಮ್ಮೆ ಸಂಪೂರ್ಣ ಅವಧಿಯೇ ವ್ಯರ್ಥವಾಗುವ ಹಾಗೆ ಮಾಡಿದ್ದರು. ಆಗ ಸಂಸತ್ತಿನಲ್ಲಿ ಈ ಪಕ್ಷದ ನಾಯಕರಾಗಿದ್ದವರು, ನಂತರ ಬಿಜೆಪಿ ಸರ್ಕಾರದಲ್ಲಿ ಹಣಕಾಸು ಮತ್ತು ವಿದೇಶಾಂಗದಂತಹ ಪ್ರಮುಖ ಖಾತೆಗಳ ಸಚಿವರಾದರು. 'ಸಂಸತ್ ಕಲಾಪಕ್ಕೆ ಅಡ್ಡಿಪಡಿಸುವುದು ಕೂಡ ಪ್ರಜಾಸತ್ತಾತ್ಮಕ ಹಕ್ಕು' ಎಂದು ಸಂದೇಹಕ್ಕೆ ಎಡೆ ಇಲ್ಲದ ರೀತಿಯಲ್ಲಿ ಇವರು ಹೇಳಿದ್ದರು. ಇದು ಭಿನ್ನಮತದ ಪ್ರಜಾಸತ್ತಾತ್ಮಕವಾದ ಅಭಿವ್ಯಕ್ತಿ ಎಂದಿದ್ದರು. ಇದು ದಾಖಲೆಯಲ್ಲಿ ಇದೆ. ಹಾಗಾಗಿ, ಕಲಾಪಕ್ಕೆ ಅಡ್ಡಿಪಡಿಸುವುದು ಸಂಸದೀಯ ಪ್ರಜಾಸತ್ತೆಯಲ್ಲಿ ಅಸಹಜ ಏನೂ ಅಲ್ಲ ಹಾಗೂ ಇದು ಆಕ್ಷೇಪಾರ್ಹವೂ ಅಲ್ಲ. ಎರಡನೆಯದಾಗಿ, ಸದನ ನಡೆಸುವುದು ಸರ್ಕಾರದ ಹೊಣೆ ಎಂಬ ನಿಲುವನ್ನು ಬಿಜೆಪಿ ಆಗ ಹೊಂದಿತ್ತು. ಈ ಎರಡೂ ವಿಚಾರಗಳಲ್ಲಿಯೂ ಬಿಜೆಪಿಯದ್ದು ಈಗ ಆತ್ಮವಂಚನೆ.

ಮೂರನೆಯದಾಗಿ, ನರೇಂದ್ರ ಮೋದಿ ಅವರು ಪ್ರತಿಪಾದಿಸುತ್ತಿರುವ ಮತ್ತು ಆರ್‌ಎಸ್‌ಎಸ್‌ನ ಧರ್ಮಾಂಧ ಹಿಂದೂ ಭಾರತ ಎಂಬ ಪರಿಕಲ್ಪನೆಯೇ ಆಗಿರುವ 'ನವ ಭಾರತ'ದ ಸ್ಥಾಪನೆಗೆ ಸಂಸತ್ತು ಮತ್ತು ಸಂಸತ್ತಿನ ಎಲ್ಲ ಸಂಸ್ಥೆಗಳನ್ನು ನಿರ್ನಾಮಗೊಳಿಸಬೇಕಿದೆ ಎಂಬುದು ಬಿಜೆಪಿಯ ನಿಲುವು. ಅದರ ಆರಂಭವನ್ನು ನಾವು ಕಂಡಿದ್ದೇವೆ. ಸ್ವತಂತ್ರ ನ್ಯಾಯಾಂಗ, ಚುನಾವಣಾ ಆಯೋಗ, ಮಾನವ ಹಕ್ಕುಗಳ ಆಯೋಗ ಇತ್ಯಾದಿಗಳ ಮೇಲೆ ಅವರು ಹೇಗೆ ಪ್ರಭಾವ ಬೀರುತ್ತಿದ್ದಾರೆ ಎಂಬುದನ್ನೂ ನೋಡುತ್ತಿದ್ದೇವೆ. ಸಂಸತ್ ಕಲಾಪ ನಡೆಯದಂತೆ ಮಾಡುವುದು ದೊಡ್ಡ ಕಾರ್ಯತಂತ್ರದ ಭಾಗ. ಭಾರತದ ಸಂವಿಧಾನ ಮತ್ತು ಸಂಸದೀಯ ಪ್ರಜಾತಂತ್ರವನ್ನು ಧ್ವಂಸ ಮಾಡುವುದು ಇದರ ಗುರಿ.

ಪೆಗಾಸಸ್ ಕುತಂತ್ರಾಂಶ ಬಳಸಿಕೊಂಡು ನಡೆಸಿರುವ ಬೇಹುಗಾರಿಕೆಯು ಖಾಸಗಿತನದ ಮೂಲಭೂತ ಹಕ್ಕಿನ ಉಲ್ಲಂಘನೆ ಮಾತ್ರ ಅಲ್ಲ. ಅದಕ್ಕಿಂತಲೂ ಬಹಳ ಗಾಢವಾದ ವಿಚಾರ ಅದು. ಬೇಹುಗಾರಿಕೆಗೆ ಒಳಗಾಗಿದ್ದಾರೆ ಎಂದು ಹೇಳಲಾದ ವ್ಯಕ್ತಿಗಳ ಪಟ್ಟಿಯಲ್ಲಿ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳು, ನ್ಯಾಯಾಧೀಶರು, ಚುನಾವಣಾ ಆಯೋಗದ ನಿವೃತ್ತ ಆಯುಕ್ತರು, ಸಿಬಿಐನ ಮಾಜಿ ನಿರ್ದೇಶಕರು, ಅಧಿಕಾರಿಗಳು, ಹಿರಿಯ ರಾಜಕಾರಣಿಗಳು ಮತ್ತು ಪತ್ರಕರ್ತರಿದ್ದಾರೆ. ಇವರೆಲ್ಲರೂ ಸರ್ಕಾರದ ಜತೆಗೆ ವಿವಿಧ ವಿಷಯಗಳಲ್ಲಿ ಭಿನ್ನಮತ ಹೊಂದಿದ್ದವರು.

ಪೆಗಾಸಸ್ ಬೇಹುಗಾರಿಕೆಯು ಖಾಸಗಿತನದ ಮೂಲಭೂತ ಹಕ್ಕಿನ ಉಲ್ಲಂಘನೆಯ ಜತೆಗೆ, ಸಂಸದೀಯ ಪ್ರಜಾಸತ್ತೆಯ ಎಲ್ಲ ಸಂಸ್ಥೆಗಳ ಮೇಲೂ ನಡೆದ ದಾಳಿ. ನ್ಯಾಯಾಂಗ, ಚುನಾವಣಾ ಆಯೋಗ, ಸಿಬಿಐ, ವಿರೋಧ ಪಕ್ಷಗಳು, ಮಾಧ್ಯಮ ಎಲ್ಲದರ ಮೇಲೆಯೂ ಬೇಹುಗಾರಿಕೆ ನಡೆಸಲಾಗಿದೆ. ಈ ಗೂಢಚರ್ಯೆಯ ಮೂಲಕ ಪ್ರಜಾಪ್ರಭುತ್ವದ ಈ ಎಲ್ಲ ಸಂಸ್ಥೆಗಳನ್ನು ನಾಶ ಮಾಡಲು ಯತ್ನಿಸಲಾಗಿದೆ. ಪೆಗಾಸಸ್ ಅನ್ನು ಕಣ್ಗಾವಲಿಗೆ ಮಾತ್ರ ಬಳಸಿಕೊಂಡಿದ್ದಲ್ಲ, ಮೊದಲೇ ಪ್ರಸ್ತಾಪಿಸಿದ ಹಾಗೆ, ಸಂವಿಧಾನ ಮತ್ತು ಸಂಸದೀಯ ಪ್ರಜಾಪ್ರಭುತ್ವವನ್ನು ನಾಶಗೊಳಿಸುವ ಯತ್ನ ಇದು. ಹಾಗಾಗಿ, ಸ್ವತಂತ್ರವಾದ, ಉನ್ನತಾಧಿಕಾರದ ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯ ತನಿಖೆಯು ಅತ್ಯಗತ್ಯ. ಹಾಗಾದಾಗ ಮಾತ್ರ ಸತ್ಯ ಹೊರಗೆ ಬರುತ್ತದೆ.

ಪೆಗಾಸಸ್ ಪ್ರಕರಣವನ್ನು ಚರ್ಚಾರ್ಹ ವಿಚಾರವೇ ಅಲ್ಲ ಎಂದು ಸರ್ಕಾರ ಏಕೆ ಹೇಳುತ್ತಿದೆ? ಸರ್ಕಾರ ಹೀಗೆ ಹೇಳುತ್ತಿರುವುದು ಹಾಸ್ಯಾಸ್ಪದ. ಫ್ರಾನ್ಸ್, ಮೆಕ್ಸಿಕೊ, ಮೊರಕ್ಕೊ ಸರ್ಕಾರಗಳು ತನಿಖೆಗೆ ಆದೇಶಿಸಿವೆ. ಇಸ್ರೇಲ್ ಕೂಡ ತನಿಖೆಗೆ ಆದೇಶ ನೀಡಿದೆ. ಪೆಗಾಸಸ್ ಕುತಂತ್ರಾಂಶವನ್ನು 'ಪ್ರಮಾಣೀಕೃತ ಸರ್ಕಾರ'ಗಳಿಗೆ ಮಾತ್ರ ಮಾರಾಟ ಮಾಡಿರುವುದಾಗಿ ಪೆಗಾಸಸ್ ಕುತಂತ್ರಾಂಶವನ್ನು ತಯಾರಿಸುವ ಎನ್‌ಎಸ್‌ಒ ಗ್ರೂಪ್ ಹೇಳಿದೆ. ಭಾರತ ಸರ್ಕಾರ ಮಾತ್ರ ತನಿಖೆಗೆ ಏಕೆ ಹಿಂಜರಿಯುತ್ತಿದೆ? ಏನನ್ನೂ ಮುಚ್ಚಿಡುತ್ತಿಲ್ಲ ಎಂದಾದರೆ ಸರ್ಕಾರಕ್ಕೆ ಹಿಂಜರಿಕೆ ಏಕೆ?



ಸ್ವತಂತ್ರ ನ್ಯಾಯಾಂಗ, ಚುನಾವಣಾ ಆಯೋಗ, ಮಾನವ ಹಕ್ಕುಗಳ ಆಯೋಗ ಇತ್ಯಾದಿಗಳ ಮೇಲೆ ಸರ್ಕಾರವು ಹೇಗೆ ಪ್ರಭಾವ ಬೀರುತ್ತಿದೆ ಎಂಬುದನ್ನು ನೋಡುತ್ತಿದ್ದೇವೆ. ಸಂಸತ್ ಕಲಾಪ ನಡೆಯದಂತೆ ಮಾಡುವುದು ದೊಡ್ಡ ಕಾರ್ಯತಂತ್ರದ ಭಾಗ. ಭಾರತದ ಸಂವಿಧಾನ ಮತ್ತು ಸಂಸದೀಯ ಪ್ರಜಾತಂತ್ರವನ್ನು ಧ್ವಂಸ ಮಾಡುವುದು ಇದರ ಗುರಿ

ಹೆಚ್ಚು ಮುಖ್ಯ ವಿಷಯ ಏನೆಂದರೆ, ಮೋದಿ ನೇತೃತ್ವದ ಸರ್ಕಾರ ಅಥವಾ ಅದರ ಯಾವುದಾದರೂ ಸಂಸ್ಥೆಗಳು ಇಸ್ರೇಲ್‌ನ ಎನ್‌ಎಸ್‌ಒ ಕಂಪನಿ ಜತೆ ಸಂಪರ್ಕ ಹೊಂದಿವೆಯೇ, ಆ ಸಂಸ್ಥೆ ತಯಾರಿಸುತ್ತಿರುವ ಸೇನಾ ಬಳಕೆಯ ಕುತಂತ್ರಾಂಶವನ್ನು ಖರೀದಿಸಿವೆಯೇ? ಇದಕ್ಕೆ 'ಹೌದು ಅಥವಾ ಅಲ್ಲ' ಎಂಬ ಉತ್ತರ ಕೊಟ್ಟರೆ ಆಯಿತು. ಖರೀದಿಸಿಲ್ಲ ಎಂದಾದರೆ 'ಇಲ್ಲ' ಎಂದರೆ ಮುಗಿಯಿತಲ್ಲವೇ? ಪ್ರಧಾನಿ ಮೋದಿ ಅವರ ನೇತೃತ್ವದ ಸರ್ಕಾರವು ಈ ಪ್ರಶ್ನೆಗೆ ಉತ್ತರಿಸಲು ನಿರಾಕರಿಸುತ್ತಿದೆ. ಈ ನಿರಾಕರಣೆಯೇ ಸರ್ಕಾರ ಕುತಂತ್ರಾಂಶವನ್ನು ಬಳಸಿಕೊಂಡಿದೆ ಮತ್ತು ಆ ಮೂಲಕ ಭಾರತದ ಸಾರ್ವಭೌಮ, ಸಾಂವಿಧಾನಿಕ ಮತ್ತು ಸಂಸದೀಯ ಪ್ರಜಾಸತ್ತೆಯನ್ನು ದಮನಿಸಿದೆ ಹಾಗೂ ನಾಶಪಡಿಸಲು ಯತ್ನಿಸಿದೆ ಎಂಬುದನ್ನು ದೃಢಪಡಿಸುತ್ತದೆ.

ರೈತರ ಸಮಸ್ಯೆಗಳು ಮತ್ತು ಇತರ ವಿಚಾರಗಳ ಚರ್ಚೆಗೆ ವಿರೋಧ ಪಕ್ಷಗಳು ಅಡ್ಡಿ ಮಾಡುತ್ತಿವೆ ಎಂದು ಸರ್ಕಾರ ಹೇಳುತ್ತಿದೆ. ಕಳೆದ ಅಧಿವೇಶನದಲ್ಲಿ ರೈತರ ಸಮಸ್ಯೆಗಳನ್ನು ಚರ್ಚಿಸಲು ಸರ್ಕಾರವೇ ಅವಕಾಶ ಕೊಟ್ಟಿರಲಿಲ್ಲ. ಸರ್ಕಾರ ಈಗ ತನ್ನ ನಿಲುವು ಬದಲಿಸಿಕೊಂಡಿದ್ದು ಏಕೆ? ಇದು ನೆಪ ಅಷ್ಟೇ. ತಾನು ನಡೆಸಿರುವ, ಸ್ವತಂತ್ರ ಭಾರತದ ಅತ್ಯಂತ ನಾಚಿಕೆಗೇಡಿನ ಕೃತ್ಯವನ್ನು ಸಮರ್ಥಿಸಿಕೊಳ್ಳಲು ಇದನ್ನು ಸರ್ಕಾರ ಬಳಸಿಕೊಳ್ಳುತ್ತಿದೆ.

ಎಲ್ಲ ವಿಚಾರಗಳಲ್ಲಿಯೂ ಚರ್ಚೆ ನಡೆಸಲು ಸರ್ಕಾರ ಒಪ್ಪಬಹುದಲ್ಲವೇ? ಪೆಗಾಸಸ್ ಜತೆಗೆ, ರೈತರ ಸಮಸ್ಯೆಗಳು, ಆರ್ಥಿಕತೆಯ ಸಮಸ್ಯೆಗಳು ಎಲ್ಲವನ್ನೂ ಚರ್ಚೆಗೆ ಒಳಪಡಿಸಬಹುದಲ್ಲವೇ? ಪೆಗಾಸಸ್ ವಿಚಾರದ ಚರ್ಚೆ ಮಾತ್ರ ಏಕೆ ಬೇಡ? ಏಕೆಂದರೆ, ಈ ವಿಚಾರದಲ್ಲಿ ಸರ್ಕಾರದ ಬಳಿ ಉತ್ತರ ಇಲ್ಲ. ಕಣ್ಗಾವಲಿಗೆ ಒಳಗಾದವರ ಪಟ್ಟಿಯಲ್ಲಿ ನಿವೃತ್ತ ನ್ಯಾಯಮೂರ್ತಿಯೊಬ್ಬರ ಹೆಸರು ಇದೆ. ತನಿಖೆ ನಡೆದರೆ ಇಂತಹ ಇನ್ನಷ್ಟು ಹೆಸರುಗಳು ಬಹಿರಂಗ ಆಗುತ್ತವೆ. ಭಾರತವು ಪ್ರಜಾಪ್ರಭುತ್ವವಾಗಿ ಉಳಿದಿಲ್ಲ, ಇದೊಂದು ಕಣ್ಗಾವಲು ದೇಶ ಎಂಬುದನ್ನೂ ಅದು ಹೇಳುತ್ತದೆ.

ಚರ್ಚೆಯೇ ಇಲ್ಲದೆ ಮಸೂದೆಗಳನ್ನು ಅಂಗೀಕರಿಸಿರುವುದು ಕೂಡ ಅನೈತಿಕ, ಅಸಂಸದೀಯ ಮತ್ತು ನಿರಂಕುಶವಾದುದು. ಈ ರೀತಿಯಲ್ಲಿ ಹಿಂದೆ ಎಂದೂ ಆಗಿರಲಿಲ್ಲ. ಮಹತ್ವದ ಮಸೂದೆಗಳನ್ನು ಅಂಗೀಕರಿಸಲಾಗಿದೆ. ಸಂಸತ್ತು ಸುಗಮವಾಗಿ ನಡೆಯುತ್ತಿಲ್ಲ ಎಂಬುದನ್ನು ಸರ್ಕಾರವು ಒಂದು ಅವಕಾಶವಾಗಿ ಬಳಸಿಕೊಳ್ಳುತ್ತಿದೆ. ಈ ಹಿಂದೆಯೂ ಮಸೂದೆಗಳು ಸಂಸತ್ತಿನ ಸ್ಥಾಯಿ ಸಮಿತಿಯ ಪರಿಶೀಲನೆಗೆ ಒಳಪಡುವುದನ್ನು, ವ್ಯವಸ್ಥಿತ ಚರ್ಚೆ ನಡೆಯುವುದನ್ನು ಸರ್ಕಾರ ಬಯಸಿರಲಿಲ್ಲ. ಸರ್ಕಾರದ ಧೋರಣೆಯೇ ಇದು. ಸಂಸತ್ತಿನ ಸದಸ್ಯನಾಗಿದ್ದಾಗ ನಾನು ಹೇಳಿದಂತೆ, ಇದು ಪ್ರಜಾಪ್ರಭುತ್ವ ಅಲ್ಲ, ಇದು ಬಿಜೆಪಿಯ ಬಹುಮತದ ನಿರಂಕುಶಾಧಿಕಾರ.

ಲೇಖಕ: ಸಿಪಿಎಂ ಪ್ರಧಾನ ಕಾರ್ಯದರ್ಶಿ

ನಿರೂಪಣೆ: ಶೆಮಿನ್ ಜಾಯ್


ಪದಬಂಧ 4681 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಗಾಳಿಯಿಂದ ಕೂಡಿದ ಪ್ರದೇಶ (5)
3.ವಿಧಿಯನ್ನು ಬರೆಯುವವನು (3)
5.ಬೆಂಗಳೂರಿನ ಭವ್ಯ ಸರ್ಕಾರಿ ಕಟ್ಟಡ (5)
7.ಗಂಡಾನೆ ಇಲ್ಲಿದೆ (3)
8.ಒಳ್ಳೆಯ ಮುಹೂರ್ತ (5)
11.ದೈವದಲ್ಲಿ ನಂಬಿಕೆಯುಳ್ಳವನು (3)
12.ಈತ ಅಡುಗೆಯಲ್ಲಿ ನುರಿತವ (5)
14.ಹತ್ತು ವರ್ಷಗಳ ಕಾಲದ ಅವಧಿ (3)
15.ದುಃಖದಿಂದ ಕೂಡಿದ ಮುಖ (5)

ಮೇಲಿಂದ ಕೆಳಕ್ಕೆ

1.ನಿಜವಾಗಿ ಇರುವಂಥದ್ದು (4)
2.ವನದಲ್ಲಿ ಮುಂಡನ! (3)
4.ಅಲೆ ಇಲ್ಲಿ ಕಾಣುತ್ತಿದೆ (3)
6.ಪರಿಮಳ ಇಲ್ಲಿ ಹರಡಿದೆ (3)
7.ಔಚಿತ್ಯವನ್ನು ಮೀರಿದ ಸ್ನೇಹ (3)
8.ಶುಕದ ಹತ್ತಿರ ಶ್ವಾನ ಬಂದಿದೆಯಲ್ಲಾ? (3)
9. ಬಾಳೆಗಿಡವಿಲ್ಲಿ ಉಲ್ಟಾ ಆಗಿಬಿಟ್ಟಿದೆ (3)
10.ಬುದ್ಧಿವಂತಿಕೆಯಿದು (4)
11.ರುಚಿ ನೋಡುವುದು (3)
13. ಪ್ರಯಾಸದಿಂದ ಆದ ಹೆರಿಗೆ! (3)



4680ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಸ್ಥಾಪಕ 4.ಪವನ5.ಹಕೀಕತ್ತು 6.ಪರಿಮಾಣ8. ಟದಿ10.ತಮ 13.ತಪಸ್ವಿನಿ14. ಅವಸಾನ 15.ಗ್ರಸನ16.ವಿಗ್ರಹ

ಮೇಲಿಂದ ಕೆಳಕ್ಕೆ: 1.ಉಪಕುಲಪತಿ2. ಸ್ಥಾನಪಲ್ಲಟ3.ಚಾಕರಿ5. ಹಣವಂತ 7.ವತ್ಸಹೋಮನವ9. ದಿಟ್ಟತನ11. ಮನೋನಿಗ್ರಹ12. ಕವಳ

ಸುಡೊಕು 5067

	7	9			3		8	
	4			8			5	9
8			2	6		7		4
	8			2		1		5
		2	8		5		6	
5				3			2	
9		7	5					6
						9	4	
4	3		6		1		7	2


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5066 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ಗುಂಡಣ್ಣ



ದಿನ ಭವಿಷ್ಯ

ಶನಿವಾರ ಆಗಸ್ಟ್ 7, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಗ್ರೀಷ್ಮ ಋತು ಆಷಾಢ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಆಶ್ಲೇಷಾ ಚತುರ್ದಶಿ ಗಂ. 29-24 (ಸಾ. 5-59) ಶನಿವಾರ ನಿತ್ಯ ನಕ್ಷತ್ರ ಪುನರ್ವಸು ಗಂ. 4-49 (ಬೆ. 8-09) ಸಿದ್ಧಿ ನಾಮ ಯೋಗ ಗಂ. 48-36 ಶಕುನಿ ಕರಣ ಗಂ. 29-24 ವಿಷ ಗಂ. 25-54 ಅಮೃತ ಶೇಷ ಗಂ. 2-30 ಅಮೃತ ಗಂ. 51-12: ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 : ಸೂರ್ಯೋದಯ: 6-10 ಸೂರ್ಯಾಸ್ತ: 6-41 ಅದೃಷ್ಟ ಸಂಖ್ಯೆ 3, 7

ಮೇಷ: ಹೊಸ ವ್ಯಕ್ತಿಗಳಿಂದ ಸಹಕಾರ ದೊರಕಲಿದೆ. ವಿದ್ವಾಂಸರಿಗೆ, ಕಲಾವಿದರುಗಳಿಗೆ ಸಾಮಾಜಿಕ ಗೌರವಗಳು ಪ್ರಾಪ್ತವಾಗಲಿವೆ. ಅನಿರೀಕ್ಷಿತ ಮೂಲಗಳಿಂದ ಧನಾಗಮನ. ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ.

ವೃಷಭ: ಬಂಧುಗಳ ಗೌರವಕ್ಕೆ ಪಾತ್ರರಾಗುವಿರಿ. ಮನರಂಜನೆಗಾಗಿ ಖರ್ಚು. ಸ್ವಂತ ಉದ್ಯೋಗಿಗಳಿಗೆ ಯಶಸ್ಸು. ಕೃಷಿ ಉತ್ಪನ್ನ ಕೆಲಸಗಳಲ್ಲಿ ತೊಡಗಿಕೊಂಡವರಿಗೆ ಭೂಮಿಯಿಂದ ಧನಲಾಭ. ಅಧಿಕಾರಿಗಳಿಂದ ಸಹಕಾರ.

ಮಿಥುನ: ಮಿತ್ರರಿಂದ ಧನಲಾಭ. ಗೃಹ ನಿರ್ಮಾಣ ಕಾರ್ಯಗಳಲ್ಲಿ ಯಶಸ್ಸು. ಮಹಿಳೆಯರ ಅಪೇಕ್ಷೆಯ ಈಡೇರಿಕೆ. ಶುಭಕಾರ್ಯಗಳು ನಿಶ್ಚಯವಾಗಲಿವೆ. ಸಂತೃಪ್ತ ಜೀವನ. ಪ್ರಿಯ ವ್ಯಕ್ತಿಗಳ ಆಗಮನದಿಂದ ಮನೆಯಲ್ಲಿ ಸಂತಸ.

ಕರ್ಕಾಟಕ: ಕೌಟುಂಬಿಕ ಸೌಹಾರ್ದತೆಯಿಂದ ಸಂತೃಪ್ತಿ. ಸಮಸ್ಯೆಗಳಿಂದ ಮುಕ್ತರಾಗುವಿರಿ. ಮಹಿಳೆಯರಿಗೆ ಉದ್ಯೋಗದಲ್ಲಿ ಯಶಸ್ಸು. ದೀರ್ಘಕಾಲೀನ ಆರೋಗ್ಯ ಸಮಸ್ಯೆಯಿಂದ ಸುಧಾರಣೆ. ಆಸ್ತಿ ವಿವಾದಗಳಲ್ಲಿ ಅನುಕೂಲ.

ಸಿಂಹ: ವಿದ್ಯಾರ್ಥಿಗಳಿಗೆ ಸಮಸ್ಯೆಗಳಿಂದ ಮುಕ್ತಿ ದೊರೆತು ಉತ್ತಮ ಪ್ರಗತಿ. ಮಹಿಳಾ ಪ್ರತಿಭೆಗಳಿಗೆ ಪ್ರೋತ್ಸಾಹ ದೊರೆತು ಯಶಸ್ಸು. ಕುಟುಂಬವರ್ಗದಲ್ಲಿ ಶುಭಸಮಾರಂಭಗಳು ನಡೆಯಲಿವೆ. ಕೃಷಿ ಕ್ಷೇತ್ರದಿಂದ ಲಾಭ.

ಕನ್ಯಾ: ಬಂಧುಗಳಲ್ಲಿನ ಭಿನ್ನಾಭಿಪ್ರಾಯಗಳನ್ನು ದೂರ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುವಿರಿ. ಉತ್ತಮ ದಾಂಪತ್ಯ ಜೀವನ ನಿಮ್ಮದಾಗುವುದು. ಮಿತ್ರರಿಂದ ಸಹಕಾರ ದೊರಕಿ ಕೆಲಸ–ಕಾರ್ಯಗಳು ನಿರ್ವಿಘ್ನವಾಗುವವು.

ತುಲಾ: ಮಹಿಳೆಯರು ಕುಟುಂಬದಲ್ಲಿ ಗೌರವಕ್ಕೆ ಪಾತ್ರರಾಗುವ ಅವಕಾಶ. ವೃತ್ತಿಯಲ್ಲಿನ ಸಮಸ್ಯೆಗಳಿಗೆ ಪರಿಹಾರ. ಬಂಧುಗಳೊಂದಿಗಿನ ಆತ್ಮೀಯ ಸಂಬಂಧ ವೃದ್ಧಿಸುವುದು. ನ್ಯಾಯಾಲಯ ವಿಚಾರದಲ್ಲಿ ಪ್ರಗತಿ.

ವೃಶ್ಚಿಕ: ಸಾಮಾಜಿಕ ಸೇವೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಿರಿ. ಭೂ ಪ್ರಕರಣದಿಂದ ಧನಲಾಭ. ಆಧ್ಯಾತ್ಮಿಕ ಚಿಂತನೆಯಿಂದ ಸಮಸ್ಯೆಗಳು ಪರಿಹಾರವಾಗುವವು. ತೃಪ್ತಿಕರ ಜೀವನ ನಿಮ್ಮದಾಗಿ ಸಮಸ್ಯೆಗಳು ದೂರವಾಗುವವು.


ಧನು: ಸ್ನೇಹಿತರಿಂದ ಸಹಕಾರ. ನಿರುದ್ಯೋಗಿಗಳಿಗೆ ಉದ್ಯೋಗದ ಬಾಗಿಲು ತೆರೆಯಲಿದೆ. ಕೃಷಿಕರಿಗೆ ಸರ್ಕಾರದಿಂದ ಸಹಾಯ ಸಹಕಾರ ದೊರಕುವುದು. ಕಳೆದುಹೋದ ವಸ್ತುಗಳು ಲಭ್ಯವಾಗುವ ಸಾಧ್ಯತೆ ಕಂಡುಬರುವುದು.

ಮಕರ: ಕೈಗೆತ್ತಿಕೊಂಡ ಕೆಲಸ ಕಾರ್ಯಗಳು ಯಶಸ್ಸನ್ನು ಕಾಣಲಿವೆ. ನಿಮ್ಮ ವಿಚಾರ ಲಹರಿಯಿಂದಾಗಿ ಗೌರವಕ್ಕೆ ಪಾತ್ರರಾಗುವಿರಿ. ಆತುರತೆಯಿಂದಾಗಿ ತೊಂದರೆ. ಕುಲದೇವತಾ ದರ್ಶನ ಮಾಡಿ. ವಸ್ತ್ರದಾನ ಮಾಡಿ.

ಕುಂಭ: ಆಧ್ಯಾತ್ಮಿಕ ಚಿಂತನೆಯಿಂದ ಸಂತೃಪ್ತಿ. ಬಂಧುಗಳೊಂದಿಗಿನ ಸಂಬಂಧ ವೃದ್ಧಿ. ಹೊಸ ವಸ್ತುಗಳ ಖರೀದಿ ಸಾಧ್ಯತೆ. ಪ್ರಯಾಣ ಯೋಗ ಒದಗಿ ಬರಲಿದೆ. ಪುಣ್ಯಕ್ಷೇತ್ರ ದರ್ಶನ ಭಾಗ್ಯ. ದೇವತಾರಾಧನೆಯಿಂದ ಇಷ್ಟಾರ್ಥ ಸಿದ್ಧಿ.

ಮೀನ: ರಾಜಕೀಯದಲ್ಲಿ ಮುನ್ನಡೆ. ವ್ಯವಹಾರದಲ್ಲಿ ಯಶಸ್ಸ. ಮಹಿಳೆಯರಿಗೆ ಎಲ್ಲ ಕಡೆಯಿಂದಲೂ ಸಹಕಾರ ದೊರೆತು ಯಶಸ್ಸು. ಸಾಮಾಜಿಕ ಕ್ಷೇತ್ರದಲ್ಲಿ ಭಾಗಿಯಾಗಿ ಗೌರವಾದರ ಪ್ರಾಪ್ತಿ. ಅಮೂಲ್ಯ ವಸ್ತು ಖರೀದಿ.

ನಿಮ್ಮ ಜನ್ಮದಿನ 7-ಆಗಸ್ಟ್: ಇಂದು ಅತ್ಯಂತ ಶುಭದಾಯಕ. ವ್ಯವಹಾರದಲ್ಲಿ ಅಚ್ಚುಕಟ್ಟುತನವನ್ನು ರೂಢಿಸಿಕೊಳ್ಳುವ ಮೂಲಕ ಉತ್ತಮ ಲಾಭದತ್ತ ಸ್ವಂತ ಉದ್ದಿಮೆಗಳನ್ನು ಕೊಂಡೊಯ್ಯುವ ಅವಕಾಶ ನಿಮ್ಮದಾಗಲಿದೆ. ನಿಮ್ಮ ಕಠಿಣ ಸ್ವಭಾವದಿಂದಾಗಿ ವ್ಯವಹಾರದಲ್ಲಿ ತೊಂದರೆ ಎದುರಾದೀತು. ಕಠಿಣ ಪರಿಶ್ರಮದಿಂದಾಗಿ ಕೆಲಸ ಕಾರ್ಯಗಳಲ್ಲಿ ಯಶಸ್ಸು.



ಷೇರುಪೇಟೆ ವಹಿವಾಟು

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,294
ಇಂದಿನ ಅಂತ್ಯ	16,238
▼	56
ದಿನದ ಗರಿಷ್ಠ	16,336

ವಿನಿಮಯ ದರ

$ ಡಾಲರ್	74.15
£ ಪೌಂಡ್	103.14
€ ಯುರೊ	87.55
¥ ಯೆನ್ (100ಕ್ಕೆ)	67.29

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹470
12 ಮೊಟ್ಟೆಗೆ ₹62
ಮೈಸೂರು
100 ಮೊಟ್ಟೆಗೆ ₹472

ಡಿಜಿಟಲ್ ಕರೆನ್ಸಿ ಮಾದರಿ ವರ್ಷಾಂತ್ಯಕ್ಕೆ ಸಿದ್ಧ?

ಮುಂಬೈ (ಪಿಟಿಐ): ಡಿಜಿಟಲ್ ಕರೆನ್ಸಿಯು ಯಾವ ರೀತಿಯಲ್ಲಿ ಕೆಲಸ ಮಾಡಲಿದೆ ಎಂಬುದು ವರ್ಷಾಂತ್ಯದ ಹೊತ್ತಿಗೆ ಸ್ಪಷ್ಟವಾಗುವ ಸಾಧ್ಯತೆ ಇದೆ ಎಂದು ಆರ್‌ಬಿಐ ಡೆಪ್ಯುಟಿ ಗವರ್ನರ್ ಟಿ. ರವಿ ಶಂಕರ್ ಸುದ್ದಿಗಾರರಿಗೆ ತಿಳಿಸಿದರು.

ಭಾರತವು ಡಿಜಿಟಲ್ ಕರೆನ್ಸಿಗಳನ್ನು ಹಂತ ಹಂತವಾಗಿ ಚಲಾವಣೆಗೆ ಬಿಡುವ ಬಗ್ಗೆ ಆಲೋಚನೆ ನಡೆಸಿದೆ ಎಂದು ಶಂಕರ್ ಅವರು ಜುಲೈ 22ರಂದು ಮಾಡಿದ ಭಾಷಣದಲ್ಲಿ ಹೇಳಿದ್ದರು. ಚೀನಾ ದೇಶವು ಡಿಜಿಟಲ್ ಕರೆನ್ಸಿಯ ಪ್ರಾಯೋಗಿಕ ಬಳಕೆ ಆರಂಭಿಸಿದೆ, ಬ್ಯಾಂಕ್ ಆಫ್ ಇಂಗ್ಲೆಂಡ್ ಮತ್ತು ಅಮೆರಿಕದ ಫೆಡರಲ್ ರಿಸರ್ವ್ ಕೂಡ ಡಿಜಿಟಲ್ ಕರೆನ್ಸಿಯ ಸಾಧ್ಯತೆಗಳ ಬಗ್ಗೆ ಪರಿಶೀಲನೆ ನಡೆಸುತ್ತಿವೆ.

'ಭಾರತದಲ್ಲಿ ಡಿಜಿಟಲ್ ಕರೆನ್ಸಿ ಎಂದಿನಿಂದ ಚಲಾವಣೆಗೆ ಬರಬಹುದು ಎಂಬುದನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟ' ಎಂದು ಶಂಕರ್ ಹೇಳಿದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	600-6500
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	380

ಅಡಿಕೆ
ಬಂಟ್ವಾಳ

ಕೋಕ	10000-22500
ಹೊಸತು	23500-45000
ಹಳತು	42500-52000

ಬೆಳ್ತಂಗಡಿ

ಕೋಕ	17000-35000
ಹೊಸತು	23190-45000
ಹಳತು	45410-52000

ಹೊಸನಗರ

ಬಿಳಿಗೋಟು	26899-26899
ಚಾಲಿ	36899-39899
ಕೆಂಪುಗೋಟು	32699-35899
ರಾಶಿ	41199-43689

ಕುಮಟಾ

ಚಿಪ್ಪು	32199-34699
ಕೋಕ	22699-31019
ಫ್ಯಾಕ್ಟರಿ	15509-19769
ಹಳೆಚಾಲಿ	41869-44729
ಹೊಸಚಾಲಿ	39099-41311

ಶಿವಮೊಗ್ಗ

ಗೊರಬಲು	16105-35469
ರಾಶಿ	36059-42786
ಸರಕು	45009-72909

ಸಿದ್ದಾಪುರ

ಬಿಳಿಗೋಟು	28099-35690
ಚಾಲಿ	37599-41199
ಕೋಕ	21099-34099
ಕೆಂಪುಗೋಟು	29289-31899
ರಾಶಿ	40009-41259

ಶಿರಸಿ

ಬೆಟ್ಟೆ	30299-41599
ಬಿಳಿಗೋಟು	18099-35699
ಚಾಲಿ	36819-41899
ರಾಶಿ	37289-41899

ಯಲ್ಲಾಪುರ

ಬಿಳಿಗೋಟು	28899-35699
ಚಾಲಿ	36489-41591
ಕೋಕ	20216-31389
ಕೆಂಪುಗೋಟು	28899-33299
ರಾಶಿ	39800-45111
ತಟ್ಟಿಬೆಟ್ಟೆ	34899-39400

ರೇಷ್ಮೆಗೂಡು ಮಾರುಕಟ್ಟೆ
ರಾಮನಗರ

ಮಿಶ್ರ ತಳಿ:	223-480
ದ್ವಿತಳಿ;	262-519

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13200	12,000	12,200	176.90ಸೆಂಟ್ಸ್
ಎಸಿ	5665	4,850	4850	
ಆರ್‌ಪಿ	6000	5,700	5950	ಲಂಡನ್
ಆರ್‌ಸಿ	3355	3,325	3425	1764ಡಾಲರ್ಸ್

ಕೊಬ್ಬರಿ ಧಾರಣೆ

ಬೆಂಗಳೂರು	₹15000-16300
ತುರುವೇಕೆರೆ	₹16000-16300

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1460 (1470)
ಸೋಯಾ (ರಿಫೈನ್ಡ್)	₹1398(1402)
ಸೂರ್ಯಕಾಂತಿ (ರಿಫೈನ್ಡ್)	₹1475 (1475)
ಪಾಮೋಲಿನ್	₹1258 (1260)

ಮುಂಬೈ ಧಾರಣೆ

ಶೇಂಗಾ
6-8-2021

ಜಾವಾ 70/80(ಹೊಸ)	9950-10000
ಜಾವಾ 80/90(ಹೊಸ)	9050-9100
ದಪ್ಪ ಮಧ್ಯಪ್ರದೇಶ(ಹೊಸ)	9550-9600
ದಪ್ಪ ಗುಜರಾತ್(ಹೊಸ)	9300-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1470 (1480)
ಒಂದು ವಾರದ ಡೆಲಿವರಿ	1465 (1475)
ಸೋಯಾ ಕಚ್ಚಾ	1365 (1370)
ಪಾಮ್ ವಾರದ ಡೆಲಿವರಿ	1256(1258)
ಸೂರ್ಯಕಾಂತಿ ಎಣ್ಣೆ ಕಚ್ಚಾ	1395 (1395)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
47,100 (47,750)
ಬೆಳ್ಳಿ ಕೆ.ಜಿ
66,000 (67,550)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಆರ್‌ಬಿಐ ಹಣಕಾಸು ನೀತಿ ಸಮಿತಿ ಸಭೆಯಲ್ಲಿ ತೀರ್ಮಾನ

ರೆಪೊ ದರ ಬದಲಾವಣೆ ಇಲ್ಲ ಹಣದುಬ್ಬರ ಅಂದಾಜು ಹೆಚ್ಚಳ

ನವದೆಹಲಿ/ಮುಂಬೈ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ಹಣದುಬ್ಬರ ಪ್ರಮಾಣವು ಶೇಕಡ 5.7ಕ್ಕೆ ಹೆಚ್ಚಳವಾಗಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅಂದಾಜಿಸಿದೆ. ಕಚ್ಚಾ ತೈಲದ ಬೆಲೆ ಹೆಚ್ಚಿರುವುದು ಮತ್ತು ಕಚ್ಚಾ ವಸ್ತುಗಳ ಬೆಲೆ ಏರಿಕೆ ಆಗಿರುವುದು ಇದಕ್ಕೆ ಕಾರಣ ಎಂದು ಅದು ಹೇಳಿದೆ. ಹೀಗಿದ್ದರೂ, ರೆಪೊ ದರದಲ್ಲಿ ಯಾವುದೇ ಬದಲಾವಣೆ ಮಾಡದಿರುವ ತೀರ್ಮಾನವನ್ನೂ ಕೈಗೊಂಡಿದೆ.

ಹಣದುಬ್ಬರ ಪ್ರಮಾಣವು ಶೇ 5.1ರಷ್ಟು ಇರಬಹುದು ಎಂದು ಆರ್‌ಬಿಐ ಈ ಮೊದಲು ಅಂದಾಜು ಮಾಡಿತ್ತು. ಈಗ ಅಂದಾಜನ್ನು ಪರಿಷ್ಕರಿಸಿದೆ. ಅರ್ಥ ವ್ಯವಸ್ಥೆಯಲ್ಲಿ ಈಗಷ್ಟೇ ಕಾಣಿಸುತ್ತಿರುವ ಚೇತರಿಕೆಗೆ ಒತ್ತಾಸೆಯಾಗಿ ನಿಲ್ಲುವ ಉದ್ದೇಶದಿಂದ, ರೆಪೊ ದರ ಬದಲಿಸದಿರುವ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಆರ್‌ಬಿಐ ಹೇಳಿದೆ.

ಆರ್‌ಬಿಐ ಕಡೆಯಿಂದ ಬ್ಯಾಂಕ್‌ಗಳಿಗೆ ನೀಡುವ ಸಾಲಕ್ಕೆ ಬಡ್ಡಿ ದರವನ್ನು ಶೇ 4ರ ಮಟ್ಟದಲ್ಲಿಯೇ ಉಳಿಸಿಕೊಳ್ಳುವ ತೀರ್ಮಾನವು ಉದ್ಯಮಕ್ಕೂ ಗ್ರಾಹಕ ವಲಯಕ್ಕೂ ಒಳ್ಳೆಯದು ಎಂದು ಉದ್ಯಮ ವಲಯ ಪ್ರತಿಕ್ರಿಯೆ ನೀಡಿದೆ. 2020ರ ಮೇ 22ರಂದು ಆರ್‌ಬಿಐ ರೆಪೊ ದರವನ್ನು ಇಳಿಸಿತ್ತು. ಅದಾದ ನಂತರದಲ್ಲಿ ರೆಪೊ ದರ ಬದಲಾವಣೆ ಕಂಡಿಲ್ಲ.

'ಹಣದುಬ್ಬರ ಪ್ರಮಾಣವು ಪ್ರಸಕ್ತ ಹಣಕಾಸು ವರ್ಷದ ಎರಡನೆಯ ತ್ರೈಮಾಸಿಕದಲ್ಲಿಯೂ ಹೆಚ್ಚಿನ ಮಟ್ಟದಲ್ಲಿಯೇ ಇರಬಹುದು. ಆದರೆ ಇದು ಮೂರನೆಯ ತ್ರೈಮಾಸಿಕದ ವೇಳೆಗೆ ಕಡಿಮೆ ಆಗಬಹುದು' ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ತಿಳಿಸಿದರು.

'ಮಾರುಕಟ್ಟೆಯಲ್ಲಿ ಬೇಡಿಕೆ, ಹೂಡಿಕೆ ಹಾಗೂ ವಿದೇಶಗಳಿಂದ ಬೇಡಿಕೆಯು ಹೆಚ್ಚಳದ ಹಾದಿಯಲ್ಲಿ ಇವೆ ಎಂಬುದನ್ನು ಹಲವು ಸೂಚಕಗಳು ಹೇಳುತ್ತಿವೆ. ಆದರೆ ಈ ಸಂದರ್ಭದಲ್ಲಿ ಚೇತರಿಕೆಯನ್ನು ಇನ್ನಷ್ಟು ಗಟ್ಟಿಗೊಳಿಸಲು ಬೆಂಬಲ ಮುಂದುವರಿಸುವ ಅಗತ್ಯ ಇದೆ' ಎಂದು ದಾಸ್ ಅವರು ಹೇಳಿದರು.

ಜಿಡಿಪಿ ಅಂದಾಜಿನಲ್ಲಿ ಪರಿಷ್ಕರಣೆ ಇಲ್ಲ

ದೇಶದ ಅರ್ಥ ವ್ಯವಸ್ಥೆಯು ಹಾಲಿ ಆರ್ಥಿಕ ವರ್ಷದಲ್ಲಿ ಶೇಕಡ 9.5ರಷ್ಟು ಬೆಳವಣಿಗೆ ಸಾಧಿಸಬಹುದು ಎಂದು ಆರ್‌ಬಿಐ ಈ ಮೊದಲು ಅಂದಾಜಿಸಿತ್ತು. ಈ ಅಂದಾಜಿನಲ್ಲಿ ಯಾವ ಬದಲಾವಣೆಯನ್ನೂ ಆರ್‌ಬಿಐ ತಂದಿಲ್ಲ.

ಕೋವಿಡ್‌ನ ಎರಡನೆಯ ಅಲೆಯ ಆಘಾತದಿಂದ ಅರ್ಥ ವ್ಯವಸ್ಥೆ ಇನ್ನಷ್ಟೇ ಚೇತರಿಸಿಕೊಳ್ಳಬೇಕಿದೆ ಎಂದು ಅದು ಹೇಳಿದೆ.

ಆರ್‌ಬಿಐನ ಹಣಕಾಸು ನೀತಿ ಸಮಿತಿಯು (ಎಂಪಿಸಿ) ರೆಪೊ ದರವನ್ನು ಬದಲಿಸಬಾರದು ಎಂಬ ತೀರ್ಮಾನವನ್ನು ಒಕ್ಕೊರಲಿನಿಂದ ಕೈಗೊಂಡಿದೆ. ಹೊಂದಾಣಿಕೆಯ ನಿಲುವನ್ನು ಮುಂದುವರಿಸಲು ಸಮಿತಿಯು ಬಹುಮತದಿಂದ ತೀರ್ಮಾನ ಕೈಗೊಂಡಿದೆ.



> ನಾವು ಈ ಹೊತ್ತಿನಲ್ಲಿ ಮೈಮರೆಯುವಂತಿಲ್ಲ. ದೇಶದ ಕೆಲವೆಡೆ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣ, ಎದುರಾಗಬಹುದಾದ '3ನೇ ಅಲೆ'ಯ ವಿಚಾರವಾಗಿ ಎಚ್ಚರದಿಂದ ಇರಬೇಕು.
> **ಶಕ್ತಿಕಾಂತ ದಾಸ್,** ಆರ್‌ಬಿಐ ಗವರ್ನರ್

'ಏಜೆನ್ಸಿ ಬ್ಯಾಂಕ್' ಆಗಿ ಕರ್ಣಾಟಕ ಬ್ಯಾಂಕ್

ಮಂಗಳೂರು: ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿವಿಧ ಆರ್ಥಿಕ ವ್ಯವಹಾರಗಳ ನಿರ್ವಹಣೆಗೆ ಕರ್ಣಾಟಕ ಬ್ಯಾಂಕ್‌ಗೆ 'ಏಜೆನ್ಸಿ ಬ್ಯಾಂಕ್' ಎಂಬ ಮಾನ್ಯತೆಯನ್ನು ಆರ್‌ಬಿಐ ನೀಡಿದೆ.

ಇದರಿಂದ ಕರ್ಣಾಟಕ ಬ್ಯಾಂಕ್ ಅಧಿಕೃತವಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಪರವಾಗಿ ಆದಾಯ ಸ್ವೀಕೃತಿ ಮತ್ತು ಪಾವತಿ, ಪಿಂಚಣಿ ಪಾವತಿ, ಮುದ್ರಾಂಕ ಶುಲ್ಕ ಸಂಗ್ರಹ ಹಾಗೂ ಆರ್‌ಬಿಐ ನಿರ್ದೇಶನದ ಇತರ ಪ್ರಮುಖ ವ್ಯವಹಾರಗಳನ್ನು ಮಾಡಬಹುದಾಗಿದೆ.

'ಸರ್ಕಾರದ ವ್ಯವಹಾರಗಳನ್ನು ನಿರ್ವಹಿಸಲು ನಮ್ಮ ಬ್ಯಾಂಕ್ ಸಶಕ್ತವಿದ್ದು, ಇದಕ್ಕಾಗಿ ನಮ್ಮ ಬ್ಯಾಂಕ್ ಒಂದು ಉತ್ತಮ ಆಯ್ಕೆ ಎಂಬ ದೃಢ ವಿಶ್ವಾಸವನ್ನು ಹೊಂದಿದ್ದೇವೆ. ಸರ್ಕಾರದ ಬ್ಯಾಂಕಿಂಗ್ ವ್ಯವಹಾರದ ಆಶೋತ್ತರಗಳಿಗೆ ತ್ವರಿತವಾಗಿ ಮತ್ತು ನಿರಂತರವಾಗಿ ನಾವು ಸ್ಪಂದಿಸಲಿದ್ದೇವೆ' ಎಂದು ಕರ್ಣಾಟಕ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ, ಸಿಇಒ ಮಹಾಬಲೇಶ್ವರ ಎಂ.ಎಸ್. ಹೇಳಿದ್ದಾರೆ.

ಅಮೆಜಾನ್ ಪರ ಸುಪ್ರೀಂ ಆದೇಶ

ನವದೆಹಲಿ (ಪಿಟಿಐ): ಫ್ಯೂಚರ್ ರಿಟೇಲ್ ಲಿಮಿಟೆಡ್ (ಎಫ್‌ಆರ್‌ಎಲ್) ಕಂಪನಿಯನ್ನು ರಿಲಯನ್ಸ್ ರಿಟೇಲ್ ಜೊತೆ ವಿಲೀನ ಮಾಡುವಂತಿಲ್ಲ ಎಂದು ಸಿಂಗಪುರದ ತುರ್ತು ಮಧ್ಯಸ್ಥಿಕೆ ಕೇಂದ್ರ ನೀಡಿದ್ದ ಆದೇಶವು ಭಾರತದಲ್ಲಿ ಜಾರಿಗೆ ಬರುತ್ತದೆ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಸ್ಪಷ್ಟಪಡಿಸಿದೆ. ಇದರಿಂದಾಗಿ, ಎಫ್‌ಆರ್‌ಎಲ್ ಹಾಗೂ ರಿಲಯನ್ಸ್ ರಿಟೇಲ್ ನಡುವಿನ ಒಪ್ಪಂದವನ್ನು ಪ್ರಶ್ನಿಸಿದ್ದ ಅಮೆಜಾನ್ ಕಂಪನಿಗೆ ಜಯ ಸಿಕ್ಕಂತಾಗಿದೆ.

ರಿಲಯನ್ಸ್ ರಿಟೇಲ್ ಕಂಪನಿಯು ಎಫ್‌ಆರ್‌ಎಲ್ ಕಂಪನಿಯನ್ನು ₹ 24,731 ಕೋಟಿಗೆ ಖರೀದಿಸಲು ಮುಂದಾಗಿತ್ತು. ಇದಕ್ಕೆ ಅಮೆಜಾನ್ ವಿರೋಧ ವ್ಯಕ್ತಪಡಿಸಿತ್ತು. ಭಾರತೀಯ ಮಧ್ಯಸ್ಥಿಕೆ ಮತ್ತು ರಾಜೀ ಕಾಯ್ದೆಯ ಅನ್ವಯ, ವಿದೇಶದ ಮಧ್ಯಸ್ಥಿಕೆ ಕೇಂದ್ರ ನೀಡಿದ ಆದೇಶವು ಭಾರತದಲ್ಲಿಯೂ ಜಾರಿಯಾಗುತ್ತದೆ ಎಂದು ನ್ಯಾಯಮೂರ್ತಿ ಆರ್.ಎಫ್. ನರಿಮನ್ ಅವರು ಇದ್ದ ನ್ಯಾಯಪೀಠವು ಹೇಳಿದೆ.

ಸುಪ್ರೀಂ ಕೋರ್ಟ್ ಆದೇಶವನ್ನು ಪ್ರಶ್ನಿಸಿ, ಸಿಂಗಪುರದ ಮಧ್ಯಸ್ಥಿಗೆ ಕೇಂದ್ರದ ಮಧ್ಯಂತರ ಆದೇಶವನ್ನು ಪ್ರಶ್ನಿಸಿ ಎಫ್‌ಆರ್‌ಎಲ್ ಕಂಪನಿಯ ಮೇಲ್ಮನವಿ ಸಲ್ಲಿಸುವ ಸಾಧ್ಯತೆ ಇದೆ ಎಂದು ಕಾನೂನು ಪರಿಣತರೊಬ್ಬರು ಹೆಸರು ಬಹಿರಂಗಪಡಿಸಬಾರದು ಎಂಬ ಷರತ್ತಿನೊಂದಿಗೆ ಹೇಳಿದರು.


ಈಗ ಸುಪ್ರೀಂ ಕೋರ್ಟ್ ನೀಡಿರುವ ಆದೇಶವು ಎಫ್‌ಆರ್‌ಎಲ್ ಹಾಗೂ ಅಮೆಜಾನ್ ನಡುವಿನ ವ್ಯಾಜ್ಯದ ಸರಿ–ತಪ್ಪುಗಳ ಬಗ್ಗೆ ಏನನ್ನೂ ಹೇಳಿಲ್ಲ. ಬದಲಿಗೆ, ಇದು ಕಾನೂನಿನ ಪ್ರಶ್ನೆಯೊಂದಕ್ಕೆ ಉತ್ತರ ನೀಡಿದೆ, ಮಧ್ಯಸ್ಥಿಕೆ ಕೇಂದ್ರದ ಆದೇಶವನ್ನು ಪಾಲಿಸಲೇಬೇಕು ಎಂದು ಸುಪ್ರೀಂ ಕೋರ್ಟ್ ಆದೇಶ ಸ್ಪಷ್ಟಪಡಿಸಿದೆ ಎಂದು ಅವರು ವಿವರಿಸಿದರು.

ಕೆಐಒಸಿಎಲ್‌ಗೆ ₹ 215 ಕೋಟಿ ಲಾಭ

ಮಂಗಳೂರು: ಕುದುರೆಮುಖ ಕಬ್ಬಿಣ ಮತ್ತು ಅದಿರು (ಕೆಐಒಸಿಎಲ್) ಕಂಪನಿಯು 2021-22ನೇ ಸಾಲಿನ ಮೊದಲ ತ್ರೈಮಾಸಿಕದಲ್ಲಿ ₹ 215.92 ಕೋಟಿ ಲಾಭ ಗಳಿಸಿದೆ.

ಕಾರ್ಯಾಚರಣೆಗಳಿಂದ ₹1,042.05 ಕೋಟಿ ಆದಾಯ ಗಳಿಸುವ ಮೂಲಕ, ಶೇ 139ರಷ್ಟು ಪ್ರಗತಿ ಸಾಧಿಸಿದೆ. ಕಂಪನಿಯು ಈ ತ್ರೈಮಾಸಿಕದಲ್ಲಿ 6.03 ಲಕ್ಷ ಟನ್ ಕಬ್ಬಿಣದ ಉಂಡೆ ಉತ್ಪಾದಿಸಿದ್ದು, ಹಿಂದಿನ ವರ್ಷದ ಮೊದಲ ತ್ರೈಮಾಸಿಕಕ್ಕಿಂತ ಶೇ 18ರಷ್ಟು ವೃದ್ಧಿ ಸಾಧಿಸಿದೆ.

'ರಫ್ತು ಮಾರುಕಟ್ಟೆಯಲ್ಲಿ ಕೆಐಒಸಿಎಲ್‌ನ ಅದಿರು ಉಂಡೆಗಳ ಬೆಲೆ ಏರಿಕೆಯಿಂದಾಗಿ ಹೆಚ್ಚಿನ ಲಾಭ ಪಡೆಯಲು ಸಾಧ್ಯವಾಗಿದೆ' ಎಂದು ಕೆಐಒಸಿಎಲ್‌ನ ಪ್ರಭಾರ ಸಿಎಂಡಿ ಹಾಗೂ ಹಣಕಾಸು ನಿರ್ದೇಶಕ ಸ್ವಪನ್‌ಕುಮಾರ್ ಗೊರೈ ಹೇಳಿದ್ದಾರೆ.



ಚಿನ್ನಾಭರಣಗಳ ಮಾರಾಟ ಕಂಪನಿ ಜೋಯಾಲುಕ್ಕಾಸ್ ಮಧ್ಯಪ್ರಾಚ್ಯ ಮತ್ತು ಉತ್ತರ ಆಫ್ರಿಕಾ (ಎಂಇಎನ್‌ಎ) ವಲಯದಲ್ಲಿ ನಡೆಸುವ ವಹಿವಾಟುಗಳನ್ನು ಗುರುತಿಸಿ 'ರಿಟೇಲ್ ಎಂಇ ಐಕಾನ್ಸ್' ಪ್ರಶಸ್ತಿಯನ್ನು ದುಬೈ ಪ್ರವಾಸೋದ್ಯಮ ಮತ್ತು ವಾಣಿಜ್ಯ ಮಾರುಕಟ್ಟೆ ಇಲಾಖೆಯ 'ಅಲಯನ್ಸ್ ಆ್ಯಂಡ್ ಪಾರ್ಟ್ನರ್‌ಶಿಪ್'ನ ಸಿಇಒ ಲೈಲಾ ಮೊಹಮ್ಮದ್ ಸುಹೈಲ್ ಅವರು ಕಂಪನಿಯ ಅಧ್ಯಕ್ಷ ಜೋಯ್ ಅಲುಕ್ಕಾಸ್ ಅವರಿಗೆ ಈಚೆಗೆ ಪ್ರದಾನ ಮಾಡಿದರು. ಕಂಪನಿಯ ಅಂತರರಾಷ್ಟ್ರೀಯ ವ್ಯವಹಾರಗಳ ವ್ಯವಸ್ಥಾಪಕ ನಿರ್ದೇಶಕ ಜಾನ್ ಪಾಲ್ ಅಲುಕ್ಕಾಸ್ ಚಿತ್ರದಲ್ಲಿದ್ದಾರೆ.

'ಎಲ್ಲ ಗಿರಣಿಗಳಲ್ಲೂ ಅಕ್ರಮ ನಡೆದಿಲ್ಲ'

ಮಂಡ್ಯ ಜಿಲ್ಲಾ ಅಕ್ಕಿ ಗಿರಣಿ ಮಾಲೀಕರ ಸಂಘದ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯ ಜಿಲ್ಲೆಯಲ್ಲಿ ಬೆಂಬಲ ಬೆಲೆ ಯೋಜನೆ (ಎಂಎಸ್‌ಪಿ) ಅಡಿಯಲ್ಲಿ ಖರೀದಿಸಿದ್ದ ಭತ್ತವನ್ನು ದಾಸ್ತಾನು ಇರಿಸಿದ್ದ ಎಲ್ಲ ಅಕ್ಕಿ ಗಿರಣಿಗಳಲ್ಲೂ ಅಕ್ರಮ ನಡೆದಿದೆ ಎಂಬ ಆರೋಪ ಸತ್ಯಕ್ಕೆ ದೂರವಾದುದು. ಕೆಲವೇ ಗಿರಣಿಗಳಲ್ಲಿ ನಡೆದಿರುವ ಅಕ್ರಮದ ಆಧಾರದಲ್ಲಿ ಸಾರ್ವತ್ರಿಕವಾಗಿ ಆರೋಪ ಮಾಡಲಾಗದು ಎಂದು ಮಂಡ್ಯ ಜಿಲ್ಲಾ ಅಕ್ಕಿ ಗಿರಣಿ ಮಾಲೀಕರ ಸಂಘ ಹೇಳಿದೆ.

ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ರಾಜ್ಯ ಮಟ್ಟದ ತನಿಖಾ ದಳವು ಎಂಎಸ್‌ಪಿ ಭತ್ತ ಖರೀದಿ, ಹಲ್ಲಿಂಗ್ ಮತ್ತು ಅಕ್ಕಿ ಸಾಗಣೆ ಸಂಬಂಧ ತನಿಖೆ ನಡೆಸುತ್ತಿರುವ ಕುರಿತು 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ವರದಿಗಳಿಗೆ ಪ್ರತಿಕ್ರಿಯೆ ನೀಡಿರುವ ಸಂಘದ ಅಧ್ಯಕ್ಷ ಎಂ.ಎಸ್. ರಮೇಶ್, 'ಸರ್ಕಾರ ಖರೀದಿ ಮಾಡಿಕೊಟ್ಟ ಭತ್ತವನ್ನು ಹಲ್ಲಿಂಗ್ ಮಾಡಿ ಅಕ್ಕಿ ಪೂರೈಸುವ ಕೆಲಸವನ್ನು ಹೆಚ್ಚಿನ ಅಕ್ಕಿ ಗಿರಣಿಗಳಲ್ಲಿ ಯಾವುದೇ ಸಮಸ್ಯೆ ಆಗದಂತೆ ನಿರ್ವಹಿಸಲಾಗುತ್ತಿದೆ' ಎಂದು ತಿಳಿಸಿದ್ದಾರೆ.

ಪಾಂಡವಪುರದ ಎಂ.ಆರ್. ರೈಸ್ ಮಿಲ್ ಸೇರಿದಂತೆ ಕೆಲವು ಗಿರಣಿಗಳಲ್ಲಿ ಭತ್ತ ಅಥವಾ ಅಕ್ಕಿ ಸಾಗಣೆ ನಡೆದಿರಬಹುದು. ಆದರೆ, ಎಲ್ಲ ಗಿರಣಿಗಳಲ್ಲೂ ಆ ರೀತಿಯ ಚಟುವಟಿಕೆ ನಡೆದಿಲ್ಲ. ಅಕ್ಕಿ ಸಾಗಣೆಯಲ್ಲಿ ಗಿರಣಿ ಮಾಲೀಕರಿಗೆ ಯಾವುದೇ ಪಾತ್ರವೂ ಇರುವುದಿಲ್ಲ. ಆಹಾರ ಇಲಾಖೆಯ ಅಧಿಕಾರಿಗಳು ಮತ್ತು ಸಾಗಣೆ ಗುತ್ತಿಗೆದಾರರು ಅಕ್ಕಿ ಸಾಗಣೆಗೆ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ ಎಂದು ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

'ಎಂಎಸ್‌ಪಿ ಭತ್ತ ಖರೀದಿಗೂ ಮೊದಲು ಸರ್ಕಾರದ ಜತೆ ಮಾಡಿಕೊಂಡಿರುವ ಒಪ್ಪಂದದ ಅನುಸಾರ ಗಿರಣಿಗಳು ನಡೆದುಕೊಳ್ಳುತ್ತಿವೆ. ಈಗ ಹೆಚ್ಚುವರಿ ಷರತ್ತುಗಳನ್ನು ವಿಧಿಸುತ್ತಿರುವುದು ಸರಿಯಲ್ಲ. ಗಿರಣಿ ಮಾಲೀಕರು ತಮ್ಮ ಆಸ್ತಿಯನ್ನು ಅಡಮಾನವಿರಿಸಿ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಅಕ್ರಮ ಕಂಡುಬಂದಲ್ಲಿ ಆಸ್ತಿಯನ್ನು ವಶಕ್ಕೆ ಪಡೆಯುವ ಮುಕ್ತ ಅವಕಾಶ ಸರ್ಕಾರಕ್ಕೆ ಇರುತ್ತದೆ' ಎಂದಿದ್ದಾರೆ.

ಮುಖ್ಯಾಂಶಗಳು

- ಸಾರ್ವತ್ರಿಕವಾಗಿ ಆರೋಪ ಸಲ್ಲದು
- ಅಕ್ಕಿ ಸಾಗಣೆಯಲ್ಲಿ ಗಿರಣಿ ಮಾಲೀಕರಿಗೆ ಯಾವುದೇ ಪಾತ್ರವೂ ಇರುವುದಿಲ್ಲ
- ಹೆಚ್ಚುವರಿ ಷರತ್ತು ವಿಧಿಸುವುದು ಸರಿಯಲ್ಲ

ಕೋವಿಡ್: ಐದು ದಿನಗಳಲ್ಲಿ ಗರಿಷ್ಠ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ 1,805 ಮಂದಿ ಕೋವಿಡ್ ಪೀಡಿತರಾಗಿರುವುದು ಶುಕ್ರವಾರ ದೃಢಪಟ್ಟಿದೆ. ಐದು ದಿನಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ.

ಆ.1ರಂದು 1,875 ಮಂದಿ ಕೋವಿಡ್ ಪೀಡಿತರಾಗಿದ್ದರು. ಒಂದು ದಿನದ ಅವಧಿಯಲ್ಲಿ 1.62 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಶೇ 1.01ರಷ್ಟು ಸೋಂಕು ದೃಢ ಪ್ರಮಾಣ ವರದಿಯಾಗಿದೆ. ರಾಜ್ಯದ 13 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ ಹಾಗೂ 10 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಯಾದಗಿರಿ, ಗದಗ ಹಾಗೂ ಬಾಗಲಕೋಟೆಯಲ್ಲಿ ಹೊಸದಾಗಿ ಪ್ರಕರಣ ವರದಿಯಾಗಿಲ್ಲ.

ಮರಣ ಪ್ರಮಾಣ ದರವು ಶೇ 1.99ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ನಿಂದ ಸಾವಿಗೀಡಾದವರ ಒಟ್ಟು ಸಂಖ್ಯೆ 36,741ಕ್ಕೆ ಏರಿದೆ.

ಲೋಕಸಭೆ: ಪೂರ್ವಾನ್ವಯ ತೆರಿಗೆ ರದ್ದತಿ ಮಸೂದೆ ಅಂಗೀಕಾರ

ನವದೆಹಲಿ: ಪೆಗಾಸಸ್ ತನಿಖೆ ಹಾಗೂ ಕೃಷಿ ಕಾಯ್ದೆಗಳ ರದ್ದತಿಗೆ ಆಗ್ರಹಿಸಿ ವಿರೋಧ ಪಕ್ಷಗಳ ಸದಸ್ಯರ ಪ್ರತಿಭಟನೆ ಮುಂದುವರಿದಿದ್ದರಿಂದ, ಸಂಸತ್ತಿನ ಉಭಯ ಸದನಗಳ ಕಲಾಪ ಶುಕ್ರವಾರವೂ ಸುಗಮವಾಗಿ ನಡೆಯಲಿಲ್ಲ.

ಈ ಮಧ್ಯೆ, ಲೋಕಸಭೆಯು ಪೂರ್ವಾನ್ವಯ ತೆರಿಗೆ ರದ್ದತಿ ಮಸೂದೆ ಸೇರಿದಂತೆ ಎರಡು ಮಸೂದೆಗಳಿಗೆ ಅಂಗೀಕಾರ ನೀಡಿತು. ಬೆಳಿಗ್ಗೆ ಕಲಾಪ ಸೇರಿದಾಗ ಪ್ರತಿಪಕ್ಷಗಳ ಸದಸ್ಯರು ಘೋಷಣೆಗಳೊಂದಿಗೆ ಪ್ರತಿಭಟನೆಯನ್ನು ತೀವ್ರಗೊಳಿಸಿದರು. ಸ್ಪೀಕರ್ ಓ ಬಿರ್ಲಾ ಅವರ ಮನವಿಗೆ ಕಿವಿಗೊಡಲಿಲ್ಲ. ಆಗ, ಕಲಾಪವನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು. ಮಧ್ಯಾಹ್ನವೂ ಪ್ರತಿಭಟನೆ ಮುಂದುವರಿಯಿತು. ಇದರ ನಡುವೆಯೇ, ಕೇವಲ ಎಂಟು ನಿಮಿಷಗಳಲ್ಲಿ ಆದಾಯ ತೆರಿಗೆ ಕಾನೂನುಗಳ (ತಿದ್ದುಪಡಿ) ಮಸೂದೆ–2021 ಧ್ವನಿಮತದಿಂದ ಅಂಗೀಕಾರವಾಯಿತು.

ಹೊಸ ಮಸೂದೆಯು, ಪರೋಕ್ಷ ಹಣ ವರ್ಗಾವಣೆಗೆ ಸಂಬಂಧಿಸಿದ ಪೂರ್ವಾನ್ವಯ ತೆರಿಗೆಯನ್ನು ಹಿಂದೆಗೆದುಕೊಳ್ಳುವುದರ ಮೂಲಕ ಭಾರತದಲ್ಲಿನ ವಿದೇಶಿ ಹೂಡಿಕೆಗಳಿಗೆ ಉತ್ತೇಜನ ನೀಡಲಿದೆ ಎಂದು ಹೇಳಲಾಗಿದೆ.

ಇದರ ಅನ್ವಯ, 2012, ಮೇ 28ಕ್ಕಿಂತ ಮೊದಲಿನ ವ್ಯವಹಾರಗಳಿಗಾಗಿ, ಉದ್ಯಮಗಳಿಗೆ ವಿಧಿಸಲಾದ ಪೂರ್ವಾನ್ವಯ ತೆರಿಗೆಯು ರದ್ದಾಗಲಿದೆ.

ಲಡಾಖ್‌ನಲ್ಲಿ ಕೇಂದ್ರೀಯ ವಿಶ್ವವಿದ್ಯಾಲಯದ ಸ್ಥಾಪನೆಗೆ ಅನುಮತಿ ನೀಡುವ, ಕೇಂದ್ರೀಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಮಸೂದೆ–2021 ಕೂಡ ಅಂಗೀಕಾರ ಪಡೆಯಿತು.

ಇದಾದ ನಂತರ, ಸಭಾಧ್ಯಕ್ಷ ಸ್ಥಾನದಲ್ಲಿದ್ದ ರಾಜೇಂದ್ರ ಅಗರವಾಲ್, ಕಲಾಪವನ್ನು ಮುಂದೂಡಿದರು. ರಾಜ್ಯಸಭೆಯಲ್ಲೂ ಪ್ರತಿಪಕ್ಷಗಳ ಪ್ರತಿಭಟನೆ ತೀವ್ರಗೊಂಡಿದ್ದರಿಂದ ಕಲಾಪವನ್ನು ಮುಂದೂಡಲಾಯಿತು. ಉಭಯ ಸದನದ ಕಲಾಪ ಪುನಃ ಸೋಮವಾರ ಆರಂಭವಾಗಲಿದೆ.

ಕೃಷಿ ಕಾಯ್ದೆಗಳ ರದ್ದತಿ: ರೈತರ ಬೇಡಿಕೆಗೆ ಬೆಂಬಲ

ರೈತ ಸಂಸತ್‌ಗೆ ವಿಪಕ್ಷ ನಾಯಕರು

ಪ್ರಜಾವಾಣಿ ವಾರ್ತೆ

ನವದೆಹಲಿ: ಇಲ್ಲಿನ ಜಂತರ್-ಮಂತರ್‌ನಲ್ಲಿ ನಡೆಯುತ್ತಿರುವ 'ರೈತರ ಸಂಸತ್ತಿ'ಗೆ 14 ವಿರೋಧ ಪಕ್ಷಗಳ ನಾಯಕರು ಭೇಟಿ ನೀಡಿದರು. ರೈತರ ಸಂಸತ್ತಿನ ಕಲಾಪಕ್ಕೆ ಸಾಕ್ಷಿಯಾದರು. ರೈತರ ಪ್ರತಿಭಟನೆಗೆ ಬೆಂಬಲ ಸೂಚಿಸಿದರು.

ಕೇಂದ್ರ ಸರ್ಕಾರದ ಮೂರು ನೂತನ ಕೃಷಿ ಕಾಯ್ದೆಗಳ ವಿರುದ್ಧ ರೈತರು ನಡೆಸುತ್ತಿರುವ ಪ್ರತಿಭಟನೆ ಏಳು ತಿಂಗಳು ಪೂರೈಸಿದೆ. ಅದರ ಅಂಗವಾಗಿ ಜುಲೈ 22ರಿಂದ ಜಂತರ್-ಮಂತರ್‌ನಲ್ಲಿ ರೈತರು 'ರೈತ ಸಂಸತ್ತು' ನಡೆಸುತ್ತಿದ್ದಾರೆ. ಶುಕ್ರವಾರ ಸಂಸತ್ತಿನ ಉಭಯ ಸದನಗಳಲ್ಲೂ ಕಲಾಪವನ್ನು ದಿನದಮಟ್ಟಿಗೆ ಮುಂದೂಡಲಾಗಿತ್ತು. ಆನಂತರ ಸಭೆ ನಡೆಸಿದ ವಿರೋಧ ಪಕ್ಷಗಳ ನಾಯಕರು, ರೈತರ ಸಂಸತ್ತಿನಲ್ಲಿ ಭಾಗಿಯಾಗಲು ನಿರ್ಧರಿಸಿದರು.

ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಸಂಸದ ರಾಹುಲ್ ಗಾಂಧಿ, ಡಿಎಂಕೆಯ ಟಿ.ಆರ್.ಬಾಲು, ಆರ್‌ಜೆಡಿಯ ಮನೋಜ್ ಝಾ, ಸಿಪಿಎಂನ ಇ.ಕರೀಂ, ಸಿಪಿಐನ ಬಿನೋಯ್ ವಿಶ್ವಂ, ಶಿವಸೇನಾದ ಸಂಜಯ್ ರಾವುತ್ ಮತ್ತು ಆರ್‌ಎಸ್‌ಪಿಯ ಎನ್.ಕೆ. ಪ್ರೇಮಚಂದ್ರನ್ ರೈತರ ಸಂಸತ್ತಿನಲ್ಲಿ ಭಾಗಿಯಾದರು.

ರೈತರ ಸಂಸತ್ತಿನ ವೇಳೆ ವಿರೋಧ ಪಕ್ಷಗಳ ಯಾವ ನಾಯಕರೂ ರೈತರ ಜತೆ ಸಂವಾದ ನಡೆಸಲಿಲ್ಲ. ಬದಲಿಗೆ ವೀಕ್ಷಕರ ಗ್ಯಾಲರಿಯಲ್ಲಿ ಕುಳಿತು, ಸಂಸತ್ತಿನ ಕಲಾಪಕ್ಕೆ ಸಾಕ್ಷಿಯಾದರು. ಆ ಮೂಲಕ ರೈತರ ಪ್ರತಿಭಟನೆಗೆ ಬೆಂಬಲ ಸೂಚಿಸಿದರು.

ಸಂಸತ್ತಿನಲ್ಲಿ ಏನಾಗುತ್ತಿದೆ ಎಂಬುದು ನಿಮಗೆ ಗೊತ್ತಿದೆ. ಪೆಗಾಸಸ್ ಚರ್ಚೆಗೆ ಸರ್ಕಾರ ಅವಕಾಶ ನೀಡುತ್ತಲೇ ಇಲ್ಲ. ಕೃಷಿ ಕಾಯ್ದೆಗಳ ಬಗ್ಗೆ ಚರ್ಚೆಯಲ್ಲ, ರದ್ದತಿಯೇ ಪರಿಹಾರ
ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಮೋದಿ ವಿರುದ್ಧ ಅವಿಶ್ವಾಸ ನಿರ್ಣಯ

ಪ್ರಧಾನಿ ನರೇಂದ್ರ ಮೋದಿ ವಿರುದ್ಧ ರೈತರ ಸಂಸತ್ತಿನಲ್ಲಿ ಅವಿಶ್ವಾಸ ಗೊತ್ತುವಳಿ ನಿರ್ಣಯವನ್ನು ಮಂಡಿಸಲಾಯಿತು.

'ರೈತರ ಪಾಲಿಗೆ ಮಾರಕವಾದ ಮೂರು ಕೃಷಿ ಕಾಯ್ದೆಗಳನ್ನು ರದ್ದುಪಡಿಸಲು ಮೋದಿ ಅವರು ಒಪ್ಪುತ್ತಿಲ್ಲ. ಹೀಗಾಗಿ ಅವರ ವಿರುದ್ಧ ಅವಿಶ್ವಾಸ ಗೊತ್ತುವಳಿ ನಿರ್ಣಯ ಮಂಡಿಸಲಾಗುತ್ತಿದೆ' ಎಂದು ರೈತರ ಸಂಸತ್ತಿನಲ್ಲಿ ರೈತ ನಾಯಕರು ವಿವರಿಸಿದರು. ಆನಂತರ ನಡೆದ ದೀರ್ಘ ಚರ್ಚೆಯ ನಂತರ ಆ ನಿರ್ಣಯವನ್ನು ಒಮ್ಮತದೊಂದಿಗೆ ರೈತರ ಸಂಸತ್ತು ಅಂಗೀಕರಿಸಿತು.

ಪ್ರಧಾನಿ ಮೋದಿ ವಿರುದ್ಧ ಅಂಗೀಕರಿಸಲಾದ ಅವಿಶ್ವಾಸ ಗೊತ್ತುವಳಿ ನಿರ್ಣಯಕ್ಕೆ ವಿರೋಧ ಪಕ್ಷಗಳ ನಾಯಕರು ಸಾಕ್ಷಿಯಾದರು.

ಚರ್ಚೆಗೆ ಸರ್ಕಾರ ಅವಕಾಶ ನೀಡುತ್ತಿಲ್ಲವಾದ್ದರಿಂದ, ಭಾರತದ ಸಂಸತ್ತು ಕಾರ್ಯನಿರ್ವಹಿಸುತ್ತಿಲ್ಲ. ಹೀಗಾಗಿಯೇ ಈ ಪರ್ಯಾಯ ಸಂಸತ್ತಿಗೆ ಐತಿಹಾಸಿಕ ಮೌಲ್ಯವಿದೆ
ಎನ್.ಕೆ.ಪ್ರೇಮಚಂದ್ರನ್
ಆರ್‌ಎಸ್‌ಪಿ ಸಂಸದ

ಕೃಷಿ ಕಾಯ್ದೆಗಳ ಬಗ್ಗೆ ಚರ್ಚೆ ನಡೆಸಲು ಸರ್ಕಾರ ಸಿದ್ಧವಿದೆ. ರೈತರ ಬಗ್ಗೆ ಕಾಳಜಿಯಿದ್ದರೆ ವಿರೋಧ ಪಕ್ಷಗಳು ಚರ್ಚೆಗೆ ಬರಬೇಕಿತ್ತು. ಆದರೆ ಅವು ಪ್ರಚಾರಕ್ಕಾಗಿ ಅಲ್ಲಿಗೆ ಹೋಗಿವೆ
ನರೇಂದ್ರ ಸಿಂಗ್ ತೋಮರ್
ಕೇಂದ್ರ ಕೃಷಿ ಸಚಿವ



ಲಸಿಕೆ ನೀಡಲು ಪ್ರಯಾಣ **ಕೋವಿಡ್ ವಿರುದ್ಧ ಲಸಿಕೆ ನೀಡಲು ಆರೋಗ್ಯ ಇಲಾಖೆಯ ಸಿಬ್ಬಂದಿ ಶುಕ್ರವಾರ ಅಸ್ಸಾಂನ ಮೊರಿಗಾಂವ್ ಜಿಲ್ಲೆಯ ಕವಾರಹಗಿ ಗ್ರಾಮಕ್ಕೆ ದೋಣಿಯಲ್ಲಿ ತೆರಳಿದರು.**
-ಪಿಟಿಐ ಚಿತ್ರ

ಭಟ್ಕಳ: ಯುವಕನ ಬಂಧಿಸಿದ ಎನ್.ಐ.ಎ

ಭಟ್ಕಳ/ ಕಾರವಾರ: ಭಯೋತ್ಪಾದಕ ಸಂಘಟನೆ 'ಐಸಿಸ್' ಜೊತೆ ಸಂಪರ್ಕ ಹೊಂದಿದ್ದ ಆರೋಪದ ಮೇಲೆ ಭಟ್ಕಳದ ವ್ಯಕ್ತಿಯೊಬ್ಬನನ್ನು ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್.ಐ.ಎ), ಸ್ಥಳೀಯ ಪೊಲೀಸರ ಜೊತೆ ಜಂಟಿ ಕಾರ್ಯಾಚರಣೆಯಲ್ಲಿ ಶುಕ್ರವಾರ ಬಂಧಿಸಿದೆ.

ಜಾಲಿಯ ಉಮರ್ ಸ್ಟ್ರೀಟ್ ನಿವಾಸಿ ಜುಫ್ರಿ ಜವಾಹರ್ ದಾಮುದಿ (30) ಬಂಧಿತ ಆರೋಪಿ. ಈತ ಉಗ್ರ ಸಂಘಟನೆಯ ನಿಯತಕಾಲಿಕೆ 'ವಾಯ್ಸ್ ಆಫ್ ಹಿಂದ್' ಅನ್ನು ದಕ್ಷಿಣ ಭಾರತದ ಭಾಷೆಗಳಿಗೆ ಭಾಷಾಂತರ ಮಾಡುತ್ತಿದ್ದ. ಈತನ ಹಾಗೂ ಭಟ್ಕಳದ ಸಾಗರ ರಸ್ತೆಯಲ್ಲಿರುವ ಬೇರೊಬ್ಬರ ಮನೆಯಲ್ಲಿ ಅಧಿಕಾರಿಗಳು ಏಕಕಾಲಕ್ಕೆ ದಾಳಿ ಮಾಡಿದರು. ಎರಡೂ ಕಡೆಗಳಿಂದ ಮೊಬೈಲ್ ಫೋನ್, ಸೇರಿ ವಿವಿಧ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ.

ಭಾರತದಲ್ಲಿ ಅಶಾಂತಿ ಉಂಟುಮಾಡಲು 'ಐಸಿಸ್'ಗೆ ಮುಸ್ಲಿಂ ಯುವಕರನ್ನು ನೇಮಕಾತಿ ಮಾಡಿಕೊಳ್ಳುವ ಆರೋಪದಲ್ಲಿ 'ವಾಯ್ಸ್ ಆಫ್ ಹಿಂದ್' ವಿರುದ್ಧ ದೆಹಲಿಯಲ್ಲಿ ಈ ವರ್ಷ ಜೂನ್ 29 ರಂದು ಪ್ರಕರಣ ದಾಖಲಾಗಿತ್ತು. ಅದರ ಬರಹಗಳನ್ನು 'ಅಬು ಹಾಜಿರ್ ಅಲ್ ಬದ್ರಿ' ಎಂಬ ಐ.ಡಿ ಮೂಲಕ ಭಾಷಾಂತರ ಮಾಡಲಾಗುತ್ತಿತ್ತು. ಆ ವ್ಯಕ್ತಿಯೇ ಶುಕ್ರವಾರ ಭಟ್ಕಳದಲ್ಲಿ ಬಂಧಿತನಾಗಿರುವ ಜುಫ್ರಿ ಜವಾಹರ್ ದಾಮುದಿ ಎಂದು ಗುರುತಿಸಲಾಗಿದೆ. ಈತ 'ಐಸಿಸ್' ಸಂಬಂಧಿತ ಚಟುವಟಿಕೆಗಳಲ್ಲಿ ಭಾಗಿಯಾದ ಆರೋಪದಲ್ಲಿ 2016ರಲ್ಲಿ ಬಂಧಿತನಾಗಿರುವ ಅದ್ನಾನ್ ಹಸನ್ ದಾಮುದಿಯ ಕಿರಿಯ ಸಹೋದರ ಎಂದು ಎನ್.ಐ.ಎ ಪ್ರಕಟಣೆಯಲ್ಲಿ ತಿಳಿಸಿದೆ.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಜುಲೈ 11ರಂದು ಎನ್.ಐ.ಎ ತಂಡವು ಜಮ್ಮು– ಕಾಶ್ಮೀರದ ವಿವಿಧೆಡೆ ದಾಳಿ ಮಾಡಿತ್ತು. ಅನಂತನಾಗ್ ಜಿಲ್ಲೆಯ ಅಚಬಲ್‌ನಲ್ಲಿ ಉಮರ್ ನಿಸಾರ್, ತನ್ವೀರ್ ಅಹ್ಮದ್ ಭಟ್, ರಮೀಜ್ ಅಹ್ಮದ್ ಲೋನ್ ಎಂಬುವವರನ್ನು ಬಂಧಿಸಿತ್ತು.

ಪ್ರೌಢ, ಪಿಯು ತರಗತಿ 23ರಿಂದ

ಒಂದನೇ ಪುಟದಿಂದ

'ಕೋವಿಡ್ ಪ್ರಕರಣಗಳ ದೃಢ ಪ್ರಮಾಣ ದರ, ಕೋವಿಡ್ 3ನೇ ಅಲೆಯ ತೀವ್ರತೆ, ಸೋಂಕಿನ ಪ್ರಸರಣದ ವೇಗ ಆಧರಿಸಿ ಚರ್ಚೆ ನಡೆಸಿ 1ರಿಂದ 8ನೇ ತರಗತಿವರೆಗಿನತರಗತಿಆರಂಭದಕುರಿತುತೀರ್ಮಾನಕ್ಕೆ ಬರಲಾಗುವುದು' ಎಂದರು.

ಶೀಘ್ರದಲ್ಲಿ ಕಾರ್ಯಪಡೆ ನೇಮಕ: 'ಕೋವಿಡ್ ನಿಯಂತ್ರಣ ಮೇಲುಸ್ತುವಾರಿಗೆ ಹೊಸ ಕಾರ್ಯಪಡೆ ಶೀಘ್ರದಲ್ಲಿ ರಚಿಸಲಾಗುವುದು. ಈ ಕುರಿತು ಆದೇಶ ಹೊರಡಿಸಲಾಗುವುದು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸಚಿವರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ, ಡಾ.ಕೆ.ಸುಧಾಕರ್, ಕೋವಿಡ್ ನಿಯಂತ್ರಣ ತಾಂತ್ರಿಕ ಸಲಹಾ ಸಮಿತಿ ಅಧ್ಯಕ್ಷ ಡಾ. ಸುದರ್ಶನ್, ಸದಸ್ಯರಾದ ಡಾ.ಸಿ.ಎನ್. ಮಂಜುನಾಥ್, ಡಾ. ರವಿ, ಮೂರನೇ ಅಲೆ ನಿಯಂತ್ರಣ ಸಂಬಂಧ ಸಲಹೆ ನೀಡಲು ನೇಮಿಸಿರುವ ತಜ್ಞರ ಸಮಿತಿ ಮುಖ್ಯಸ್ಥ ಡಾ. ದೇವಿ ಪ್ರಸಾದ್ ಶೆಟ್ಟಿ ಸಭೆಯಲ್ಲಿ ಪಾಲ್ಗೊಂಡಿದ್ದರು.

ಅಕ್ಟೋಬರ್‌ನಲ್ಲಿ ಕೋವೊವ್ಯಾಕ್ಸ್

ನವದೆಹಲಿ(ಪಿಟಿಐ): ಕೋವಿಡ್‌–19ಗಾಗಿ, ತಮ್ಮ ಸಂಸ್ಥೆಯಿಂದ ತಯಾರಾಗುತ್ತಿರುವ ಕೋವೊವ್ಯಾಕ್ಸ್ ಲಸಿಕೆಯು, ಅಕ್ಟೋಬರ್ ವೇಳೆಗೆ ವಯಸ್ಕರಿಗೆ ಹಾಗೂ 2022ರ ಮೊದಲ ತ್ರೈಮಾಸಿಕದಲ್ಲಿ ಮಕ್ಕಳಿಗೆ ಲಭ್ಯವಾಗುವ ನಿರೀಕ್ಷೆ ಇದೆ ಎಂದು ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ಅದಾರ್ ಪೂನಾವಾಲಾ ಶುಕ್ರವಾರ ತಿಳಿಸಿದ್ದಾರೆ.

ತಮ್ಮ ಸಂಸ್ಥೆಗೆ ಎಲ್ಲ ರೀತಿಯಿಂದಲೂ ನೆರವು ನೀಡಿದ್ದಕ್ಕಾಗಿ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸಿದ ಅವರು, ಬೇಡಿಕೆಯನ್ನು ಪೂರೈಸಲು ಕೋವಿಶೀಲ್ಡ್ ಲಸಿಕೆ ತಯಾರಿಕೆಯನ್ನು ಹೆಚ್ಚಿಸುವ ಪ್ರಯತ್ನ ನಡೆಸಿರುವುದಾಗಿಯೂ ಹೇಳಿದರು.

ಮುಂದಿನ ವರ್ಷದ ಜನವರಿ–ಫೆಬ್ರುವರಿ ವೇಳೆಗೆ, ಕೋವೊವ್ಯಾಕ್ಸ್ ಲಸಿಕೆಯು ಮಕ್ಕಳಿಗೆ ಲಭ್ಯವಾಗುವ ನಿರೀಕ್ಷೆ ಇದೆ. ಡಿಸಿಜಿಐ ಅನುಮೋದನೆ ಆಧರಿಸಿ, ಅಕ್ಟೋಬರ್‌ನಲ್ಲಿ ವಯಸ್ಕರಿಗೆ ಲಭ್ಯವಾಗಬಹುದು. ಲಸಿಕೆಯ ದರವನ್ನು ಆ ಸಂದರ್ಭದಲ್ಲಿಯೇ ಪ್ರಕಟಿಸಲಾಗುವುದು ಎಂದು ತಿಳಿಸಿದರು.

ಕೇಂದ್ರ ಗೃಹಸಚಿವ ಅಮಿತ್ ಶಾ ಅವರನ್ನು ಸಂಸತ್ ಭವನದಲ್ಲಿ ಭೇಟಿ ಮಾಡಿ, ಅರ್ಧ ತಾಸು ಚರ್ಚೆ ನಡೆಸಿದ ಪೂನಾವಾಲಾ, ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

'ನಮಗೆ ಯಾವುದೇ ಆರ್ಥಿಕ ತೊಂದರೆ ಇಲ್ಲ. ಸರ್ಕಾರವು, ಅಗತ್ಯವಾದ ಎಲ್ಲ ನೆರವು–ಸಹಕಾರವನ್ನು ನೀಡುತ್ತಿದೆ. ಅದಕ್ಕಾಗಿ ನಾವು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕೃತಜ್ಞರಾಗಿದ್ದೇವೆ' ಎಂದರು.

ಗಡಿ ಜಿಲ್ಲೆಗಳಲ್ಲಿ ವಾರಾಂತ್ಯದ ಕರ್ಫ್ಯೂ

ಒಂದನೇ ಪುಟದಿಂದ

ವಾರಾಂತ್ಯದ ಕರ್ಫ್ಯೂ– ಏನಿರುತ್ತೆ?: ಸರ್ಕಾರದ ಎಲ್ಲ ಕಚೇರಿಗಳು, ಸ್ವಾಯತ್ತ ಸಂಸ್ಥೆಗಳು, ಅಗತ್ಯ ಸೇವೆಗಳು, ತುರ್ತು ಮತ್ತು ಅಗತ್ಯ ಸೇವೆಗಳಿಗೆ ಪೂರಕವಾದ ಎಲ್ಲ ಉದ್ದಿಮೆಗಳು, ದೂರಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಉದ್ಯಮದ ಸಂಸ್ಥೆಗಳು ಕಾರ್ಯನಿರ್ವಹಿಸಬಹುದು. ದಿನಸಿ ಪದಾರ್ಥಗಳು, ತರಕಾರಿ, ಮೀನು, ಮಾಂಸ, ಡೇರಿ ಉತ್ಪನ್ನಗಳು, ಹಾಲಿನ ಮಳಿಗೆಗಳು, ಪಶು ಆಹಾರದ ಮಳಿಗೆಗಳನ್ನು ಬೆಳಿಗ್ಗೆ 5ರಿಂದ ಮಧ್ಯಾಹ್ನ 2ರವರೆಗೆ ತೆರೆಯಬಹುದು. ಬೀದಿಬದಿ ವ್ಯಾಪಾರಿಗಳಿಗೂ ಇದೇ ಸಮಯ ಅನ್ವಯ. ಮದ್ಯದಂಗಡಿಗಳಲ್ಲಿ ಬೆಳಿಗ್ಗೆ 5ರಿಂದ ಮಧ್ಯಾಹ್ನ 2ರವರೆಗೆ ಪಾರ್ಸೆಲ್ ಸೇವೆ ಮಾತ್ರ. ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಪಾರ್ಸೆಲ್ ಸೇವೆ ಮಾತ್ರ. ಅಂತರ ಜಿಲ್ಲಾ ಪ್ರಯಾಣಿಕರು ಅಗತ್ಯ ದಾಖಲೆಗಳನ್ನು ಹಾಜರುಪಡಿಸಿ ಸಂಚಾರ ನಡೆಸಬಹುದು. ಮದುವೆಗಳಿಗೆ 100 ಜನರು ಮತ್ತು ಅಂತ್ಯಸಂಸ್ಕಾರದಲ್ಲಿ 20 ಮಂದಿ ಮಾತ್ರ ಭಾಗವಹಿಸಲು ಅವಕಾಶವಿದೆ.

ಬೆಂಗಳೂರು ರೇಸ್

ಕೆ.ಎನ್. ಗುರುಸ್ವಾಮಿ ಮೆಮೋರಿಯಲ್ ಟ್ರೋಫಿ: ರೂಲಿಂಗ್ ಗಾಡೆಸ್–ಆಲ್ ಅಟ್ರಾಕ್ಟಿವ್ ಸ್ಪರ್ಧೆ ನಿರೀಕ್ಷೆ

ಶನಿವಾರ ಬೆಂಗಳೂರು ಬೇಸಿಗೆ ರೇಸ್‌ಗಳು ಪ್ರಾರಂಭ. ದಿನದ ಪ್ರಮುಖ ಆಕರ್ಷಣೆ ಕೆ.ಎನ್.ಗುರುಸ್ವಾಮಿ ಮೆಮೋರಿಯಲ್ ಟ್ರೋಫಿಯನ್ನು ಎರಡು ಡಿವಿಷನ್‌ಗಳಾಗಿ ವಿಂಗಡಿಸಿದೆ. ಮುಕ್ತವಾಗಿರುವ ಮೊದಲನೇ ಡಿವಿಷನ್‌ನಲ್ಲಿ ರೂಲಿಂಗ್ ಗಾಡೆಸ್ ಮತ್ತು ಆಲ್ ಅಟ್ರ್ಯಾಕ್ಟಿವ್ ಪೈಪೋಟಿ ನಡೆಸುವ ನಿರೀಕ್ಷೆಯಿದೆ. ಮಾನ್ಸೂನ್ ಕಪ್ ಮೊದಲನೇ ದಿನದ ಪ್ರಧಾನ ಆಕರ್ಷಣೆಯಾಗಿದ್ದು, ಮಲ್ಟಿಫೆಸೆಟೆಡ್ ಈ ರೇಸ್‌ನಲ್ಲಿ ಗೆಲ್ಲುವ ಫೇವರಿಟ್ ಎನಿಸಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1. ಅಕ್ವಾಇಲ್ಲೀರ್ ಪ್ಲೇಟ್; 1200 ಮೀ.
ಇಂಡಿಯನ್ ಸ್ಟಾರ್ 5, ಐಕಾನಿಕ್ ಪ್ರಿನ್ಸೆಸ್ 9, ಪ್ರೇರಣ 7
2. ಆಲ್ವೇಸ್ ಎ ರೈನ್‌ಬೋ ಪ್ಲೇಟ್-ಡಿ.2; 1200 ಮೀ.
ಇನ್ ಎ ಬ್ರೀಝ್ 2, ಓಷನ್ ಡ್ಯೂನ್ಸ್ 1, ಚೈನ್ ಆಫ್ ಥಾಟ್ಸ್ 3
3. ಕೆ.ಎನ್.ಗುರುಸ್ವಾಮಿ ಮೆಮೋರಿಯಲ್ ಟ್ರೋಫಿ-ಡಿ.2; 1200 ಮೀ.
ಏಂಜಲಿಕೊ 1, ಅನಲೆಕ್ಟ್ 4, ಡಿವೈನ್ ಬ್ಲೆಸಿಂಗ್ಸ್ 7
4. ಧರ್ಮಪ್ರಕಾಶ್ ಎಲ್.ಎಸ್.ವೆಂಕಾಜಿ ರಾವ್ ಮೆಮೋರಿಯಲ್ ಟ್ರೋಫಿ; 1400 ಮೀ.
ಎ ಸ್ಟಾರ್ ಈಸ್ ಬಾರ್ನ್ 1, ಸ್ವಾಕ್‌ಬ್ರಿಡ್ಜ್ 8, ಮೂನ್‌ಲೈಟ್ ಸೊನಾಟ 10
5. ಕೆ.ಎನ್.ಗುರುಸ್ವಾಮಿ ಮೆಮೋರಿಯಲ್ ಟ್ರೋಫಿ-ಡಿ.1; 1200 ಮೀ.
ರೂಲಿಂಗ್ ಗಾಡೆಸ್ 1, ಆಲ್ ಅಟ್ರ್ಯಾಕ್ಟಿವ್ 2, ಬ್ರನ್‌ಹಿಲ್ಡ್ 9
6. ಮಾನ್ಸೂನ್ ಕಪ್; 1400 ಮೀ.
ಮಲ್ಟಿಫೆಸೆಟೆಡ್ 1, ಮಾರಿಟಾನಿಯ 5, ನಾರ್ದರನ್ ಅಲೈಯನ್ಸ್ 2
7. ಪ್ಯಾಡಿವಾಕ್ ಕಪ್; 1400 ಮೀ.
ಲೇಕ್ ತಾಹೋ 2, ಫಾರೆವರ್ ಟುಗೆದರ್ 5, ಸ್ಪೀಡ್‌ಸ್ಟರ್ 3
8. ಆಲ್ವೇಸ್ ಎ ರೈನ್‌ಬೋ ಪ್ಲೇಟ್-ಡಿ.1; 1200 ಮೀ.
ಬ್ಲೂಮ್ ಬಡ್ಡಿ 5, ಡ್ರಸಿಲ್ಲಾ 6, ಡೆಫಿನಿಟಿವ್ 1

ಉತ್ತಮ ಬೆಟ್: ಏಂಜಲಿಕೊ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಮಾಜಿ ಐಪಿಎಸ್ ಅಧಿಕಾರಿ ಸಂಜೀವ್ ಭಟ್ ಅರ್ಜಿ ವಜಾ

ಅಹಮದಾಬಾದ್ (ಪಿಟಿಐ): ಮಾದಕ ವಸ್ತುವಿಗೆ ಸಂಬಂಧಿಸಿ ಎನ್‌ಡಿಪಿಎಸ್ ಕಾಯ್ದೆಯಡಿ 1996ರಲ್ಲಿ ತಮ್ಮ ವಿರುದ್ಧ ದಾಖಲಾಗಿರುವ ಪ್ರಕರಣದ ಆರೋಪಗಳನ್ನು ಮಾರ್ಪಡಿಸುವಂತೆ ಕೋರಿ ಮಾಜಿ ಐಪಿಎಸ್ ಅಧಿಕಾರಿ ಸಂಜೀವ್ ಭಟ್ ಸಲ್ಲಿಸಿದ್ದ ಪರಿಷ್ಕರಣಾ ಅರ್ಜಿಯನ್ನು ಗುಜರಾತ್ ಹೈಕೋರ್ಟ್ ಗುರುವಾರ ವಜಾಗೊಳಿಸಿದೆ.

ನ್ಯಾಯಾಧೀಶ ಇಲೇಶ್ ವೋರಾ ಅವರು, ಭಟ್ ಅವರ ಅರ್ಜಿ ವಜಾಗೊಳಿಸಿದರಲ್ಲದೇ, ವಿಚಾರಣೆಯನ್ನು ತ್ವರಿತಗತಿಯಲ್ಲಿ ಆರಂಭಿಸಲು ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶನ ನೀಡಿದರು.

ಭಟ್ ಅವರು, ಕೆಳ ನ್ಯಾಯಾಲಯಗಳಲ್ಲಿ ಮತ್ತು ಹೈಕೋರ್ಟ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಿದ್ದು, ವಿಚಾರಣೆ ಪ್ರಕ್ರಿಯೆಯು ಇನ್ನಷ್ಟೇ ಆರಂಭವಾಗಬೇಕಿದೆ.

ಸಿ.ಎಂ ಭೇಟಿಯಾದ ಮಹಾರಾಷ್ಟ್ರ ನೀರಾವರಿ ಸಚಿವ

ಬೊಮ್ಮಾಯಿ–ಪವಾರ್ ಚರ್ಚೆ

ಪ್ರಜಾವಾಣಿ ವಾರ್ತೆ



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ಮಾತುಕತೆ ನಡೆಸಿದರು.

ಬೆಂಗಳೂರು: ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಪ್ರವಾಹ ಪರಿಸ್ಥಿತಿ ನಿಯಂತ್ರಣ, ನಿರ್ವಹಣೆ ಮತ್ತು ಮೇಲ್ವಿಚಾರಣೆ ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ಮತ್ತು ಮಹಾರಾಷ್ಟ್ರ ನೀರಾವರಿ ಸಚಿವ ಜಯಂತ್ ಪಾಟೀಲ ಶುಕ್ರವಾರ ಪ್ರತ್ಯೇಕ ಮಾತುಕತೆ ನಡೆಸಿದರು.

ಮುಖ್ಯಮಂತ್ರಿಯವರ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಶರದ್ ಪವಾರ್ ಅವರು ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಸುಮಾರು 10 ರಿಂದ 15 ನಿಮಿಷ ಮಾತುಕತೆ ನಡೆಸಿದರು. ಆ ಬಳಿಕ ಜಯಂತ್ ಪಾಟೀಲ್ ಅವರು ಭೇಟಿ ಮಾಡಿದರು.

ಮಹಾರಾಷ್ಟ್ರದಲ್ಲಿ ಅಣೆಕಟ್ಟು ಭರ್ತಿಯಾದಾಗ ಉಂಟಾಗುವ ಪ್ರವಾಹ ಪರಿಸ್ಥಿತಿ ನಿಭಾಯಿಸಲು ಪರಸ್ಪರ ಸಹಕಾರ ಅಗತ್ಯ ಎಂದು ಪವಾರ್ ಪ್ರತಿಪಾದಿಸಿದರು. ನದಿ ನೀರಿನ ಹಂಚಿಕೆಗೆ ಸಂಬಂಧಿಸಿದ ವಿವಾದಗಳನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಲು ಪವಾರ್ ಮತ್ತು ಬೊಮ್ಮಾಯಿ ಒಪ್ಪಿಕೊಂಡರು ಎಂದು ಮುಖ್ಯಮಂತ್ರಿ ಕಚೇರಿ ಮೂಲಗಳು ತಿಳಿಸಿವೆ.

ಎರಡು ರಾಜ್ಯಗಳ ನಡುವಿನ ಅಂತರರಾಜ್ಯ ಜಲ ವಿವಾದಗಳು ಮತ್ತು ನದಿ ನೀರು ಹಂಚಿಕೆ ಕುರಿತು ವಿಸ್ತೃತ ಚರ್ಚೆಗಾಗಿ ನವದೆಹಲಿಯಲ್ಲಿ ಶೀಘ್ರವೇ ಸಭೆ ನಡೆಸಲು ಇಬ್ಬರೂ ಸಹಮತ ವ್ಯಕ್ತಪಡಿಸಿದರು.

ದೂದ್ ಗಂಗಾ, ಯುಕೆಪಿ 3 ನೇ ಹಂತದ ಯೋಜನೆ: ಜಯಂತ್ ಪಾಟೀಲ ಅವರ ಭೇಟಿಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬೊಮ್ಮಾಯಿ, ಎರಡೂ ರಾಜ್ಯಗಳಲ್ಲಿ ಪ್ರವಾಹ ನಿಯಂತ್ರಣ, ಉಭಯ ರಾಜ್ಯಗಳ ಜಂಟಿ ಯೋಜನೆಯಾದ ದೂದ್ ಗಂಗಾ ಯೋಜನೆ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಬಗ್ಗೆಯೂ ಚರ್ಚೆ ನಡೆಸಲಾಯಿತು ಎಂದರು.

'ಪ್ರವಾಹ ಪರಿಸ್ಥಿತಿನಿಭಾಯಿಸುವಲ್ಲಿ ಎರಡೂ ರಾಜ್ಯಗಳು ಅತ್ಯುತ್ತಮವಾಗಿ ಸಮನ್ವಯ ಸಾಧಿಸಿರುವುದಕ್ಕೆ ಜಯಂತ್ ಪಾಟೀಲ್ ಹರ್ಷ ವ್ಯಕ್ತಪಡಿಸಿದರು. ಕೃಷ್ಣಾ ನದಿಗೆ ನೀರು ಹರಿಸುವಾಗ ಸಮನ್ವಯ ಸಾಧಿಸುವ ಕುರಿತು ಚರ್ಚೆ ನಡೆಸಲಾಯಿತು' ಎಂದು ಬೊಮ್ಮಾಯಿ ಹೇಳಿದರು.

'ನೀರಾವರಿ ಉದ್ದೇಶಕ್ಕಾಗಿ ಬಳಸಬಹುದಾದ ನೀರಿನ ಹಂಚಿಕೆಯ ವಿಷಯವನ್ನು ಎರಡೂ ರಾಜ್ಯಗಳು ಸೌಹಾರ್ದಯುತವಾಗಿ ಬಗೆ ಹರಿಸಿಕೊಳ್ಳುವುದು ನಮ್ಮ ಮೊದಲ ಆದ್ಯತೆ' ಎಂದರು.

ಸಭೆಯಲ್ಲಿ ಸಚಿವ ಮುರುಗೇಶ್ ನಿರಾಣಿ, ಜಲಸಂಪನ್ಮೂಲ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್‌ಸಿಂಗ್ ಇದ್ದರು.

ಖೇಲ್ ರತ್ನ ಮರುನಾಮಕರಣ ಪರ–ವಿರೋಧ ಚರ್ಚೆ

ನವದೆಹಲಿ (ಪಿಟಿಐ): ಖೇಲ್‌ರತ್ನ ಪ್ರಶಸ್ತಿಗೆ ಮರುನಾಮಕರಣ ಮಾಡಿರುವ ಕ್ರಮವನ್ನು ಕ್ರೀಡಾ ವಲಯವು ಸ್ವಾಗತಿಸಿದೆ. ಆದರೆ, ರಾಜಕೀಯ ವಲಯದಲ್ಲಿ ಪರ–ವಿರೋಧ ಚರ್ಚೆಗಳು ಆರಂಭವಾಗಿವೆ.

ಅಂತರರಾಷ್ಟ್ರೀಯ ಅಥ್ಲೀಟ್ ಅಂಜು ಬಾಬಿ ಜಾರ್ಜ್, ಹಾಕಿ ತಂಡದ ಮಾಜಿ ನಾಯಕ ಅಜಿತ್‌ಪಾಲ್ ಸಿಂಗ್, ಬಾಕ್ಸಿಂಗ್ ಪಟು ವಿಜೇಂದರ್ ಸಿಂಗ್ ಸೇರಿದಂತೆ ಕೆಲವು ಕ್ರೀಡಾಪಟುಗಳು ಸ್ವಾಗತಿಸಿದ್ದಾರೆ.

'ಕ್ರೀಡಾ ಪ್ರಶಸ್ತಿಗಳಿಗೆ ಶ್ರೇಷ್ಠ ಕ್ರೀಡಾಪಟುಗಳ ಹೆಸರಿಡಲು ಇದು ಅತ್ಯಂತ ಸೂಕ್ತ ಸಮಯ. ಧ್ಯಾನ್ ಚಂದ್ ನಮ್ಮ ಆದರ್ಶ, ಹಾಕಿ ದಂತಕತೆ. ಹಾಕಿ ನಮ್ಮ ರಾಷ್ಟ್ರೀಯ ಕ್ರೀಡೆ' ಎಂದು ಅಂಜು ಹೇಳಿದ್ದಾರೆ. 'ಪ್ರಧಾನ ಮಂತ್ರಿ ತೆಗೆದುಕೊಂಡಿರುವುದು ಸೂಕ್ತ ನಿರ್ಧಾರ. ತಡವಾದರೂ ಉತ್ತಮ ತೀರ್ಮಾನ' ಎಂದು ಅಜಿತ್ ಪಾಲ್ ಸಿಂಗ್ ಹೇಳಿದ್ದಾರೆ.

ಕೇಂದ್ರ ಸರ್ಕಾರವು 1991-92ರಿಂದ ಈ ಪ್ರಶಸ್ತಿಯನ್ನು ಶ್ರೇಷ್ಠ ಕ್ರೀಡಾ ಸಾಧಕರಿಗೆ ಪ್ರದಾನ ಮಾಡುತ್ತಿದೆ. ಇದುವರೆಗೆ 45 ಕ್ರೀಡಾಪಟುಗಳು ಈ ಪ್ರಶಸ್ತಿ ಗೌರವಕ್ಕೆ ಪಾತ್ರರಾಗಿದ್ದಾರೆ.

ಹುಸಿ ಪ್ರಚಾರ

'ಪ್ರಧಾನಿ ಅವರು ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿ ಅನ್ನು ಮೇಜರ್ ಧ್ಯಾನಚಂದ್ ಖೇಲ್ ರತ್ನ ಪ್ರಶಸ್ತಿ ಎಂದು ಮರು ನಾಮಕರಣ ಮಾಡಿರುವ ಬದಲಾವಣೆಯನ್ನು ಸ್ವಾಗತಿಸುತ್ತೇನೆ. ಆದರೆ ಮೊಟೇರಾ ಕ್ರಿಕೆಟ್ ಸ್ಟೇಡಿಯಂ ಅನ್ನು ನರೇಂದ್ರ ಮೋದಿ ಕ್ರಿಕೆಟ್ ಸ್ಟೇಡಿಯಂ ಅಂತ ಬದಲಿಸಿದ್ದು ನರೇಂದ್ರ ಮೋದಿಯವರೇನು ಕ್ರಿಕೆಟ್ ಆಟಗಾರರೇ?
ಇನ್ನು ಹೆಸರು ಬದಲಾವಣೆ ಮಾಡುವುದೇ ಜೀವನದ ಏಕೈಕ ಸಾಧನೆ ಎಂದುಕೊಂಡಿರುವ ಪ್ರಧಾನಿಯವರು ಇಂತಹ ಹುಸಿ ಪ್ರಚಾರ ತಂತ್ರಗಳನ್ನು ಬದಿಗೊತ್ತಿ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಹಾಗೂ ಆಹಾರ ಸಾಮಗ್ರಿಗಳ ಬೆಲೆಯನ್ನು ತಗ್ಗಿಸಿ ತಮ್ಮ ದೇಶಭಕ್ತಿಯನ್ನು ಸಾಬೀತುಪಡಿಸಲಿ ಎಂದು ಈ ಮೂಲಕ ಆಗ್ರಹಿಸುತ್ತೇನೆ!
ಎಚ್.ಸಿ.ಮಹದೇವಪ್ಪ,
ಕಾಂಗ್ರೆಸ್ ಮುಖಂಡ

ಭಾರತ –ಚೀನಾ ಗಡಿ: ಹಾಟ್ ಸ್ಪ್ರಿಂಗ್ಸ್, ಡೆಮ್‌ಚಾಕ್, ಡೆಪ್ಸಾಂಗ್ ಬಳಿ ಯಥಾಸ್ಥಿತಿ

ಲಡಾಖ್: ಗೋಗ್ರಾದಿಂದ ಸೇನೆ ವಾಪಸು

ಪ್ರಜಾವಾಣಿ ವಾರ್ತೆ



ಪೂರ್ವ ಲಡಾಖ್ ಬಳಿಯ ವಾಸ್ತವ ನಿಯಂತ್ರಣ ರೇಖೆ ಸಮೀಪದ ಗಾಲ್ವನ್ ಕಣಿವೆಯಲ್ಲಿ ಭಾರತ ಹಾಗೂ ಚೀನಾ ಯೋಧರ ನಡುವೆ ಸಂಘರ್ಷ ನಡೆದಿತ್ತು (ಸಂಗ್ರಹ ಚಿತ್ರ) –ಎಎಫ್‌ಪಿ ಚಿತ್ರ

ನವದೆಹಲಿ: ಲಡಾಖ್ ಪೂರ್ವ ಭಾಗದ ಗೋಗ್ರಾ ಪೋಸ್ಟ್ ಬಳಿ ನಿಯೋಜಿಸಿದ್ದ ಸೇನೆಯನ್ನು ಭಾರತ ಮತ್ತು ಚೀನಾ ಮೂಲಸ್ಥಾನಕ್ಕೆ ವಾಪಸು ಕರೆಸಿಕೊಂಡಿವೆ. ಉಳಿದಂತೆ ವಾಸ್ತವ ಗಡಿರೇಖೆ (ಎಲ್‌ಎಸಿ) ಉದ್ದಕ್ಕೂ ಅನಿಶ್ಚಿತ ಸ್ಥಿತಿಯು ಮುಂದುವರಿದಿದೆ.

ಪರಿಸ್ಥಿತಿಯನ್ನು ತಿಳಿಗೊಳಿಸಲು ಉಭಯ ದೇಶಗಳ ಸೇನೆಗಳ ನಡುವೆ ನಡೆದಿದ್ದ ವಿವಿಧ ಹಂತದ ಮಾತುಕತೆ ಫಲಪ್ರದವಾಗದ ಕಾರಣ, ಗಡಿಯಲ್ಲಿ ನಿಯೋಜಿಸಿರುವ ಸೇನೆ ವಾಪಸಾತಿ ಕುರಿತು ಇನ್ನೂ ಒಪ್ಪಂದಕ್ಕೆ ಬರಲಾಗಿಲ್ಲ. ಈ ಹಿನ್ನೆಲೆಯಲ್ಲಿ ಗಡಿ ರೇಖೆಗೆ ಹೊಂದಿಕೊಂಡಿರುವ ಹಾಟ್ ಸ್ಪ್ರಿಂಗ್ಸ್, ಡೆಮ್‌ಚಾಕ್, ಡೆಪ್ಸಾಂಗ್ ಬಳಿ ಇನ್ನೂ ಸೇನೆ ಬೀಡುಬಿಟ್ಟಿದ್ದು, ಯಥಾಸ್ಥಿತಿಯೇ ಉಳಿದಿದೆ.

ಗೋಗ್ರಾ ಪೋಸ್ಟ್ ಬಳಿ ಬೀಡುಬಿಟ್ಟಿದ್ದ ಭಾರತೀಯ ಸೇನೆ ಮತ್ತು ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿ (ಪಿಎಲ್‌ಎ) ತುಕಡಿಗಳು, ಆಯಾ ದೇಶಗಳ ಮೂಲಸ್ಥಾನಕ್ಕೆ ಮರಳಿವೆ. ಇದರಿಂದಾಗಿ ಅಲ್ಲಿ ಉಭಯ ಸೇನೆಗಳ ಮುಖಾಮುಖಿ ಸದ್ಯಕ್ಕೆ ಅಂತ್ಯಗೊಂಡಿದೆ.

ಪಾಂಗಾಂಗ್ ಸರೋವರ ಭಾಗದಲ್ಲಿ ನಿಯೋಜಿಸಲಾಗಿದ್ದ ಸೇನೆ ತುಕಡಿಗಳು ಫೆಬ್ರುವರಿ 10 ಮತ್ತು 21ರ ನಡುವೆ ಮರಳಿದ್ದವು. ಅದರ ಆರು ತಿಂಗಳ ತರುವಾಯ ಈಗ ಗೋಗ್ರಾ ಪೋಸ್ಟ್ ಬಳಿಯಿಂದ ಸೇನಾ ತುಕಡಿಗಳು ತಮ್ಮ ಮೂಲಸ್ಥಾನಕ್ಕೆ ಮರಳಿವೆ.

ಭಾರತೀಯ ಸೇನೆ ಮತ್ತು ಪಿಎಲ್‌ಎ ತುಕಡಿಗಳು ಆಯಾ ಭಾಗದಲ್ಲಿ ಹಾಕಿಕೊಂಡಿದ್ದ ತಾತ್ಕಾಲಿಕ ಶೆಡ್, ನಿರ್ಮಾಣಗಳನ್ನು ಕಳೆದ ಎರಡು ದಿನಗಳಲ್ಲಿ ತೆರವುಗೊಳಿಸಿದ್ದವು ಎಂದು ರಕ್ಷಣಾ ಮತ್ತು ವಿದೇಶಾಂಗ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿವೆ. ಉಭಯ ದೇಶಗಳ ನಡುವೆ ಗಡಿಯಲ್ಲಿ ಅನಿಶ್ಚಿತತೆ ಶುರುವಾದ ಬಳಿಕ ಏಪ್ರಿಲ್ 2020ರಿಂದ ಇಲ್ಲಿ ಉದ್ವಿಗ್ನತೆ ಪರಿಸ್ಥಿತಿ ಇತ್ತು.

ಉಭಯ ದೇಶಗಳ ಸೇನೆಗಳ ವಾಪಸಾತಿ ಬಳಿಕ ಗೋಗ್ರಾ ಪೋಸ್ಟ್ ಬಳಿ ಪರಿಸ್ಥಿತಿಯು ಏಪ್ರಿಲ್ 2020ಕ್ಕೆ ಮೊದಲಿನ ಹಂತಕ್ಕೆ ತಲುಪಿದೆ ಎಂದು ರಾಜಧಾನಿಯಲ್ಲಿ ನೀಡಲಾದ ಹೇಳಿಕೆಯಲ್ಲಿ ಸರ್ಕಾರ ತಿಳಿಸಿದೆ.

ಗೋಗ್ರಾ ಪೋಸ್ಟ್ ಬಳಿಯಿಂದ ಸೇನೆ ವಾಪಸಾತಿ ನಂತರ, ಅಲ್ಲಿನ ಸ್ಥಿತಿಯನ್ನು ಬದಲಿಸುವ ಯಾವುದೇ ಪ್ರಯತ್ನಗಳು ನಡೆಯದಂತೆ ಉಭಯ ದೇಶಗಳು ಕಟ್ಟುನಿಟ್ಟಾಗಿ ಗಮನಹರಿಸಲಿವೆ ಎಂದು ಎಂದು ಹೇಳಿಕೆಯು ತಿಳಿಸಿದೆ.

'ಸಿಬಿಐ, ಐಬಿ ನ್ಯಾಯಾಂಗದ ನೆರವಿಗೆ ಬರುತ್ತಿಲ್ಲ'

ಒಂದನೇ ಪುಟದಿಂದ

ಉತ್ತಮ್ ಆನಂದ್ ಅವರ ಹತ್ಯೆ ಪ್ರಕರಣದ ತನಿಖೆ ಪ್ರಗತಿ ವಿಚಾರಣೆಯನ್ನು ಪೀಠವು ಸೋಮವಾರ ನಡೆಸಲಿದೆ. ನ್ಯಾಯಾಧೀಶರಿಗೆ ಭದ್ರತೆ ನೀಡಿರುವ ಸಂಬಂಧ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಲ್ಲಿಸಲಿರುವ ವರದಿಗಳ ವಿಚಾರಣೆಯನ್ನು ಇದೇ 17ರಂದು ನಡೆಸಲಿದೆ.

'ಮಹತ್ವದ ಪ್ರಕರಣಗಳಲ್ಲಿ ನ್ಯಾಯಾಧೀಶರಿಗೆ ಬೆದರಿಕೆ ಬರುವುದು ಈಚೆಗೆ ಸಾಮಾನ್ಯವಾಗುತ್ತಿದೆ. ಅಧೀನ ನ್ಯಾಯಾಲಯಗಳು ಮಾತ್ರವಲ್ಲ, ಹೈಕೋರ್ಟ್ ನ್ಯಾಯಮೂರ್ತಿಗಳಿಗೂ ನೇರವಾಗಿ, ಫೇಸ್‌ಬುಕ್, ವಾಟ್ಸ್ಆ್ಯಪ್ ಮೂಲಕ ಬೆದರಿಕೆ ಹಾಕಲಾಗುತ್ತಿದೆ. ಕೆಲವೆಡೆ ಬೆದರಿಕೆಗಳ ವಿರುದ್ಧ ದೂರು ನೀಡುವ ಸ್ವಾತಂತ್ರ್ಯವೂ ನ್ಯಾಯಾಧೀಶರಿಗೆ ಇಲ್ಲ. ಅವರು ಸುಮ್ಮನೆ ಪ್ರಕರಣದ ವಿಚಾರಣೆಯನ್ನು ಮುಂದೂಡುತ್ತಾರೆ' ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಕಳವಳ ವ್ಯಕ್ತಪಡಿಸಿದ್ದಾರೆ.

'ರಕ್ಷಣೆ ನೀಡಿ ಎಂದು ಅಧೀನ ನ್ಯಾಯಾಲಯಗಳ ನ್ಯಾಯಾಧೀಶರು ಸಲ್ಲಿಸುವ ಮನವಿಗೆ ಸಿಬಿಐ ಮತ್ತು ಐಬಿ ಸ್ಪಂದಿಸುವುದೇ ಇಲ್ಲ. ಬೆದರಿಕೆಗೆ ಸಂಬಂಧಿಸಿದಂತೆ ಅಧೀನ ನ್ಯಾಯಾಲಯವು ಸಿಬಿಐ ತನಿಖೆಗೆ ಆದೇಶಿಸಿದ ಒಂದೆರಡು ಪ್ರಕರಣಗಳು ನನಗೆ ನೆನಪಿವೆ. ಅದರಲ್ಲಿ ಒಂದು ಪ್ರಕರಣದಲ್ಲಂತೂ ಸಿಬಿಐ ಏನನ್ನೂ ಮಾಡಿಲ್ಲ. ಸಿಬಿಐನ ಈ ವರ್ತನೆಯಲ್ಲಿ ಬದಲಾವಣೆ ಆಗಬೇಕಿದೆ. ಪರಿಸ್ಥಿತಿ ಹೀಗಿರುವುದರ ಬಗ್ಗೆ ನನಗೆ ತೀವ್ರ ಅಸಮಾಧಾನವಿದೆ' ಎಂದಿದ್ದಾರೆ.

'ನ್ಯಾಯಾಧೀಶರಿಗೆ ಬೆದರಿಕೆ ಬರುವ ಪ್ರಕರಣಗಳನ್ನು ಸಿಬಿಐ ಮತ್ತು ಐಬಿ ಆದ್ಯತೆಯಾಗಿ ಪರಿಗಣಿಸುವುದೇ ಇಲ್ಲ. ಈ ಎರಡೂ ತನಿಖಾ ಸಂಸ್ಥೆಗಳು ದೇಶದ ನ್ಯಾಯಾಂಗ ವ್ಯವಸ್ಥೆಗೆ ಯಾವುದೇ ರೀತಿಯ ನೆರವು ನೀಡುತ್ತಿಲ್ಲ. ನಾನು ನೀಡುತ್ತಿರುವ ಹೇಳಿಕೆಯ ಹೊಣೆಯನ್ನು ಅರಿತೇ ನಾನು ಹೀಗೆ ಹೇಳುತ್ತಿದ್ದೇನೆ. ಹೀಗೆ ಆಗಿರುವುದು ನನ್ನ ಗಮನಕ್ಕೆ ಬಂದಿರುವುದರಿಂದಲೇ ನಾನು ಇದನ್ನು ಹೇಳುತ್ತಿದ್ದೇನೆ. ಇದಕ್ಕಿಂತ ಹೆಚ್ಚಿನದನ್ನೇನು ಹೇಳಲು ನಾನು ಬಯಸುವುದಿಲ್ಲ' ಎಂದು ಅವರು ಹೇಳಿದ್ದಾರೆ.

'ಕೈತೊಳೆದುಕೊಂಡಿರಿ ಅಲ್ಲವೇ?'

'ಪ್ರಕರಣದ ತನಿಖೆ ನಡೆಸಲು ನೀವು ಎಸ್‌ಐಟಿ ರಚಿಸಿದಿರಿ. ಆನಂತರ ಸಿಬಿಐಗೆ ತನಿಖೆ ಹಸ್ತಾಂತರಿಸಿ, ಪ್ರಕರಣದಿಂದ ನಿಮ್ಮ ಕೈತೊಳೆದುಕೊಂಡಿರಿ ಅಲ್ಲವೇ?' ಎಂದು ಜಾರ್ಖಂಡ್ ಅಡ್ವೊಕೇಟ್ ಜನರಲ್ ರಾಜೀವ್ ರಂಜನ್ ಅವರನ್ನು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ.

ಧನಬಾದ್ ಮ್ಯಾಜಿಸ್ಟ್ರೇಟ್ ಉತ್ತಮ್ ಆನಂದ್ ಹತ್ಯೆ ಪ್ರಕರಣವನ್ನು ಸಿಬಿಐಗೆ ವಹಿಸಿದ ರಾಜ್ಯ ಸರ್ಕಾರದ ನಿರ್ಧಾರವನ್ನು ಸುಪ್ರೀಂ ಕೋರ್ಟ್ ಪ್ರಶ್ನಿಸಿದ ರೀತಿ ಇದು. ರಾಜ್ಯದಲ್ಲಿ ನ್ಯಾಯಾಧೀಶರಿಗೆ ನೀಡಿರುವ ಭದ್ರತೆ ಬಗ್ಗೆ ವರದಿ ನೀಡಿ ಎಂದು ರಾಜೀವ್ ರಂಜನ್ ಅವರಿಗೆ ಪೀಠವು ಸೂಚಿಸಿದೆ.

ಉಪನಾಮವಾಗಿ ತಾಯಿ ಹೆಸರು ಬಳಕೆ: ಪ್ರತಿ ಮಗುವಿನ ಹಕ್ಕು

ನವದೆಹಲಿ (ಪಿಟಿಐ): ' ಪ್ರತಿ ಮಗುವಿಗೂ ತನ್ನ ಹೆಸರಿನ ಜೊತೆಗೆ ತಾಯಿಯ ಹೆಸರನ್ನು ಉಪನಾಮವನ್ನಾಗಿ ಬಳಸುವ ಹಕ್ಕು ಇದೆ. ಈ ಸಂಬಂಧ ಮಕ್ಕಳಿಗೆ ತಂದೆ ಯಾವುದೇ ಷರತ್ತು ವಿಧಿಸುವುದು ಸಲ್ಲದು' ಎಂದು ದೆಹಲಿ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ದಾಖಲೆಗಳಲ್ಲಿ ಮಗಳ ಹೆಸರಿನ ಜೊತೆ ಉಪನಾಮವಾಗಿ ತಾಯಿ ಹೆಸರಿನ ಬದಲು ತನ್ನ ಹೆಸರು ಬಳಸಲು ನಿರ್ದೇಶಿಸಬೇಕು ಎಂದು ಕೋರಿ ಬಾಲಕಿಯ ತಂದೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಹೈಕೋರ್ಟ್ ಈ ಮಾತು ಹೇಳಿತು.

ಆದರೆ, ಈ ಕುರಿತು ಯಾವುದೇ ನಿರ್ದೇಶನವನ್ನು ನೀಡಲು ನಿರಾಕರಿಸಿದ ನ್ಯಾಯಮೂರ್ತಿ ರೇಖಾ ಪಳ್ಳಿ ಅವರು, 'ತನ್ನ ಹೆಸರನ್ನೇ ಉಪನಾಮವಾಗಿ ಬಳಸಬೇಕು ಎಂದು ತಂದೆ ತಾಕೀತು ಮಾಡಲಾಗದು. ತಾಯಿ ಹೆಸರನ್ನು ಇಟ್ಟುಕೊಳ್ಳುವುದರಿಂದ ಮಗಳಿಗೆ ಖುಷಿ ಆಗುವುದಾದರೆ ಅದರಿಂದ ನಿಮಗೇನು ಸಮಸ್ಯೆ' ಎಂದು ಅರ್ಜಿದಾರರನ್ನು ಪ್ರಶ್ನಿಸಿದರು.

'ತನ್ನ ಇಚ್ಛೆಗೆ ಅನುಗುಣವಾಗಿ ಪ್ರತಿ ಮಗುವಿಗೂ ತಂದೆ ಅಥವಾ ತಾಯಿಯ ಹೆಸರನ್ನು ಹೆಸರಿನ ಜೊತೆಗೆ ಉಪನಾಮವಾಗಿ ಬಳಸುವ ಹಕ್ಕು ಇದೆ' ಎಂದೂ ಕೋರ್ಟ್ ಸ್ಪಷ್ಟ ಮಾತುಗಳಲ್ಲಿ ಹೇಳಿತು.

ಸಂಕ್ಷಿಪ್ತ ಸುದ್ದಿ

ದೇಶ್‌ಮುಖ್ ನಿಯಂತ್ರಣದ ಕಾಲೇಜಿನ ಮೇಲೆ ದಾಳಿ

ನಾಗಪುರ (ಪಿಟಿಐ): ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶ್‌ಮುಖ್ ವಿರುದ್ಧ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಶುಕ್ರವಾರ ಇಲ್ಲಿನ ಕಾಲೇಜಿನಲ್ಲಿ ಶೋಧ ಕಾರ್ಯ ನಡೆಸಿದರು.
ಪೊಲೀಸರ ಪ್ರಕಾರ, ದೇಶ್‌ಮುಖ್ ಅವರ ನಿಯಂತ್ರಣದಲ್ಲಿ ಇರುವ ನಾಗಪುರ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯಲ್ಲಿ ಶೋಧ ಕಾರ್ಯ ನಡೆದಿದೆ. ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿ ಇ.ಡಿ ಈ ಹಿಂದೆಯೂ ದೇಶ್‌ಮುಖ್ ಅವರ ಆಸ್ತಿಗಳ ಮೇಲೆ ದಾಳಿ ನಡೆಸಿತ್ತು.

ಜಮ್ಮು: ಇಬ್ಬರು ಉಗ್ರರ ಹತ್ಯೆ

ಜಮ್ಮು (ಪಿಟಿಐ): ಭದ್ರತಾ ಪಡೆಗಳ ಸಿಬ್ಬಂದಿ ಶುಕ್ರವಾರ ರಾಜೌರಿ ಜಿಲ್ಲೆಯಲ್ಲಿ ನಡೆಸಿದ ಎನ್‌ಕೌಂಟರ್‌ನಲ್ಲಿ ಇಬ್ಬರು ಉಗ್ರರು ಹತರಾಗಿದ್ದಾರೆ. ಜಿಲ್ಲೆಯ ತಾಣಮಂಡಿ ಅರಣ್ಯ ಪ್ರದೇಶದಲ್ಲಿ ಈ ಎನ್‌ಕೌಂಟರ್ ನಡೆದಿದೆ. 'ಒಟ್ಟು ನಾಲ್ವರು ಉಗ್ರರಿದ್ದರು. ಇವರಲ್ಲಿ ಇಬ್ಬರು ವಿದೇಶಿಗರು' ಎಂದು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಮುಖೇಶ್ ಸಿಂಗ್ ಅವರು ತಿಳಿಸಿದರು.

ಕೋರ್ಟ್ ನೆರವಿಗೆ ದವೆ ನೇಮಕ

ನವದೆಹಲಿ (ಪಿಟಿಐ): ಲೈಂಗಿಕ ದೌರ್ಜನ್ಯದಿಂದ ಮಕ್ಕಳ ರಕ್ಷಣೆ ಕಾಯ್ದೆ (ಪೊಕ್ಸೊ) ಅಡಿ ದಾಖಲಾದ ಪ್ರಕರಣದಿಂದ ಆರೋಪಿಯೊಬ್ಬನನ್ನು ಖುಲಾಸೆಗೊಳಿಸಿ, ಬಾಂಬೆ ಹೈಕೋರ್ಟ್ ನೀಡಿದ ವಿವಾದಾತ್ಮಕ ತೀರ್ಪು ಪ್ರಶ್ನಿಸಿ ಸಲ್ಲಿಕೆಯಾದ ಅರ್ಜಿಗೆ ಸಂಬಂಧಿಸಿದಂತೆ, ಹಿರಿಯ ವಕೀಲ ಸಿದ್ಧಾರ್ಥ ದವೆ ಅವರನ್ನು ಅಮಿಕಸ್ ಕ್ಯೂರಿ (ನ್ಯಾಯಾಲಯದ ಸಹಾಯಕ) ಆಗಿ, ಸುಪ್ರೀಂ ಕೋರ್ಟ್ ಶುಕ್ರವಾರ ನೇಮಿಸಿದೆ.

ಅಂತಿಮ ಕ್ಷಣಗಳಲ್ಲಿ ಮಿಂಚಿದ ಫಿಲಿಪ್ಪೊ ತೊರ್ಟು; ಜೋಶುವಾಗೆ 5000 ಮೀಟರ್ಸ್ ಓಟದ ಚಿನ್ನ

ಇಟಲಿ, ಜಮೈಕಾಗೆ ರಿಲೇ ಪದಕ

ಟೋಕಿಯೊ: ಅಂತಿಮ ಲ್ಯಾಪ್‌ನ ಕೊನೆಯಲ್ಲಿ ಮಿಂಚಿನ ವೇಗದಲ್ಲಿ ಮುನ್ನುಗ್ಗಿದ ಫಿಲಿಪ್ಪೊ ತೊರ್ಟು ಅವರು ಇಟಲಿಗೆ ಚಿನ್ನದ ಪದಕ ಗೆದ್ದು ಕೊಟ್ಟರು. ಪುರುಷರ 4x100 ಮೀಟರ್ಸ್ ರಿಲೆಯಲ್ಲಿ ಬ್ರಿಟನ್‌ನ ನೆಥಾನಿಯಲ್ ಮೈಕೆಲ್ ಬ್ಲೇಕ್ ಅವರನ್ನು ಒಂದು ಸೆಕೆಂಡಿನ ನೂರನೇ ಒಂದು ಭಾಗದಲ್ಲಿ ಹಿಂದಿಕ್ಕಿ ಫಿಲಿಪ್ಪೊ ಅಂತಿಮ ಗೆರೆ ತುಳಿದರು.

ಲೊರೆನ್ಸೊ ಪಾಟ್ಟ, ಮಾರ್ಸೆಲ್ ಲ್ಯಾಮೆಂಟ್ ಮತ್ತು ಫೊಸ್ಟಿನ್ ಡೆಸಾಲು ಅವರನ್ನೂ ಒಳಗೊಂಡಿದ್ದ ಇಟಲಿ ತಂಡ 37.50 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರೆ ಬ್ರಿಟನ್ 37.51 ಸೆಕೆಂಡು ತೆಗೆದುಕೊಂಡಿತು. ಕೆನಡಾ (37.70) ಕಂಚು ಗಳಿಸಿತು.

ಮಹಿಳೆಯರ 4x100 ಮೀಟರ್ಸ್ ರಿಲೆಯ ಚಿನ್ನದ ಪದಕ ಜಮೈಕಾ (41.02 ಸೆಕೆಂಡು) ಪಾಲಾಯಿತು. ಎಲೈನ್ ಥಾಮ್ಸನ್ ಹೆರಾ, ಬ್ರಿಯಾನ ವಿಲಿಯಮ್ಸ್, ಶೆಲ್ಲಿ ಆ್ಯನ್ ಫ್ರೇಜರ್ ಪ್ರೈಸ್ ಮತ್ತು ಶೆರಿಕಾ ಜಾಕ್ಸನ್ ತಂಡದಲ್ಲಿದ್ದರು. ಅಮೆರಿಕ (41.45) ಮತ್ತು ಬ್ರಿಟನ್ (41.88) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗಳಿಸಿತು.

ಮಹಿಳೆಯರ 1500 ಮೀಟರ್ಸ್ ಓಟದಲ್ಲಿ ಕೆನ್ಯಾದ ಫೇತ್ ಕಿಪ್ಯೆಗನ್ ಒಲಿಂಪಿಕ್ಸ್ ದಾಖಲೆ ಬರೆದರು. 3 ನಿಮಿಷ 53.11ಸೆಕೆಂಡುಗಳಲ್ಲಿ ಅವರು ಗುರಿ ಮುಟ್ಟಿದರು. ಬ್ರಿಟನ್‌ನ ಲಾರಾ ಮುಯಿರ್ (3:54.50) ರಾಷ್ಟ್ರೀಯ ದಾಖಲೆಯೊಂದಿಗೆ ಬೆಳ್ಳಿ ಗಳಿಸಿದರೆ ನೆದರ್ಲೆಂಡ್ಸ್‌ನ ಸಿಫಾನ್ ಹಸನ್ (3:55.86) ಕಂಚು ಗೆದ್ದರು.

ಬಹಾಮದ ಶಾನೆ ಮಿಲ್ಲರ್ (48.36 ಸೆ) ಮಹಿಳೆಯರ 400 ಮೀಟರ್ಸ್ ಓಟದ ಚಿನ್ನ ತಮ್ಮದಾಗಿಸಿಕೊಂಡರು. ಡೊಮಿನಿಕಾ ರಿಪಬ್ಲಿಕ್‌ನ ಮರಿಲೀಡಿ ಪೌಲಿನೊ (49.20) ಮತ್ತು ಅಮೆರಿಕದ ಅಲಿಸನ್ ಫೆಲಿಕ್ಸ್ (49.46) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಪುರುಷರ 5000 ಮೀಟರ್ಸ್ ಓಟದ ಚಿನ್ನದ ಪದಕ ಉಗಾಂಡದ ಜೋಶುವಾ ಚೆಪ್ಟೆಗಿ (12 ನಿಮಿಷ 58.15 ಸೆಕೆಂಡು) ಪಾಲಾಯಿತು. ಕೆನಡಾದ ಮುಹಮ್ಮದ್ ಅಹಮ್ಮದ್ (12:58.61) ಬೆಳ್ಳಿ ಮತ್ತು ಅಮೆರಿಕದ ಪೌಲ್ ಚೆಲಿಮೊ (12:59.05) ಕಂಚು ಗಳಿಸಿದರು.

4x100 ಮೀಟರ್ಸ್ ರಿಲೆ

ಚಿನ್ನ	ಬೆಳ್ಳಿ	ಕಂಚು
ಇಟಲಿ	ಬ್ರಿಟನ್	ಕೆನಡಾ
37.50 ಸೆ	37.51 ಸೆ	37.70 ಸೆ



ಅಂತಿಮ ಗೆರೆಯತ್ತ ಮುನ್ನುಗ್ಗಿದ ಫಿಲಿಪ್ಪೊ ತೊರ್ಟು – ರಾಯಿಟರ್ಸ್ ಚಿತ್ರ

ಶೆರಿಕಾ ಜಾಕ್ಸನ್, ಬ್ರಿಯಾನಾ ವಿಲಿಯಮ್ಸ್, ಶೆಲ್ಲಿ ಆ್ಯನ್ ಫ್ರೇಜರ್ ಪ್ರೈಸ್ ಮತ್ತು ಎಲೈನ್ ಥಾಮ್ಸನ್ ಹೆರಾ ಸಂಭ್ರಮ –ಎಎಫ್‌ಪಿ ಚಿತ್ರ



ಲ್ಯೂ ಶಿಯಿಂಗ್ –ರಾಯಿಟರ್ಸ್ ಚಿತ್ರ

ಮಹಿಳೆಯರ ಜಾವೆಲಿನ್ ಥ್ರೋದಲ್ಲಿ ಚಿನ್ನದ ಪದಕ ಚೀನಾ ಪಾಲಾಯಿತು. ಶಿಯಿಂಗ್ ಲಿಯು 66.34 ಮೀಟರ್ಸ್ ದೂರ ಎಸೆದು ಪೋಲೆಂಡ್‌ನ ಮ್ಯಾರಿ ಆ್ಯಂಡ್ರೆಜಿಕ್ (64.61) ಮತ್ತು ಆಸ್ಟ್ರೇಲಿಯಾದ ಲೀ ಬಾರ್ಬರ್ (64.56) ಅವರನ್ನು ಹಿಂದಿಕ್ಕಿದರು.

50 ಕಿಮೀ ನಡಿಗೆ 'ಮುಕ್ತಾಯ'ಕ್ಕೆ ಆಕ್ರೋಶ

ಮುಂದಿನ ಒಲಿಂಪಿಕ್ಸ್‌ನಲ್ಲಿ 50 ಕಿಮೀ ನಡಿಗೆ ಸ್ಪರ್ಧೆ ಸೇರಿಸದೇ ಇರುವುದಕ್ಕೆ ಅಥ್ಲೀಟ್‌ಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇದು ದೊಡ್ಡ ತಪ್ಪು ಮತ್ತು ಕುತಂತ್ರ. ಇದರ ಹಿಂದೆ ಕೆಲಸ ಮಾಡಿರುವ ಕೈಗಳು ಸರಿಯಾದ ಮಾಹಿತಿ ನೀಡದೇ ಕ್ರೀಡಾಪಟುಗಳನ್ನು ಗೊಂದಲಕ್ಕೆ ಈಡು ಮಾಡಿದ್ದಾರೆ ಎಂಬ ಆರೋಪವೂ ಕೇಳಿಬಂದಿದೆ.

ಶುಕ್ರವಾರ ಬೆಳಿಗ್ಗೆ ನಡೆದ ಸ್ಪರ್ಧೆಯಲ್ಲಿ ಪೋಲೆಂಡ್ ಡೇವಿಡ್ ತೊಮಾಲ (3 ತಾಸು 50 ನಿಮಿಷ 8ಸೆಕೆಂಡು) ಚಿನ್ನದ ಪದಕ ಗಳಿಸಿದರು. ಜರ್ಮನಿಯ ಜೊನಾಥನ್ ಹಿಲ್ಬರ್ಟ್ (3:50:44) ಮತ್ತು ಕೆನಡಾದ ಇವಾನ್ ಡನ್ಫಿ (3:50:59) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗಳಿಸಿದರು.

ಮಹಿಳೆಯರ 20 ಕಿಮೀ ನಡಿಗೆಯಲ್ಲಿ ಇಟಲಿಯ ಆಂಟೊನೆಲ ಪಲ್ಮಿಸನೊ (1 ತಾಸು 29 ನಿಮಿಷ 12 ಸೆಕೆಂಡು) ಚಿನ್ನ ಗೆದ್ದುಕೊಂಡರು. ಕೊಲಂಬಿಯಾದ ಲೊರೆನ ಅರೆನಸ್ (1:29:37) ಮತ್ತು ಚೀನಾದ ಹಾಂಗ್ ಲಿಯು (1:29:57) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

1936ರ ಒಲಿಂಪಿಕ್ಸ್‌ನಿಂದ 50 ಕಿಮೀ ವೇಗ ನಡಿಗೆ ಸ್ಪರ್ಧೆ ಇದೆ. ಆದರೆ ಪ್ಯಾರಿಸ್‌ನಲ್ಲಿ 2024ರಲ್ಲಿ ನಡೆಯಲಿರುವ ಕೂಟದಿಂದ ಇದನ್ನು ತೆಗೆದುಹಾಕಲಾಗಿದೆ. ಮುಂದಿನ ಬಾರಿ 50 ಕಿಮೀ ವೇಗನಡಿಗೆಯ ಬದಲು ಮಿಶ್ರ ವೇಗನಡಿಗೆಯನ್ನು ಸೇರಿಸಲು ಕಾರ್ಯಕಾರಿ ಮಂಡಳಿ ನಿರ್ಧರಿಸಿದೆ ಎಂದು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಇ-ಮೇಲ್ ಮೂಲಕ ತಿಳಿಸಿದೆ.

ಸ್ಪರ್ಧಾ ಸಮಯ

ಆರ್ಟಿಸ್ಟಿಕ್ ಈಜು

ಸಮಯ	ಸ್ಪರ್ಧೆ
ಸಂಜೆ 4 ಗಂಟೆ	ಫ್ರೀ ರೂಟೀನ್ ತಂಡ ವಿಭಾಗದ ಫೈನಲ್

ಅಥ್ಲೆಟಿಕ್ಸ್

ಸಮಯ	ಸ್ಪರ್ಧೆ
ಬೆಳಿಗ್ಗೆ 3.30	ಮಹಿಳೆಯರ ಮ್ಯಾರಥಾನ್ ಫೈನಲ್
ಸಂಜೆ 4.05	ಮಹಿಳೆಯರ ಹೈಜಂಪ್ ಫೈನಲ್
ಸಂಜೆ 4.15	ಮಹಿಳೆಯರ 10 ಸಾವಿರ ಮೀ. ಓಟ ಫೈನಲ್
ಸಂಜೆ 4.30	ಪುರುಷರ ಜಾವೆಲಿನ್ ಥ್ರೊ ಫೈನಲ್ (ನೀರಜ್ ಚೋಪ್ರಾ)
ಸಂಜೆ 5.10	ಪುರುಷರ 1500 ಮೀ. ಓಟ ಫೈನಲ್
ಸಂಜೆ 6 ಗಂಟೆ	ಮಹಿಳೆಯರ 4x400 ಮೀ. ಫೈನಲ್
ಸಂಜೆ 6.20	ಪುರುಷರ 4x400 ಮೀ. ರಿಲೇ ಫೈನಲ್

ಬೇಸ್‌ಬಾಲ್

ಸಮಯ	ಸ್ಪರ್ಧೆ
ಮಧ್ಯಾಹ್ನ 3.30	ಪುರುಷರ ವಿಭಾಗದ ಫೈನಲ್

ಬ್ಯಾಸ್ಕೆಟ್‌ಬಾಲ್

ಸಮಯ	ಸ್ಪರ್ಧೆ
ಬೆಳಿಗ್ಗೆ 8 ಗಂಟೆ	ಪುರುಷರ ವಿಭಾಗದ ಫೈನಲ್

ಬೀಚ್ ವಾಲಿಬಾಲ್

ಸಮಯ	ಸ್ಪರ್ಧೆ
ಬೆಳಿಗ್ಗೆ 8 ಗಂಟೆ	ಪುರುಷರ ವಿಭಾಗದ ಫೈನಲ್

ಬಾಕ್ಸಿಂಗ್

ಸಮಯ	ಸ್ಪರ್ಧೆ
ಬೆಳಿಗ್ಗೆ 10.30	ಪುರುಷರ ಫ್ಲೈವೇಟ್ (48–52 ಕೆಜಿ) ಫೈನಲ್
ಬೆಳಿಗ್ಗೆ 10.45	ಮಹಿಳೆಯರ ಫ್ಲೈವೇಟ್ (48–51 ಕೆಜಿ) ಫೈನಲ್
ಬೆಳಿಗ್ಗೆ 11.15	ಪುರುಷರ ಮಿಡ್ಲ್‌ವೇಟ್ (69–75 ಕೆಜಿ) ಫೈನಲ್
ಬೆಳಿಗ್ಗೆ 11.45	ಮಹಿಳೆಯರ ವೆಲ್ಟರ್‌ವೇಟ್ (64–69 ಕೆಜಿ) ಫೈನಲ್

ಡೈವಿಂಗ್

ಸಮಯ	ಸ್ಪರ್ಧೆ
ಬೆಳಿಗ್ಗೆ 11.30	ಪುರುಷರ 10 ಮೀ. ಪ್ಲಾಟ್‌ಫಾರ್ಮ್ ಫೈನಲ್

ಸೈಕ್ಲಿಂಗ್

ಸಮಯ	ಸ್ಪರ್ಧೆ
ಮಧ್ಯಾಹ್ನ 1.25	ಪುರುಷರ ಮ್ಯಾಡಿಸನ್ ಫೈನಲ್

ಈಕ್ವೆಸ್ಟ್ರಿಯನ್

ಸಮಯ	ಸ್ಪರ್ಧೆ
ಮಧ್ಯಾಹ್ನ 3.30	ಜಂಪಿಂಗ್ ತಂಡ ವಿಭಾಗದ ಫೈನಲ್

ಫುಟ್‌ಬಾಲ್

ಸಮಯ	ಸ್ಪರ್ಧೆ
ಸಂಜೆ 5 ಗಂಟೆ	ಪುರುಷರ ವಿಭಾಗದ ಫೈನಲ್

ಗಾಲ್ಫ್

ಸಮಯ	ಸ್ಪರ್ಧೆ
ಬೆಳಿಗ್ಗೆ 3 ಗಂಟೆ	ಮಹಿಳೆಯರ ವೈಯಕ್ತಿಕ ಸ್ಟ್ರೋಕ್‌ಪ್ಲೇ ನಾಲ್ಕನೇ ಸುತ್ತು (ಅದಿತಿ ಅಶೋಕ್, ದೀಕ್ಷಾ ಡಾಗರ್)

ಕರಾಟೆ

ಸಮಯ	ಸ್ಪರ್ಧೆ
ಸಂಜೆ 4.25 ರಿಂದ	ಮಹಿಳೆಯರ ಕುಮಿಟೆ (+61 ಕೆಜಿ ಮತ್ತು +75 ಕೆಜಿ) ವಿಭಾಗದ ಫೈನಲ್ಸ್

ರಿಧಮಿಕ್ ಜಿಮ್ನಾಸ್ಟಿಕ್ಸ್

ಸಮಯ	ಸ್ಪರ್ಧೆ
ಬೆಳಿಗ್ಗೆ 11.50	ವೈಯಕ್ತಿಕ ಆಲ್‌ರೌಂಡ್ ಫೈನಲ್ (ರೊಟೇಶನ್ 4)

ವಾಲಿಬಾಲ್

ಸಮಯ	ಸ್ಪರ್ಧೆ
ಸಂಜೆ 5.45	ಪುರುಷರ ವಿಭಾಗದ ಫೈನಲ್

ವಾಟರ್‌ಪೋಲೊ

ಸಮಯ	ಸ್ಪರ್ಧೆ
ಮಧ್ಯಾಹ್ನ 1 ಗಂಟೆ	ಮಹಿಳೆಯರ ವಿಭಾಗದ ಫೈನಲ್

ಕುಸ್ತಿ

ಸಮಯ	ಸ್ಪರ್ಧೆ
ಮಧ್ಯಾಹ್ನ 3.15 ರಿಂದ	ಪುರುಷರ ಫ್ರೀಸ್ಟೈಲ್ 65 ಕೆಜಿ ವಿಭಾಗದ ಕಂಚಿನ ಪದಕದ ಬೌಟ್ (ಬಜರಂಗ್ ಪೂನಿಯಾ) ಮತ್ತು ಫೈನಲ್ ಬೌಟ್, 97 ಕೆಜಿ ವಿಭಾಗದ ಫೈನಲ್, ಮಹಿಳೆಯರ 50 ಕೆಜಿ ವಿಭಾಗದ ಫೈನಲ್.

(ಆವರಣದಲ್ಲಿ ಭಾರತದ ಸ್ಪರ್ಧಿಗಳು)

ಭಾರತೀಯ ಕಾಲಮಾನ | ಲೈವ್ ಸೋನಿ ನೆಟ್‌ವರ್ಕ್

ನೀರಜ್ ಸ್ಪರ್ಧೆ ವೀಕ್ಷಣೆಗೆ ಬಿಗ್ ಸ್ಕ್ರೀನ್

ಜಾವೆಲಿನ್ ಥ್ರೋ ಅರ್ಹತಾ ಸುತ್ತಿನಲ್ಲಿ ಅಗ್ರ ಸ್ಥಾನ ಗಳಿಸಿ ಭರವಸೆ ಮೂಡಿಸಿರುವ ನೀರಜ್ ಚೋಪ್ರಾ ಪದಕದ ಕನಸಿನೊಂದಿಗೆ ಶನಿವಾರ 'ಫೀಲ್ಡ್'ಗೆ ಇಳಿಯಲಿದ್ದಾರೆ. ಅಥ್ಲೆಟಿಕ್ಸ್‌ನಲ್ಲಿ ಭಾರತಕ್ಕೆ ಮೊದಲ ವೈಯಕ್ತಿಕ ಪದಕ ಸಿಗುವುದೇ ಎಂಬ ಕುತೂಹಲ ಕ್ರೀಡಾಪ್ರಿಯರಲ್ಲಿ ಮೂಡಿದೆ.

ಚೋಪ್ರಾ ಅವರ ಸಾಧನೆ ವೀಕ್ಷಿಸಲು ಅವರು ಜನಿಸಿ ಬೆಳೆದ ಊರು, ಹರಿಯಾಣದ ಪಾನಿಪತ್‌ನ ಖಂದ್ರಾ ಗ್ರಾಮದಲ್ಲಿ ಬೃಹತ್ ಪರದೆಯ ವ್ಯವಸ್ಥೆ ಮಾಡಲಾಗಿದೆ. ಭಾರತ ಅಥ್ಲೆಟಿಕ್ ಫೆಡರೇಷನ್ ಈ ಸೌಲಭ್ಯ ಒದಗಿಸಿದೆ ಎಂದು ನೀರಜ್ ಅವರ ಮಾವ, ಭೀಮ್ ಚೋಪ್ರಾ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ. ನೀರಜ್ ಅವರದು ಅವಿಭಕ್ತ ಕುಟುಂಬವಾಗಿದ್ದು ಒಟ್ಟು 18 ಮಂದಿ ಇದ್ದಾರೆ.

ಭಾರತದ ಹೆಸರಿಗೆ ಏಷ್ಯಾ ದಾಖಲೆ

ಪುರುಷರ 4x400 ಮೀಟರ್ಸ್ ರಿಲೆಯಲ್ಲಿ ಏಷ್ಯಾ ವಲಯದ ದಾಖಲೆ ಭಾರತದ ಪಾಲಾಯಿತು. ಮೊದಲ ಸುತ್ತಿನ ಎರಡನೇ ಹೀಟ್ಸ್‌ನಲ್ಲಿ ಓಡಿದ ಮುಹಮ್ಮದ್ ಅನಾಸ್ ಯಾಹಿಯಾ, ಟಾಮ್ ನೋಹ್ ನಿರ್ಮಲ್, ಆರೋಕ್ಯ ರಾಜೀವ್ ಮತ್ತು ಅಮೋಜ್ ಜೇಕಬ್ 3 ನಿಮಿಷ 00:25 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಇಲ್ಲಿಯ ವರೆಗೆ ಏಷ್ಯಾದ ದಾಖಲೆ ಕತಾರ್ ಹೆಸರಿನಲ್ಲಿತ್ತು. 2018ರ ಏಷ್ಯನ್ ಗೇಮ್ಸ್‌ನಲ್ಲಿ ಆ ದೇಶದ ಅಥ್ಲೀಟ್ಸ್ 3ನಿಮಿಷ 00.56 ಸೆಕೆಂಡುಗಳಲ್ಲಿ ಗುರಿ ತಲುಪಿದ್ದರು. ಭಾರತ ಹೀಟ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿತು. ಒಟ್ಟಾರೆ ಒಂಬತ್ತನೇ ಸ್ಥಾನ ಪಡೆದುಕೊಂಡಿತು.

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಚೀನಾ	36	26	17	79
ಅಮೆರಿಕ	31	36	31	98
ಜಪಾನ್	24	11	16	51
ಬ್ರಿಟನ್	18	20	20	58
ಆರ್‌ಒಸಿ	17	23	22	62
ಭಾರತ (66ನೇ ಸ್ಥಾನ)	0	2	3	5

ಗುಂಡೇಟು ತಿಂದಿದ್ದ ಲಾ ಕ್ರೂಜ್‌ಗೆ ಬಾಕ್ಸಿಂಗ್‌ನಲ್ಲಿ ಚಿನ್ನ

ಟೋಕಿಯೊ (ರಾಯಿಟರ್ಸ್/ಎಎಫ್‌ಪಿ): ದರೋಡೆಕೋರರಿಂದ ಗುಂಡಿನ ದಾಳಿ ಒಳಗಾಗಿದ್ದ ಬಾಕ್ಸ-ರ್‌ವೊಬ್ಬರು ಒಲಿಂಪಿಕ್ಸ್‌ನಲ್ಲಿ ಎರಡನೇ ಚಿನ್ನದ ಪದಕಕ್ಕೆ ಮುತ್ತಿಟ್ಟಿದ್ದಾರೆ. ಕ್ಯೂಬಾದ ಜೂಲಿಯೊ ಲಾ ಕ್ರೂಜ್ ಟೋಕಿಯೊ ಕ್ರೀಡಾಕೂಟದ ಹೆವಿವೇಟ್ ವಿಭಾಗದಲ್ಲಿ ಅಗ್ರಸ್ಥಾನ ಗಳಿಸಿದ್ದಾರೆ.

31 ವರ್ಷದ ಲಾ ಕ್ರೂಜ್ ಶುಕ್ರವಾರ ನಡೆದ ಹೆವಿವೇಟ್ ವಿಭಾಗದ ಫೈನಲ್‌ನಲ್ಲಿ 5–0ಯಿಂದ ರಷ್ಯಾದ ಮುಸ್ಲಿಮ್ ಘಾಜಿಮಗೊನೆದೊವ್ ಅವರನ್ನು ಪರಾಭವಗೊಳಿಸಿದರು. ಈ ವಿಭಾಗದ ಕಂಚಿನ ಪದಕಗಳು ನ್ಯೂಜಿಲೆಂಡ್‌ನ ಡೇವಿಡ್ ನಿಕಾ ಮತ್ತು ಬ್ರೆಜಿಲ್‌ನ ಆ್ಯಬ್ನರ್ ಟೆಕ್ಸಿರಾ ಅವರ ಪಾಲಾದವು.


ಟೋಕಿಯೊ ಒಲಿಂಪಿಕ್ಸ್‌ನ ಬಾಕ್ಸಿಂಗ್‌ನಲ್ಲಿ ಕ್ಯೂಬಾಗೆ ಇದು ಮೂರನೇ ಚಿನ್ನದ ಪದಕ. ಪುರುಷರ ಲೈಟ್‌ವೇಟ್ ವಿಭಾಗದಲ್ಲಿ ಅರ್ಲೆನ್ ಲೊಪೆಜ್ ಮತ್ತು ವೆಲ್ಟರ್‌ವೇಟ್ ವಿಭಾಗದಲ್ಲಿ ರೇನಿಯಲ್ ಇಗ್ಲೆಶಿಯಸ್ ಅಗ್ರಸ್ಥಾನ ಗಳಿಸಿದ್ದರು.

2014ರಲ್ಲಿ ಸಶಸ್ತ್ರ ದರೋಡೆಕೋರರು ಲಾ ಕ್ರೂಜ್ ಅವರಿಗೆ ಗುಂಡು ಹಾರಿಸಿದ್ದರು. ಅವರ ಹಿಂಭಾಗಕ್ಕೆ ಗುಂಡು ತಾಗಿದರೂ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದರು. ಘಟನೆ ನಡೆದ ಎರಡು ವರ್ಷಗಳ ಬಳಿಕ 2016ರಲ್ಲಿ ರಿಯೊ ಕೂಟದಲ್ಲಿ ಅವರಿಗೆ ಚಿನ್ನ ಒಲಿದಿತ್ತು.

'ಘಟನೆಯ ಆಘಾತದಿಂದ ಬೇಗ ಹೊರಬರಲಾಗಲಿಲ್ಲ. ಅದು ಕಷ್ಟದ ಪರಿಸ್ಥಿತಿಯಾಗಿತ್ತು. ಆದರೆ ನಾನು ವಿಶ್ವಾಸ ಕಳೆದುಕೊಳ್ಳಲಿಲ್ಲ' ಎಂದು ಹೆವಿವೇಟ್‌ನಲ್ಲಿ ನಾಲ್ಕು ಬಾರಿ ವಿಶ್ವ ಚಾಂಪಿಯನ್ ಆಗಿರುವ ಲಾ ಕ್ರೂಜ್ ಪ್ರತಿಕ್ರಿಯಿ- ಸಿದ್ದಾರೆ.



ಜೂಲಿಯೊ ಲಾ ಕ್ರೂಜ್ (ಎಡ) ಮತ್ತು ಮುಸ್ಲಿಮ್ ಘಾಜಿಮಗೊಮೆದೊವ್ ನಡುವಣ ಸೆಣಸಾಟ– ಎಎಫ್‌ಪಿ ಚಿತ್ರ



ರಿದಮಿಕ್ ಜಿಮ್ನಾಸ್ಟಿಕ್ಸ್‌ನ ಆಲ್‌ಅರೌಂಡ್ ಅರ್ಹತಾ ಸುತ್ತಿನಲ್ಲಿ ಸ್ಪರ್ಧಿಸಿದ್ದ ಕೇಪ್ ವರ್ದಿಯ ಮಾರ್ಸಿಯಾ ಆಲ್ವೆಜ್ ಲೊಪೆಜ್– ರಾಯಿಟರ್ಸ್ ಚಿತ್ರ



ಪುರುಷರ ಕರಾಟೆಯ ಕಟಾ ವಿಭಾಗದಲ್ಲಿ ಚಿನ್ನ ಗೆದ್ದ ಜಪಾನ್‌ನ ರಿಯೊ ಕಿಯುನಾ– ರಾಯಿಟರ್ಸ್ ಚಿತ್ರ

ಭಾರತ ಮಹಿಳಾ ಹಾಕಿ ತಂಡಕ್ಕೆ ವೀರೋಚಿತ ಪರಾಜಯ; ಹರಿದುಬಂದ ಸಾಂತ್ವನದ ನುಡಿ

ಸೋಲಿನ ಬರೆ; ಕಣ್ಣೀರ ಧಾರೆ

ಟೋಕಿಯೊ/ನವದೆಹಲಿ: ಮಹಿಳೆಯರ ಹಾಕಿಯಲ್ಲಿ ದೇಶಕ್ಕೆ ಮೊತ್ತಮೊದಲ ಪದಕ ಗೆದ್ದುಕೊಡುವ ರಾಣಿ ರಾಂಪಾಲ್ ಬಳಗದ ಕನಸು ನನಸಾಗಲಿಲ್ಲ.

ಕಳೆದ ಬಾರಿಯ ಚಾಂಪಿಯನ್ ಬ್ರಿಟನ್ ಎದುರು ಶುಕ್ರವಾರ ನಡೆದ ಕಂಚಿನ ಪದಕದ ಪಂದ್ಯದಲ್ಲಿ 3–4ರಲ್ಲಿ ಸೋತ ಭಾರತ ತಂಡದ ಆಟಗಾರ್ತಿಯರು ಕಣ್ಣೀರ ಧಾರೆಯಲ್ಲಿ ಮುಳುಗಿದರು. ಆದರೆ ಅವರ ದಿಟ್ಟ ಆಟವನ್ನು ಮೆಚ್ಚಿ ದೇಶದ ಮೂಲೆಮೂಲೆಗಳಿಂದ ಸಾಂತ್ವನದ ನುಡಿಗಳು ಹರಿದುಬರುತ್ತಿವೆ.

ಇದೇ ಮೊದಲ ಬಾರಿ ಸೆಮಿಫೈನಲ್ ಪ್ರವೇಶಿಸಿದ ಸಾಧನೆಗೆ ಪಾತ್ರವಾಗಿರುವ ತಂಡ ಮೂರು ಹಾಗೂ ನಾಲ್ಕನೇ ಸ್ಥಾನ ನಿರ್ಧರಿಸುವ ಪಂದ್ಯದಲ್ಲೂ ಅಮೋಘ ಆಟವಾಡಿತು.

ಎಲ್ಲ ವಿಭಾಗಗಳಲ್ಲೂ ಆಟಗಾರ್ತಿಯರು ತಮ್ಮ ಗರಿಷ್ಠ ಸಾಮರ್ಥ್ಯವನ್ನು ಪ್ರದರ್ಶಿಸಿದರು. ಎದುರಾಳಿಗಳ ಪ್ರಬಲ ದಾಳಿಯನ್ನು ಹಿಮ್ಮೆಟ್ಟಿಸಿದ ಡಿಫೆಂಡರ್‌ಗಳು ಮತ್ತು ಗೋಲ್‌ಕೀಪರ್ ಸವಿತಾ ಪೂನಿಯಾ ಸೋಲಿನ ಅಂತರವನ್ನು ಕಡಿಮೆ ಮಾಡುವಲ್ಲಿ ನಿರ್ಣಾಯಕ ಪಾತ್ರ ವಹಿಸಿದರು.

ಎರಡನೇ ಕ್ವಾರ್ಟರ್‌ನಲ್ಲಿ ಡ್ರ್ಯಾಗ್‌ಫ್ಲಿಕ್ಕ-ರ್ ಗುರ್ಜೀತ್ ಕೌರ್ ಪೆನಾಲ್ಟಿ ಕಾರ್ನರ್‌ಗಳಿಂದ ಗಳಿಸಿದ ಎರಡು ಗೋಲುಗಳು ಮತ್ತು ಸಲೀಮಾ ಟೆಟೆ ಅವರ ಭರ್ಜರಿ ಡ್ರಿಬ್ಲಿಂಗ್‌ನ ಕೊನೆಯಲ್ಲಿ ವಂದನಾ ಕಟಾರಿಯಾ ಗಳಿಸಿದ ಸುಲಭ ಗೋಲಿನ ಬಲದಿಂದ ಮುನ್ನಡೆ ಸಾಧಿಸಿದ್ದ ಭಾರತ ಮೂರನೇ ಕ್ವಾರ್ಟರ್‌ನಲ್ಲಿ ಸಮಬಲದೊಂದಿಗೆ ನಿರೀಕ್ಷೆ ಮೂಡಿಸಿತ್ತು. ಆದರೆ ಕೊನೆಯ ಕ್ವಾರ್ಟರ್‌ನಲ್ಲಿ 'ಪೆನಾಲ್ಟಿ'ಗಳು ತಂಡದ ನಿರೀಕ್ಷೆಯನ್ನು ನುಚ್ಚುನೂರು ಮಾಡಿದವು.

ಮೊದಲ ಕ್ವಾರ್ಟರ್‌ನಲ್ಲಿ ಉಭಯ ತಂಡಗಳೂ ಮುನ್ನಡೆ ಸಾಧಿಸಲು ನಡೆಸಿದ ಪ್ರಯತ್ನಕ್ಕೆ ಫಲ ಸಿಗಲಿಲ್ಲ. ಆದರೆ ಎರಡನೇ ಕ್ವಾರ್ಟರ್‌ನಲ್ಲಿ ಒಟ್ಟು ಐದು ಗೋಲುಗಳು ಮೂಡಿಬಂದವು.

ಈ ಕ್ವಾರ್ಟರ್‌ನ ಆರಂಭದಲ್ಲೇ ಬ್ರಿಟನ್ ಮುನ್ನಡೆ ಗಳಿಸಿದರೆ ಕೊನೆಯ ಆರು ನಿಮಿಷಗಳಲ್ಲಿ ದಾಖಲಾದ ಒಟ್ಟು ನಾಲ್ಕು ಗೋಲುಗಳು ಪಂದ್ಯವನ್ನು ರೋಚಕವಾಗಿಸಿದವು. ಭಾರತ ಮುನ್ನಡೆ ಸಾಧಿಸಿತು.

ಮೂರನೇ ಕ್ವಾರ್ಟರ್‌ನಲ್ಲಿ ಬ್ರಿಟನ್ ಗೋಲು ಗಳಿಸಿ ಮೇಲುಗೈ ಸಾಧಿಸಿತು. ಕೊನೆಯ ಕ್ವಾರ್ಟರ್‌ನಲ್ಲಿ ಸತತ ಮೂರು ಪೆನಾಲ್ಟಿ ಕಾರ್ನರ್ ಅವಕಾಶಗಳು ಬ್ರಿಟನ್‌ಗೆ ಲಭಿಸಿದವು. ಮೊದಲ ಎರಡನ್ನು ಸಮರ್ಥವಾಗಿ ತಡೆಯುವಲ್ಲಿ ಸವಿತಾ ಮತ್ತು ಡಿಫೆಂಡರ್‌ಗಳು ಯಶಸ್ವಿಯಾದರು. ಆದರೆ ಮೂರನೇ ಅವಕಾಶದಲ್ಲಿ ಬ್ರಿಟನ್ ಚೆಂಡನ್ನು ಗುರಿಸೇರಿಸಿತು.



ಕಣ್ಣೀರು ಹಾಕುತ್ತ ಅಂಗಣ ತೊರೆದ ಭಾರತ ತಂಡದ ಆಟಗಾರ್ತಿಯರು –ಪಿಟಿಐ ಚಿತ್ರ



ಸವಿತಾ ಪೂನಿಯಾ ಬೇಸರ –ಪಿಟಿಐ ಚಿತ್ರ

ಪ್ರಧಾನಿ ಮಾತಿಗೆ ಗದ್ಗದಿತರಾದ ರಾಣಿ ಬಳಗದ ಆಟಗಾರ್ತಿಯರು

ಪ್ರಧಾನಿ ನರೇಂದ್ರ ಮೋದಿ ಅವರು ದೂರವಾಣಿ ಕರೆ ಮಾಡಿ ತಂಡದ ಸದಸ್ಯರೊಂದಿಗೆ ಮಾತನಾಡಿದರು. ನಾಯಕಿ ರಾಣಿ ರಾಂಪಾಲ್ ಅವರ ಸುತ್ತ ಎಲ್ಲ ಆಟಗಾರ್ತಿಯರು ನಿಂತಿದ್ದರು. 'ಸೋತರೂ ನೀವು ದೇಶದ ಗೌರವ ಹೆಚ್ಚಿಸಿದ್ದೀರಿ' ಎಂದು ಹೇಳುತ್ತಿದ್ದಂತೆ ಎಲ್ಲರೂ ಅಳತೊಡಗಿದರು. ಗದ್ಗದಿತರಾಗಿಯೇ ರಾಣಿ ಧನ್ಯವಾದ ಅರ್ಪಿಸಿದರು. ಆಗ ಪ್ರಧಾನಿ 'ಯಾವ ಕಾರಣಕ್ಕೂ ಅಳಬೇಡಿ. ನಿಮ್ಮ ಸಾಧನೆ ಕಡಿಮೆಯೇನೂ ಅಲ್ಲ' ಎಂದರು.

ರಾಷ್ಟ್ರಪತಿ ರಾಮನಾಥ ಕೋವಿಂದ್, ಕ್ರೀಡಾ ಸಚಿವ ಅನುರಾಗ್ ಠಾಕೂರ್ ಮಾಜಿ ಕ್ರೀಡಾ ಸಚಿವ ಕಿರಣ್ ರಿಜಿಜು ಅವರೂ ಭಾರತ ತಂಡಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ. ಪುರುಷರ ಹಾಕಿ ತಂಡದ ನಾಯಕ ಮನ್‌ಪ್ರೀತ್ ಸಿಂಗ್, ಮಾಜಿ ಕ್ರಿಕೆಟರ್‌ಗಳಾದ ಸಚಿನ್ ತೆಂಡೂಲ್ಕರ್, ವೀರೇಂದ್ರ ಸೆಹ್ವಾಗ್, ಅನಿಲ್ ಕುಂಬ್ಳೆ, ವಿವಿಎಸ್ ಲಕ್ಷ್ಮಣ್ ಮತ್ತು ಮಾಜಿ ಹಾಕಿ ಆಟಗಾರ ವೀರೇನ್ ರಸ್ಕಿನ್ಹ, ಶೂಟರ್ ಹೀನಾ ಸಿಧು, ಬ್ಯಾಡ್ಮಿಂಟನ್ ತಾರೆ ಜ್ವಾಲಾ ಗುಟ್ಟಾ, ಜಿಮ್ನಾಸ್ಟ್ ದೀಪಾ ಕರ್ಮಾಕರ್, ನಟ ಶಾರೂಖ್ ಖಾನ್ ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರೂ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ನೀಲಕಂಠಗೆ ಉದ್ಯೋಗ

ಭಾರತ ಪುರುಷ ತಂಡದ ಸದಸ್ಯ ನೀಲಕಂಠ ಶರ್ಮಾ ಅವರಿಗೆ ₹ 75 ಲಕ್ಷ ಬಹುಮಾನ ಮತ್ತು ಸರ್ಕಾರಿ ಉದ್ಯೋಗ ನೀಡುವುದಾಗಿ ಮಣಿಪುರ ಮುಖ್ಯಮಂತ್ರಿ ಎನ್. ಬೀರೇನ್ ಸಿಂಗ್ ಘೋಷಿಸಿದ್ದಾರೆ. ಶರ್ಮಾ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿ ಅವರು ಈ ಭರವಸೆ ನೀಡಿದ್ದಾರೆ. ಇಂಫಾಲ ಪೂರ್ವ ಜಿಲ್ಲೆಯ ಕೊಂಥಾ ಅಹಲ್ಲೂಪ್ ಮಖಾ ಲೇಕೈ ಪ್ರದೇಶದಲ್ಲಿ ವಾಸವಾಗಿರುವ ನೀಲಕಂಠ ಶರ್ಮಾ ಅವರ ತಾಯಿ ತಂಡದ ಸಾಧನೆಗೆ ಭಾವುಕರಾಗಿದ್ದು ಸಂಭ್ರಮವನ್ನು ಬಣ್ಣಿಸಲು ಮಾತುಗಳೇ ಸಿಗುತ್ತಿಲ್ಲ ಎಂದಿದ್ದಾರೆ.

ನೆದರ್ಲೆಂಡ್ಸ್‌ಗೆ ಚಿನ್ನದ ಪದಕ

ಅರ್ಜೆಂಟೀನಾವನ್ನು 3–1 ಗೋಲುಗಳಿಂದ ಮಣಿಸಿದ ನೆದರ್ಲೆಂಡ್ಸ್ ತಂಡ ಚಿನ್ನದ ಪದಕ ಗೆದ್ದುಕೊಂಡಿತು. ಶುಕ್ರವಾರ ಸಂಜೆ ನಡೆದ ಫೈನಲ್‌ನಲ್ಲಿ ಎಲ್ಲ ಗೋಲುಗಳೂ ಎರಡನೇ ಕ್ವಾರ್ಟರ್‌ನಲ್ಲಿ ದಾಖಲಾದವು. ಮಾರ್ಗೊಟ್ ಗಫಿನ್ (23ನೇ ನಿಮಿಷ) ಮತ್ತು ಜಾಕ್ವೆಲಿನ್ ಮಸಾಕರ್ (26, 29ನೇ ನಿ) ನೆದರ್ಲೆಂಡ್ಸ್ ಪರ ಗೋಲು ಗಳಿಸಿದರೆ ಅರ್ಜೆಂಟೀನಾದ ಏಕೈಕ ಗೋಲು ಆಗಸ್ಟಿನಾ ಗೊರ್ಜಲಿನ್ (30ನೇ ನಿ) ಅವರ ಸ್ಟಿಕ್‌ನಿಂದ ಬಂತು.

ಸ್ಕೋರು

4 ಬ್ರಿಟನ್

3 ಭಾರತ

ಶಾಟ್‌ಗಳು

11 ಭಾರತ

19 ಬ್ರಿಟನ್

ಗೋಲು ಗಳಿಸಿದವರು

ಭಾರತ: ಗುರ್ಜೀತ್ ಕೌರ್ (25, 26ನೇ ನಿಮಿಷ), ವಂದನಾ ಕಟಾರಿಯಾ (29ನೇ ನಿ)

ಬ್ರಿಟನ್: ಸಿಯಾನ್ ಎಲಿನಾ ರಿಯರ್ (16ನೇ ನಿ), ಸಾರಾ ರಾಬರ್ಟ್ಸನ್ (24ನೇ ನಿ), ವೆಬ್ ಪೀರ್ನೆ (35ನೇ ನಿ), ಗ್ರೇಸ್ ಬಾಲ್ಸಡನ್ (48ನೇ ನಿ)

ಪ್ರತಿ ಕ್ವಾರ್ಟರ್‌ನಲ್ಲಿ ದಾಖಲಾದ ಗೋಲು

ಕ್ವಾರ್ಟರ್	ಭಾರತ	ಬ್ರಿಟನ್
ಒಂದು	0	0
ಎರಡು	3	2
ಮೂರು	0	1
ನಾಲ್ಕು	0	1

ಗೋಲ್‌ಕೀಪರ್‌ಗಳ ಯಶಸ್ಸು

- ಸವಿತಾ ಪೂನಿಯಾ (ಭಾರತ) 11ರಲ್ಲಿ 7
- ಮೆದಲಿನ್ ಹಿಂಚ್ (ಬ್ರಿಟನ್) 6ರಲ್ಲಿ3

ಮೊದಲ ಸ್ಥಾನ ಕಾಯ್ದುಕೊಂಡ ಅಮೆರಿಕದ ನೆಲ್ಲಿ ಕೋರ್ಡಾ

ಅದಿತಿ ಪದಕ ಗಳಿಕೆಗೆ ಇನ್ನೊಂದು ಹೆಜ್ಜೆ



ಅದಿತಿ ಅಶೋಕ್ –ಎಎಫ್‌ಪಿ ಚಿತ್ರ

ಟೋಕಿಯೊ (ಪಿಟಿಐ): ಆರಂಭದ ಸುತ್ತಿನಿಂದಲೇ ಅಮೋಘ ಸಾಮರ್ಥ್ಯ ತೋರುತ್ತ ಮುನ್ನಡೆಯನ್ನು ಕಾಯ್ದುಕೊಂಡಿದ್ದ ಭಾರತದ ಯುವ ಗಾಲ್ಫರ್ ಅದಿತಿ ಅಶೋಕ್ ಅವರು ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವ ಭರವಸೆ ಮೂಡಿಸಿದ್ದಾರೆ. ಶನಿವಾರ ಮೂರನೇ ಸುತ್ತು ಕೊನೆಗೊಂಡಾಗ ಅವರು ಎರಡನೇ ಸ್ಥಾನದಲ್ಲಿ ವಿರಾಜಮಾನವಾಗಿದ್ದು ಕೊನೆಯ ದಿನವಾದ ಶನಿವಾರ ಪದಕಕ್ಕೆ ಮುತ್ತಿಡುವ ಸಾಧ್ಯತೆ ಇದೆ.

ಅಮೆರಿಕದ ನೆಲ್ಲಿ ಕೋರ್ಡಾ ಮೊದಲ ಸ್ಥಾನದಲ್ಲೇ ಮುಂದುವರಿದಿದ್ದಾರೆ. ಹೀಗಾಗಿ ಅವರಲ್ಲಿ ಚಿನ್ನದ ಭರವಸೆ ಮೂಡಿದೆ. ಬೆಂಗಳೂರಿನ ಅದಿತಿ ಅವರ ನಂತರ ನ್ಯೂಜಿಲೆಂಡ್‌ನ ಲಿಡಿಯಾ ಕೊ, ಆಸ್ಟ್ರೇಲಿಯಾದ ಹನಾ ಗ್ರೀನ್, ಡೆನ್ಮಾರ್ಕ್‌ನ ಕ್ರಿಸ್ಟಿನ್ ಪೆಡರ್ಸನ್ ಮತ್ತು ಜಪಾನ್‌ನ ಮೋನಿ ಇನಾಮಿ ಇದ್ದಾರೆ. ಇವರೆಲ್ಲರೂ ಮೂರನೇ ಸ್ಥಾನವನ್ನು ಹಂಚಿಕೊಂಡಿದ್ದಾರೆ.

ಮೂರನೇ ದಿನದಲ್ಲಿ ನಡೆದ ಮೂರನೇ ಸುತ್ತಿನಲ್ಲಿ ಅದಿತಿ ಐದು ಬರ್ಡಿ ಮತ್ತು ಎರಡು ಬೋಗಿ ಹೊಡೆದರು. ನಾಲ್ಕು, ಆರು ಮತ್ತು ಏಳನೇ ಹಾಲ್‌ನ ಶಾಟ್‌ಗಳ ನಂತರ ತ್ರಿ-ಅಂಡರ್ ಸ್ಥಾನದಲ್ಲಿದ್ದ ಅವರು ಒಂಬತ್ತು 11ರಲ್ಲಿ ಬೋಗಿಯೊಂದಿಗೆ ಹಿಂದೆ ಉಳಿದರು. ಆದರೆ ಛಲ ಬಿಡದ ಅವರು 15 ಮತ್ತು 17ರಲ್ಲಿ ಬರ್ಡಿಗಳೊಂದಿಗೆ ಚೇತರಿಸಿಕೊಂಡರು. ಈ ಮೂಲಕ ಐತಿಹಾಸಿಕ ಪದಕ ಗಳಿಕೆಯತ್ತ ಮುನ್ನಡೆದರು.

ಭಾರತದ ಮತ್ತೊಬ್ಬರು ಗಾಲ್ಫರ್ ದೀಕ್ಷಾ ದಾಗರ್ ಅವರು ಲೀಡರ್ ಪಟ್ಟಿಯಲ್ಲಿ ಅರ್ಧಕ್ಕಿಂತ ಕೆಳಗೆಯೇ ಉಳಿದರು. ಮೂರನೇ ಸುತ್ತಿನಲ್ಲಿ ಅವರು ಎರಡು ಬೋಗಿ ಮತ್ತು ಒಂದು ಬರ್ಡಿ ಗಳಿಸಿದರು.

ರಿಯೊ ಒಲಿಂಪಿಕ್ಸ್‌ನಲ್ಲೂ ಪಾಲ್ಗೊಂಡಿದ್ದ ಅದಿತಿ ಅಶೋಕ್ 41ನೇ ಸ್ಥಾನ ಹಂಚಿಕೊಂಡಿದ್ದರು. ಕೊರೊನಾದಿಂದಾಗಿ ಈ ಬಾರಿ ಹೆಚ್ಚು ಟೂರ್ನಿಗಳಲ್ಲಿ ಪಾಲ್ಗೊಳ್ಳಲು ಆಗಲಿಲ್ಲ. ಆದ್ದರಿಂದ ನಿರೀಕ್ಷೆಗೆ ತಕ್ಕಂತೆ ಆಡಲು ಸಾಧ್ಯವಾಗಲಿಲ್ಲ ಎಂದು ಅವರು ಹೇಳಿದರು.

‘ಮೊದಲ ಎರಡು ದಿನಗಳಿಗೆ ಹೋಲಿಸಿದರೆ ಮೂರನೇ ಸುತ್ತಿನಲ್ಲಿ ಪುಟ್ಟಿಂಗ್ ಅಷ್ಟು ಸಮಾಧಾನಕರ ಆಗಿರಲಿಲ್ಲ. ಆದರೂ ಫಲಿತಾಂಶದ ಖುಷಿ ನೀಡಿದೆ’ ಎಂದು ಅವರು ನುಡಿದರು.



ನೆಲ್ಲಿ ಕೋರ್ಡಾ –ರಾಯಿಟರ್ಸ್ ಚಿತ್ರ

ಮೂರನೇ ಸುತ್ತಿನ ಅಂತ್ಯಕ್ಕೆ ಅಗ್ರ 6 ಮಂದಿ

ಗಾಲ್ಫರ್	ದೇಶ	1ನೇ ಸುತ್ತು	2ನೇ ಸುತ್ತು	3ನೇ ಸುತ್ತು	ಒಟ್ಟು
ನೆಲ್ಲಿ ಕೊರ್ಡ	ಅಮೆರಿಕ	67	62	69	198
ಅದಿತಿ ಅಶೋಕ್	ಭಾರತ	67	66	68	201
ಲಿಡಿಯಾ ಕೊ	ನ್ಯೂಜಿಲೆಂಡ್	70	67	66	203
ಹನಾ ಗ್ರೀನ್	ಆಸ್ಟ್ರೇಲಿಯಾ	71	65	67	203
ಕ್ರಿಸ್ಟಿನ್ ಎಮಿಲಿ	ಡೆನ್ಮಾರ್ಕ್	70	63	70	203
ಮೋನಿ ಇನಾಮಿ	ಜಪಾನ್	70	65	68	203



ಅಮೆರಿಕದ ಅಲಿಕ್ಸ್ ಕ್ಲೈನ್‌ಮನ್ (ಎಡ) ಮತ್ತು ಅಪ್ರಿಲ್ ರಾಸ್ ಖುಷಿಯ ಕ್ಷಣ –ಎಎಫ್‌ಪಿ ಚಿತ್ರ

ಬೀಚ್ ವಾಲಿಬಾಲ್: ಚಿನ್ನ ಗೆದ್ದ ಅಮೆರಿಕ

ಟೋಕಿಯೊ (ಎಪಿ): ಆಸ್ಟ್ರೇಲಿಯಾ ಆಟಗಾರ್ತಿಯರ ಸವಾಲನ್ನು ಹಿಮ್ಮೆಟ್ಟಿಸಿದ ಅಮೆರಿಕದ ಅಪ್ರಿಲ್ ರಾಸ್ ಹಾಗೂ ಅಲಿಕ್ಸ್ ಕ್ಲೈನ್‌ಮನ್ ಒಲಿಂಪಿಕ್ಸ್‌ನ ಮಹಿಳಾ ಬೀಚ್ ವಾಲಿಬಾಲ್‌ನಲ್ಲಿ ಚಿನ್ನದ ಪದಕವನ್ನು ಗೆದ್ದುಕೊಂಡರು. ಲಂಡನ್‌ನಲ್ಲಿ ಬೆಳ್ಳಿ, ರಿಯೊದಲ್ಲಿ ಕಂಚಿನ ಪದಕ ವಿಜೇತರಾಗಿದ್ದ ರಾಸ್, ಇಲ್ಲಿ ಪದಕಕ್ಕೆ ಚಿನ್ನದ ಹೊಳಪು ತಂದುಕೊಂಡರು.

ಶುಕ್ರವಾರ ನಡೆದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಅಮೆರಿಕ ಜೋಡಿಯು 21–15, 21–16ರಿಂದ ಮರಿಯಾಫ್ ಅರ್ಟಾಚೊ ಡೆಲ್ ಸೊಲಾರ್ ಮತ್ತು ಟಾಲಿಕ್ ಕ್ಲ್ಯಾನ್ಸಿ ಅವರನ್ನು ಸೋಲಿಸಿದರು. ಟೋಕಿಯೊದ ಸುಡುಬಿಸಿಲಿನಲ್ಲಿ ನಡೆದ ಈ ಪಂದ್ಯವು 43 ನಿಮಿಷಗಳಲ್ಲಿ ಮುಕ್ತಾಯವಾಯಿತು. 33 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲಿ ಆಟಗಾರ್ತಿಯರು ಬಳಲಿದರು.

ಫೈನಲ್ ಪಂದ್ಯದ ಸ್ಕೋರ್

ದೇಶ	ಸೆಟ್ 1	ಸೆಟ್ 2
ಅಮೆರಿಕ	21	21
ಆಸ್ಟ್ರೇಲಿಯಾ	15	16

ಕಂಚಿನ ಪದಕಕ್ಕಾಗಿ ನಡೆದ ಸೆಣಸಾಟದಲ್ಲಿ ಸ್ವಿಟ್ಜರ್ಲೆಂಡ್‌ನ ಜೋವಾನ ಹೆಡ್ರಿಚ್ ಮತ್ತು ಅನೌಕ್ ವರ್ಜ್ ಡೆಪ್ರೆ ಅವರು ಲಾಟ್ವಿಯಾದ ಅನಸ್ತೇಸಿಯಾ ಕ್ರಾವ್ಸೆನೊಕಾ ಮತ್ತು ಟೀನಾ ಗ್ರಾವುಡಿನಾ ಅವರನ್ನು ಪರಾಭವಗೊಳಿಸಿದರು. ಸ್ವಿಸ್ ಜೋಡಿಗೆ 21–19, 21–15ರಿಂದ ಜಯ ಒಲಿಯಿತು.

21 ವರ್ಷಗಳ ನಂತರ ಬೀಚ್ ವಾಲಿಬಾಲ್‌ನಲ್ಲಿ ಆಸ್ಟ್ರೇಲಿಯಾಕ್ಕೆ ಪದಕ ದಕ್ಕಿತು. 2000ರ ಸಿಡ್ನಿ ಒಲಿಂಪಿಕ್ಸ್‌ನಲ್ಲಿ ನತಾಲಿ ಕುಕ್ ಮತ್ತು ಕೆರಿ ಪೊಟ್ಟಾರ್ಸ್ಟ್ ಚಿನ್ನದ ಪದಕ ಗೆದ್ದಿದ್ದರು.


ತರಬೇತಿ ಸಂದರ್ಭ ಸಹಾಯ: ಲಾರಿ ಚಾಲಕರನ್ನು ಗೌರವಿಸಿದ ಮೀರಾ

ಬೆಂಗಳೂರು: ಟೋಕಿಯೊ ಒಲಿಂಪಿಕ್ಸ್‌ನಲ್ಲಿ ದೇಶಕ್ಕೆ ಮೊದಲ ಬೆಳ್ಳಿ ಪದಕ ತಂದುಕೊಟ್ಟ ಹೆಮ್ಮೆಯ ಅಥ್ಲೀಟ್ ಮೀರಾಬಾಯಿ ಚಾನು ಈಗ ಮತ್ತೊಂದು ಕಾರಣಕ್ಕೆ ಸುದ್ದಿಯಾಗಿದ್ದಾರೆ.

ಮೀರಾಬಾಯಿ ತರಬೇತಿ ಪಡೆಯಲು ತೆರಳುತ್ತಿದ್ದಾಗ ಸೂಕ್ತ ಸಾರಿಗೆ ಸೌಲಭ್ಯವಿಲ್ಲದೆ ಪರದಾಡುತ್ತಿದ್ದರು. ಅಂತಹ ಸಂದರ್ಭದಲ್ಲಿ ಅವರ ಹಳ್ಳಿ ನಾಂಗ್‌ಪೊಕ್ ಕಾಚಿಂಗ್‌ನಿಂದ ಸುಮಾರು 30 ಕಿ.ಮೀ. ದೂರದಲ್ಲಿರುವ ಮಣಿಪುರದ ಇಂಫಾಲ್‌ನಲ್ಲಿರುವ ಸ್ಪೋರ್ಟ್ಸ್ ಅಕಾಡೆಮಿಗೆ ತೆರಳಲು ಲಾರಿ ಚಾಲಕರು ನೆರವಾಗಿದ್ದರು.

ಮರಳು ಸಾಗಾಟದ ಲಾರಿಗಳು, ಗೂಡ್ಸ್ ಲಾರಿಗಳಲ್ಲಿ ಚಾನು ಅಕಾಡೆಮಿಗೆ ತೆರಳಿ ತರಬೇತಿ ಪಡೆಯುತ್ತಿದ್ದರು.

ತರಬೇತಿಗಾಗಿ ಹೋಗಿ ಬರಲು ಸಹಾಯ ಮಾಡಿರುವ ಸುಮಾರು 150 ಮಂದಿ ಲಾರಿ ಚಾಲಕರನ್ನು ಮೀರಾ ಗೌರವಿಸಿದ್ದಾರೆ ಎಂದು ಎನ್‌ಡಿಟಿವಿ ವರದಿ ಮಾಡಿದೆ. ಉಚಿತ ಸಾರಿಗೆ ಸೌಲಭ್ಯ ಕಲ್ಪಿಸಿದ ಎಲ್ಲ ಚಾಲಕ ಮತ್ತು ಲಾರಿ ಸಹಾಯಕರಿಗೆ ಅವರು, ಟಿ ಶರ್ಟ್, ಮಣಿಪುರಿ ಶಾಲು ಮತ್ತು ಊಟ ನೀಡುವ ಮೂಲಕ ಕೃತಜ್ಞತೆ ಅರ್ಪಿಸಿದ್ದಾರೆ.



ಮೀರಾಬಾಯಿ ಚಾನು– ಪಿಟಿಐ ಚಿತ್ರ

ಮೀರಾಬಾಯಿ ನಡೆಗೆ ಜನರಿಂದ ಮೆಚ್ಚುಗೆ ವ್ಯಕ್ತವಾಗಿದ್ದು, ಸಾಮಾಜಿಕ ತಾಣಗಳಲ್ಲಿ ವೈರಲ್ ಆಗಿದೆ.

ಒಲಿಂಪಿಕ್ಸ್‌ನಲ್ಲಿ ಮಹಿಳೆಯರ ವೇಟ್‌ಲಿಫ್ಟಿಂಗ್ ಸ್ಪರ್ಧೆಯ 49 ಕೆಜಿ ವಿಭಾಗದಲ್ಲಿ ಮೀರಾಬಾಯಿ ಚಾನು ಬೆಳ್ಳಿ ಪದಕ ಗಳಿಸಿದ್ದಾರೆ.

ಕಂಚು ಗೆಲ್ಲುವತ್ತ ಬಜರಂಗ್ ಚಿತ್ತ

ಕುಸ್ತಿ: ಸೆಮಿಫೈನಲ್‌ನಲ್ಲಿ ಮಣಿದ ಹರಿಯಾಣ ಪೈಲ್ವಾನ: ಸೀಮಾ ಬಿಸ್ಲಾಗೆ ನಿರಾಶೆ

ಚಿಬಾ, ಜಪಾನ್ (ಪಿಟಿಐ): ಮೊಣಕಾಲಿನ ಗಾಯದ ಕಾರಣ ತಮ್ಮ ಲೆಗ್ ಡಿಫೆನ್ಸ್‌ನಲ್ಲಿ ದುರ್ಬಲರಾಗಿರುವ ಭಾರತದ ಬಜರಂಗ್ ಪೂನಿಯಾ ಅವರ ಫೈನಲ್ ಪ್ರವೇಶದ ಕನಸು ಕಮರಿತು.

ಶುಕ್ರವಾರ ನಡೆದ ಒಲಿಂಪಿಕ್ಸ್‌ನ ಪುರುಷರ 65 ಕೆಜಿ ಫ್ರೀಸ್ಟೈಲ್ ಕುಸ್ತಿಯ ಸೆಮಿಫೈನಲ್‌ನಲ್ಲಿ ಬಜರಂಗ್ ಪೂನಿಯಾ 5-12ರಿಂದ ಅಜರ್‌ಬೈಜಾನ್‌ನ ಹಾಕಿ ಅಲೀವ್ ವಿರುದ್ಧ ಪರಾಭವಗೊಂಡರು. ಈ ಒಲಿಂಪಿಕ್‌ನಲ್ಲಿ ಚಿನ್ನದ ಪದಕ ಜಯಿಸುವ ನಿರೀಕ್ಷೆ ಅವರ ಮೇಲಿತ್ತು. ಇತ್ತೀಚಿನ ಅಂತರರಾಷ್ಟ್ರೀಯ ಮತ್ತು ವಿಶ್ವ ಚಾಂಪಿಯನ್‌ಷಿಪ್‌ಗಳಲ್ಲಿ ಅವರು ಉತ್ತಮ ಸಾಧನೆ ಮಾಡಿದ್ದರು.

ರಿಯೊ ಒಲಿಂಪಿಕ್ ಕಂಚಿನ ಪದಕ ವಿಜೇತ ಹಾಜಿ, ಬೌಟ್‌ನಲ್ಲಿ ಬಜರಂಗ್ ಅವರ ಕಾಲುಗಳ ಮೇಲೆ ನಿರ್ದಿಷ್ಟ ದಾಳಿ ನಡೆಸಿದರು. ಇದರೊಂದಿಗೆ ಸುಲಭವಾಗಿ ಬಜರಂಗ್ ಅವರನ್ನು ಕೆಡವಿ ಎರಡು ಪಾಯಿಂಟ್ ಗಳಿಸಿದರು.

ಮೊದಲ ಅವಧಿಯಲ್ಲಿ 1–4ರ ಹಿನ್ನಡೆಯಲ್ಲಿದ್ದ ಬಜರಂಗ್ ಮೇಲೆ ಅವರನ್ನು ಚಾಣಾಕ್ಷತನದಿಂದ ಎತ್ತಿ ಒಗೆದು ಮತ್ತೆ ನಾಲ್ಕು ಪಾಯಿಂಟ್‌ಗಳನ್ನು ತಮ್ಮಖಾತೆಗೆ ಸೇರಿಸಿಕೊಂಡರು. ಇದರಿಂದಾಗಿ 8–1ರ ದೊಡ್ಡ ಮುನ್ನಡೆ ಗಳಿಸಿದರು.

ನಂತರವೂ ಹಾಜಿಯ ದಾಳಿ ಮುಂದುವರಿಯಿತು. ಮರುಹೋರಾಟ ತೋರಿದ ಬಜರಂಗ್ ಮತ್ತೆ ನಾಲ್ಕು ಪಾಯಿಂಟ್‌ಗಳನ್ನು ಕಲೆಹಾಕುವಲ್ಲಿ ಸಫಲರಾದರು. ಆದರೆ, ಹಾಜಿ ಮತ್ತಷ್ಟು ಮುಂದೆ ಹೋಗಿದ್ದರು. ಕೊನೆಯ 30 ಸೆಕೆಂಡುಗಳಲ್ಲಿ ಬಜರಂಗ್ ಬಹಳಷ್ಟು ಪ್ರಯತ್ನ ಮಾಡಿದರೂ ಹಾಜಿ ರಕ್ಷಣಾತ್ಮಕವಾಗಿ ಆಡಿ ಬೌಟ್ ಗೆದ್ದರು.

ಮೊದಲ ಸುತ್ತಿನಲ್ಲಿ ಬಜರಂಗ್ 3–3ರಿಂದ ಕಿರ್ಗಿಸ್ತಾನದ ಎಮಾಜರ್ ಅಕಮಟಾಲಿವ್ ವಿರುದ್ಧ ತಾಂತ್ರಿಕ ಉತ್ಕೃಷ್ಠತೆಯ ಆಧಾರದಲ್ಲಿ ಗೆದ್ದರು. ಕ್ವಾರ್ಟರ್‌ಫೈನಲ್‌ನಲ್ಲಿ ಬಜರಂಗ್ 2–1ರಿಂದ ಇರಾನ್‌ನ ಮಾಂಟೆಜಾ ಜಿಯಾಸಿ ವಿರುದ್ಧ ಫಾಲ್‌ನಲ್ಲಿ ಜಯಿಸಿದರು.

ಆದರೆ ಈ ಪಂದ್ಯಗಳಲ್ಲಿಯೂ ಅವರ ಕೌಶಲಗಳು ಉತ್ತಮವಾಗಿರಲಿಲ್ಲ. ಈಚೆಗೆ ರಷ್ಯಾದಲ್ಲಿ ನಡೆದಿದ್ದ ಟೂರ್ನಿಯಲ್ಲಿ ಅವರ ಮಂಡಿಗೆ ಪೆಟ್ಟಾಗಿತ್ತು. ಅದರ ಪರಿಣಾಮ ಇಲ್ಲಿ ಕಂಡಿತು.

ಬಜರಂಗ್ ಶನಿವಾರ ನಡೆಯಲಿರುವ ಕಂಚಿನ ಪದಕದ ಸುತ್ತಿನಲ್ಲಿ ಆಡಲಿರುವರು.

ಸೀಮಾಗೆ ಸೋಲು

ಇದೇ ಮೊದಲ ಬಾರಿಗೆ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ ಭಾರತದ ಸೀಮಾ ಬಿಸ್ಲಾ ಅವರು ಮಹಿಳೆಯರ 50 ಕೆಜಿ ಫ್ರೀಸ್ಟೈಲ್ ಕುಸ್ತಿಯ ಮೊದಲ ಸುತ್ತಿನಲ್ಲಿ ನಿರಾಶೆ ಅನುಭವಿಸಿ ಹೊರಬಿದ್ದರು.

27 ವರ್ಷದ ಸೀಮಾ 1–3ರಿಂದ ಟುನಿಶಿಯಾದ ಸರಾ ಹಮ್ದಿ ವಿರುದ್ಧ ಸೋತರು.

ರೋಹ್ಟಕ್‌ನ ಸೀಮಾ 2017ರವರೆಗೆ ಒಂದು ಬಾರಿಯೂ ರಾಷ್ಟ್ರೀಯ ಕುಸ್ತಿಯಲ್ಲಿ ಜಯಿಸಿರಲಿಲ್ಲ. ಆದರೆ ಹೋದ ಮೇ ತಿಂಗಳಲ್ಲಿ ಸೋಫಿಯಾದಲ್ಲಿ ನಡೆದಿದ್ದ ವಿಶ್ವ ಒಲಿಂಪಿಕ್ ಕ್ವಾಲಿಫೈಯರ್‌ನಲ್ಲಿ ಆಡಿದ್ದ ಅವರು ಟೋಕಿಯೊ ಟಿಕೆಟ್ ಗಳಿಸಿದ್ದರು.



ಭಾರತದ ಬಜರಂಗ್ ಪುನಿಯಾ (ನೀಲಿ ಪೋಷಾಕು) ಮತ್ತು ಅಜರ್‌ಬೈಜಾನ್‌ನ ಹಾಕಿ ಅಲೀವ್ ಪೈಪೋಟಿಯ ಕ್ಷಣ –ಪಿಟಿಐ ಚಿತ್ರ

ಜಾದೂ ಮಾಡಿದ ಜಪಾನ್

ಸಾಯ್‌ತಮಾ (ರಾಯಿಟರ್ಸ್): ಜಪಾನ್ ಮಹಿಳಾ ತಂಡದವರು ಒಲಿಂಪಿಕ್ಸ್‌ನ ಬ್ಯಾಸ್ಕೆಟ್‌ಬಾಲ್ ಸ್ಪರ್ಧೆಯಲ್ಲಿ ಚೊಚ್ಚಲ ಬಾರಿಗೆ ಫೈನಲ್ ಪ್ರವೇಶಿಸಿದ್ದಾರೆ.

ಶುಕ್ರವಾರ ನಡೆದ ಫೈನಲ್ ಹಣಾಹಣಿಯಲ್ಲಿ ಜಪಾನ್ 87–71 ಪಾಯಿಂಟ್ಸ್‌ನಿಂದ ಫ್ರಾನ್ಸ್ ತಂಡವನ್ನು ಪರಾಭವಗೊಳಿಸಿತು.

ಮೊದಲ ಕ್ವಾರ್ಟರ್‌ನಲ್ಲಿ 14–22ರಿಂದ ಹಿನ್ನಡೆ ಕಂಡಿದ್ದ ಜಪಾನ್ ಆಟಗಾರ್ತಿಯರು ಎರಡು ಮತ್ತು ಮೂರನೇ ಕ್ವಾರ್ಟರ್‌ಗಳಲ್ಲಿ ಪ್ರಾಬಲ್ಯ ಮೆರೆದರು. ಅಂತಿಮ ಕ್ವಾರ್ಟರ್‌ನಲ್ಲಿ ಫ್ರಾನ್ಸ್ ತಂಡ 21 ಪಾಯಿಂಟ್ಸ್ ಕಲೆಹಾಕಿದರೂ ಗೆಲುವು ದಕ್ಕಲಿಲ್ಲ.

ಭಾನುವಾರ ನಡೆಯುವ ಫೈನಲ್ ಪೈಪೋಟಿಯಲ್ಲಿ ಜಪಾನ್ ತಂಡಕ್ಕ ಬಲಿಷ್ಠ ಅಮೆರಿಕ ಸವಾಲು ಎದುರಾಗಲಿದೆ. ನಾಲ್ಕರ ಘಟ್ಟದ ಮತ್ತೊಂದು ಪಂದ್ಯದಲ್ಲಿ ಅಮೆರಿಕ 79–59 ಪಾಯಿಂಟ್ಸ್‌ನಿಂದ ಸರ್ಬಿಯಾ ತಂಡವನ್ನು ಸೋಲಿಸಿತು. ಇದರೊಂದಿಗೆ ಸತತ ಏಳನೇ ಬಾರಿ ಒಲಿಂಪಿಕ್ಸ್‌ನಲ್ಲಿ ಫೈನಲ್ ತಲುಪಿದ ಸಾಧನೆ ಮಾಡಿತು.



ಫ್ರಾನ್ಸ್ ತಂಡದ ಗ್ಯಾಬಿ ವಿಲಿಯಮ್ಸ್ (ಬಲ) ಮತ್ತು ಜಪಾನ್‌ನ ಯೂಕಿ ಮಿಯಾಜಾವಾ ಪೈಪೋಟಿಯ ಕ್ಷಣ–ರಾಯಿಟರ್ಸ್ ಚಿತ್ರ

ಪೆನಾಲ್ಟಿ ಶೂಟೌಟ್‌ನಲ್ಲಿ ಮೋಡಿ ಮಾಡಿದ ಆಟಗಾರ್ತಿಯರು: ಸ್ವೀಡನ್‌ಗೆ ನಿರಾಸೆ

ಮಹಿಳಾ ಫುಟ್‌ಬಾಲ್‌ನಲ್ಲಿ ಕೆನಡಾ ‘ಚಿನ್ನ’

ಯೊಕೊಹಾಮ (ರಾಯಿಟರ್ಸ್/ಎಎಫ್‌ಪಿ): ಕೆನಡಾ ಮಹಿಳಾ ತಂಡದವರು ಒಲಿಂಪಿಕ್ಸ್ ಫುಟ್‌ಬಾಲ್‌ನಲ್ಲಿ ಚಿನ್ನದ ಪದಕ ಗೆದ್ದು ಸಂಭ್ರಮಿಸಿದರು.

ರೋಚಕತೆ ಕಂಡುಬಂದ ಫೈನಲ್ ಹಣಾಹಣಿಯಲ್ಲಿ ಕೆನಡಾ ವನಿತೆಯರು ಸ್ವೀಡನ್ ಸವಾಲು ಮೀರಿದರು.

ನಿಗದಿತ ಅವಧಿಯಲ್ಲಿ ಉಭಯ ತಂಡಗಳು 1–1 ಗೋಲುಗಳಿಂದ ಸಮಬಲ ಸಾಧಿಸಿದ್ದವು. ಹೀಗಾಗಿ ವಿಜೇತರನ್ನು ನಿರ್ಣಯಿಸಲು ಪೆನಾಲ್ಟಿ ಶೂಟೌಟ್ ಮೊರೆ ಹೋಗಲಾಯಿತು. ಈ ಅವಕಾಶದಲ್ಲಿ ಕೆನಡಾ ಆಟಗಾರ್ತಿಯರು ಮೋಡಿ ಮಾಡಿದರು. ಈ ತಂಡ ಮೂರು ಬಾರಿ ಚೆಂಡನ್ನು ಗುರಿ ಸೇರಿಸಿತು. ಸ್ವೀಡನ್ ತಂಡದ ಆಟಗಾರ್ತಿಯರು ಎರಡು ಬಾರಿ ಗೋಲು ದಾಖಲಿಸಿದರು.

ಕೆನಡಾ ತಂಡದ ಗೋಲ್‌ಕೀಪರ್ ಸ್ಟೆಫಾನಿ ಲಾಬೆ ಎದುರಾಳಿಗಳ ಎರಡು ಸ್ಪಾಟ್‌ಕಿಕ್ ಪ್ರಯತ್ನಕ್ಕೆ ಅಡ್ಡಿಯಾದರು. ಆ ಮೂಲಕ ತಂಡದ ಗೆಲುವಿನಲ್ಲಿ ನಿರ್ಣಾಯಕ ಪಾತ್ರವನ್ನೂ ನಿಭಾಯಿಸಿದರು.

ಒಲಿಂಪಿಕ್ಸ್ ಫುಟ್‌ಬಾಲ್‌ನಲ್ಲಿ ಕೆನಡಾ ಜಯಿಸಿದ ಮೊದಲ ಚಿನ್ನ ಇದು. ಹೀಗಾಗಿ ಪಂದ್ಯ ಗೆದ್ದ ಕೂಡಲೇ ಆಟಗಾರ್ತಿಯರು ಖುಷಿಯ ಕಡಲಲ್ಲಿ ತೇಲಿದರು. ಪರಸ್ಪರರನ್ನು ಅಪ್ಪಿಕೊಂಡು ನಲಿದಾಡಿದರು. ಒಬ್ಬರ ಮೇಲೊಬ್ಬರು ಬಿದ್ದು ಹೊರಳಾಡಿದರು. ವಿಜಯ ವೇದಿಕೆಯಲ್ಲೂ ಸಂಭ್ರಮ ಮೇಳೈಸಿತ್ತು.

ಹಿಂದಿನ ಎರಡು ಒಲಿಂಪಿಕ್ಸ್‌ಗಳಲ್ಲಿ ಈ ತಂಡವು ಕಂಚಿನ ಪದಕ ಜಯಿಸಿದ ಸಾಧನೆ ಮಾಡಿತ್ತು.



ಕೆನಡಾ ಆಟಗಾರ್ತಿಯರ ಸಂಭ್ರಮ –ಎಎಫ್‌ಪಿ ಚಿತ್ರ

ಈ ಪಂದ್ಯದಲ್ಲಿ ಗೆಲ್ಲುವ ನೆಚ್ಚಿನ ತಂಡ ಎಂಬ ಹಣೆಪಟ್ಟಿಯೊಂದಿಗೆ ಅಂಗಳಕ್ಕಿಳಿದಿದ್ದ ಸ್ವೀಡನ್, ಆರಂಭದಿಂದಲೇ ಆಕ್ರಮಣಕಾರಿಯಾಗಿ ಆಡಿತು. 34ನೇ ನಿಮಿಷದಲ್ಲಿ ಈ ತಂಡದ ಸ್ಟಿನಾ ಬ್ಲಾಕ್‌ಸ್ಟಿನಿಯಸ್ ಕಾಲ್ಚಳಕ ತೋರಿದರು. ದ್ವಿತೀಯಾರ್ಧದಲ್ಲಿ ಕೆನಡಾ ತಂಡ ತಿರುಗೇಟು ನೀಡಿತು. 67ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಅವಕಾಶದಲ್ಲಿ ಜೆಸ್ಸಿ ಫ್ಲೆಮಿಂಗ್ ಚೆಂಡನ್ನು ಗುರಿ ಮುಟ್ಟಿಸಿ 1-1 ಸಮಬಲಕ್ಕೆ ಕಾರಣರಾದರು.

ಬಳಿಕ ಸ್ವೀಡನ್ ಆಟಗಾರ್ತಿಯರು ಆಟದ ಎಲ್ಲಾ ವಿಭಾಗಗಳಲ್ಲೂ ಪ್ರಾಬಲ್ಯ ಮೆರೆದರು. ಹೀಗಿದ್ದರೂ ಈ ತಂಡಕ್ಕೆ ಗೆಲುವಿನ ಗೋಲು ಗಳಿಸಲು ಆಗಲಿಲ್ಲ.

ಕಂಚಿನ ಪದಕ ಅಮೆರಿಕ ಪಾಲಾಗಿತ್ತು. ಗುರುವಾರ ನಡೆದಿದ್ದ ಪಂದ್ಯದಲ್ಲಿ ಈ ತಂಡದವರು ಆಸ್ಟ್ರೇಲಿಯಾವನ್ನು ಮಣಿಸಿದ್ದರು.

ಕ್ರಿಕೆಟ್: ಒಲಿ ರಾಬಿನ್ಸನ್‌ಗೆ ಐದು ವಿಕೆಟ್; ಆ್ಯಂಡರ್ಸನ್ ಬಿರುಗಾಳಿ; ಭಾರತಕ್ಕೆ ಮುನ್ನಡೆ

ಮಿಂಚಿದ ರಾಹುಲ್–ಜಡೇಜ

ನಾಟಿಂಗ್‌ಹ್ಯಾಮ್ (ಪಿಟಿಐ): ಎರಡು ವರ್ಷಗಳ ನಂತರ ಟೆಸ್ಟ್ ಪಂದ್ಯದಲ್ಲಿ ಆಡುತ್ತಿರುವ ಕನ್ನಡಿಗ ಕೆ.ಎಲ್. ರಾಹುಲ್ ಮತ್ತು ಎಡಗೈ ಆಲ್‌ರೌಂಡರ್ ರವೀಂದ್ರ ಜಡೇಜ ತಮ್ಮ ಆಯ್ಕೆಯನ್ನು ಸಮರ್ಥಿಸಿಕೊಂಡರು.

ಇವರಿಬ್ಬರ ಅಮೋಘ ಬ್ಯಾಟಿಂಗ್ ಬಲದಿಂದ ಭಾರತ ತಂಡವು ಶುಕ್ರವಾರ ಇಂಗ್ಲೆಂಡ್ ವಿರುದ್ಧದ ಎರಡನೇ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ 95 ರನ್‌ಗಳ ಮುನ್ನಡೆ ಸಾಧಿಸಿತು.

ಮೂರನೇ ದಿನದಾಟದಲ್ಲಿ ರಾಹುಲ್ (84; 214 ಎಸೆತ) ತಾಳ್ಮೆಯ ಆಟ ಮತ್ತು ಜಡೇಜ (56; 86ಎಸೆತ) ಅವರ ಮಿಂಚಿನ ಬ್ಯಾಟಿಂಗ್‌ನಿಂದಾಗಿ ಭಾರತ ತಂಡವು 84.5 ಓವರ್‌ಗಳಲ್ಲಿ 278 ರನ್ ಗಳಿಸಿತು. ಎರಡನೇ ಇನಿಂಗ್ಸ್ ಆರಂಭಿಸಿರುವ ಇಂಗ್ಲೆಂಡ್ ದಿನದಾಟದ ಅಂತ್ಯಕ್ಕೆ 11 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 25 ರನ್ ಗಳಿಸಿದೆ.

ಮೊದಲ ದಿನದಾಟದಲ್ಲಿ ಇಂಗ್ಲೆಂಡ್ ತಂಡವು 183 ರನ್ ಗಳಿಸಿತ್ತು. ಎರಡನೇ ದಿನವಾದ ಗುರುವಾರ ಜೇಮ್ಸ್ ಆ್ಯಂಡರ್ಸನ್ ಬೌಲಿಂಗ್‌ಗೆ ತತ್ತರಿಸುವ ಹಾದಿಯಲ್ಲಿದ್ದ ವಿರಾಟ್ ಕೊಹ್ಲಿ ಬಳಗವನ್ನು ಮಳೆರಾಯ ಪಾರು ಮಾಡಿದ್ದ.

ಅರ್ಧಶತಕ ಗಳಿಸಿ ಕ್ರೀಸ್‌ನಲ್ಲಿ ಉಳಿದಿದ್ದ ರಾಹುಲ್ ಮತ್ತು ಪಂತ್ ಶುಕ್ರವಾರ ತಾಳ್ಮೆಯಿಂದ ಇನಿಂಗ್ಸ್ ಕಟ್ಟುವ ಪ್ರಯತ್ನ ಮಾಡಿದರು. ಆದರೆ ಪಂತ್ ವಿಕೆಟ್ ಕಬಳಿಸಿದ ಒಲಿ ರಾಬಿನ್ಸನ್ ಜೊತೆಯಾಟ ಮುರಿದರು.

ಈ ಹಂತದಲ್ಲಿ ಕ್ರೀಸ್‌ಗೆ ಬಂದ ಜಡೇಜ ಅವರು ರಾಹುಲ್ ಜೊತೆಗೆ ಆರನೇ ವಿಕೆಟ್ ಜೊತೆಯಾಟದಲ್ಲಿ 60 ರನ್‌ಗಳನ್ನು ಸೇರಿಸಿದರು. ಆ್ಯಂಡರ್ಸನ್, ರಾಬಿನ್ಸನ್, ಸ್ಟುವರ್ಟ್ ಬ್ರಾಡ್ ಮತ್ತು ಸ್ಯಾಮ್ ಕರನ್ ಅವರ ದಾಳಿಯನ್ನು ದಿಟ್ಟತನದಿಂದ ಎದುರಿಸಿದರು.

ಶತಕ ಗಳಿಸುವ ನಿರೀಕ್ಷೆ ಮೂಡಿಸಿದ್ದ ರಾಹುಲ್ 69ನೇ ಓವರ್‌ನಲ್ಲಿ ಎಡವಿದರು. ಆ್ಯಂಡರ್ಸನ್ ಎಸೆತ ವನ್ನು ಆಡುವ ಭರದಲ್ಲಿ ಜೋಸ್ ಬಟ್ಲರ್‌ಗೆ ಕ್ಯಾಚಿತ್ತರು. ಜೊತೆಯಾಟ ಮುರಿದುಬಿತ್ತು. ನಂತರದ ಓವರ್‌ನಲ್ಲಿ ಶಾರ್ದೂಲ್ ಠಾಕೂರ್ ಕೂಡ ಔಟಾದರು. ಜಡೇಜ ಸ್ವಲ್ಪ ಹೊತ್ತು ಹೋರಾಟ ಮಾಡಿದರು. ಅರ್ಧಶತಕ ಗಳಿಸಿದ್ದ ಅವರು ರಾಬಿನ್ಸನ್ ಎಸೆತದಲ್ಲಿ ಔಟಾದರು.ಆದರೆ ಕೊನೆಯ ಹಂತದಲ್ಲಿ ಮೊಹಮ್ಮದ್ ಶಮಿ ಮತ್ತು ಜಸ್‌ಪ್ರೀತ್ ಬೂಮ್ರಾ ಮಿಂಚಿದರು. ಮೊದಲ ದಿನ ಬೌಲಿಂಗ್‌ನಲ್ಲಿ ಮಿಂಚಿದ್ದ ಇವರಿಬ್ಬರೂ ಬ್ಯಾಟಿಂಗ್‌ನಲ್ಲಿಯೂ ತಮ್ಮ ಸಾಮರ್ಥ್ಯ ತೋರಿದರು.

ಶಮಿ 13 ಮತ್ತು ಬೂಮ್ರಾ 28 ರನ್ ಗಳಿಸಿ, ತಂಡದ ಮುನ್ನಡೆಯ ಅಂತರ ಹೆಚ್ಚುವಂತೆ ಮಾಡಿದರು.

ಇಂಗ್ಲೆಂಡ್‌ನ ರಾಬಿನ್ಸನ್ ಐದು ವಿಕೆಟ್ ಗೊಂಚಲು ಗಳಿಸಿದರು. ಆ್ಯಂಡರ್ಸನ್ ನಾಲ್ಕು ವಿಕೆಟ್ ಗಳಿಸಿದರು.


ರವೀಂದ್ರ ಜಡೇಜ ಬ್ಯಾಟಿಂಗ್

ಸ್ಕೋರ್ ಕಾರ್ಡ್

ಇಂಗ್ಲೆಂಡ್ (ಮೊದಲ ಇನಿಂಗ್ಸ್) 183 (65.4 ಓವರ್)

ಭಾರತ (ಮೊದಲ ಇನಿಂಗ್ಸ್) 278 (84.5 ಓವರ್)

(ಗುರುವಾರ (46.4 ಓವರ್‌ಗಳಲ್ಲಿ 4 ವಿಕೆಟ್‌ಗೆ 125)

ರಾಹುಲ್ ಸಿ ಬಟ್ಲರ್ ಬಿ ಆ್ಯಂಡರ್ಸನ್ 84 (214ಎ, 4X12), ರಿಷಭ್ ಸಿ ಬೆಸ್ಟೊ ಬಿ ರಾಬಿನ್ಸನ್ 25(20ಎ, 4X3, 6X1), ಜಡೇಜ ಸಿ ಬ್ರಾಡ್ ಬಿ ರಾಬಿನ್ಸನ್ 56 (86ಎ, 4X8, 6X1), ಶಾರ್ದೂಲ್ ಸಿ ರೂಟ್ ಬಿ ಆ್ಯಂಡರ್ಸನ್ 0 (6ಎ), ಶಮಿ ಬಿ ರಾಬಿನ್ಸನ್ 13 (20ಎ), ಬೂಮ್ರಾ ಸಿ ಬ್ರಾಡ್ ಬಿ ರಾಬಿನ್ಸನ್ 28 (34ಎ, 4X3, 6X1), ಸಿರಾಜ್ ಔಟಾಗದೆ 7 (8ಎ, 4X1)

ಇತರೆ (ಬೈ 6, ಲೆಗ್‌ಬೈ 6, ನೋಬಾಲ್ 8) 20

ವಿಕೆಟ್ ಪತನ: 5–145 (ರಿಷಭ್ ಪಂತ್, 49.6), 6–205 (ಕೆ.ಎಲ್.ರಾಹುಲ್, 68.5), 7–205 (ಶಾರ್ದೂಲ್ ಠಾಕೂರ್, 70.5), 8–232 (ರವೀಂದ್ರ ಜಡೇಜ, 74.6), 9–245 (ಮೊಹಮ್ಮದ್ ಶಮಿ, 80.3), 10–278 (ಜಸ್‌ಪ್ರೀತ್ ಬೂಮ್ರಾ, 84.5)

ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 23–8–54–4, ಸ್ಟುವರ್ಟ್ ಬ್ರಾಡ್ 20–3–70–0, ಒಲಿ ರಾಬಿನ್ಸನ್ 26.5–6–85–5, ಸ್ಯಾಮ್ ಕರನ್ 15–2–57–0

ಇಂಗ್ಲೆಂಡ್ (ಎರಡನೇ ಇನಿಂಗ್ಸ್) ವಿಕೆಟ್ ನಷ್ಟವಿಲ್ಲದೆ 25 (11.1 ಓವರ್)

ಸಿಬ್ಲಿ ಬ್ಯಾಟಿಂಗ್ 9 (33ಎ, 4X2)
ರೋರಿ ಬ್ಯಾಟಿಂಗ್ 11 (38ಎ, 4X2)

ಇತರೆ (ನೋಬಾಲ್ 4, ವೈಡ್ 1) 5

ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 3–0–6–0, ಮೊಹಮ್ಮದ್ ಸಿರಾಜ್ 5.1–2–10–0, ಮೊಹಮ್ಮದ್ ಶಮಿ 3–1–9–0


ಇಂಗ್ಲೆಂಡ್‌ನ ಒಲಿ ರಾಬಿನ್ಸನ್

ಸಾಧನೆಗೆ ಆತ್ಮವಿಶ್ವಾಸವೊಂದೇ ಬಲ

ಟೋಕಿಯೊದಲ್ಲಿ ನಡೆಯುತ್ತಿರುವ ಒಲಿಂಪಿಕ್ಸ್‌ನಲ್ಲಿ ಮಹಿಳಾ ಕ್ರೀಡಾಪಟುಗಳೇ ಹೆಚ್ಚಿನ ಸಂಖ್ಯೆಯಲ್ಲಿ ಪದಕಗಳನ್ನು ಜಯಿಸಿದ್ದಾರೆ. ಒಲಿಂಪಿಕ್ಸ್ ಮತ್ತು ಭಾರತೀಯ ಮಹಿಳಾ ಕ್ರೀಡಾಪಟುಗಳ ಮುಂದಿರುವ ಸವಾಲುಗಳು ಹಾಗೂ ಅವಕಾಶಗಳ ಬಗ್ಗೆ ಶುಕ್ರವಾರ 'ಪ್ರಜಾವಾಣಿ' ಹಮ್ಮಿಕೊಂಡಿದ್ದ ಸಂವಾದದಲ್ಲಿ ಪ್ಯಾರಾಲಿಂಪಿಯನ್ ಮಾಲತಿ ಹೊಳ್ಳ, ಒಲಿಂಪಿಯನ್ ಅಥ್ಲೀಟ್‌ಗಳಾದ ಜೆ. ಜೆ. ಶೋಭಾ ಮತ್ತು ಎಂ.ಆರ್. ಪೂವಮ್ಮ ಅವರು ಹಂಚಿಕೊಂಡ ಅಭಿಪ್ರಾಯಗಳ ಸಂಕ್ಷಿಪ್ತ ವಿವರ ಇಲ್ಲಿದೆ.

ಪ್ರಜಾವಾಣಿ ಸಂವಾದ

ಸೋಲು ಗೆಲುವಿಗೆ ಮೆಟ್ಟಿಲಾಗಲಿ



ಕುಂದಗೋಳ ತಾಲ್ಲೂಕಿನ ಪಶುಪತಿಹಾಳ ಎಂಬ ಪುಟ್ಟ ಗ್ರಾಮದಿಂದ ನಗರ ಪ್ರದೇಶಕ್ಕೆ ಹೋದಾಗಲೇ ಅಥ್ಲೆಟಿಕ್ ಟ್ರ್ಯಾಕ್ ಹೇಗಿರುತ್ತದೆ ಎನ್ನುವುದನ್ನು ಮೊದಲ ಬಾರಿಗೆ ನೋಡಿದ್ದೆ. ಅಲ್ಲಿ ಕಲಿತ ಪಾಠ ನನ್ನ ಕ್ರೀಡಾ ಬದುಕನ್ನು ರೂಪಿಸಿದೆ.

ಭಾರತದಲ್ಲಿ ಕ್ರಿಕೆಟ್‌ಗೆ ಸಿಕ್ಕಷ್ಟು ಸ್ಥಾನಮಾನ, ಗೌರವ ಬೇರೆ ಯಾವ ಕ್ರೀಡೆಗಳಿಗೂ ಸಿಗುತ್ತಿಲ್ಲ. ಹೀಗಾಗಿ ಒಲಿಂಪಿಕ್ಸ್‌ನ ಅಥ್ಲೆಟಿಕ್ಸ್‌ನಲ್ಲಿ ನಮಗೆ ಈಗ ಪದಕ ಗೆಲ್ಲಲು ಸಾಧ್ಯವಾಗುತ್ತಿಲ್ಲ. ವಿದೇಶದಲ್ಲಿ ಇರುವಷ್ಟು ಸೌಲಭ್ಯಗಳು ಆಗ ನಮಗೆ ಸಿಗುತ್ತಿರಲಿಲ್ಲ. ಈಗ ಸಾಕಷ್ಟು ಅನುಕೂಲಗಳಿವೆ. ತರಬೇತಿ ವಿಧಾನ, ಸಿಬ್ಬಂದಿ, ತಾಂತ್ರಿಕ ಕೌಶಲ ಸಾಕಷ್ಟು ಸುಧಾರಣೆಯಾಗಿವೆ. ಇನ್ನೂ ಬಹಳಷ್ಟು ಬದಲಾಗಬೇಕಿದೆ.ಕ್ರೀಡಾಪಟುಗಳಿಗೆ ಆತ್ಮಶಕ್ತಿ ಬಹಳ ಮುಖ್ಯ. ಭಾರತದಲ್ಲಿ ಅತ್ಯುತ್ತಮ ಅಥ್ಲೀಟ್‌ಗಳಿದ್ದಾ- ರೆ. ಒಂದೆರೆಡು ಟೂರ್ನಿಗಳಲ್ಲಿ ಸೋತರೆ ಆತ್ಮವಿಶ್ವಾಸವನ್ನೇ ಕಳೆದುಕೊಳ್ಳುತ್ತಾರೆ. ಸೋಲನ್ನೇ ಗೆಲುವಿನ ಮೆಟ್ಟಿಲಾಗಿ ಮಾಡಿಕೊಳ್ಳಬೇಕು.

ಶೋಭಾ ಜೆ ಜಾವೂರ್, ಒಲಿಂಪಿಯನ್

ಆತ್ಮವಿಶ್ವಾಸ ನಾವೇ ಗಳಿಸಿಕೊಳ್ಳಬೇಕು



ಕ್ರೀಡೆಯಲ್ಲಿ ದೊಡ್ಡ ಸಾಧನೆಯ ಕನಸು ಕಂಡವರು ದೇಹ ದಂಡಿಸಲು ಸಿದ್ಧರಾಗಿರಬೇಕು. ದೇಹ ದಂಡಿಸಿದಷ್ಟೂ ಮನಸ್ಸು ಬಲಿಷ್ಠವಾಗುತ್ತದೆ. ಸಾಧನೆಯ ಹುಮ್ಮಸ್ಸು ಮೂಡುತ್ತದೆ. ನಾನು ಸ್ಪರ್ಧೆಯಲ್ಲಿ ಪಾಲ್ಗೊಳ್ಳುತ್ತಿದ್ದ ದಿನಗಳಲ್ಲಿ ಈಗಿನಷ್ಟು ಸೌಲಭ್ಯಗಳು ಇರಲಿಲ್ಲ. ಈಗಿನ ಕ್ರೀಡಾಪಟುಗಳಿಗೆ ಸಾಕಷ್ಟು ಸ್ಪರ್ಧೆಗಳು ಮತ್ತು ವೇದಿಕೆಗಳಿವೆ. ಒಂದು ಟೂರ್ನಿಯಲ್ಲಿ ಗೆದ್ದರೂ ನಗದು ಬಹುಮಾನ ಸಿಗುತ್ತದೆ. ಮೊದಲಾದರೆ ಅವರಿವರ ಬಳಿ ಸಾಲ ಮಾಡಿ ಸ್ಪರ್ಧೆಗಳಿಗೆ ಹೋಗಬೇಕಾದ ಪರಿಸ್ಥಿತಿಯಿತ್ತು. ಈಗ ಹಾಗಿಲ್ಲ.

ಆದರೆ, ಈಗಿನ ನಮ್ಮ ಕ್ರೀಡಾಪಟುಗಳಲ್ಲಿ ಆತ್ಮವಿಶ್ವಾಸದ ಕೊರತೆ ಕಾಡುತ್ತಿದೆ. ಆತ್ಮವಿಶ್ವಾಸವನ್ನು ಯಾರೂ ತಂದುಕೊಡುವುದಿಲ್ಲ. ಅದನ್ನು ನಾವೇ ಗಳಿಸಿಕೊಳ್ಳಬೇಕು. ಸರ್ಕಾರ ಕೊಟ್ಟ ನೆರವು ಸದುಪಯೋಗ ಪಡಿಸಿಕೊಳ್ಳಬೇಕು. ನೀವೇನು ಮಾಡುತ್ತೀರಿ ಎಂದು ಟೀಕಿಸುವವರಿಗೆ ಸಾಧನೆಯ ಮೂಲಕ ಉತ್ತರ ಕೊಡಬೇಕು.

ಮಾಲತಿ ಹೊಳ್ಳ, ಪ್ಯಾರಾಲಿಂಪಿಯನ್

ಸೋತರೆ ಯಾರೂ ಬರುವುದಿಲ್ಲ



ಅನೇಕ ಸಮಸ್ಯೆಗಳು ಹಾಗೂ ಸವಾಲುಗಳು ನಡುವೆ ಕ್ರೀಡಾಪಟುಗಳು ಉತ್ತಮ ಸಾಧನೆ ಮಾಡುತ್ತಾರೆ. ಆಗ ಎಲ್ಲರೂ ಜೊತೆಗಿರುತ್ತಾರೆ. ಒಮ್ಮೆ ಸೋತರೆ ಕುಟುಂಬದವರನ್ನು ಹೊರತುಪಡಿಸಿ ಯಾರೂ ನಮ್ಮ ಜೊತೆ ನಿಲ್ಲುವುದಿಲ್ಲ. ಸೋಲಿಗೆ ಕಾರಣ ತಿಳಿದುಕೊಳ್ಳುವುದಿಲ್ಲ. ಈಗ ಎಲ್ಲ ಕ್ರೀಡಾಪಟುಗಳಿಗೆ ಗ್ರಾಮೀಣ ಮಟ್ಟದಿಂದ ಅಂತರರಾಷ್ಟ್ರೀಯ ಮಟ್ಟದ ತನಕ ಅನೇಕ ಟೂರ್ನಿಗಳಿವೆ. ಭಾರತದಲ್ಲಿ ಎಲ್ಲಿಯೇ ಸ್ಪರ್ಧೆಗಳು ನಡೆದರೂ ನಾವು ಮುಂಚೂಣಿಯಲ್ಲಿರುತ್ತೇವೆ. ಆದರೆ, ವಿದೇಶಿ ಸ್ಪರ್ಧಿಗಳ ಸವಾಲು ಎದುರಿಸಲು ಪರದಾಡುತ್ತೇವೆ. ಆದ್ದರಿಂದ ವಿದೇಶಿಗರ ಜೊತೆ ಹೆಚ್ಚು ಪಂದ್ಯಗಳನ್ನು ಆಡಬೇಕು. ಉತ್ತಮ ಸಾಧನೆ ತೋರುವ ಕ್ರೀಡಾಪಟುಗಳಿಗೆ ಪ್ರಾಯೋಜಕರೂ ಸಿಗುತ್ತಾರೆ. ಆದರೆ, ಈಗಿನವರು ರಾಷ್ಟ್ರೀಯ ಮಟ್ಟದಲ್ಲಿ ಪದಕ ಗೆದ್ದರೆ ಸಾಕು ಅದೇ ದೊಡ್ಡ ಸಾಧನೆ ಎಂದು ಸಂಭ್ರಮಿಸುತ್ತಾರೆ. ಈ ಮನೋಭಾವದಿಂದ ಹೊರಬಂದು ಒಲಿಂಪಿಕ್ಸ್‌ನಂಥ ಭವ್ಯ ವೇದಿಕೆಯಲ್ಲಿ ಪದಕ ಗೆದ್ದು ದೇಶಕ್ಕೆ ಕೀರ್ತಿ ತರುವ ಹೆಗ್ಗುರಿ ಹೊಂದಬೇಕು.

ಎಂ.ಆರ್. ಪೂವಮ್ಮ, ಒಲಿಂಪಿಯನ್

ಅನಿಲ್ ಕುಂಬ್ಳೆ ಹಿಂದಿಕ್ಕಿದ ಆ್ಯಂಡರ್ಸನ್


ಜೇಮ್ಸ್ ಆ್ಯಂಡರ್ಸನ್

ನಾಟಿಂಗ್‌ಹ್ಯಾಮ್ (ಪಿಟಿಐ): ಇಂಗ್ಲೆಂಡ್ ತಂಡದ ವೇಗಿ ಜೇಮ್ಸ್ ಆ್ಯಂಡರ್ಸನ್ ಅವರು ಟೆಸ್ಟ್ ವಿಕೆಟ್ ಗಳಿಕೆಯಲ್ಲಿ ಭಾರತದ ಅನಿಲ್ ಕುಂಬ್ಳೆ ಅವರನ್ನು ಹಿಂದಿಕ್ಕಿದರು.

ಭಾರತ ತಂಡದ ಎದುರು ಸದ್ಯ ನಡೆಯುತ್ತಿರುವ ಮೊದಲ ಟೆಸ್ಟ್‌ನಲ್ಲಿ ಕೆ.ಎಲ್.ರಾಹುಲ್ ಅವರ ವಿಕೆಟ್ ಗಳಿಸಿದ ಆ್ಯಂಡರ್ಸನ್ ಈ ಸಾಧನೆ ಮಾಡಿದರು. ಇದು ಅವರಿಗೆ 620ನೇ ವಿಕೆಟ್. 84 ರನ್ ಗಳಿಸಿದ್ದ ರಾಹುಲ್, ವಿಕೆಟ್ ಕೀಪರ್ ಜೋಸ್ ಬಟ್ಲರ್‌ಗೆ ಕ್ಯಾಚ್ ನೀಡಿದರು. ಆ್ಯಂಡರ್ಸನ್ ಆಡುತ್ತಿರುವ 163ನೇ ಟೆಸ್ಟ್ ಇದು. ಲೆಗ್‌ಸ್ಪಿನ್ನರ್ ಅನಿಲ್ ಕುಂಬ್ಳೆ ಟೆಸ್ಟ್ ಕ್ರಿಕೆಟ್‌ನಲ್ಲಿ 619 ವಿಕೆಟ್‌ಗಳನ್ನು ಗಳಿಸಿದ್ದಾರೆ.

ಕರ್ನಾಟಕದ ರಾಹುಲ್ ಅವರ ವಿಕೆಟ್ ಪಡೆದು ಕನ್ನಡಿಗ ಕುಂಬ್ಳೆ ದಾಖಲೆಯನ್ನು ಆ್ಯಂಡರ್ಸನ್ ಮೀರಿ ನಿಂತಿದ್ದು ವಿಶೇಷವಾಗಿದೆ.

ಶ್ರೀಲಂಕಾದ ಮಾಜಿ ಸ್ಪಿನ್ನರ್ ಮುತ್ತಯ್ಯ ಮುರಳೀಧರನ್ (800 ವಿಕೆಟ್) ಹಾಗೂ ಆಸ್ಟ್ರೇಲಿಯಾದ ಶೇನ್ ವಾರ್ನ್ (708) ಮಾತ್ರ ಈಗ ಆ್ಯಂಡರ್ಸನ್ ಅವರಿಗಿಂತ ಮುಂದಿದ್ದಾರೆ.

ಆ್ಯಂಡರ್ಸನ್ 2003ರಲ್ಲಿ ಟೆಸ್ಟ್‌ಗೆ ಪದಾರ್ಪಣೆ ಮಾಡಿದ್ದಾರೆ.

ರೊನಾಲ್ಡೊ ಎಫ್‌ಸಿಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಜೀವ್ ಕುಮಾರ್ ಹಾಗೂ ಅಜಲ್.ವಿ ಗಳಿಸಿದ ಗೋಲುಗಳ ನೆರವಿನಿಂದ ರೊನಾಲ್ಡೊ ಎಫ್‌ಸಿ ತಂಡವು ಗೆದ್ದಿತು. ಇಲ್ಲಿ ನಡೆಯುತ್ತಿರುವ ಕೆಎಸ್‌ಎಫ್‌ಎ-ಬಿಡಿಎಫ್‌ಎ 'ಸಿ' ಡಿವಿಷನ್ ನಾಕೌಟ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಶುಕ್ರವಾರ 2–1ರಿಂದ ಒಲಿಂಪಿಯನ್ ರಾಮನ್ ತಂಡವನ್ನು ಸೋಲಿಸಿತು.

ಸಂಜೀವ್ ಕುಮಾರ್ 18 ಹಾಗೂ ಅಜಲ್ 33ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು. ಒಲಿಂಪಿಯನ್ ರಾಮನ್ ಪರ ಜಾನ್ಸನ್ (31ನೇ ನಿಮಿಷ) ಒಂದು ಗೋಲು ಹೊಡೆದರು.

ಮತ್ತೊಂದು ಪಂದ್ಯದಲ್ಲಿ ಅಲ್ ಫತೇಹ್ ಎಫ್‌ಸಿ ತಂಡವು 2–1ರಿಂದ ರಿಚಮಂಡ್ ಎಫ್‌ಸಿ ಎದುರು ಜಯಿಸಿತು. ಅಲ್ ಫತೇಹ್ ತಂಡದ ಎ.ಜೈಬ್ ಶರೀಫ್ ಎರಡನೇ ನಿಮಿಷ ಮತ್ತು ಪ್ರಜೇಶ್ ಸುಂದರ್ 30ನೇ ನಿಮಿಷದಲ್ಲಿ ಗೋಲು ದಾಖಲಿಸಿದರು. ರಿಚಮಂಡ್ ಪರ ನಮನ್ ಸೋಮಾನಿ 42ನೇ ನಿಮಿಷದಲ್ಲಿ ಗೋಲು ಹೊಡೆದರು.

ಶನಿವಾರ ಪ್ರೀಕ್ವಾರ್ಟರ್‌ಫೈನಲ್ ಪಂದ್ಯಗಳು ನಡೆಯಲಿದ್ದು, ಬ್ಲ್ಯಾಕ್ ಪ್ಯಾಂಥರ್ಸ್ ಎಫ್‌ಸಿ- ಮಹೇಶ್ ರಾಜ್ ಎಫ್‌ಸಿ, ಬೆಂಗಳೂರು ಸೂಪರ್‌ಸ್ಟ್ರೈಕರ್ ಎಫ್‌ಸಿ – ರಾಮನ್ ಸ್ಪೋರ್ಟ್ಸ್ ಅಕಾಡೆಮಿ, ಫ್ರೀಡಂ ಎಫ್‌ಸಿ-ರೂಟ್ಸ್ ಫುಟ್‌ಬಾಲ್ ಸ್ಕೂಲ್ ತಂಡಗಳು ಸೆಣಸಲಿವೆ.

ಧೋನಿ ಖಾತೆಯಿಂದ 'ಬ್ಲೂ ಟಿಕ್' ತೆಗೆದ ಟ್ವಿಟರ್ ಸಂಸ್ಥೆ


ಧೋನಿ

ನವದೆಹಲಿ: ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ ಖಾತೆಯ ವೆರಿಫೈಯ್ಡ್ ಬ್ಯಾಡ್ಜ್ ಅಥವಾ 'ಬ್ಲೂ ಟಿಕ್' ಅನ್ನು ಟ್ವಿಟರ್ ಕಂಪನಿ ತೆಗೆದು ಹಾಕಿದೆ.

ಜನವರಿ 8ರಂದು ಧೋನಿ ಕೊನೆಯ ಬಾರಿ ಟ್ವೀಟ್ ಮಾಡಿದ್ದಾರೆ. ಹಾಗಾಗಿ, ಟ್ವಿಟರ್ ಕಂಪನಿ ಬ್ಲೂ ಟಿಕ್ ತೆಗೆದುಹಾಕಿದೆ.

ಟ್ವಿಟರ್ ನಿಯಮಗಳ ಪ್ರಕಾರ, ಆರು ತಿಂಗಳ ಕಾಲ ಯಾವುದೇ ಖಾತೆ ನಿಷ್ಕ್ರಿಯವಾಗಿದ್ದರೆ ಆ ಖಾತೆಯಿಂದ 'ಬ್ಲೂ ಟಿಕ್' ತೆಗೆಯಲಾಗುತ್ತದೆ.

ಪಾಕ್: ದೇಗುಲ ಧ್ವಂಸ– ಪೊಲೀಸ್ ಇಲಾಖೆಗೆ 'ಸುಪ್ರೀಂ' ಛೀಮಾರಿ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ ಹಿಂದೂ ದೇವಾಲಯ ಧ್ವಂಸಗೊಳಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಗುಲ್ಜಾರ್ ಅಹ್ಮದ್ ಅವರು ಪೊಲೀಸ್ ಇಲಾಖೆಗೆ ಛೀಮಾರಿ ಹಾಕಿದ್ದಾರೆ. ಅಲ್ಲದೇ, ಕಿಡಿಗೇಡಿಗಳನ್ನು ಬಂಧಿಸುವಂತೆ ಆದೇಶಿಸಿದ್ದಾರೆ.

ಪಾಕಿಸ್ತಾನದ ಭೋಂಗ್ ಪಟ್ಟಣದಲ್ಲಿ ಹಿಂದೂ ದೇವಾಲಯದ ಮೇಲಿನ ದಾಳಿಗೆ ಸಂಬಂಧಿಸಿದಂತೆ ಹಿಂದೂ ಕೌನ್ಸಿಲ್‌ನ ಮುಖ್ಯಸ್ಥ ರಮೇಶ್ ಕುಮಾರ್ ಅವರೊಂದಿಗೆ ನ್ಯಾ. ಗುಲ್ಜಾರ್ ಸಭೆ ನಡೆಸಿದರು. ಬಳಿಕ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ನೋಟಿಸ್ ಜಾರಿ ಮಾಡಿದ್ದಾರೆ. ದೇವಾಲಯದ ಮೇಲೆ ದಾಳಿ ನಡೆಸಿದ ಎಲ್ಲ ಆರೋಪಿಗಳನ್ನು ಬಂಧಿಸುವಂತೆ ಪೊಲೀಸ್ ಮುಖ್ಯಸ್ಥರಿಗೆ ಸೂಚಿಸಿದ್ದಾರೆ.

ರಹೀಂ ಯಾರ್ ಖಾನ್ ಜಿಲ್ಲೆಯಲ್ಲಿರುವ ದೇವಾಲಯದ ಮೇಲೆ ಗುಂಪೊಂದು ಬುಧವಾರ ದಾಳಿ ಮಾಡಿತ್ತು. ಹಿಂದೂ ಸಮುದಾಯದ ನಾಯಕ ಮತ್ತು ಶಾಸಕ ರಮೇಶ್ ಕುಮಾರ್, ಘಟನೆಗೆ ಸಂಬಂಧಿಸಿದ ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದರು.

ಅಣುಬಾಂಬ್ ದಾಳಿಗೆ 76 ವರ್ಷ

ಟೋಕಿಯೊ (ಎಪಿ): 'ಜಾಗತಿಕ ನಾಯಕರು ಹೇಗೆ ಕೋವಿಡ್ ಪಿಡುಗಿನ ವಿರುದ್ಧ ಒಗ್ಗೂಡಿದ್ದಾರೋ ಅದೇ ರೀತಿ ಪರಮಾಣು ಶಸ್ತ್ರಾಸ್ತ್ರಗಳನ್ನು ತೆಗೆದು ಹಾಕಲು ಒಂದಾಗಬೇಕು' ಎಂದು ಹಿರೋಶಿಮಾದ ಮೇಯರ್ ಕಝುಮಿ ಮಾಟ್ಸುಯಿ ಒತ್ತಾಯಿಸಿದರು.

ಹಿರೋಶಿಮಾ ಮೇಲೆ ನಡೆದ ವಿಶ್ವದ ಮೊದಲ ಅಣುಬಾಂಬ್ ದಾಳಿಯ 76ನೇ ವರ್ಷದ ಅಂಗವಾಗಿ ಶಾಂತಿ ಸ್ಮಾರಕ ಉದ್ಯಾನದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಯುದ್ಧಗಳನ್ನು ಗೆಲ್ಲಲು ಸಿದ್ಧಗೊಳಿಸುವ ಈ ಶಸ್ತ್ರಾಸ್ತ್ರ ಅತಿ ಅಪಾಯಕಾರಿಯಾಗಿದೆ. ಎಲ್ಲಾ ರಾಷ್ಟ್ರಗಳು ಒಂದಾದರೆ, ಇದನ್ನು ನಾವು ಅಂತ್ಯಗೊಳಿಸಬಹುದು' ಎಂದರು.

ಶನಿವಾರ, 7 ಆಗಸ್ಟ್ 2021
ಪ್ರಜಾವಾಣಿ
ಪ್ರಜಾ ಪ್ಲಸ್+
ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ



ಜಿಂಜರ್ ಚಿಕನ್ ಗ್ರೀನ್ ಬೀನ್ ನೂಡಲ್ಸ್ 2

ಮನೆಯೆಂದ ಮೇಲೆ ನೀಟಾಗಿರಬೇಡವೇ!



ಎಸ್ಸೆಚ್


ಮನೆಯನ್ನು ವ್ಯವಸ್ಥಿತವಾಗಿ ಇಟ್ಟುಕೊಳ್ಳುವುದೆಂದರೆ ಅದಕ್ಕೆ ಒಂದಿಷ್ಟು ಸಮಯ ಬೇಕು; ಅಪಾರ ಶ್ರಮವೂ ಬೇಕು. ಆದರೆ ಹಾಗಂತ ಅದಕ್ಕೆ ದೊಡ್ಡ ಯೋಜನೆ ಹಾಕಿಕೊಂಡು ಅದಕ್ಕೆಂದೇ ಒಂದು ದಿನ ಮೀಸಲಿಡಬೇಕಾಗಿಲ್ಲ. ಸಮಯದ ಅಭಾವವಿರುವವರು ಸಣ್ಣಪುಟ್ಟ ಕೆಲಸಗಳನ್ನು ಆಗಾಗ ಮಾಡುತ್ತಿದ್ದರೆ ಮನೆಯನ್ನು ವ್ಯವಸ್ಥಿತವಾಗಿ ಇಟ್ಟುಕೊಳ್ಳಬಹುದು. ಇದರಿಂದ ಮನಸ್ಸಿಗೆ ತೃಪ್ತಿಯ ಭಾವವೂ ಸಿಗುತ್ತದೆ. ಇದಕ್ಕಾಗಿ ಹೆಚ್ಚು ಸಮಯವನ್ನು ವ್ಯಯಿಸಬೇಕಾಗಿಲ್ಲ.

ಮನೆಯೊಳಗೆ ಅತ್ತಿಂದಿತ್ತ ಓಡಾಡುವಾಗ ಅವಶ್ಯಕ ವಸ್ತುಗಳನ್ನು ಅವುಗಳನ್ನು ಇಟ್ಟಿರುವ ಜಾಗದಿಂದ ಎತ್ತಿಕೊಂಡು ಬಳಸುವುದು ಸಾಮಾನ್ಯ. ವಸ್ತುಗಳನ್ನು ಎತ್ತಿಕೊಳ್ಳುವುದು ಹೇಗೆ ನಿರಂತರ ಪ್ರಕ್ರಿಯೆಯೋ ಹಾಗೆಯೇ ಅವುಗಳನ್ನು ಯಥಾಸ್ಥಾನದಲ್ಲಿ ಇಡುವುದು ಕೂಡ ನಿರಂತರವಾಗಿರಬೇಕು. ಇಲ್ಲದಿದ್ದರೆ ಮನೆ ಎಂಬುದು ಅವ್ಯವಸ್ಥೆಯ ಗೂಡಾಗುತ್ತದೆ. ಇದನ್ನು ತಪ್ಪಿಸಲು ನಿತ್ಯ ಒಂದಿಷ್ಟು ಚಿಕ್ಕ ಚಿಕ್ಕ ಕೆಲಸ ಮಾಡುವುದನ್ನು ಜೀವನದ ಒಂದು ಭಾಗವಾಗಿ ಅಳವಡಿಸಿಕೊಳ್ಳಬೇಕು.

ಹಾಗಾದರೆ ಎಲ್ಲಿಂದ ಶುರು ಮಾಡಬೇಕು ಎಂಬ ಗೊಂದಲ ಹಲವರಲ್ಲಿರಬಹುದು. ಎಲ್ಲವನ್ನೂ ಪ್ರತಿನಿತ್ಯ ಮಾಡುವುದು ಕಷ್ಟವಾದರೂ ಕೆಲವನ್ನಾದರೂ ಯತ್ನಿಸಿ ನೋಡಬಹುದು.

ಮುಂಜಾನೆಯ ಮೊದಲ ಕೆಲಸ

ಮುಂಜಾನೆ ಎದ್ದ ಕೂಡಲೇ ಮಾಡುವ ಮೊದಲ ಕೆಲಸವೆಂದರೆ ಮಲಗುವ ಕೊಠಡಿಯಲ್ಲಿ ಹಾಸಿಗೆಯನ್ನು ಸರಿಪಡಿಸಿ ಇಡುವುದು. ಇದರಿಂದ ಇಡೀ ಕೊಠಡಿಯಲ್ಲಿ ಒಂದು ರೀತಿಯ ಶಿಸ್ತು, ಶಾಂತಿ ತುಂಬಿಕೊಳ್ಳುತ್ತದೆ. ಇದಕ್ಕಾಗಿ ನಿಮಗೆ ಹಿಡಿಯುವ ಸಮಯ ಅರ್ಧ ನಿಮಿಷದಿಂದ ಒಂದು ನಿಮಿಷ. ಒಂದು ದಿನ ಈ ಕೆಲಸಕ್ಕೆ ಕೈ ಹಾಕಿ. ಮರುದಿನ ನೀವು ಎಷ್ಟೇ ಅವಸರದಲ್ಲಿ ಇದ್ದರೂ ಹಾಸಿಗೆಯನ್ನು ಸರಿಪಡಿಸಿದ ಮೇಲೇ ಮುಂದಿನ ಕೆಲಸಕ್ಕೆ ಅಣಿಯಾಗುತ್ತೀರಿ. ಇದಕ್ಕಾಗಿ ಒಂದಿಷ್ಟು ಏಕಾಗ್ರತೆ ಕೂಡ ಅಗತ್ಯ. ಅಂದರೆ ನೀವು ಹೊದಿಕೆಯನ್ನು ಮಡಿಚಿಡುವ, ಹಾಸನ್ನು ಕೊಡವಿ ಹಾಕುವ, ದಿಂಬನ್ನು ಸವರಿ ಸರಿಯಾಗಿಡುವ ಕ್ರಿಯೆಯ ಮೇಲೆ ಗಮನ ಇಡಬೇಕಾಗುತ್ತದೆ.



ಇದರಿಂದ ನೀವು ಮಾಡುವ ಕೆಲಸದ ಮೇಲೆ ಮನಸ್ಸನ್ನು ಕೇಂದ್ರೀಕರಿಸಿ ಮುಂಜಾನೆಯೇ ಆ ಕೆಲಸವನ್ನು ಆಸ್ವಾದಿಸುವ ರೂಢಿ ಬೆಳೆಸಿಕೊಳ್ಳುತ್ತೀರಿ. ರಾತ್ರಿ ನಿದ್ರೆಯ ಒತ್ತಡದಲ್ಲಿದ್ದರೂ ಆರಾಮವಾಗಿ ಮೇಲಿರುವ ಹೊದಿಕೆಯನ್ನು ತೆಗೆದು ತೂರಿಕೊಂಡರೆ ಸಾಕು, ಯಾವ ಕಿರಿಕಿರಿ ಇಲ್ಲದೇ ಕೆಲಸ ಸುಲಭವಾಗಿಬಿಡುತ್ತದೆ.

ಸ್ನಾನದ ಕೊಠಡಿಯಲ್ಲೂ ಅಷ್ಟೆ, ಸ್ನಾನದ ನಂತರ ಅಲ್ಲಿರುವ ಸೋಪ್, ಫೇಸ್‌ವಾಷ್, ಬ್ರಷ್ ಮೊದಲಾದವುಗಳನ್ನು ಅದಕ್ಕಾಗಿ ಇಟ್ಟಿರುವ ಜಾಗದಲ್ಲೇ ಇಡಿ. ಕೊಳೆ ಬಟ್ಟೆಗಳನ್ನು ಲಾಂಡ್ರಿ ಬ್ಯಾಗ್‌ನಲ್ಲಿ ಹಾಕಿ, ವಾರದ ಕೊನೆಗೆ ವಾಷಿಂಗ್ ಮಷೀನ್‌ನಲ್ಲಿ ತೊಳೆಯಬಹುದು. ಟವೆಲ್ ಅನ್ನು ರಾಡ್ ಮೇಲೆ ಹರಡಿ. ನೀರು ಹೊರಹೋಗುವ ಜಾಗದಲ್ಲಿ ಕೂದಲು ಕಟ್ಟಿಕೊಂಡರೆ ತೆಗೆದು ಹಾಕಿ. ಸಿಂಕ್ ಮೇಲೆ ಬೇರೆ ಯಾವುದೇ ವಸ್ತು ಇರದಂತೆ ನೋಡಿಕೊಳ್ಳಿ. ಗೋಡೆಯ ಮೇಲೆ ಸೋಪ್ ನೀರು ಬಿದ್ದರೆ ತಕ್ಷಣ ತೊಳೆದುಬಿಡಿ. ಇದಕ್ಕಾಗಿ ನಿಮಗೆ ಬೇಕಾದ ಸಮಯ 1–2 ನಿಮಿಷ.

ಮನೆಯಲ್ಲಿ ಮಕ್ಕಳಿದ್ದರೆ ಅವರ ಆಟಿಕೆಗಳನ್ನು ಒಂದು ಕಡೆ ತುಂಬಿಡಿ. ಇದಕ್ಕಾಗಿ 3–4 ವರ್ಷ ವಯಸ್ಸಿನ ಮಕ್ಕಳ ನೆರವನ್ನೂ ಪಡೆಯಬಹುದು. ಈ ಶಿಸ್ತನ್ನು ಮುಂದೆ ಅವರೂ ಬೆಳೆಸಿಕೊಳ್ಳುತ್ತಾರೆ. ಬಟ್ಟೆಯನ್ನು ಕುರ್ಚಿ, ಮೇಜು, ನೆಲದ ಮೇಲೆ ಹರಡುವುದಕ್ಕಿಂತ ತೊಳೆದ ಉಡುಪುಗಳನ್ನು ಮಡಚಿ ಕಪಾಟಿನಲ್ಲಿ ಜೋಡಿಸಿ. ಕೊಳೆ ಬಟ್ಟೆಯನ್ನೂ ಅಷ್ಟೆ, ಲಾಂಡ್ರಿಬ್ಯಾಗ್ ತುಂಬಿ ತುಳುಕುವವರೆಗೆ ಕಾಯದೆ ಎಷ್ಟು ಸಾಧ್ಯವೋ ಅಷ್ಟು ಬಟ್ಟೆಗಳನ್ನು ತೊಳೆದು ಹಾಕಿ.

ಮೇಜು, ಡೈನಿಂಗ್ ಟೇಬಲ್ ಅಥವಾ ಕಿಟಕಿ ಪಕ್ಕದ ಜಾಗದಲ್ಲಿ ಪೇಪರ್, ಇತರ ದಾಖಲೆ ಪತ್ರಗಳನ್ನು ಗುಡ್ಡೆ ಹಾಕಿಕೊಳ್ಳದೇ ಜೋಡಿಸಲು ಒಂದು 10 ನಿಮಿಷ ಮೀಸಲಿಡಿ. ಈ ಕೆಲಸವನ್ನು ವಾರದ ಕೊನೆಗೂ ಇಟ್ಟುಕೊಳ್ಳಬಹುದು. ಎಲ್ಲವನ್ನೂ ಜೋಡಿಸಿ ಫೈಲ್‌ನಲ್ಲಿ ಇಟ್ಟುಕೊಂಡಾಗ ಬೇಕಾದಾಗ ತೆರೆದು ನೋಡಬಹುದು.

ಅಡುಗೆ ಮನೆ ಫಳಫಳ

ಮಲಗುವ ಮುನ್ನ ಅಡುಗೆ ಮನೆಯಲ್ಲಿ ಎಲ್ಲಾ ಪಾತ್ರೆಗಳನ್ನು ತೊಳೆದಿಡಿ. ಮಿಕ್ಕದ ಆಹಾರವನ್ನು ಡಬ್ಬಿಯಲ್ಲಿ ಹಾಕಿ ಫ್ರಿಜ್‌ನಲ್ಲಿ ಇಡಿ. ಬೆಳಿಗ್ಗೆ ಕಾಫಿ ಅಥವಾ ಚಹ ತಯಾರಿಸಲು ಅಡುಗೆ ಮನೆಗೆ ಹೋದರೆ ಎಲ್ಲವೂ ನೀಟಾಗಿ ನಿಮ್ಮನ್ನು ಸ್ವಾಗತಿಸುವಂತಿರಬೇಕು. ಹಾಗೇನಾದರೂ ಕೊಳೆ ಪಾತ್ರೆಗಳು ಉಳಿದರೆ ಅದಕ್ಕೆ ನೀರು ಹಾಕಿ ನೆನೆಸಿಡಿ.

ಶೂಗಳನ್ನು ಕೆಲವರು ಮನೆ ಬಾಗಿಲಿನಲ್ಲಿ ಅಡ್ಡಾದಿಡ್ಡಿ ಬಿಸಾಡಿರುತ್ತಾರೆ. ಆದರೆ ಆದಷ್ಟು ಮನೆಯ ಬಾಗಿಲಿನ ಪಕ್ಕ ಶೂ ಸ್ಟ್ಯಾಂಡ್ ಇಟ್ಟು ಹೊರಗಿನಿಂದ ಬಂದ ಕೂಡಲೇ ಅದರ ಮೇಲೆ ಎತ್ತಿಡುವ ಅಭ್ಯಾಸ ಬೆಳೆಸಿಕೊಳ್ಳಿ. ಇದರಿಂದ ಶೂನಿಂದಾಗುವ ದೂಳು, ಗಲೀಜಿಂದ ದೂರ ಇರಬಹುದು. ಹಾಗೆಯೇ ಆ ದೂಳನ್ನು ಗುಡಿಸಿ, ಒರೆಸುವ ಕೆಲಸದಿಂದಲೂ ಮುಕ್ತಿ ಸಿಗುತ್ತದೆ.

ಮನೆಯ ಎಲ್ಲಾ ಜಾಗವನ್ನು ಒಂದೇ ಬಾರಿ ಸ್ವಚ್ಛ ಮಾಡಲು ಸಾಧ್ಯವಿಲ್ಲ. ಒಂದೊಂದು ದಿನವೂ ಒಂದೊಂದು ಕೊಠಡಿ, ಹಾಲ್, ಅಡುಗೆ ಮನೆ.. ಎಂದು ಸ್ವಚ್ಛ ಮಾಡುತ್ತ ಹೋಗಿ. ಇದರಿಂದ ಸಮಯದ ಉಳಿತಾಯವೂ ಆಗುತ್ತದೆ.

ಮನೆಯಲ್ಲಿ ಕಸ ಸಂಗ್ರಹವಾಗಲು ಬಿಡಬೇಡಿ. ಉದಾಹರಣೆ ಖರೀದಿಸಿದ ಸಾಮಾನಿನ ಪ್ಯಾಕ್ ತೆರೆದಾಗ ಅದನ್ನು ಹಾಗೆಯೇ ಮೂಲೆಯಲ್ಲಿ ತುರುಕುವ ಅಭ್ಯಾಸ ಬೇಡ. ತಕ್ಷಣ ಅದನ್ನು ಕಸದ ಬುಟ್ಟಿಯಲ್ಲಿ ಹಾಕಿ. ಸಂಜೆ ಅಥವಾ ಬೆಳಿಗ್ಗೆ ಹೊರ ಹಾಕುವ ವ್ಯವಸ್ಥೆ ಮಾಡಿ. ❖



ಮುಖದ ಚರ್ಮದಲ್ಲಿ ರಂಧ್ರಗಳು ಏನಿದೆ ಪರಿಹಾರ?

ಸುಕೃತ ಎಸ್.

ಸೌಂದರ್ಯ

ಕನ್ನಡಿಯಲ್ಲಿ ಮುಖ ನೋಡಿಕೊಳ್ಳುವ ಹೊತ್ತಿಗೆ ಮೂಗಿನ ಮೇಲೆ, ಕೆನ್ನೆಯ ಚರ್ಮದ ಮೇಲೆ ಆಗಿರುವ ರಂಧ್ರಗಳತ್ತ ನಮ್ಮ ದೃಷ್ಟಿ ಹಾಯುತ್ತದೆ. ಚರ್ಮದ ಮೇಲಿರುವ ಸಣ್ಣ ರಂಧ್ರಗಳು ದೊಡ್ಡ ದೊಡ್ಡ ಬಾವಿಗಳಂತೆ ನಮಗೆ ಕಾಣಿಸಲು ಪ್ರಾರಂಭವಾಗುತ್ತದೆ! ಅಯ್ಯೋ ಈ ರಂಧ್ರಗಳು ನಮ್ಮ ಸೌಂದರ್ಯವನ್ನು ಹಾಳು ಮಾಡುತ್ತಿವೆ ಎಂದೇ ನಾವು ಭಾವಿಸುತ್ತೇವೆ.

ಹಾಗಿದ್ದರೆ, ನೈಸರ್ಗಿಕವಾಗಿ ಇರುವ ಈ ರಂಧ್ರಗಳು ನಿಜಕ್ಕೂ ನಮ್ಮ ಸೌಂದರ್ಯವನ್ನು ಹಾಳು ಮಾಡುತ್ತವೆಯೇ? ಅಥವಾ ಇವು ನಮ್ಮ ಚರ್ಮದ ಆರೋಗ್ಯಕ್ಕೆ ಮುಖ್ಯವಾಗಿ ಬೇಕಾಗಿರುವ ರಂಧ್ರವೇ? ಹೌದು ಎನ್ನುತ್ತಾರೆ ಚರ್ಮರೋಗ ತಜ್ಞರು.

ರಂಧ್ರಗಳ ಮಹತ್ವ: ಮುಖದ ರಂಧ್ರಗಳಲ್ಲಿ ಫಾಲಿಕಲ್‌ಗಳ ಮರುಹುಟ್ಟಿಗೆ ಕಾರಣವಾಗುತ್ತವೆ. ಈ ರಂಧ್ರಗಳಲ್ಲಿಯೇ ಚರ್ಮದ ಆರೋಗ್ಯಕ್ಕೆ ಬೇಕಾದ ದ್ರವಗಳು ಉತ್ಪತ್ತಿ ಆಗುತ್ತವೆ. ಒಣಚರ್ಮ ಇದ್ದವರಿಗೆ ಅಥವಾ ಒಣ ಹವಾಮಾನದಲ್ಲಿ ಮತ್ತು ವಯಸ್ಸು ಕಳೆದಂತೆ ಚರ್ಮ ಒಣಗಲು ಪ್ರಾರಂಭವಾದಾಗ ಈ ರಂಧ್ರಗಳು ಚರ್ಮ ಒಣಗದಂತೆ ದ್ರವಗಳನ್ನು ಬಿಡುಗಡೆ ಮಾಡುತ್ತವೆ. ಇದು ಚರ್ಮದಲ್ಲಿ ಜಿಡ್ಡಿನ ಅಂಶ ಇರುವಂತೆ ನೋಡಿಕೊಳ್ಳುತ್ತವೆ. ಆದ್ದರಿಂದ ಈ ರಂಧ್ರಗಳು ಆರೋಗ್ಯದ ದೃಷ್ಟಿಯಿಂದ ಬಹಳ ಮಹತ್ವದ್ದಾಗಿದೆ.

ಸೌಂದರ್ಯವರ್ಧಕ ಜಾಹೀರಾತುಗಳು 'ಮುಖದ ಮೇಲಿನ ಈ ರಂಧ್ರಗಳು ನಮ್ಮ ಸೌಂದರ್ಯವನ್ನು ಹಾಳು ಮಾಡುತ್ತವೆ. ಆದ್ದರಿಂದ ಈ ಉತ್ಪನ್ನವನ್ನು ತೆಗೆದುಕೊಳ್ಳಿ, ಸೌಂದರ್ಯವಂತರಾಗಿ' ಎನ್ನುತ್ತವೆ. ಅದಕ್ಕೆ ಮರುಳಾಗಿ ನಾವು ಆ ರಂಧ್ರಗಳನ್ನು ಮುಚ್ಚುವುದಕ್ಕೆ ಮುಂದಾಗುತ್ತೇವೆ. ಆದರೆ, ನಿಜದಲ್ಲಿ ಈ ರಂಧ್ರಗಳು ಇಲ್ಲದೇ ಇರುವ ಹಾಗೆ ಮಾಡಲು ಅಥವಾ ಅದರ ಗಾತ್ರವನ್ನು ಸಣ್ಣ ಮಾಡಲು ಸಾಧ್ಯವಾಗುವುದಿಲ್ಲ ಎನ್ನುತ್ತಾರೆ ವೈದ್ಯರು.

ಮುಖದ ಮೇಲೆ ಈ ರಂಧ್ರಗಳು ಕಾಣಲೇ ಬಾರದು ಎಂದಿದ್ದರೆ, ಕೆಲವು ಮಾರ್ಗಗಳ ಮೂಲಕ ಇದನ್ನು ಸಾಧಿಸಬಹುದಿದೆ. ಕೆಲವು ಸೌಂದರ್ಯವರ್ಧಕಗಳ ಮೂಲಕ ಕೆಲವು ಹೊತ್ತು ಈ ರಂಧ್ರಗಳು ಕಾಣದೇ ಇರುವ ಹಾಗೆ ಅಥವಾ ರಂಧ್ರಗಳು ಸಣ್ಣ ಗಾತ್ರದ್ದಾಗಿ ಕಾಣುವ ಹಾಗೆ ಮಾಡಿಕೊಳ್ಳಬಹುದಾಗಿದೆ. ಸನ್‌ಕ್ರೀಂ ಲೋಷನ್‌ಗಳ ಮೂಲಕವಾಗಿ ಅದರ ಗಾತ್ರಗಳು ಸಣ್ಣದಾಗಿ ಕಾಣುವಂತೆ ಮಾಡಿಕೊಳ್ಳಬಹುದು.

- ಪ್ರತಿದಿನ ಮುಖಕ್ಕೆ ಸನ್‌ಸ್ಕ್ರೀನ್ ಲೋಷನ್ ಹಚ್ಚಿಕೊಳ್ಳುವುದರಿಂದ ಚರ್ಮದಲ್ಲಿ ವ್ಯತ್ಯಾಸ ಕಾಣಬಹುದು. ಎಸ್‌ಪಿಎಫ್ ಅಂಶ ಇರುವ ಕ್ರೀಮ್ ಬಳಸುವುದರಿಂದ ಮುಖದಲ್ಲಿ ಕೆಂಪು ದದ್ದಾಗುವುದು, ಕಿರಿಕಿರಿ ಹಾಗೂ ರಂಧ್ರಗಳಿಗೆ ನೇರವಾಗಿ ಬಿಸಿಲು ತಾಕುವುದನ್ನು ತಡೆಯಬಹುದು.
- ಬ್ಯೂಟಿಪಾರ್ಲರ್‌ಗಳಲ್ಲಿ ಕ್ಲೆನ್ಸಿಂಗ್ ಮಾಡಿಸಿಕೊಳ್ಳುವುದರಿಂದಲೂ ರಂಧ್ರಗಳ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು. ಕ್ಲೆನ್ಸಿಂಗ್ ಮಾಡಿ ಮಸಾಜ್ ಮಾಡುವುದರಿಂದ ಕೊಂಚ ರಂಧ್ರಗಳು ಮುಚ್ಚಿದಂತೆ ಕಾಣಬಹುದು.

ಆದರೆ, ಈ ಎಲ್ಲದಕ್ಕಿಂತ ವೈದ್ಯರ ಬಳಿ ಹೋಗಿ ಅವರ ಸಲಹೆ ಪಡೆಯುವುದೇ ಹೆಚ್ಚು ಪರಿಣಾಮಕಾರಿ ಆದುದು ಎನ್ನುತ್ತಾರೆ ಚರ್ಮರೋಗ ತಜ್ಞರು. ಮೈಕ್ರೋ ನೀಡ್ಲಿಂಗ್ ಮತ್ತು ಲೇಸರ್ ಚಿಕಿತ್ಸೆಗಳಿಂದ ಉತ್ತಮ ಪರಿಣಾಮ ದೊರೆಯಬಹುದು. ಇದ್ಯಾವುದೂ ಬೇಡ, ಮನೆಯಲ್ಲೇ ಮದ್ದು ಇದೆಯೇ ಎಂದು ಪ್ರಶ್ನೆ ಹಾಕಿಕೊಂಡರೆ, ಖಂಡಿತ ಮನೆಮದ್ದು ಇದೆ; ಅದುವೇ ಮುಖ ತೊಳೆಯುವುದು. ಮನೆಯಲ್ಲೇ ಪದೇ ಪದೇ ಮುಖವನ್ನು ಚೆನ್ನಾಗಿ ತೊಳೆದುಕೊಳ್ಳುವುದರಿಂದ ಈ ರಂಧ್ರಗಳು ಶುಚಿ ಆಗಿಯೂ ಇರುತ್ತವೆ ಜೊತೆಗೆ, ಸಣ್ಣ ಗಾತ್ರದ್ದಾಗಿಯೂ ಕಾಣುತ್ತವೆ. ❖

ಬಿರುಸಿನ ಚಿತ್ರೀಕರಣದಲ್ಲಿ 'ರಣವ್ಯೂಹ'



ಸಿನಿ ಹನಿ

ಶ್ರೀಶಿರಡಿ ಸಾಯಿ ಮೂವೀಸ್ ಲಾಂಛನದಲ್ಲಿ ಮೂಡಿಬರುತ್ತಿದೆ 'ರಣವ್ಯೂಹ'. ಈ ಚಿತ್ರದ ಶೇ 75ರಷ್ಟು ಭಾಗ ಚಿತ್ರೀಕರಣ ಈಗಾಗಲೇ ಮುಗಿದಿದೆ. ಚಿಕ್ಕಬಳ್ಳಾಪುರ, ದೇವನಹಳ್ಳಿ, ವಿಜಯಪುರ, ಜಂಗಮಕೋಟೆಯಲ್ಲಿ ಎರಡು ಹಂತಗಳಲ್ಲಿ ಚಿತ್ರೀಕರಣ ನಡೆದಿದೆ ಎಂದಿದೆ ಚಿತ್ರತಂಡ. ವರ್ತೂರಿನ ಸರ್ಕಾರಿ ಕಾಲೇಜು ಮೈದಾನದಲ್ಲಿ ಸಾಹಸ ದೃಶ್ಯಗಳ ಚಿತ್ರೀಕರಣ ನಡೆಯಿತು.

ದೇಶದ ಅರ್ಥಿಕ ಪರಿಸ್ಥಿತಿಯನ್ನೇ ಬುಡಮೇಲು ಮಾಡುವ, ಬಹಿರಂಗವಾಗದ ಸಮಾಜ ವಿದ್ರೋಹಕ ಚಟುವಟಿಕೆಗಳ ಸುತ್ತ ಕಥೆ ಇದೆ.


ಎಂ.ಜಿ.ವೇಣುಕುಮಾರ್ ಚಿತ್ರದ ನಿರ್ಮಾಪಕ. ಎಸ್. ಶಂಕರ್ ನಿರ್ದೇಶಕ. ಸಂಗೀತ ಕಾರ್ತಿಕ್ ವೆಂಕಟೇಶ್, ಛಾಯಾಗ್ರಹಣ ಕೃಷ್ಣನಾಯ್ಕರ್, ಕತೆ ವಿನಯ್‌ಕುಮಾರ್, ಸಂಕಲನ ನಾಗರಾಜ ಹುಣಸೂರು, ಸಾಹಸ ಮಂಜುನಾಗಪ್ಪ ಅವರದ್ದು. ಮಜಾಭಾರತ ಸೀಸನ್-3ಯಲ್ಲಿ ಜ್ಯೂನಿಯರ್ ದರ್ಶನ್ ಎಂದೇ ಖ್ಯಾತಿ ಪಡೆದ ಅವಿನಾಶ್ ನಾಯಕ. ಬಹುಭಾಷಾ ತಾರೆ ಬೆಂಗಳೂರಿನ ಯಶ ನಾಯಕಿ. ರಾಜುಮಂಜು, ಸ್ಮಿತಾ, ವಿಸ್ಮಿತ್, ಅಕ್ಷತ್, ಅವಿನ್, ರಾಜಪ್ರತೀಕ್, ಗಣೇಶ್, ಶ್ರೀಕಾಂತ್‌ರೆಡ್ಡಿ, ಆನಂದ್, ಜಿಮ್‌ರವಿ, ಚಿಣ್ಣರಾದ ಯುವರಾಜ್, ಪ್ರಜೋತ್, ಆಕರ್ಷ್, ಚೈತನ್ಯ, ಪೂರ್ವಿಕಾ ತಾರಾಗಣದಲ್ಲಿ ಇದ್ದಾರೆ.

ಕೊನೆಯ ಹಂತದ ಚಿತ್ರೀಕರಣ ಮಂಗಳೂರು, ಬೆಂಗಳೂರಿನಲ್ಲಿ ನಡೆಯಲಿದೆ. ❖

ಕೋವಿಡ್ ಗುಣಮುಖರಾದ ಬಳಿಕ ವ್ಯಾಯಾಮ ಮಾಡಬಹುದೇ?

ಕೋವಿಡ್ ಕಾಣಿಸಿಕೊಂಡು ಗುಣಮುಖರಾದ ಹಲವರಲ್ಲಿ ಮೈಕೈ ನೋವು, ಬೆನ್ನು ನೋವಿನಂತಹ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ಇದರೊಂದಿಗೆ ಕೋವಿಡ್ ಬಂದ ನಂತರ ವ್ಯಾಯಾಮ ಮಾಡುವ ಬಗ್ಗೆ ಹಲವರಲ್ಲಿ ಗೊಂದಲವಿದೆ. ಹಾಗಾದರೆ ಅವರ ವ್ಯಾಯಾಮ ಹೇಗಿರಬೇಕು?

ಆಲಾಪ



ಕೊರೊನಾ ಸೋಂಕು ತಗುಲಿ, ಗುಣಮುಖರಾದ ಮೇಲೆ ಮಾಮೂಲಿ ಜೀವನ ನಡೆಸಲು ಸಾಧ್ಯವೇ ಎನ್ನುವುದು ಬಹುತೇಕರನ್ನು ಕಾಡಿರಬಹುದು. ಸೋಂಕು ತಗುಲುವುದಕ್ಕೂ ಮೊದಲು ಇದ್ದ ನಮ್ಮ ಜೀವನಶೈಲಿಗೆ ಮತ್ತೆ ನಾವು ಮರಳಬಹುದೇ ಎನ್ನುವುದು ಎಲ್ಲರ ಪ್ರಶ್ನೆ. 'ಅದು ಸಾಧ್ಯ ಇದೆ' ಎನ್ನುತ್ತಾರೆ ವೈದ್ಯರು.

ಆಹಾರಪದ್ಧತಿ, ವ್ಯಾಯಾಮ, ಯೋಗ ಮತ್ತಿತರ ನಮ್ಮ ಹಳೆಯ ಅಭ್ಯಾಸಗಳನ್ನು ಖಂಡಿತವಾಗಿ ಮುಂದುವರಿಸಿಕೊಂಡು ಹೋಗಬಹುದು. ಆದರೆ, ಈ ಸೋಂಕು ನಮ್ಮ ಶ್ವಾಸಕೋಶದ ಮೇಲೆ ಗಂಭೀರ ಪರಿಣಾಮ ಬೀರುವುದರಿಂದ, ಹಿಂದಿನಂತೆ ಸೈಕ್ಲಿಂಗ್, ಜಾಗಿಂಗ್ ಮುಂತಾದ ದೇಹಕ್ಕೆ ಹೆಚ್ಚು ಶ್ರಮ ಎನಿಸುವಂತಹ ಕಠಿಣ ವ್ಯಾಯಾಮ ಮಾಡುವುದರ ಕುರಿತು ಹಲವರಲ್ಲಿ ಅನುಮಾನಗಳಿರಬಹುದು.

ಸೋಂಕಿನಿಂದ ಬಂದ ಬಳಲಿಕೆ ಹೋಗುವುದಕ್ಕೆ ಹೆಚ್ಚು ಸಮಯವೇ ಬೇಕಾಗಬಹುದು– ಇದು ಸೋಂಕಿನ ತೀವ್ರತೆ ಮತ್ತು ಅದರಿಂದ ಉಂಟಾದ ಪರಿಣಾಮವನ್ನು ಅವಲಂಬಿಸಿದೆ. ಗುಣಮುಖವಾದ ತಕ್ಷಣ ಕಠಿಣ ವ್ಯಾಯಾಮ ಮಾಡಲು ಪ್ರಾರಂಭಿಸಿದರೆ, ಅದು ಹೆಚ್ಚು ಆಯಾಸ ಉಂಟು ಮಾಡಬಹುದು. ಹೀಗಾಗಿ ನಿಧಾನಗತಿಯಲ್ಲಿ ನಮ್ಮ ವ್ಯಾಯಾಮದ ಅಭ್ಯಾಸ ಪ್ರಾರಂಭಿಸುವುದು ಉತ್ತಮ ಎನ್ನುತ್ತಾರೆ ತಜ್ಞರು.

ಬಳಲಿಕೆ ಕಡಿಮೆಯಾದ 10– 14 ದಿನಗಳ ನಂತರ ನಿಧಾನವಾಗಿ ವ್ಯಾಯಾಮವನ್ನು ಪ್ರಾರಂಭ ಮಾಡುವುದು ಉತ್ತಮ. ಒಂದು ವೇಳೆ, ರೋಗಲಕ್ಷಣ ಇಲ್ಲದೆಯೇ ಸೋಂಕಿತರಾಗಿದ್ದರೆ ವ್ಯಾಯಾಮವನ್ನು ಬಹುಬೇಗ ಶುರು ಮಾಡಬಹುದು ಎಂದುಕೊಂಡಿದ್ದರೆ ಇದು ತಪ್ಪು ಎನ್ನುತ್ತದೆ ಸಂಶೋಧನೆ. ರೋಗಲಕ್ಷಣಗಳನ್ನು ಹೊಂದಿದವರಿಗಿಂತ, ರೋಗಲಕ್ಷಣ ತೋರಿಸದೇ ಸೋಂಕಿತರಾದವರಿಗೆ ರೋಗನಿರೋಧಕ ಶಕ್ತಿ ಕಡಿಮೆ ಇರುತ್ತದೆ ಎಂಬುದು ಸಂಶೋಧನೆಯಿಂದ ತಿಳಿದು ಬಂದಿದೆ.

ಆರೋಗ್ಯ ನೋಡಿಕೊಳ್ಳಿ

ವ್ಯಾಯಾಮ ಮಾಡಲು ಸಾಧ್ಯವಾಗದೇ ಇದ್ದರೆ ಬೇಸರ ಬೇಡ. ಈ ಸಮಯದಲ್ಲಿ ನಿಮ್ಮ ಆರೋಗ್ಯದ ಕಾಳಜಿ ಬಗ್ಗೆ ಯೋಚಿಸಿ; ಕಾರ್ಯಪ್ರವೃತ್ತರಾಗಿ. ಚೆನ್ನಾಗಿ ನೀರು ಕುಡಿಯಿರಿ, ಒತ್ತಡ ನಿವಾರಣೆ ಮಾಡಿಕೊಳ್ಳುವ ದಾರಿ ಕಂಡುಕೊಳ್ಳಿ ಮತ್ತು ಪೌಷ್ಟಿಕ ಆಹಾರವನ್ನು ಸೇವಿಸಿ. ಸಾಕಷ್ಟು ವಿಶ್ರಾಂತಿ ತೆಗೆದುಕೊಳ್ಳಿ. ನಿಮ್ಮ ಕ್ರಿಯೆಗೆ ದೇಹದ ಪ್ರತಿಕ್ರಿಯೆ ಹೇಗಿದೆ ಎನ್ನುವುದನ್ನು ಗಮನಿಸಿ. ವ್ಯಾಯಾಮ ಮಾಡುವ ಸಂದರ್ಭದಲ್ಲಿ ಕೂಡ ದೇಹ ಯಾವ ಬಗೆಯ ರೋಗಲಕ್ಷಣಗಳನ್ನು ತೋರಿಸುತ್ತಿದೆ ಎನ್ನುವುದನ್ನು ಎಚ್ಚರಿಕೆಯಿಂದ ಗಮನಿಸಬೇಕು.

ಕೆಲವೊಮ್ಮೆ ನಿಮ್ಮ ದೇಹ ಕಠಿಣ ವ್ಯಾಯಾಮಕ್ಕೆ ಸಿದ್ಧವಾಗಿರಬಹುದು. ಆದರೆ, ಮನಸ್ಸು ಸಿದ್ಧವಿಲ್ಲದೆಯೇ ಇರಬಹುದು. ಈ ಬಗ್ಗೆ ಗಮನಹರಿಸಿ. ಗೊಂದಲ ಮೂಡಿದಾಗ ವೈದ್ಯರನ್ನು ಸಂಪರ್ಕಿಸಿ ಸಲಹೆ ಪಡೆದುಕೊಳ್ಳುವುದು ಉತ್ತಮ.

ವ್ಯಾಯಾಮ ಪುನಃ ಪ್ರಾರಂಭಿಸುವುದು ಹೇಗೆ?

- ನೀವು ಭಾರ ಎತ್ತುವ ವ್ಯಾಯಾಮ ಮಾಡುವವರು ಆಗಿದ್ದರೆ, ಸದ್ಯಕ್ಕೆ ಕಡಿಮೆ ಭಾರ ಎತ್ತುವುದು ಒಳ್ಳೆಯದು. ಗುಣಮುಖರಾಗುತ್ತಿದ್ದಂತೆ ನೀವು ಈ ಮೊದಲು ಎತ್ತುತ್ತಿದ್ದ ಭಾರವನ್ನೇ ಈಗಲೂ ಮುಂದುವರಿಸಬಾರದು.
- ಈ ಹಿಂದೆ ನೀವು ಒಂದು ನಿಮಿಷದಲ್ಲಿ 50 ಬಸ್ಕಿ ಹೊಡೆಯುತ್ತಿದ್ದು, ಐದು ನಿಮಿಷ ಬಿಟ್ಟು ಮತ್ತೆ ಒಂದು ನಿಮಿಷದಲ್ಲಿ 50 ಬಸ್ಕಿ ಹೊಡೆದಿರಬಹುದು. ಆದರೆ, ಈ ಸಂದರ್ಭದಲ್ಲಿ ಅಷ್ಟು ಬಾರಿ ಬಸ್ಕಿ ಹೊಡೆಯುವುದು ಬೇಡ. ಮೊದಲಿಗೆ ಒಂದು ನಿಮಿಷದಲ್ಲಿ 20 ಮಾಡಿ ದಿನಕಳೆದಂತೆ ಈ ಪ್ರಮಾಣವನ್ನು ಏರಿಸಿಕೊಳ್ಳಿ.
- ಸೋಂಕಿತರು ಸಣ್ಣ ಪ್ರಮಾಣದ ರೋಗಲಕ್ಷಣ ಹೊಂದಿದ್ದರೆ, ನೀವು ಮೊದಲು ಮಾಡುತ್ತಿದ್ದ ವ್ಯಾಯಾಮದ ಪ್ರಮಾಣದಲ್ಲಿ ಶೇ 50ರಷ್ಟು ಕಡಿತ ಮಾಡಬೇಕು. ಮೊದಲ ನಾಲ್ಕು ವಾರಗಳನ್ನು ಶೇ 50/ 30/ 20/ 10ರ ಪ್ರಮಾಣದಂತೆ ವಿಂಗಡಿಸಿಕೊಳ್ಳಿ. ಮೊದಲ ವಾರ ಶೇ 50, ಎರಡನೇ ವಾರ ಶೇ 30ರಷ್ಟು ಕಡಿಮೆ ವ್ಯಾಯಾಮ ಮಾಡಬೇಕು. ಗುಣಮುಖರಾದ ಬಳಿಕ, ನಿಮ್ಮ ಆರೋಗ್ಯದ ಮೇಲಾದ ಸೋಂಕಿನ ತೀವ್ರತೆ, ಬಳಲಿಕೆ ನೋಡಿಕೊಂಡು ನಿಧಾನವಾಗಿ ಈ ಶೇಕಡವಾರು ಪ್ರಮಾಣವನ್ನು ಏರಿಸಿಕೊಳ್ಳಬಹುದು. ಇದು ವಾರದಲ್ಲಿ ಅಥವಾ ತಿಂಗಳುಗಳ ಅಂತರದಲ್ಲೂ ಹೆಚ್ಚಿಸಿಕೊಳ್ಳಬಹುದು.

ಮೇಲೆ ಹೇಳಿದ ವಿಧಾನಗಳನ್ನು ನಿಮ್ಮ ದೇಹ ವ್ಯಾಯಾಮಕ್ಕೆ ಹೇಗೆ ಸ್ಪಂದಿಸುತ್ತಿದೆ ಎಂಬುದನ್ನು ನೋಡಿಕೊಂಡು ಮುಂದುವರಿಸಬೇಕು ಎನ್ನುತ್ತಾರೆ ತಜ್ಞರು. ಎದೆ ನೋವು, ಉಸಿರುಗಟ್ಟುವುದು, ಆಯಾಸ, ಸ್ನಾಯು ನೋವು, ಕಣ್ಣು ಮಂಜಾಗುವುದು ಅಥವಾ ಜ್ವರ ಈ ಯಾವುದೇ ಸಮಸ್ಯೆ ಕಾಣಿಸಿಕೊಂಡರೂ ವ್ಯಾಯಾಮ ಮಾಡುವುದನ್ನು ನಿಲ್ಲಿಸಬೇಕು. ಏಕೆಂದರೆ ಇದು ಹೃದ್ರೋಗ ಸಮಸ್ಯೆಗೆ ಕಾರಣವಾಗಬಲ್ಲದು.

ನಿಮ್ಮ ಹಳೆಯ ಜೀವನ ಶೈಲಿಗೆ ಮರಳಲು ಸ್ವಲ್ಪ ಸಮಯ ಬೇಕಾಗುತ್ತದೆ. ತುಂಬಾ ನಿಧಾನವಾಗಿ ನಿಮ್ಮ ವ್ಯಾಯಾಮದ ಅಭ್ಯಾಸವನ್ನು, ಅದರ ಪ್ರಮಾಣವನ್ನು, ಸಮಯವನ್ನು ಹೆಚ್ಚಿಸಿಕೊಳ್ಳಿ. ಇದುವೇ ಉತ್ತಮ ಉಪಾಯ ಎನ್ನುವುದು ತಜ್ಞರ ಅಭಿಪ್ರಾಯ. ❖



ಜಿಂಜರ್ ಚಿಕನ್ ಗ್ರೀನ್ ಬೀನ್ ನೂಡಲ್ಸ್

ರೆಸಿಪಿ

ಕಡಿಮೆ ಕ್ಯಾಲೊರಿ ಅಂಶ ಹೊಂದಿರುವ ಜಿಂಜರ್ ಚಿಕನ್ ಗ್ರೀನ್‌ಬೀನ್ ನೂಡಲ್ಸ್ ಮಧ್ಯಾಹ್ನದ ಊಟಕ್ಕೆ ಹೆಚ್ಚು ಹೊಂದುತ್ತದೆ. ಡಯೆಟ್ ಪಾಲಿಸುವವರಿಗೂ ಇದು ಉತ್ತಮ ಎನ್ನಬಹುದು. ಏಷ್ಯಾ ಖಂಡದ ಕೆಲ ಭಾಗ ಹಾಗೂ ಟರ್ಕಿ ದೇಶದಲ್ಲಿ ಈ ರೆಸಿಪಿ ಹೆಚ್ಚು ಬೇಡಿಕೆ ಹೊಂದಿದೆ. ಬೀನ್ಸ್ ಹಾಗೂ ಚಿಕನ್ ಮಿಶ್ರಣವಿರುವ ಈ ನೂಡಲ್ಸ್‌ನಲ್ಲಿ ಕೊಬ್ಬಿನಂಶವೂ ಕಡಿಮೆ. ಕಡಿಮೆ ಸಾಮಗ್ರಿಗಳು ಹಾಗೂ ಕಡಿಮೆ ಸಮಯದಲ್ಲಿ ತಯಾರಿಸಲು ಸಾಧ್ಯವಾಗುವ ಗ್ರೀನ್ ಬೀನ್ ನೂಡಲ್ಸ್ ತಿನ್ನಲು ಚೆನ್ನಾಗಿರುತ್ತದೆ.

ಬೇಕಾಗುವ ಸಾಮಗ್ರಿಗಳು: ಮೂಳೆರಹಿತ ಚಿಕನ್ ತುಂಡುಗಳು – ಅರ್ಧ ಕಪ್, ಗ್ರೀನ್ ಬೀನ್ಸ್ – 200 ಗ್ರಾಂ, ಶುಂಠಿ – ಒಂದೂವರೆ ಇಂಚು, ಬೆಳ್ಳುಳ್ಳಿ – 3 ಎಸಳು, ಸ್ಟೆಮ್ ಜಿಂಜರ್ ಸಿರಪ್ – ಸ್ವಲ್ಪ, ಕಾರ್ನ್‌ಫ್ಲೋರ್ – 1 ಚಮಚ, ಸೋಯಾ ಸಾಸ್ – 1ಚಮಚ, ರೈಸ್ ವಿನೆಗರ್ – 2 ಚಮಚ, ಬೇಯಿಸಿದ ಎಗ್ ನೂಡಲ್ಸ್ – 200ಗ್ರಾಂ.

ತಯಾರಿಸುವ ವಿಧಾನ: ಪಾತ್ರೆಯಲ್ಲಿ ಎಣ್ಣೆ ಬಿಸಿ ಮಾಡಿ ಅದಕ್ಕೆ ಚಿಕನ್ ತುಂಡುಗಳನ್ನು ಸೇರಿಸಿ 5 ನಿಮಿಷ ಬೇಯಿಸಿ. ಅದಕ್ಕೆ ಗ್ರೀನ್ ಬೀನ್ಸ್ ಸೇರಿಸಿ ಬೇಯುವವರೆಗೂ ಕೈಯಾಡಿಸಿ. ಅದನ್ನು ಬೇರೆ ಪಾತ್ರೆಗೆ ಹಾಕಿ. ಅದೇ ಎಣ್ಣೆಯಲ್ಲಿ ಜಜ್ಜಿದ ಶುಂಠಿ ಹಾಗೂ ಬೆಳ್ಳುಳ್ಳಿ ಹಾಕಿ 2 ನಿಮಿಷ ಹುರಿಯಿರಿ. ಅದಕ್ಕೆ ಸ್ಟೆಮ್ ಜಿಂಜರ್ ಸಿರಪ್ ಸೇರಿಸಿ. ನಂತರ ಒಂದು ಚಮಚ ನೀರಿನೊಂದಿಗೆ ಕಾರ್ನ್‌ಫ್ಲೋರ್ ಅನ್ನು ಗಂಟಿಲ್ಲದಂತೆ ಮಿಶ್ರಣ ಮಾಡಿ ಅದನ್ನು ಸೇರಿಸಿ. ಸೋಯಾ ಸಾಸ್ ಹಾಗೂ ವಿನೆಗರ್ ಹಾಕಿ ಎಲ್ಲವನ್ನೂ ಮಿಶ್ರಣ ಮಾಡಿ ಒಂದು ನಿಮಿಷ ಹುರಿದುಕೊಳ್ಳಿ. ಇದನ್ನು ಬೇಯಿಸಿಕೊಂಡ ಎಗ್ ನೂಡಲ್ಸ್‌ಗೆ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಸೋಯಾ ಸಾಸ್ ಚಿಮುಕಿಸಿ ಬಿಸಿ ಇದ್ದಾಗಲೇ ತಿನ್ನಿ. ❖



ಗ್ರಿಲ್ಡ್ ಚಿಕನ್ ಸ್ಕ್ಯೂವರ್

ಬೇಕಾಗುವ ಸಾಮಗ್ರಿಗಳು: ನಿಂಬೆರಸ – 2, ಮೂಳೆ ರಹಿತ ಚಿಕನ್ ತುಂಡು – 1 ಕಪ್, ಕಾಳುಮೆಣಸಿನ ಪುಡಿ – ಚಿಟಿಕೆ, ಬ್ರೆಡ್ ತುಂಡುಗಳು – 4, ಬೆಳ್ಳುಳ್ಳಿ ಎಸಳು – ಸ್ವಲ್ಪ (ಚೆನ್ನಾಗಿ ಹೆಚ್ಚಿದ್ದು), ಮೊಟ್ಟೆಯ ಹಳದಿ ಭಾಗ – 1 ದೊಡ್ಡದು, ಸಾಸಿವೆ – 1/2 ಚಮಚ, ಆಲಿವ್ ಎಣ್ಣೆ – 1 ಚಮಚ, ಹೆಚ್ಚಿದ ಪಾರ್ಮಿಸ್ಯಾನ್ – 1 ಚಮಚ, ಕೊತ್ತಂಬರಿ ಸೊಪ್ಪು – ಸ್ವಲ್ಪ

ತಯಾರಿಸುವ ವಿಧಾನ: ಒಂದು ನಿಂಬೆಹಣ್ಣನ್ನು ಕತ್ತರಿಸಿ ಅರ್ಧ ನಿಂಬೆಹಣ್ಣಿನ ಹೋಳಿನಿಂದ ತಿರುಳು ತೆಗೆದು ಇರಿಸಿ. ಇನ್ನರ್ಧ ನಿಂಬೆಹೋಳನ್ನು ಹಿಂಡಿ ರಸ ತೆಗೆಯಿರಿ. ಚಿಕನ್ ತುಂಡುಗಳನ್ನು ಒಂದೇ ಆಕಾರಕ್ಕೆ ಕತ್ತರಿಸಿಕೊಂಡು ಅದಕ್ಕೆ ಸ್ಕ್ಯೂವರ್‌ಗಳನ್ನು ಚುಚ್ಚಿ. ಅದನ್ನು ಉಪ್ಪು ಹಾಗೂ ಕಾಳುಮೆಣಸಿನ ಮಿಶ್ರಣದಲ್ಲಿ ಅದ್ದಿ. ಅದನ್ನು ಚೆನ್ನಾಗಿ ಎರಡೂ ಬದಿ ಬೇಯಿಸಿ. ಅರ್ಧ ನಿಂಬೆ ತುಂಡನ್ನು ಸುಟ್ಟು ಅದರ ಬೂದಿಯನ್ನು ಚಿಕನ್ ತುಂಡುಗಳ ಮೇಲೆ ಉದುರಿಸಿ. ಬ್ರೆಡ್ ಅನ್ನು ಗ್ರಿಲ್ ಮಾಡಿ ಟೋಸ್ಟ್ ತಯಾರಿಸಿಕೊಳ್ಳಿ. ಅದರ ಮೇಲೆ ಬೆಳ್ಳುಳ್ಳಿ ಎಸಳಿನಿಂದ ಉಜ್ಜಿ. ಒಂದು ದೊಡ್ಡ ಬೌಲ್ ನಿಂಬೆ ತಿರುಳು, ನಿಂಬೆರಸ, ಮೊಟ್ಟೆಯ ಹಳದಿ ಭಾಗ, ಸಾಸಿವೆ, ಜಜ್ಜಿದ ಬೆಳ್ಳುಳ್ಳಿ ಹಾಗೂ ಉಪ್ಪನ್ನು ಮಿಶ್ರಣ ಮಾಡಿ. ಅದನ್ನು 1 ಚಮಚ ಬಿಸಿ ಎಣ್ಣೆಗೆ ಹಾಕಿ ನಿಧಾನಕ್ಕೆ ಮಿಶ್ರಣ ಮಾಡಿ ಸ್ಕ್ರ್ಯಾಂಬಲ್ಡ್ ಎಗ್ ತಯಾರಿಸಿಕೊಳ್ಳಿ. ಅದರೊಂದಿಗೆ ಬೆಂದ ಚಿಕನ್ ಹಾಗೂ ಟೋಸ್ಟ್ ಸೇರಿಸಿ ಮಿಶ್ರಣ ಮಾಡಿ. ಅದರ ಮೇಲೆ ಪಾರ್ಮಿಸ್ಯಾನ್, ಕೊತ್ತಂಬರಿ ಹಾಗೂ ಕಾಳುಮೆಣಸಿನ ಉದುರಿಸಿ ಅಲಂಕರಿಸಿ. ❖

ಪರಿಪೂರ್ಣ ನಿದ್ದೆಗೆ ಅಡ್ಡಿಯಾಗದಿರಲಿ ಈ ಅಂಶ

ಮನಸ್ವಿ



ಆರೋಗ್ಯ

ಇತ್ತೀಚೆಗೆ ಜನರನ್ನು ಹೆಚ್ಚಾಗಿ ಕಾಡುತ್ತಿರುವ ಸಮಸ್ಯೆಗಳಲ್ಲಿ ನಿದ್ದೆಯ ಸಮಸ್ಯೆಯೂ ಒಂದು. ಒತ್ತಡ, ಭಯ, ಆತಂಕಗಳ ನಡುವೆ ಸರಿಯಾಗಿ ನಿದ್ದೆ ಬರುವುದೂ ಕಷ್ಟವಾಗಿದೆ. ಪರಿಪೂರ್ಣ ನಿದ್ದೆ ಎನ್ನುವುದು ಮರೀಚಿಕೆಯಾಗಿದೆ. ಅದರಲ್ಲೂ ಕೊರೊನಾ ದಿನಗಳು ಆರಂಭವಾದ ಮೇಲೆ ಶೇ 63 ರಷ್ಟು ಜನರಲ್ಲಿ ನಿದ್ದೆಯ ಕೊರತೆ ಕಾಡುತ್ತಿದೆ ಎನ್ನುತ್ತದೆ ಲಂಡನ್‌ನ ಕಿಂಗ್ಸ್ ಕಾಲೇಜ್‌ನ ಅಧ್ಯಯನ. ನಿದ್ದೆಯ ಕೊರತೆಯು ಜನರ ಮನಸ್ಸಿನಲ್ಲಿ ಋಣಾತ್ಮಕ ಪರಿಣಾಮ ಬೀರುವಂತೆ ಮಾಡಿದೆ. ಪರಿಪೂರ್ಣ ನಿದ್ದೆಗೆ ಕೆಲವೊಂದು ಅಂಶಗಳು ಅಡ್ಡಿಪಡಿಸುತ್ತವೆ. ಆ ಅಂಶಗಳು ಯಾವುವು, ಅವು ನಿದ್ದೆಗೆ ಹೇಗೆ ತೊಂದರೆ ಮಾಡುತ್ತವೆ ಎಂಬುದರ ಬಗ್ಗೆ ಇಲ್ಲಿದೆ ಮಾಹಿತಿ.

ಮದ್ಯ ಸೇವನೆ

ಮದ್ಯಪಾನ ಸೇವನೆಯಿಂದ ನಿದ್ದೆ ಚೆನ್ನಾಗಿ ಬರುತ್ತದೆ ಎಂಬುದು ಹಲವರ ಅಭಿಪ್ರಾಯ, ಆದರೆ ಇದರಿಂದ ಪರಿಪೂರ್ಣ ನಿದ್ದೆಗೆ ಭಂಗ ಉಂಟಾಗುತ್ತದೆ ಎನ್ನುತ್ತಾರೆ ತಜ್ಞರು. ಮದ್ಯಪಾನ ಮಾಡಿದಾಗ ಪ್ರಜ್ಞೆ ಇಲ್ಲದಂತೆ ಮಲಗಿದರೂ ಸುಪ್ತ ಮನಸ್ಸಿನಲ್ಲಿ ನಿದ್ದೆ ಆವರಿಸಿರುವುದಿಲ್ಲ. ಆ ಕಾರಣಕ್ಕೆ ನಿದ್ದೆಯ ಕೊರತೆ ಕಾಡಬಹುದು ಎನ್ನುವುದು ತಜ್ಞರ ಮಾತು. ಒಂದು ವೇಳೆ ಮದ್ಯಪಾನ ಮಾಡುವ ಇಚ್ಛೆಯಾದರೆ ಮಧ್ಯಾಹ್ನ ಅಥವಾ ಸಂಜೆ ವೇಳೆ ಮಾಡಬಹುದು.

ದೇಹಕ್ಕೆ ಸೇರುವ ಕೆಫಿನ್ ಅಂಶ ದೇಹದಲ್ಲಿ ಐದರಿಂದ ಏಳು ಗಂಟೆಗಳವರೆಗೆ ಹಾಗೇ ಇರುತ್ತದೆ. ಹಾಗಾಗಿ ಸಂಜೆ 4 ರಿಂದ 5 ಗಂಟೆ ಹೊತ್ತಿಗೆ ಕಾಫಿ, ಟೀ ಕುಡಿದರೆ ಮಲಗಲು ಕಷ್ಟವಾಗುತ್ತದೆ. ಅಲ್ಲದೇ ಇದರಿಂದ ರಾತ್ರಿ ವೇಳೆ ನಿದ್ದೆ ಇಲ್ಲದೇ ವಿಶ್ರಾಂತಿ ಇಲ್ಲದಂತಾಗಬಹುದು. ಇದರಲ್ಲಿರುವ ರಾಸಾಯನಿಕ ಅಂಶವು ನಿದ್ದೆಗೆ ತೊಂದರೆ ಮಾಡುತ್ತದೆ. ಹಾಗಾಗಿ ಟೀ ಕಾಫಿ ಸೇವನೆ ಒಳ್ಳೆಯದಲ್ಲ.

ಕಾರ್ಬೋಹೈಡ್ರೇಟ್ ಅಂಶವಿರುವ ಆಹಾರ ಸೇವನೆ ಬೇಡ

ಹೆಚ್ಚು ಕಾರ್ಬೋಹೈಡ್ರೇಟ್ ಅಂಶ ಇರುವ ಊಟ ಅಥವಾ ಆಹಾರ ಸೇವನೆಯೂ ಆಲ್ಕೋಹಾಲ್‌ನಷ್ಟೆ ಅಪಾಯಕಾರಿ. ಈ ಅಂಶ ಹೆಚ್ಚಿರುವ ಆಹಾರದಿಂದ ಆಲಸ್ಯ ಮೂಡುವುದಲ್ಲದೇ ನಿದ್ದೆ ಬಂದಂತಾಗುತ್ತದೆ, ಆದರೆ ಪರಿಪೂರ್ಣ ನಿದ್ದೆ ಬಂದಿರುವುದಿಲ್ಲ. ಅಲ್ಲದೇ ಮಧ್ಯರಾತ್ರಿಯಲ್ಲಿ ಹಸಿವಾಗಿ ಎಚ್ಚರವಾಗುತ್ತದೆ. ಅಲ್ಲದೇ ಮತ್ತೆ ಹಸಿವಾದಂತಾಗಿ ಮಧ್ಯರಾತ್ರಿಯಲ್ಲಿ ಸ್ನ್ಯಾಕ್ಸ್ ತಿನ್ನಬೇಕು ಎನ್ನಿಸಬಹುದು.

ಮಲಗುವ ಮೊದಲು ಸೇವಿಸುವ ಆಹಾರ ಚಯಾಪಚಯ ಕ್ರಿಯೆಗೆ ನೆರವಾಗುವಂತಿರಬೇಕು. ಇದರಿಂದ ಚೆನ್ನಾಗಿ ನಿದ್ದೆ ಬರುತ್ತದೆ. ಹಾಗಾಗಿ ಗೋಧಿಹಿಟ್ಟು, ಬೀನ್ಸ್ ಹಾಗೂ ಹಸಿರು-ತರಕಾರಿಗಳ ಸೇವನೆ ಉತ್ತಮ. ಮಗಲುವ ಮೂರ್ನಾಲ್ಕು ಗಂಟೆಗಳ ಮೊದಲೇ ಊಟ ಮಾಡುವುದು ಉತ್ತಮ.

ಸೋಫಾ ಮೇಲೆ ಮಲಗುವುದು

ಸಾಮಾನ್ಯವಾಗಿ ಹಲವರಿಗೆ ಸೋಫಾ ಮೇಲೆ ಕಿರುನಿದ್ದೆ ಮಾಡುವ ಅಭ್ಯಾಸ. ಸುಸ್ತಾದಾಗ ಸೋಫಾ ಮೇಲೆ ಒರಗುತ್ತಾರೆ. ಆದರೆ ಸೋಫಾ ಮೇಲೆ ಮಲಗುವ ಅಭ್ಯಾಸದಿಂದಲೂ ನಿದ್ದೆಯಲ್ಲಿ ವ್ಯತ್ಯಾಸವಾಗುತ್ತದೆ. ಆ ಕಾರಣಕ್ಕೆ ಯಾವುದೇ ಸಮಯದಲ್ಲಾಗಲಿ, ಪರಿಸ್ಥಿತಿ ಹೇಗೆ ಇರಲಿ ನಿದ್ದೆ ಬಂದ ಕೂಡಲೇ ಹಾಸಿಗೆಯ ಮೇಲೆ ಮಲಗುವ ಅಭ್ಯಾಸ ರೂಢಿಸಿಕೊಳ್ಳಬೇಕು. ಸೋಫಾ ಮೇಲೆ ಕಿರು ನಿದ್ದೆ ಮಾಡಿ ಮತ್ತೆ ಹಾಸಿಗೆ ಮೇಲೆ ಮಲಗುವುದು ಸರಿಯಲ್ಲ.

ಟಿವಿ ನೋಡಿಕೊಂಡು ಮಲಗುವುದು

ಹಲವರು ಟಿವಿ ನೋಡುತ್ತಾ ನೋಡುತ್ತಾ ಅಲ್ಲೇ ನಿದ್ದೆ ಹೋಗುತ್ತಾರೆ. ಇದು ತುಂಬಾ ಕೆಟ್ಟ ಅಭ್ಯಾಸ ಎನ್ನುತ್ತಾರೆ ತಜ್ಞರು. ಟಿವಿ ನೋಡುತ್ತಾ ಮಲಗಿದಾಗ ಒಮ್ಮೊಮ್ಮೆ ಶಬ್ದಕ್ಕೆ ಇದಕ್ಕಿದ್ದ ಹಾಗೇ ಎಚ್ಚರವಾಗುತ್ತದೆ. ಇದರಿಂದ ನಿದ್ದೆಯಲ್ಲಿ ವ್ಯತ್ಯಾಸವಾಗುತ್ತದೆ. ಅಲ್ಲದೇ ಟಿವಿ, ಮೊಬೈಲ್‌ನ ಬೆಳಕು ಕಣ್ಣ ಮೇಲೆ ಬಿದ್ದು ನಿದ್ದೆಗೆ ತೊಂದರೆ ಉಂಟಾಗುತ್ತದೆ. ಆ ಕಾರಣಕ್ಕೆ ಮಲಗುವ ಮೊದಲು ಟಿವಿ ಹಾಗೂ ಇನ್ನಿತರ ಮಾಧ್ಯಮಗಳಿಂದ ದೂರವಿರುವುದು ಅವಶ್ಯ.

ವಿದ್ಯುತ್ ದೀಪ ಆರಿಸಿ

ರಾತ್ರಿ ವೇಳೆ ಮನೆಯ ಒಳಗೆ ಎಲ್ಲಾ ಕಡೆ ಎಲೆಕ್ಟ್ರಿಕ್ ದೀಪಗಳು ಹರಡಿಕೊಂಡಿರುತ್ತವೆ. ಇವು ಎಲೆಕ್ಟ್ರೋಸ್ಮಾಗ್ ಅನ್ನು ಹೊರ ಹಾಕುತ್ತವೆ. ಇದರಿಂದ ಕೋಣೆಯಲ್ಲಿ ತಾಪವೂ ಹೆಚ್ಚಾಗಿರುತ್ತದೆ. ಹಾಗಾಗಿ ನಿದ್ದೆ ಮಾಡುವುದು ಕಷ್ಟವಾಗುತ್ತದೆ. ಹಾಗಾಗಿ ಮಲಗಲು ಸ್ವಲ್ಪ ಹೊತ್ತಿನ ಮೊದಲು ಎಲ್ಲಾ ಕಿಟಕಿಗಳನ್ನು ತೆರೆದು ನೈಸರ್ಗಿಕ ಗಾಳಿ ಒಳಗೆ ಬರುವಂತೆ ನೋಡಿಕೊಳ್ಳಿ. ಇದರಿಂದ ನೆಮ್ಮದಿಯಾಗಿ ನಿದ್ದೆ ಮಾಡಬಹುದು. ❖

'ನವರಸ' ಬಿಡುಗಡೆಯೇ ರಸವತ್ತಾದ ಘಳಿಗೆ

ಒಟಿಟಿ

ಕೊನೆಗೂ ಬಹು ನಿರೀಕ್ಷಿತ ಸರಣಿ 'ನವರಸ' ಶುಕ್ರವಾರ ಮಧ್ಯಾಹ್ನ 12.30ಕ್ಕೆ ನೆಟ್‌ಫ್ಲಿಕ್ಸ್‌ನಲ್ಲಿ ಬಿಡುಗಡೆಯಾಗಿದೆ. 'ನವರಸ'ದ ಸಾರವನ್ನು ಸಿನಿರಸಿಕರಿಗೆ, ಸಂಗೀತಪ್ರಿಯರಿಗೆ ತಲುಪಿಸುವ ಉದ್ದೇಶದಿಂದ ನೆಟ್‌ಫ್ಲಿಕ್ಸ್ ಜಾಗತಿಕ ಅಭಿಮಾನಿಗಳಿಗಾಗಿ ವಿಶೇಷ ಆನ್‌ಲೈನ್ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

'ಸಿಂಫೊನಿ ಆಫ್ ಇಮೋಷನ್ಸ್' ಹೆಸರಿನ ಸಂಗೀತ, ಮಾತು ಭಾವನೆಗಳ ಸಂಗಮವನ್ನು ಪ್ರಸಾರ ಮಾಡಿದೆ. ಯುಟ್ಯೂಬ್‌ನಲ್ಲಿ ಇದು ಟ್ರೆಂಡ್ ಆಗಿದೆ.

'ನವರಸ' ತಮಿಳು ಚಿತ್ರರಂಗದ ದಿಗ್ಗಜರ ಸಮಾಗಮದ ವೇದಿಕೆಯಾಗಿ ಮೂಡಿಬಂದಿದೆ. ದಿವ್ಯದರ್ಶಿನಿ ಅವರು 'ಸಿಂಫೊನಿ ಆಫ್ ಇಮೋಷನ್ಸ್' ಕಾರ್ಯಕ್ರಮಕ್ಕೆ ತಮ್ಮ ಪುಟ್ಟ ನಿರೂಪಣೆಯ ಮೂಲಕ ಚಾಲನೆ ನೀಡಿದರು. 2 ಗಂಟೆ 20 ನಿಮಿಷಗಳ ಈ ಕಾರ್ಯಕ್ರಮ ಇಡೀ 'ನವರಸ'ದ ಪ್ರೋಮೋದಂತೆ ಮೂಡಿಬಂದಿದೆ.

ಚಲನಚಿತ್ರ ನಿರ್ಮಾಪಕರಾದ ಮಣಿರತ್ನಂ ಮತ್ತು ಜಯೇಂದ್ರ ಪಂಚಪಕೇಸನ್ ಅವರ ನೇತೃತ್ವದಲ್ಲಿ ಈ ಕಾರ್ಯಕ್ರಮ ಮೂಡಿಬಂದಿದೆ.

ಕೋವಿಡ್ –19ನಿಂದಾಗಿ ಸಂಕಷ್ಟಕ್ಕೊಳಗಾದ ಸಂಗೀತಗಾರರು, ತಂತ್ರಜ್ಞರ ಬದುಕನ್ನು ಮತ್ತೆ ಕಟ್ಟಿಕೊಡಲು ಈ ಕಾರ್ಯಕ್ರಮದಿಂದ ಸಂಗ್ರಹವಾಗುವ ನಿಧಿಯನ್ನು ಬಳಸಿಕೊಳ್ಳಲಾಗುತ್ತದೆ. ಹಾಗಾಗಿ ಈ ಕಾರ್ಯಕ್ರಮದಲ್ಲಿ ಎಲ್ಲ ಪ್ರಖ್ಯಾತ ಸಂಗೀತಗಾರರು ಸೇರಿದ್ದಾರೆ.

ಆರ್ಥಿಕ ಹಾಗೂ ಆರೋಗ್ಯ ಸಂಕಷ್ಟಕ್ಕೊಳಗಾದ ಸಿನಿಮಂದಿಗೆ 'ನವರಸ' ಮೂಲಕ ಹೆಚ್ಚು ಚಿತ್ರಗಳನ್ನು ನಿರ್ಮಿಸಿ ಜನರಿಗೆ ತಲುಪಿಸಬೇಕು. ಒಂದೆಡೆ ಚಿತ್ರರಂಗಕ್ಕೂ ಪುನಶ್ಚೇತನ ಸಿಗುತ್ತದೆ. ಮತ್ತೊಂದೆಡೆ ನೂರಾರು ಮಂದಿಯ ಬದುಕು ಕಟ್ಟಿಕೊಟ್ಟಂತಾಗುತ್ತದೆ. ವಾಸ್ತವವಾಗಿ ಈ ಬೃಹತ್ ಯೋಜನೆ 'ನವರಸ'ದ ಮೂಲಕ ನಾವು 10ನೆಯ ರಸವನ್ನು ಕಂಡುಕೊಳ್ಳಬೇಕಿದೆ ಎಂದು ನಿರ್ಮಾಪಕ ಮಣಿರತ್ನಂ ಹಾಗೂ ಜಯೇಂದ್ರ ಭರವಸೆಯ ಮಾತುಗಳನ್ನಾಡಿದ್ದಾರೆ.

ಕೊಳಲುವಾದಕ ನವೀನ್ ಕುಮಾರ್, ಅಭಿಷೇಕ್ ಕುಮಾರ್, ಕೆಸಿ ಲಾಯ್, ವಿವೇಕ್ ರಾಜಗೋಪಾಲನ್, ಪಿಯೂಷ್ ರಜನಿ ಮತ್ತು ದಿ ಫೈನ್ ಟ್ಯೂನರ್ಸ್, ಮಹೇಶ್ ರಘವನ್, ನಂದಿನಿ ಶಂಕರ್, ಸಾಶಾ ತಿರುಪತಿ, ಅನಂತ ಆರ್ ಕೃಷ್ಣನ್, ರಿಕಿ ಕೇಜ್, ಕುನಾಲ್ ನಾಯಕ್ ಮತ್ತು 50 ಸದಸ್ಯರು ವಾದ್ಯವೃಂದದಲ್ಲಿದ್ದಾರೆ. ಸಂಗೀತದ ನೇತೃತ್ವ ಎ.ಆರ್. ರೆಹಮಾನ್ ಅವರದ್ದು.

ಕಾರ್ಯಕ್ರಮ ವೀಕ್ಷಿಸಲು ಲಿಂಕ್: youtube.com/watch?v=d3OBzM4oG30 ❖